ನೆರವಿಯುಂ ಪಂಡಿತರ್ಕ್ಕಳೆಲ್ಲಂ ವಿಸ್ಮಯಂಬಟ್ಟು ಪೊಗೞ್ದು ಮತ್ತಮರಸನಿಂತೆಂದನೀ ಕೂಸಿನಿತು ಶಾಸ್ತ್ರಂಗಳನೆಂತು ಕಲ್ತಳೆಂದು ಭಟಾರಾ [1]ಇದನಱಿಯೆ[1] ಬೆಸಸಿಮೆನೆ† ಸೂರ್ಯಮಿತ್ರ ಭಟ್ಟಾರರಿಂತೆಂದರ್ ಈಯಿರ್ದ್ದರಿಸಿಯರ ಸಹೋದರಂ ವಾಯು ಭೂತಿ[2]ಯೆಂಬೊನಾನಾಮೋದಿ[2]ಸಿದೆಮೆಮ್ಮೊಳಪ್ಪ ಮಾನಕಷಾಯಂ ಕಾರಣಮಾಗಿ ಸತ್ತು [3]ಬೆಳ್ಗ[3]ತ್ತೆಯುಂ ಪೇಪಂದಿಯುಂ ನಾಯುಂ ಪೊಲೆಯರ ಕೂಸುಮಾಗಿ[4] ರಿಸಿಯರ ಪ್ರಬೋಧನೆಯಿಂದಂ ಬ್ರತಂಗಳಂ ಕೈಕೊಂಡೀಗಳ್ ನಾಗಶ್ರೀಯಾದಳೆಂದು ಮುನ್ನಿನ ಭವದ ಸಂಬಂಧಮೆಲ್ಲಮಂ ಸವಿಸ್ತರಂ ಪೇೞ್ದು ಮತ್ತಮಿಂತೆಂದರ್ ಮಿಥ್ಯಾ[5]ತ್ವ[5] ಸಂಯಮ ಕಷಾಯಯೋಗಂ ಕಾರಣಮಾಗಿ [6]ಜೀವಂಗಳ್[6] ಸಂಸಾರ ಸಮುದ್ರದೊಳ್ ತೊೞಲ್ದುಮೆಂದು ಸವಿಸ್ತರಂ ಧರ್ಮಮಂ ಪೇೞೆ ಕೇಳ್ದು ಚಂದ್ರ ವಾಹನನೆಂಬರಸಂಗೆ ವೈರಾಗ್ಯಂ ಪುಟ್ಟಿ ಮಗಂಗರಸು[7]ಗೊಟ್ಟು[7] ಪಲಂಬರರಸು ಮಕ್ಕಳ್ವೆರಸು ಭಟ್ಟಾರರ ಪಕ್ಕದೆ ತಪಂಬಟ್ಟಂ ಕೆಲರ್ ಶ್ರಾವಕ ವ್ರತಂಗಳಂ ಕೆಲಂಬರ್ ಸಮ್ಯಕ್ತ್ವಮಂ ಕೈಕೊಂಡರಾಗಳಾ ಸೋಮಶರ್ಮ ಭಟ್ಟಂ ರಿಸಿಯರೊಳಾದ ಮಾನ ಗರ್ವದ ದೋಷದಿಂದೆಯ್ದಿದ ದುಃಖಂಗಳಂ ಕೇಳ್ದಱಿದಾ ಭಟ್ಟಾರರ ಪಕ್ಕದೆ ತಪಂ ಬಟ್ಟಂ ನಾಗಶ್ರೀಯುಂ ನಾಗಶ್ರೀಯ ತಾಯ್ [8]ತ್ರಿವೇದಿಯುಂ[8] ಬ್ರಹ್ಮಿಲೆಯೆಂಬ ಕಂತಿಯರ ಪಕ್ಕದೆ ತಪಂಬಟ್ಟರ್ ಮತ್ತೆ ಸೂರ್ಯಮಿತ್ರ ಭಟ್ಟಾರರಗ್ನಿ ಭೂತಿ ಭಟ್ಟಾರರು ಮಿರ್ವರುಂ ಪಲಕಾಲಂ ತಪಂಗೆಯ್ದು[9] ಅಗ್ರಮಂದಿರಮೆಂಬ ಪರ್ವತದೊಳ್ ಮೋಕ್ಷವನೆಯ್ದಿದರ್ ಮತ್ತಂ ಸೋಮಶರ್ಮರಿಸಿಯರುಮುಗ್ರೋಗ್ರ ತಪಶ್ಚರಣಂ ಗೆಯ್ದು ಸಂನ್ಯಸನ ವಿಧಿಯಿಂದಂ ಮುಡಿಪಿ ಅಚ್ಯುತ ಕಲ್ಪದೊಳಿರ್ಪ್ಪತ್ತೆರಡು ಸಾಗ ರೋಪಮಾಯುಷ್ಯಮನೊಡೆಯೊಂ ಸಾಮಾನಿಕ ದೇವನಾಗಿ ಪುಟ್ಟಿದೊಂ ಮತ್ತೆ ನಾಗಶ್ರೀಯುಂ [10]ಭುಕ್ತ[10]ಪ್ರತ್ಯಾಖ್ಯಾನವಿಧಿಯಿಂ ರತ್ನತ್ರಯಮಂ ಸಾದಿಸಿ [11]ಅಚ್ಯುತ[11] ಕಲ್ಪದೊಳ್ ದೇವನಾಗಿ ಪುಟ್ಟಿದೊಳ್ ಮತ್ತಾ ಸ್ವರ್ಗದೊಳ್ ತ್ರಿವೇದಿ ಯುಂ ನಾಗಶ್ರೀ ಎನಗೆ ಜನ್ಮಾಂತರದೊಳಪ್ಪೊಡಂ ಮಗನಕ್ಕೆಂದು [12]ನಿದಾನಂ ಗೆಯ್ದು[12] ಮುಡಿಪಿ ದೇವನಾದೊಳಿಂತಾಯಿರ್ವರುಂ ಇರ್ಪ್ಪತ್ತೆರಡು ಸಾಗರೋಪ ಮಾಯುಷ್ಯಮನೊಡೆಯೊರಾಗಿ ದೇವರಾಗಿ ಪುಟ್ಟಿದರ್ ॥

ಮತ್ತಂ ಸೋಮಶರ್ಮನಪ್ಪ ದೇವಂ ಪಲಕಾಲಂ ದೇವಲೋಕದ ಭೋಗ ಮನನುಭವಿಸಿ ಬಂದಿಲ್ಲಿ ಈ ಜಂಬೂದ್ವೀಪದ ದಕ್ಷಿಣ ಭರತದೊಳವಂತಿಯೆಂಬುದು ನಾಡುಜ್ಜೇನಿಯೆಂಬುದು ಪೊೞಲಲ್ಲಿ[13] ಇಂದ್ರದತ್ತನೆಂಬೊಂ [14]ಪರದನಾತನ[14] ಭಾರ್ಯೆ

[1] ಇನ್ನೆಮಗಱಿಯೆ (ಘಚಛ), ಇದನೆಮಗಱಿಯೆ (ಜ). †–† (ಚ) ದಲ್ಲಿ ನಷ್ಟ.
[2] ಯೆಂಬನುಂ ಅವನೋದಿ (ಕಗ), (ಖ) ದಲ್ಲಿ ನಷ್ಟ, ಬೊನನಾವೋದಿ (ಘಛ), (ಚ) ದಲ್ಲಿ ನಷ್ಟ.
[3] ಪೆಣ್ಗ (ಘಛಜ), (ಚ) ದಲ್ಲಿ ನಷ್ಟ. [4] + ಯಿರೆ (ಕಗ). [5] (ಘಛಜ) ಗಳಲ್ಲಿಲ್ಲ.
[6] (ಕಗ) ಗಳಲ್ಲಿಲ್ಲ. [7] ವಟ್ಟಂಗಟ್ಟಿ (ಛ), ವಟ್ಟಂಗೊಟ್ಟು (ಜ). [8] (ಘಛಜ) ಗಳಲ್ಲಿಲ್ಲ.
[9] + ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾದಿಸಿ (ಘಛಜ). [10] ಭಕ್ತ (ಘ), ಭುಕ್ತಿ (ಜ).
[11] ಆರಣ (ಕಗ). [12] (ಘಚಜ) ಗಳಲ್ಲಿಲ್ಲ. [13] + ವೃಷಭಾಂಗನೆಂಬರಸ ಜ್ಯೋತಿರ್ಮಾಲೆ ಸ್ತ್ರೀ (ಜ). [14] ಪ್ರಧಾನ ಶ್ರೇಷ್ಠಿಯಾತನ (ಘಛಜ).

ಗುಣಮತಿಯೆಂಬೊಳಾಯಿರ್ವರ್ಗ್ಗಂ ಸೂರದತ್ತನೆಂಬೊಂ ಮಗನಾಗಿ ಪುಟ್ಟಿದೊಂ ಮತ್ತಮಾ ಪೊಱಲೊಳ್ ಮೂವತ್ತೆರಡು ಕೋಟಿ ಕಸವರಮನೊಡೆಯೊಂ ಸುಭದ್ರನೆಂಬೊಂ ಸೆಟ್ಟಿಯಾತನ ಭಾರ್ಯೆ ಸರ್ವಯಶಿಯೆಂಬೊಳಾ ಯಿರ್ವರ್ಗ್ಗಂ ತ್ರಿವೇದಿಯಪ್ಪ ದೇವಂ ಬಂದು ಯಶೋಭದ್ರೆಯೆಂಬೊಳ್ ಮಗಳಾಗಿ ಪುಟ್ಟಿದೊಳಾ ತ್ರಿವೇದಿ ತಪಶ್ಚರಣದ ಫಲದಿಂದಂ ದೇವತ್ವಮನೆಯ್ದಿಯುಂ[1] ನಿದಾನಂ ಕಾರಣಮಾಗಿ ಮಿಥ್ಯಾತ್ವಕ್ಕೆ ಸಂದು ಸ್ತ್ರೀತ್ವಮನೆಯ್ದಿಳಾ ಯಶೋಭದ್ರೆಯುಂ ಸೂರದತ್ತಂಗೆ ಕೊಟ್ಟೊರಾಯಿರ್ವರ್ಗ್ಗಂ ನಾಗಶ್ರೀಯಪ್ಪ ದೇವಂ ಬಂದು ಸುಕುಮಾರಸ್ವಾಮಿಯೆಂಬೊಂ ಮಗನಾಗಿ ಪುಟ್ಟಿದನಾತನ ಪುಟ್ಟಿದಂದೆ ವೈರಾಗ್ಯಂ ಕಾರಣಮಾಗಿ ಸೂರದತ್ತಸೆಟ್ಟಿ ಸುಕುಮಾರಸ್ವಾಮಿಗೆ ಸೆಟ್ಟಿವಟ್ಟಂಗಟ್ಟಿ ತಪಂಬಟ್ಟಂ । ಸುಕುಮಾರ ಸ್ವಾಮಿಯುಂ ಯೌವನನಾಗಿ ಅತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿಯಿಂದಂ ಕೂಡಿದೊನಾತಂಗೆ ಮೂವತ್ತೆರಡು ಬಳ್ಳಿಮಾಡಂಗಳತ್ಯಂತರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳನೊಡೆಯ ದೇವಗಣಿಕೆಯರನೆ ಪೋಲ್ವ ಮೂವತ್ತಿರ್ವರ್ ದಿವ್ಯಸ್ತ್ರೀಯರ್ಕಳ್ ಮೂವತ್ತೆರಡು ನಾಟಕಂಗಳ್ ಮೂವತ್ತೆರಡು ಕೋಟಿ ಕಸವರಮುಂ ಪಂಚರತ್ನಂಗಳೆಂಬಿನಿತಱೊಳಂ ಕೂಡಿ ಭೋಗೋಪಭೋಗ ಸುಖಂಗಳನನುಭವಿಸುತ್ತುಮಿರೆಯಿರೆ

ಮತ್ತೊಂದು ದಿವಸಮೊರ್ವ ನೈಮಿತ್ತಿಕನಿಂತೆಂದಾದೇಶಂಗೆಯ್ದನೀ ಸುಕುಮಾರ ಸ್ವಾಮಿ ಆವುದೊಂದು ಕಾಲದೊಳ್ ರಿಸಿಯರ ರೂಪಂ ಕಾಣ್ಗುಮಂದೀತನುಂ ತಪಂಬಡುಗುಮೆಂದೊಡಾ ಮಾತಂ ತಾಯ್ ಕೇಳ್ದು ತನ್ನ ಮನೆಯಂ ರಿಸಿಯರಂ ಪುಗಲೀಯದಂತು [2]ಬಾಗಿಲ[2] ಕಾಪಿನವರಂ ಕಲ್ಪಿಸಿದೊಳಂತು ಕಾಲಂ ಸಲೆ ಮತ್ತೊಂದು ದಿವಸಂ ರತ್ನದ್ವೀಪದಿಂದೊರ್ವ ಪರ[3]ದಂ ಸರ್ವ ರತ್ನ ಕಂಬಳಂಗಳಂ[3] ಲಕ್ಷದೀನಾರಂಗಳ್ ಬೆಲೆಯಪ್ಪವನುಜ್ಜೇನಿಗೆ ಮಾಱಲ್ಕೊಂಡು ಬಂದೊನಾ ಪೊಱಲನಾಳ್ವೊಂ ವೃಷಭಾಂಕನೆಂಬೊನರಸಂಗಂ ಜ್ಯೋತಿರ್ಮಾಲೆಯೆಂಬ ಮಹಾದೇವಿ[4]ಗಮಿಂತಿರ್ವರ್ಗ್ಗಂ[4] ತೋಱಿದೊಡೆ [5]ಅವಱ[5] ಬೆಲೆಯುಂ ಬೆಸಗೊಂಡೊಡೆ ಲಕ್ಷ ದೀನಾರಂಗಳ್ ಬೆಲೆಯೆಂದು ಪೇೞ್ದೊಡೆ ಕೊಳಲಾಱದರಸಂ ಪೋಗಲ್ವೇೞ್ದನಂತು ಪೊಱಲೊಳಗೆಲ್ಲಂ ತೋಱಿಯಾರುಂ ಕೊಳಲಾಱದಿರ್ದೊಡೆ ರತ್ನಂ ಕಂಬಳಂಗಳಂ ಕೊಂಡು[6]ಪೋಗಿ ಯಶೋಭದ್ರೆಗೆ ತೋಱಿದೊಡೆ[6] ಲಕ್ಷದೀನಾರಂಗಳಂ ಕೊಟ್ಟು [7]ರತ್ನಕಂಬಳಂಗಳಂ ಕೊಂಡೋರೊಂದಱೊಳಂ ನಾಲ್ಕು ಖಂಡಮಾಗೆ[7] ಮೂವತ್ತೆರಡು ಖಂಡಂಗಳಂ ಮಾಡಿ ಮೂವತ್ತಿರ್ವರ್ ಸೊಸೆವಿರ್ಕಳ್ಗೆ ಪಚ್ಚುಗೊಟ್ಟೊಡವರುಂ ತಂತಮ್ಮ ಕೆರ್ಪುಗಳೊಳ್ ತಗುಳ್ಚಿ[8]ದರೆಂಬ ಮಾತನರಸಂ ಕೇಳ್ದು ಚೋದ್ಯಂಬಟ್ಟವರ ವಿಭೂತಿಯಂ

1 + ನಿನ್ನ (ಕಖಗ). 2 (ಘಛಜ) ಗಳಲ್ಲಿಲ್ಲ. 3 ದನೊಂದು ರತ್ನಕಂಬಳಂ (ಘಛಜ). 4 ಗಂ ಕಂಬಳಮಂ (ಘಛಜ). 5 ಅವರು (ಘಛಜ). 6 ಪೊಳಲಂ ಪೊಱಮಟ್ಟು ಪೋಪನ ನಾರಾನುಮೆಂದರ್ ಸುಕುಮಾರ ಸ್ವಾಮಿಯ ತಾಯ್ ಕೊಳ್ಗಂ ಪೋಗಿಮೆನೆ ಪೋದಡೆ (ಘಛಝ). 7 ಕೊಂಡು (ಘಛಜ). 8 + ಪಾಲಿಸಿದರ್ ಮತ್ತಮಿಂತೆಂದು ರತ್ನಕಂಬಳಂ ಸುಕುಮಾರ ಸ್ವಾಮಿಯ ತಾಯ್ ಲಕ್ಕೆದಿನಾರಂಗಳಂ ಕೊಟ್ಟುಕೊಂಡ ಮೂವತ್ತೆರಡು ಖಂಡಂ ಮಾಡಿ ಮೂವತ್ತಿರ್ವರ್ ಸೊಸೆವಿರ್ಕಳ್ಗೆ (ಖ). ಇದು ಪುನರುಕ್ತಿ.

ನೋೞ್ಪೆನೆಂದು ಮನೆಗೆ ವರ್ಪುದಂ ಯಶೋಭದ್ರೆ ಕೇಳ್ದರಸರ್ ಬರ಼್ ಬಟ್ಟೆಯೊಳೆಲ್ಲಂ ಪಂಚರತ್ನಂಗಳಿಂ ರಂಗವಲ್ಲಿಯನಿಕ್ಕಿ ನೇತ್ರಪಟ್ಟುದುಕೂಲ ಚೀನಾದಿ[1] ದಿವ್ಯವಸ್ತ್ರಂಗಳಂ ಪಾಸಿ ಮಣಿ[2]ಭದ್ರ[2]ಮಪ್ಪ ಹೇಮಮುಕ್ತಾಹಾರಂಗಳಿಂ ತೋರಣಂಗಟ್ಟಿಸಿ ಯರಸರ ಬರವಂ ಪಾರುತ್ತಿರೆ ನೃಪತಿಯುಂ ಬಂದು ಸುರೇಂದ್ರ ಭವನೋಪಮಮಪ್ಪ ಪ್ರಾಸಾದಮಂ ಪೊಕ್ಕು ವಿಸ್ಮಯಚಿತ್ತನಾಗಿ† ಸುರಲೋ[3]ಕಂಬೊ[3]ಕ್ಕ ಪುಣ್ಯಾವಂ [4]ತಂಬೊಲಾಗಳ್[4] ಮಹಾ ವಿಭೂತಿಯಿಂ [5]ಶಯ್ಯಾತಳದೊಳಿರ್ದು ಸುಕುಮಾರನೆಲ್ಲಿದನೆಂದು ಬೆಸಗೊಂಡೊಡೆ ಸ್ವಾಮಿ ಆತಂ ಕರಂ ಸಾದು ನಿಮ್ಮ ಬರ[6]ಮ[6]ನಱಿಯಂ ಪ್ರಾಸಾದದ ಮೇಗಣ ನೆಲೆಯೊಳಿರ್ದನೆಂದೊಡರಸಂ ಬಟಿಯನಟ್ಟೆಮೆನೆ ತಾಯ್ ಪೋಗಿ ಮಗನೆ ಅರ[7]ಸರ್ ವಂದರ್ ಬಾ[7]ಪೋಪಮೆನೆ ಅರಸರೆಂಬೊರಾರೆನೆ ತಾಯೆಂದಳ್ [8]ನಮ್ಮ[8]ನಾಳ್ವೊರೆಂದೊಡೆ ನಮ್ಮನಾಳ್ವರುಮೊಳರೆ ಎಂದು ವಿಸ್ಮಯಂಬಟ್ಟು ತಾಯವಚನಮಂ ಮಾಕ್ಕೊಳಲಾಱದೆ ಬರ್ಪೊನಂ ನರೇಶ್ವರಂ ಕಂಡು ಕಣ್ಪೆತ್ತ ಫಲಮನಿಂದು ಪೆತ್ತೆನೆಂದು ಪ್ರತ್ಯಕ್ಷ ಕಾಮದೇವನನಪ್ಪಿ [9]ಕೊಳ್ವಂತಪ್ಪಿ[9]ಕೊಂಡು ದಿವ್ಯಶಯ್ಯಾತಳದ ಮೇಗೊ[10]ಡನಿರಿಸಿದಾ[10]ಗಳ್ ಸ್ವಜನಪರಿಜನಂಗಳ್ ಸಿದ್ಧಾರ್ಥಂಗಳಂ ಮಾಂಗಲ್ಯಮೆಂದಿರ್ವಗ್ಗಂ ಸೇಸೆ[11]ಯನಿಕ್ಕಲಾಗಳಾ[11] ಸಿದ್ಧಾರ್ಥಂಗಳ್ ಸುಕುಮಾರಸ್ವಾಮಿಯಾಸನಮನೊತ್ತೆ ಕಟಿ[12][ವ]ಮನಲು[12]ಗಿಸುವುದುಮಂ, ನೊಡರಂ ನೋಡಿದಾಗಳ್ ಕಣ್ಣೀರ್ಗಳ್ ಸುರಿವುದುಮಂ ಕಂಡೀಗಳೀತಂಗೆ'' ಬ್ಯಾದಿಗಳೆಂದು ಬಗೆದಿರ್ಪ್ಪನಂ[13] ಮಜ್ಜನಕ್ಕೆಟ್ಟನ್ನಿಮೆಂದೊಡಂತೆಗೆಯ್ವೆಮೆಂದು ಮಜ್ಜನಂಗೊಂ[14]ಡಮರ ಸನ್ನಿಭ[14] ಮಣಿಕುಟ್ಟಿಮಮಪ್ಪ ಬಾವಿಯಂ ಪೊಕ್ಕು ಮಿಂದಲ್ಲಿಯನರ್ಘ್ಯಮಪ್ಪ ತನ್ನ ಬೆರಲ ಮಾಣಿಕದುಂಗುರಂ [15]ಬಿಟ್ಟುದ[15] ನಱಿಸಲ್ವೇಡಿ ಛಿದ್ರಕದ್ವಾರದ ತೂಂತನುರ್ಚಿ ನೀರಂ ಕಳೆದಾಗಳಿಂದ್ರನ ಭಂಡಾರಂ ತೆಱೆದಂತಪ್ಪ [16]ಲೇಸಪ್ಪ[16] ನಾನಾ ಮಣಿಯ ವಿಚಿತ್ರ ಭೂಷಣಂಗಳಂ ಪಲವುಮಂ ಕಂ[17]ಡು ಮಹಾ[17]ಶ್ಚರ್ಯಭೂತನಾಗಿ ನೋಡುತ್ತಿರ್ಪನ್ನೆಗಮಾರೊಗಿಸಲೆಟ್ಟನ್ನಿಮೆಂದಾಗಳ್ ಪರಿ[18]ಯ[18]ಣದ ಮೊದಲೊಳ್ ಸುಕುಮಾರಂ ಬೆರಸು ನಾನಾಪ್ರಕಾರ ದಿಸಿಯವಪ್ಪಣಿಸುಗಳನುಣುತ್ತಂ ಸುಕುಮಾರಸ್ವಾಮಿ ಅರ್ಧಾಹಾರಮುಂ ನುಂಗುಗುಮರ್ಧಾಹಾರಮನುಗುಟ್ಟುಮದಂ ನೋಡಿ ಇದುವು[19]ಮೊಂದು ಕುತ್ತ[ಂ][19] ಆಹಾರದ ಮೇಗರುಚಿಯೆಂದು ಬಗೆದುಣಿಸು ಸಮೆದಬಟಿಕ್ಕೆ ಗಂಧ ತಾಂಬೂಲ ಮಾಲ್ಯ ವಸ್ತ್ರಾ

---

[1] ಟ್ಟೆಯ ಚೀನದುಕೂಲಾದಿ (ಫಭ), ಟ್ಟೆಯ ಚೀನದ ದುಗೂಲಾಂಬರಾದಿ (ಜ). [2] ಗಣನಿಬದ್ಧ (ಫಭಜ) [3] ಕಮಂಪೊ (ಜ). [4] ತನಂತೆ ನೋಡುತ್ತಿರ್ದರಸನಂ ಯಶೋಭದ್ರೆಯಿದಿರ್ಗೊಂಡು (ಫಚಭಜ). [5] + ಕುಳ್ಳಿರಿಸೆ (ಫಚಭಜ). [6] ವ (ಸ–ಖ). [7] ಸರ್ಬಂದರ್ ಬಾ (ಕಗ), ಸಂ ಕರೆದಪಂ (ಫಚಭಜ) [8] ನಿಮ್ಮ (ಕಗ). [9] (ಜ) ದಲ್ಲಿಲ್ಲ. [10] ಡರಿಸಿದನಾ (ಜ). [11] ಗಳನಿಕ್ಕೆ (ಜ). [12] ರಮನಲ್ಲಿ (ಕಗ), ರಮನ (ಖ), ಯನಲು (ಫಚಭಜ). [13] ಬಾವ್ಯಾದಿತನೆಂದಿರ್಩್ಪನ್ನೆಗಂ (ಫಚಭಜ). [14] ಡಡೆ (ಫಜಭ) [15] ಬಿರ್ದುದ (ಕಖಗ), ಬಿಳ್ದುಡದ (ಫಚಭಜ). [16] ಲೋಲ (ಫ), (ಚಭಜ) ಗಳಲ್ಲಿಲ್ಲ. [17] ಡಾ (ಖಫಚಭಜ). [18] ಯಾ (ಕಖಗ). [19] ವೊಂದು ಕುತ್ತು (ಖ), ವುಮೊಂದು ವ್ಯಾಧಿ (ಫಚಭಜ).

ಭರಣಂಗಳಂ ತಂದು ಕೊಟ್ಟಾಗವಂ ತೊಟ್ಟುಟ್ಟು ಪಸದನಂಗೊಂಡು ಸುಖಸಂಕಥಾ ವಿನೋ[1]ದದಿಂದಿರ್ದೊಡೆ[1] ಯಶೋಭದ್ರೆಯರಸನಿಂತೆಂದು ಬೆಸಗೊಂಡನಬ್ಬಾ ಎಮ್ಮ ತಮ್ಮನ ಕಟಿಪ್ರದೇಶ[2]ಭಾ[2]ಗಕ್ಕಂ ಕಣ್ಣ ನೀರ್ ಬರ್ಪುದರ್ಕಂ ಅರುಚಿಗಮೇಕೆ ಮರ್ದಂ ಮಾಡಿಸಿದಿರಿಲ್ಲೆನೆ ದೇವಾ ಆತಂಗಿವು ಕುತ್ತಮಲ್ಲವು ಸೇ[3]ಸೆಯಿಕ್ಕಿ[3]ದ ಸ[4]ರುಸಪಂ[4]ಗಳೊತ್ತೆ ಸೈರಿಸಲಾಱಂ, ಮತ್ತೆ ಆವಕಾಲಮುಂ ಮಾಣಿಕದ ಬೆಳಗಿನೊಳಿರ್ಪುದಱಿಂದಂ ಸೊಡರ ಬೆಳಗಿಂಗೆ ಸೈರಿಸದೆ ಕಣ್ಣ ನೀರಾ ಬರ್ಕುಂ, ಮತ್ತಂ ಕಮಳನೀಳೋತ್ಪಳದೊಳ್ ವಾಸಿಸಿದಕ್ಕಿಯೊಳ್ ಪೞಿವಕ್ಕಿಯುಂ [5]ನೀವುಂ[5] ಬಂದೊಡೆ ಬೆರಸಿಯಟ್ಟುದು ಕೂೞುಮುಪ್ಪುದಱಿಂ ವಾಸಿಸಿದಕ್ಕಿಯ ಕೂೞಂ [6]ನುಂಗುಗು[6]ಮುೞಿದ ಕೂೞನುಗುೞ್ಗುಮದಱಿಂದೀತಂಗೀ ಯವಸ್ಥೆಗಳಾದುವೆನೆ ಕೇಳ್ದು ವಿಸ್ಮಯಂ ಬಟ್ಟು ಈತನ ಕ್ಷಣಮಾತ್ರದ ಭೋಗಕ್ಕಂ ಸುಖಕ್ಕಂ ಎಮ್ಮೆಲ್ಲಾ ಕಾಲಮರಸುತನಂಗೆಯ್ವಲ್ಲಿಯೊಳಪ್ಪ ಭೋಗೋಪಭೋಗಂಗಳ್ ದೊರೆಯಲ್ಲವದಱಿಂದೀ ಲೋಕದೊಳೀತನೆ ಪರಮಾರ್ಥಂ ಸುಖಿಯೆಂದೊಸೆದರಸನವಂತಿ ಸುಕುಮಾರನೆಂದು ಪೆಸರನಿಟ್ಟಂ

ಯಶೋಭದ್ರೆಯುಮರಸನನೇಕ ವಸ್ತುವಾಹನಂಗಳಿಂದಂ ಪೂಜಿಸಿ ಕಟಿಪಿದೊಳಿಂತು ಸುಕುಮಾರ ಸ್ವಾಮಿಗೆ ಸುಖದಿಂದಂ ಕಾಲಂ ಸಲೆ ಮತ್ತೊಂದು ದಿವಸಂ ಯಶೋಭದ್ರೆ[7]ಯ ಭ್ರಾತರರಪ್ಪ[7] ದಯಾಭದ್ರರೆಂಬ ರಿಸಿಯರ್ ಮುನ್ನಮವರ ಪಕ್ಕದೆ ಸೂರದತ್ತಂ ಧರ್ಮಂಗೇಳ್ದು ವೈರಾಗ್ಯಮಾಗಿ ಪುತ್ರಮುಖಂಗಂಡು ತಪಂಬಟ್ಟೊನಾತನ ಮಗನುಂ ರಿಸಿಯರಂ ಕಂಡಾ[8]ಗಳ್[8] ತಪಂಬಡುಗುಮೆಂಬುದಂ ಮುನ್ನೆ ನೈಮಿತ್ತಿಕರಾದೇಶಂಗೆಯ್ದಿರ್ದರಾ ಮತ್ತಂ ದಯಾಭದ್ರರೆಂಬ ರಿಸಿಯರ್ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪ ದಿವ್ಯಜ್ಞಾನಿಗಳ್ ಸುಕುಮಾರಸ್ವಾಮಿಗೆ ನಾಲ್ಕುತಿಂಗ[9]ಳುಮೈ[9]ದುದಿವಸ ಮಾಯುಷ್ಯಪ್ರಮಾಣ[10]ಮನಱಿದುಪಕಾರಾರ್ಥಮು[10]ಜ್ಜೇನಿಗೆ ವಂದು ಸುಕುಮಾರ ಸ್ವಾಮಿಯ ಮಾಡದ [11]ಪೆಱ[11]ಗಣ ನಂದನ ವನದೊಳಗಣ ಜಿನಾಲಯದೊಳಾಷಾಢ ಮಾಸದ ಚತುರ್ದಶಿಯ ದಿವಸ[12]ದಂದು ಪೞಿವೊಲ್ತು[12] ಬಂದು ಜೋಗುಗೊಂಡಿರ್ದರನ್ನೆಗಂ ವನಪಾಲಕರ್ ಪೋಗಿ ಯಶೋಭದ್ರೆಗೆ ರಿಸಿಯರ ಬರವಂ ಪೇೞ್ದೊಡಾಕೆಯುಂ ಬಂದು ದೇವರುಮಂ ರಿಸಿಯರುಮಂ ಬಂದಿಸಿ ಭಟ್ಟಾರಾ ನೀಮಿಲ್ಲಿಗೇಕೆ ಬಂದಿ[13]ರಿಲ್ಲಿಂದಂ ಪೊಱವೊೞಲೊಳ್ ಪೆಱವುಳಿ ಬಸದಿಯಿಲ್ಲಾ[13] ಎಂದೊಡೆ ಭಟ್ಟಾರರೆಂದರಬ್ಬಾ ನಿಡುವಯಣಂ ಬಂದು ನೇದೆಗೆಟ್ಟೆಂತಾನುಮಿಲ್ಲಿಗೆಯಾ[14]ಸತ್ತು[14] ಜೋಗಿನ

1 ದದೊಳಿರ್ದಾಗಳ್ (ಘಚಛ). 2 ಶದರೋ (ಘಚಛಜ). 3 ಸಿಕ್ಕಿ (ಜ) 4 ಸರ್ಷಪ (ಘಚಛಜ) 5 ನಿಮ್ಮಡಿ (ಘಚಛಜ). 6 ನುಣ್ಣು (ಛಜ) 7 ತನ್ನ ಭತ್ತಾರ್ರಂ (ಘಚಛಜ). 8 ಕ್ಷಣಮೆ (ಚಜ) 9 ಳಮೇಗ್ಗೈ (ಘಛಚಜ) 10 ಮೆಂದರಿದು (ಘಚಛಜ). 11 ಕೆಳ (ಖ). 12 ದಲು ಪರೆವೊರ್ತ್ತ (ಖ), ದಂದು ಪರೆಪುತ್ತ (ಕ), ದೊಳು ಪರೆವೊತ್ತ (ಗ), ದೊಳ್ ಪರೆವೊಳ್ತು (ಘಛ), ದೊಳ್ ಪಗೆವೊಳ್ತು (ಚ), ದೊಳು ಪಱಿವೊಳ್ತು (ಜ). 13 ಪೊಱಳತೊಳಗೆ ಬಸದಿಗಳಿಲ್ಲಾ (ಛಚಜ), ಪೊಱಳಲೊಳಿನ್ ಪೆಱವು ಬಸದಿಗಳಿಲ್ಲಾ (ಛ). 14 ಸರುಗೆಟ್ಟು (ಕ).

ಪೊೞ್ತುಱೊಳೆಯ್ದಿ ಬಂದು ಜೋಗುಗೊಂಡಿರ್ದ[1]ಮೆತ್ತಲುಂ ಪೋಗಲಾಗದೆನೆ ಅಂತಪ್ಪೊಡೆ ಭಟಾರಾ ನಿಮ್ಮನೊಂದಂ ಬೇಡಿದಪ್ಪೆಂ[1] ನಾಲ್ಕು ತಿಂಗಳುಮೇಸುಮ ಸೋದದೆ ಮೋನಂಗೊಂಡು ಬಸದಿಯಂಗಣದೊಳ್ ಸಡಪಾಡದೊಳಗಣಪಂಗಿರ್ದು ಜೋಗು ನೆಱದಂದು ಪಿಜಯುಂಗೆಯ್ವೆಮೆಂದೊಡಂತೆಗೆಯ್ವೆಮೆಂದು ಭಟಾರರಿರ್ದರ್

ಮತ್ತಿತ್ತಲ್ ಸುಕುಮಾರಸ್ವಾಮಿಯುಂ ಸರ್ವತೋಭದ್ರಮೆಂಬುತ್ತುಂಗ ವಿಚಿತ್ರಮಾಗಿರ್ದ ಪ್ರಾಸಾದದ ಮೇ[2]ಗೇಟ[2]ನೆಯ ನೆಲೆಯೊಳ್ ಕಾರ್ತಿಕ ಮಾಸದ ಪುಣ್ಣಮಿಯಂದು ಸುಖದಿಂದೆ [3]ಉಂದಿರ್ದ[3]ನನ್ನೆಗಮಿತ್ತ ದಯಾಭದ್ರ ಭಟಾರರ್ಗೆ ಜೋಗು ನೆಱೆದು ಯಶೋಭದ್ರೆಯ ಬೇಡಿದ ಮೋನದ ದಿವಸದ ಪ್ರಮಾಣಾವಸಾನದೊಳ್ ಬೈಗಿರುಳಿನ ಪಂಚಮಹಾಶಬ್ದದ ಪೊೞ್ತುಱೊಳ್ ತ್ರಿಲೋಕ ಪ್ರಜ್ಞಪ್ತಿಯೆಂಬುದಂ ಮೃದು ಮಧುರ ಗಂಭೀರ ಸ್ವರದಿಂ ಭಟಾರರ್ ಪರಿವಡಿಗೆಯ್ದಾಗಳ್ ಅಧೋಲೋಕ ತಿರ್ಯಗ್ಲೋಕಂಗಳಿರ್ದ ಸ್ವರೂಪಮಂ ಪ್ರಮಾಣಮುಮನೋದಿ ಊರ್ಧ್ವಲೋಕ ವ್ಯಾವರ್ಣನೆಯಂ ಪೇೞ್ದಾಗ[4]ಳಚ್ಯುತ[4]ಕಲ್ಪದ ಪದ್ಮಗುಲ್ಮ ವಿಮಾನಮಂ ವ್ಯಾವರ್ಣಿಸುವುದಂ ಸುಕುಮಾರಸ್ವಾಮಿ ಕೇಳ್ದು ಜಾತಿಸ್ಮರನಾಗಿಯಾನಿಲ್ಲಿ[5]ಪುಟ್ಟಿ[ರ್ದೆ][5]ನೆಂಬುದನಱಿದು ಅಹೋ ಸುರಲೋಕಸುಖಮೆಂಬಮೃತ ಸಮುದ್ರದ ನೀರೆಲ್ಲಮಂ ಕುಡಿದು ತಣಿಯದನೀ ಮನುಷ್ಯ ಭವದ ಸುಖಮೆಂಬ ಪುಲ್ವನಿಯೊಳ್ ಸಿಲ್ಕಿ ಶಿವಸುಖಮನೆಯ್ದುಸುವ ಸಚ್ಚಾರಿತ್ರದಿಂ ಬ[6]ೞ್ಚಿ[6]ದೆನೆಂದು ತನ್ನಂ ತಾಂ ನಿಂದಿಸುತ್ತುಂ ಮಂಚದಿಂದಿೞಿದು ಮಾಡದೊಳ[7]ಗಿರ್ದ[7] ವಸ್ತ್ರಂಗಳಂ ತೆಗೆದುಕೊಂಡು [8]ಪ್ರಾಸಾದದ ಪೆಱಗಣ ಗವಾಕ್ಷ ಜಾಳದೊಳ್ [8]ಕಟ್ಟಿ [9]ಕೊಂಡೊಂದೊಂದಱ ತುದಿಯೊಳೊಂದೊಂದು[9] ವಸ್ತ್ರಮಂ ತಗುಳ್ಚಿ ಪಿಡಿದಿೞಿದು ಜಿನಾಲಯಮನೆಯ್ದಿ ದೇವರ್ಗೆ ನಮಸ್ಕಾರಂಗೆಯ್ದು ದಯಾಭದ್ರ ಭಟಾರರ್ಗೆಱಗಿ ಪೊಡೆವಟ್ಟು[10]ದೀಕ್ಷೆಯಂ ಪ್ರಸಾದಂಗೆಯ್ದೆನ್ನಂ[10] ಸಂಸಾರಾರ್ಣವದತ್ತಣಿಂದೆ[11]ತ್ತಿಮೆಂದೊಂಗೆ ಭಟಾರರ್ ಮೂಱುದಿವಸಂ ನಿನಗಾಯುಷ್ಯಮೆಂದೊಡೀಗಳೀ ನಿಸ್ಸಾರಮಪ್ಪದೇಹದಿಂ ಸಾರಮಪ್ಪ ತಪಮಂ ಕೈಕೊಂಡು ಪಲಕಾಲಂ ನೆಗ[12]ೞಲ್ ಪೆತ್ತೆ[12]ನಿಲ್ಲ ನಿಸ್ಸಾರಮಪ್ಪ ಭೋಗದೊಳ್ ಸಿ[13]ಲ್ಕಿ[13] ಅಮೇಧ್ಯದೊಳ್ ಕ್ರೀಡಿಸುವ ಬಾಳಕಂಬೊಲ್ ಕಾಲಮಂ ಬಱಿದೆ [14]ಕಳಿದೆ[14]ನೆಂದು ತನ್ನನಾದಮಾನುಂ ನಿಂದಿಸಿ ತತ್ಪಾದ ಮೂಲದೊಳ್ ತಪಂಬಟ್ಟು ಪಂಚಮಹಾಬ್ರತಂಗಳನೇಱಿಸಿಕೊಂಡು ಪಡಿಕಮಣಂಗೇಳ್ದು ತದನಂತ[15]ರಂ[15] [16]ನಿಶ್ಚಯ ಸಮ್ಯಕ್ತ್ವಮಂ ಕೈಕೊಂಡಿಂಬೞಿಕ್ಕೆ[16] ಮಹಾಕಾಳಮೆಂಬ ಶ್ಮಶಾನಕ್ಕೆ ಪೋಗಿ ಯಾವಜ್ಜೀವಮಾಹಾರ[17]ಕ್ಕೆ[17]ನಿವೃತ್ತಿಗೆಯ್ದು ಪ್ರಾಯೋಪಗಮನ

---

1 ವಿನ್ನೆತ್ತ ಪೋಪೆಯಬ್ಬಾಯೆನೆ ಯಂತಪ್ಪಡೆ ಭಟಾರಾ ನಿಮ್ಮನೊಂದನೊಡಂಬಡಿಸಿದಪೆಂ (ಘಚಭಜ). 2 ಗಳೇಳ (ಕಗ), ಗಣನೇಳ (ಜ). 3 ಉಂದಿಲ್ದ (ಕಖಗ), ಪಟ್ಟಿರ್ದ (ಘಚಭ), ಪಟ್ಟಿರ್ದೊ (ಜ). 4 ಳಾರಣ (ಕಖಗ). 5 ಪುಟ್ಟಿಳ್ದ (ಕಖಗ), ಪುಟ್ಟಿದೆ (ಘಚಭಜ). 6 ಳ್ದಿ (ಕಖಗ). 7 ಗೊಟ್ಟಿರ್ದ (ಘಚಭಜ). 8 ಪೆಱಗಣಗವಾಕ್ಷದೊಳ್ (ಘಚಭಜ) 9 ಯೋರೊಂದಱ ತುದಿಯೊಳೋರೊಂದು (ಘಚಭಜ). 10 ದೀಕ್ಷಾಪ್ರಸಾದದಿಂ (ಘಚಭಜ). 11 + ನ್ನನೆ (ಘಚಭಜ). 12 ೞ್ (ಕಗ). 13 ರ್ಕ್ಕ (ಕಗಘಚಭಜ). 14 ಕಳಿಪಿದೆ (ಕಗಜ). 15 ರಮೆ (ಘಚಭಜ). 16 (ಘಚಭಜ) ಗಳಲ್ಲಿಲ್ಲ. 17 ಶರೀರ (ಘಚಭಜ).

ವಿಧಾನದಿಂ ಪ್ರಚ್ಛನ್ನಮಪ್ಪೆಡೆಯೊಳ್ ಮೃತಕಸಜ್ಜೆಯೊಳಿರ್ದು ಸಂನ್ಯಸನಂಗೆಯ್ದು ಧರ್ಮಧ್ಯಾನ [1]ಶುಕ್ಲಧ್ಯಾನಂ[1]ಗಳಂ [2]ಧ್ಯಾನಿಸುತ್ತಿ[2]ರ್ಪನ್ನೆಗಂ

ಇತ್ತ ವಾಯುಭೂತಿಯಪ್ಪ ಭವದಂದಿನತ್ತಿಗೆಯಪ್ಪ ಸೋಮದತ್ತೆಯೆಂಬೊಳ್ ನಿದಾನಂಗೆಯ್ದು ತನ್ನ ನಾಲ್ವರ್ ಮಕ್ಕಳುಂ ತಾನುಂ ಸಂಸಾರಸಮುದ್ರದೊಳ್ ನೀಡುಂ ತಿಱ್ಱನೆ ತಿರಿದು ಬಂದು ಪೆಣ್ಣರಿಯಾಗಿ ಪುಟ್ಟಿ ತನ್ನ ನಾಲ್ಕುಮಱಿಗಳ್ವೆರಸಾ ಹಾರಮನಱಸಿ ತೊೞಲುತ್ತಂ [3]ಬರ್ಪು[3]ದನ್ನೆಗಂ ಸುಕುಮಾರಸ್ವಾಮಿ[4]ಯುಂ[4] ಮಹಾಕಾಳಕ್ಕೆ ಪೋಪ[5]ನೆಲ್ಲಾ ಕಾಲಮುಂ[6] ಮಣಿಕುಟ್ಟಿಮಭೂಮಿ[7]ಯೊಳ್ ಪಾಸಿದ ನೇತ್ರ[8]ಪಟಿಯ ಮೇಗೆ ನಡೆ[9]ದ[9] ಮೃದು ಲಲಿತಮಪ್ಪ ಚರಣ ದ್ವಯದೊಳ್ ಮುನ್ನೆಂದುಂ ನೆಲನಂ [10]ಕಿ[10]ಟ್ಟಿಯಱಿಯದೊಂ ಕಠಿನಭೂಮಿಯೊಳ್ ನಡೆದೊಡೆ ಕಿಱು[11]ಗಲ್ಗಳುಂ[11] ಪೆಟ್ಟಿಗಳು[12]ಮಗುೞ್ದು[12] ಪುಗುಳೊಡೆದು [13]ಪೊಱಮಟ್ಟು[13] ಕರಗದ ದಾರೆವೊಲೆಡೆವಱಿಯದೆ [14]ಮಹಾಕಾಳ ಶ್ಮಶಾನಂಬರೆಗಮೊಕ್ಕ ನೆತ್ತರ ದಾರೆಯ ಗಂಧದಿಂ[15]ದಂ ನರಿಗಳ್[15]ಬಂದು ಕಂ[16]ಡು[16]ರಾಗಿಸಿ ಮಱಿಗಳ್ವೆರಸಡಿಯಿಂದಂ ತೊಟ್ಟೆರಡುಂ ಕಾಲ್ಗಳಂ ಮೊೞಕಾಲ್ವರೆಗಮೊಂದು ದಿವಸಂ ತಿಂದತ್ತೆರಡನೆಯ ದಿವಸಂ ಮೊೞಕಾಲಿಂ ತೊಟ್ಟು ಕಟಿವರೆಗಂ ತಿಂದತ್ತು ಮೂಱನೆಯ ದಿವಸಂ ಬಸಿಱಂ ಪೊೞ್ದು ಕರುಳಂ ತೋಡಿ ತಿನೆ ಪೃಥಕ್ತ್ವವಿತರ್ಕ ವೀಚಾರಮೆಂಬ ಪ್ರಥಮ ಶುಕ್ಲಧ್ಯಾನದೊಳ್ ಕೂಡಿ ಯುಪಶಾಂತ [17]ಗುಣಸ್ಥಾನದೊಳಿರ್ದು ರತ್ನತ್ರಯಮಂ ಸಾದಿಸಿ [18]ಸಯಸತ್ತ್ರಮ ದೇವನಾಗಿ[18]ಪುಟ್ಟಿದೊಂ

ಮತ್ತಿತ್ತ ತಾಯುಂ ಪೆಂಡಿರುಂ* ಪರಿವಾರ[19]ಮುಮೆಲ್ಲಾ ದೆಸೆಗಳೊಳಂ ಪರಿವರಿದು ಪೋಗಿ[19] ಸುಕುಮಾರಸ್ವಾಮಿಯನೆರಟ್ದಿ ಪಸುರುಳುಂ ಪಗಲುಮಱಸಿಯುಂ ಕಾಣದೆ ಮೂಱನೆಯ ದಿವಸದಂದು ಬೈಗಿನ ಪೊೞ್ತಱೊಳ್ ದೇವರ್ಕಳ್ ಬಂದು ಸುಕುಮಾರಸ್ವಾಮಿಯನಹೊ ಸೂರಾ ಅಹೊ ಮಹಾಪುರುಷ ಅಹೊ ಧೈರ್ಯವಂತ ಅಹೊ ಸಂಸಾರಭೀರು[20] ನಿನ್ನಂತುಪಸರ್ಗಮನಾರಪ್ಪೊಡಂ ಸೈರಿಸಿ ರತ್ನತ್ರಯಮಂ ಸಾದಿಸಿ ದೊರಿಲ್ಲೆಂದು ದೇವತೆಗಳ್ ಪೊಗೞ್ದು ಕಳಕಳಧ್ವನಿಯುಮಂ ದೇವದುಂದುಭಿಯ ರವಮುಮಂ ಯಶೋಭದ್ರೆ[21] ನೋಡಿ ದೇವಸಂಘಾತಮುಂ ಕಂಡು ಮಗನ ಸಾವನಱಿದು ಬಯ್ಗಿರುಳಾದಾಗಳ್ ಮೂವತ್ತಿರ್ವರ್ ಸೊಸೆವಿರ್ಕಳ್ಗಂ ಪೇೞ್ದಟ್ಟಿ[22] ಸುಕುಮಾರ ಸ್ವಾಮಿ ನಿಮಗೆಲ್ಲರ್ಗೆ ಮುಳಿದು ಪೋಗಿಯಡಂಗಿ[23]ದೊರ್ನನಾ[23]ನಱಿವೆಂ ನೀವೆಲ್ಲಂ

---

[1] (ಘಚಭಜ) ಗಳಲ್ಲಿಲ್ಲ. [2] ಸಾಡಿಸುತ್ತಿಮಿ (ಜ). [3] ಬರ್ಪ (ಘಕಖಗ). [4] ಯಂ (ಕಖಗ). [5] + ನ (ಕಖಗ). [6] + ಮುನ್ನ (ಕಖಗ). [7] + ಕೆ (ಕಗ). [8] + ದ (ಘಚಭಜ). [9] ವಾತಂ (ಘಚಭಜ). [10] ಮೆ (ಕಖಗ) [11] ವರಲ್ಗಳುಂ (ಘಚಭ) [12] ಮಳ್ದು (ಖ), ಮೊತ್ತೆ (ಘಚಭಜ). [13] (ಘಚಭಜ) ಗಳಲ್ಲಿಲ್ಲ. [14] + ಪೊಱಪೊಣ್ಮೆ (ಘಚಭಜ). [15] (ಜ) ದಲ್ಲಿಲ್ಲ. [16] ಡಾದಮಾನುಂ (ಘಚಭಜ). [17] + ಕಷಾಯ (ಘಚಭಜ). [18] (ಘಚಭಜ) ಗಳಲ್ಲಿಲ್ಲ. [19] ಮುಂನೆರೆದು ಎಲ್ಲಾ ಯೆಡೆಗೆ ಪೋಗಿ (ಘಚಭಜ) * ಇಲ್ಲಿಂದ ಮುಂದಕ್ಕೆ (ಜ) ಪ್ರತಿಯನ್ನು ಉಪಯೋಗಿಸಿಲ್ಲ. [20] + ಅಹೊ ಎಕ್ಕಲ ವೀರಾ (ಘಚಭ). [21] + ಕೇಳ್ದು ಚ್ಚತ್ತುನೋಡಿ (ಘಚಭ). [22] + ದಳ್ (ಘಚಭ). [23] ದುರ್ದನಾ (ಕ).

ನೆಱೆಯೆ ತೊಟ್ಟುಟ್ಟು ಪಸದನಂಗೊಂಡು ಚೆಲ್ವೆಯರಾಗಿ ಬನ್ನಿಂ [1]ಪೋ[1]ಪಂ ತಿಳಿಪಿಕೊಂಡು ಬ[2]ರ್ಪಂ ನಿಮ್ಮ[2] ಸ್ವಾಮಿಯನೆಂದೊಡವರ್ಗಳನಿಬರುಂ ರಾಗಿಸಿ ಕೈಗೆಯ್ದತ್ತೆಯೊಡನೆ ಪರಿವಾರಸಹಿತಂ ಮಹಾಕಾಳಕ್ಕೆ ಪೋಗಿ ನೋಲ್ಪ[3]ರನ್ನೆಗಂ *ಸಮೇರು ಮಂದಾರಸಂತಾನಕ ಪಾರಿಯಾತ್ರಮೆಂಬ ದೇವರ್ಕಳ್ ಸುರಿದ ಪುಷ್ಪವೃಷ್ಟಿಯಿಂದಂ ಮುಚ್ಚೆಪಟ್ಟನಾಗಿ ಕಂಪಿಂಗೆಱಗಿದ ತುಂಬಿಯ ಸಮೂಹಮಂ ಮೇಗೆ ಸುೞಿವುದಂ ಕಂಡಿಲ್ಲಿರ್ದ್ದನೆಂದು ಯಶೋಭದ್ರೆ ತೋಱಿದೊಡೆ ಪೋಗಿ ತೆಱೆದು ನೋಲ್ಪರನ್ನೆಗಂ* ಮೃತಕಮಂ ಕಂಡನಿಬರುಂ ಮೂರ್ಛೆವೋಗಿ ನೀಡಱಿಂದೆೞ್ಚತ್ತು ತಮ್ಮ ಬಸಿಱುಮಂ ತಲೆಯುಮಂ [4]ಬ[4]ಡಿದು ಕೊಂಡು ಸುಕುಮಾರಸ್ವಾಮಿಯ ರೂಪಮಂ ತೇಜಮುಮಂ ಯೌವನಮಂ ಲಾವಣ್ಯಮಂ ಸೌಭಾಗ್ಯಮಂ ಯಶಮಂ ಮೆಲ್ಪಂ ನುಡಿಯ ಬಲ್ಮೆಯುಂ ಶುಚಿತ್ವಮಂ ಶೌಚಮಂ ಶ್ರೀಯುಂ ಸಂಪತ್ತುಂ ಸೊಬಗಂ ಒಲ್ಮೆಯುಂ ಧೈರ್ಯಮುಂ ಎಂದಿವು ಮೊದಲಾಗೊಡೆಯವಾತನೊಳ್ ನೆಲಸಿರ್ದ ಗುಣಂಗಳಂ ನೆನೆನೆನೆದನಿಬರುಂ[5] ಪ್ರಲಾಪಂಗೆಯ್ಯುತ್ತುಂ ಸೈರಿಸಲಾಱದೆ ನಿರಂತರಂ ಮೂರ್ಛೆವೋಗುತ್ತುಂ ನೀಡುಂ ಬೇಗಂ ದುಃಖಂಗೆಯ್ದಟ್ಟು ನೀರಿೞಿದೆಣ್ಬರ್ ಬಸಿ[6]ಱ ಪೆಂಡಿರುೞಿಯೆ ಇರ್ಪತ್ತುನಾಲ್ವರ್ ಪೆಂಡಿರುಂ ಮತ್ತುಂ ಪೆಱರ್ ನಂಟರ್ಕಳುಂ ಪರಿವಾರಮುಂ ಯಶೋಭದ್ರೆಯೊಡನೆ ದಯಾಭದ್ರರ್ ಗುರುಗಳಾಗೆ ಕಮಳಶ್ರೀ ಕಂತಿಯರ್ ಕಂತಿಯರಾಗೆ ತಪಂಬಟ್ಟುಗ್ರೋಗ್ರ ತಪಂಗೆಯ್ದನಿಬರುಂ ಸೌಧರ್ಮ [7]ಕಲ್ಪಂ[7] ಮೊದಲಾಗೊಡೆಯ ಕಲ್ಪಂಗಳೊಳ್ ಪುಟ್ಟಿದರ್

ಮತ್ತಿಂತಪ್ಪುದಂ ಚಿಂತಿಸಲುಂ ಸೈರಿಸಲುಮಾಗದ ತಿರಿಕೋಪಸರ್ಗಮನವಂತಿ ಸುಕುಮಾರಸ್ವಾಮಿ ಮೂಱುದಿವಸಮಿರುಳುಂ ಪಗಲುಂ ಸೈರಿಸಿ ರತ್ನತ್ರಯಮನೆಂತು ಸಾದಿಸಿದ್ದನಂತೆ ಸಂನ್ಯಸನಂಗೆಯ್ದು [8]ದಾರ್[8]ರಾಧಕರಪ್ಪ ಮಹಾಪುರುಷರುಮವಂತಿ ಸುಕುಮಾರಸ್ವಾಮಿಯ ಪರಮಸುಖಿಯುಪ್ಪುಪಸರ್ಗಮಂ ವಿಜಯ ವಿಧಾನಮಂ ಮನದೊಳನವರತಂ ಚಿಂತಿಸು[9]ತ್ತಾಪ್ತಾಗಮಪದಾರ್ಥದಿಗಳೊಳತೀವಸ್ಥಿರರಾಗಿ ಪರಮ ಸಹಜ ನಿಜರತ್ನತ್ರಯದೊಳ್ ಕೂಡಿ ಅಭೇದವಾಗೆಯ್ದೆ ಕೂಡಿ ಶರೀರಂ ಮೊದಲಾಗೊಡೆಯ ಸಮಸ್ತ ಬಾಹ್ಯಾಭ್ಯಂತರ ಪರಿಗ್ರಹಂಗಳಂ ನೆಱೆ ತೊಱೆದು ಅಪೂರ್ವಾಪವರ್ಗ ಸುಖಂಗಳನೆಯ್ದುಗೆ[9]

ಮತ್ತುಜ್ಜೇನಿಯ ತೆಂಕಣದೆಸೆಯೊಳವಂತಿ ಸುಕುಮಾರಸ್ವಾಮಿಯ ಕಾಲಂಗೆಯ್ದೆಡೆ ಈಗಳುಂ ಪುಣ್ಯಮುಂ ಪವಿತ್ರಮುಮಾದುದು ಮತ್ತುಂ[10] ಮಹಾಪುರುಷನ ಶರೀರಮಂ ಚತುರ್ನಿಕಾಯಾಮರತತಿಗಳ್ ಭಕ್ತಿಯಿಂದಗರು ಕಾಳಾಗರು ಗೋಶೀರ್ಷ ಚಂದನಂ ಮೊದಲಾಗೊಡೆಯ ಅನೇಕ ಸುಗಂಧ ದ್ರವ್ಯಂಗಳಿಂದಂ

1 ಬಾಪ್ಪೋ (ಖ), ಕೋ (ಗ). 2 ರ್ಪ ಮಿಂತು (ಕಗ). 3 + ರ (ಕಗ). *-* (ಘಚಛ) ಗಳಲ್ಲಿಲ್ಲ. 4 ಪಿ (ಖ). 5 + ವಿ (ಘಚಛ). 6 ರ್ಪಂ (ಘಚಛ). 7 ಂ (ಘಚಛ) 8 ಳ್ದಾ (ಕಖಗ). 9 ತ್ತುಂ ಪಂಚನಮಸ್ಕಾರಮನುಚ್ಚರಿಸುತ್ತುಂ ದೇವರಂ ಧ್ಯಾನಿಸುತ್ತುಂ ಮುಡಿಪಿ ರತ್ನತ್ರಯಮಂ ಸಾದಿಸಿಯಭ್ಯುದಯ ಸುಖಂಗಳನೆಯ್ದಿ ಕರ್ಮಕ್ಷಯಂಗೆಯ್ದು ಮೋಕ್ಷಮಂ ಸಾದಿಸುಗೆ (ಘಚಛ). 10 ಗಂಧೋದಕಂ ಬಿಳ್ದುದಱಿಂದಂ (ಘಚಛ).

ಪೂಜಿಸಿದ ವಸ್ತುಗಳ್ ಕಾಲಾಂತರದಿಂ ಕರಗಿ ಬಿೞ್ದುದಾ ಸ್ಥಾನಕ್ಕಂ[10] ಗಂಧವತಿ ಯೆಂಬ ತೊಱೆಯಾದುದು ದೇವರ್ಕಳ್ ಪೊಗೞ್ದ ಕಳಕಳಧ್ವನಿಯಿಂ ಪೆಂಡಿರ್ಕಳ ಪ್ರಳಾಪಂಗೆಯ್ದುೞ್ತು ಕಳಕಳಧ್ವನಿಯಿಂದಂ ಕಳಕಳಾಯ[1]ತಮೆಂದು[1] ಸಿದ್ಧಾಯ[2]ತನ[2] ಮಾದುದು

[1] ವೆಂಬುದು (ಘಚಛ). [2] (ಕಖ) ಗಳಲ್ಲಿಲ್ಲ.

೨. ಸುಕೌಶಳ ಸ್ವಾಮಿಯ ಕಥೆ

ಸುಕೌಶಳ ಸ್ವಾಮಿಯ ಕಥೆಯಂ ಪೇೞ್ವಂ :

ಗಾಹೆ|| ಮೊಗ್ಗಳ ಗಿರಿ [1]ಮ್ಮಿ[1] ಯ ಸುಕೌಸಳೋ ವಿ ಸಿದ್ಧತ್ಥ ದಯಿದಗೋ ಭಗವಂ |
ವಗ್ಘೀಯೆ ಖಯಿದಂ ಪದಿದೋ ಪಡಿವಣ್ಣೋ ಉತ್ತಮಂ ಅಟ್ಠಂ ||

[ಮೊಗ್ಗಳ ಗಿರಿಮ್ಮಿಯ—[2]ಮೊಗ್ಗಳಮೆಂಬ[2] ಪರ್ವತದೊಳ್, ಸುಕೌಸಳೋವಿ—ಸುಕೌಸಳಸ್ವಾಮಿಯುಂ, ಸಿದ್ಧತ್ಥದಯಿದಗೋ—ಸಿದ್ಧಾರ್ಥನೆಂಬ ಪರದನ [3]ಕಾದಲಿಸೆ[3] ಪಡುವ ಮಗಂ, ಭಗವಂ—ಪೆರ್ಮೆಯನೊಡೆಯೊಂ, ವಗ್ಘೀಯೆ ಖಯಿದಂಪದಿದೋ—ಮುನ್ನಿನ ಭವದ ತಾಯಪ್ಪ ಪೆಣ್ಬುಲಿಯಿಂದಂ ತಿನೆ [4]ಬ[ರ್ದಿ]ದೊ[4]ನಾಗಿಯುಂ, ಪಡಿವಣ್ಣೋ—ಪೊರ್ದಿದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನ ಜ್ಞಾನ ಚಾರಿತ್ರಾರಾಧನೆಯುಂ.]

ಅದೆಂತೆಂದೊಡೆ :

ಈ ಜಂಬೂದ್ವೀಪದ ದಕ್ಷಿಣ ಭರತಕ್ಷೇತ್ರದೊ[5]ಳಂಗಮೆಂ[5]ಬುದು ನಾಡಲ್ಲಿ ಚಂಪಾನಗರಮೆಂಬುದು ಪೊೞಲದನಾಳ್ವೊಂ ಗಂಧಭಾಜನನೆಂಬರಸನಿಂದ್ರನೊಳೋರಂತಪ್ಪ ಭೋಗೈಶ್ವರ್ಯವಿಭವಮನೊಡೆಯೊಂ [6]ನ್ಯಾ[6]ಯದಿಂದಂ ಪ್ರಜೆಗಳಂ[7]ಪ್ರತಿಪಾಳಿಸುವೊ[7] [8]ನಧಿ[8]ಗಮ ಸಮ್ಯಕ್ ದೃಷ್ಟಿಯಪ್ಪನೇೞು ಗುಣಂಗಳಿಂದಂ ಕೂಡಿ[9]ದೊ[9]ನಾಯೇೞುಂಗುಣಂಗಳೆಂಬುವಾವುವೆಂದೊಡೆ

ಗಾಹೆ|| ಸಮ್ಮದ್ದಸ್ಸಣಸುದ್ಧೋ ಕದವಧ ಕಮ್ಮೋ ಸುಸೀಲಗುಣಣಿಳಯೊ
[10]ಉಜುಗತ್ತೋ ಗುರುಭತ್ತೋ ಪವಯಣ ಕುಸಳೋ ಮದಿಪ್ಪಗಬ್ಭೋಯ ||

ಎಂದೇೞುಂ ಗುಣಂಗಳಿಂದಂ ಕೂಡಿದೊನಂತಪ್ಪರಸಂ ಶರತ್ಕಾಲದ ಮುಗಿಲೊಳೋರಂತಪ್ಪುದನಾದಮಾನುಂ ವಿಚಿತ್ರಮಪ್ಪುದಂ ಸಹಸ್ರಕೂಟಮೆಂಬ ಜಿನಾಲಯಮಂ ಮಾಡಿಸಿ ಅದರ್ಕ್ಕನವರತಂ ಮಹಾ ಪೂಜೆಯುಮಂ ಮ[11]ಹಿಮೆ[11]ಯುಮಭಿಷೇಕಂಗ[12]ಳುಮಂ[12] ಸಲಿಸುತಿರ್ಪೊಂ ಮತ್ತಾ ಪೊೞಲೊಳೊರ್ವಂ ಸಾಗರದತ್ತನೆಂಬೊಂ ಸೆಟ್ಟಿಯಾತನ ಭಾರ್ಯೆ ಸುಭದ್ರೆಯೆಂಬೊಳಾಯಿರ್ವರ್ಗಂ ಮಗಳ್ [13]ಸು[13]ರೂಪೆಯೆಂಬೊಳ್ ಮತ್ತಾ ಪೊೞಲೊಳ್ ಪೆಱನೊರ್ವಂ ಸೆಟ್ಟಿ ನಾಗದತ್ತನೆಂಬೊನಾತಂಗೆ [13]ಸು[13]ರೂಪೆಯಂ ಕೊಟ್ಟೊಡಾಯಿರ್ವರ್ಗಂ ಸುಕೇ[14]ಶಿನಿಯೆಂ[14]ಬ ಮಗಳಾದಳಾಕೆ

---

1 ಮ್ಮಿ (ಖ). 2 ಮದ್ಗರಗಿರಯೆಂಬ ಪರ್ವತದೊಳ್ (ಗಘಚಛ). 3 ಕಾಲದಲಿಸೆ (ಸ–ಛ). 4 ಬಳ್ದಿ (ಖಗ), ಪಡುತಿರ್ದೊನಾಗಿಯುಂ (ಘಚಛ), ಬಳ್ದಿದ (ಕ). 5 ಳ್ ಗಂಗೆಯೆಂ (ಕಖಗ). 6 ನ (ಕ). 7 (ಕ) ದಲ್ಲಿ ನಷ್ಟವಾಗಿದೆ. 8 ನಿದಿಗವಾಗಮ (ಕ), . . . ವಾ (ಖ). 9 ದ (ಕ). 10 ವಜುಗೆಂತೋ (ಖಗ), ವಜುಗುಲತೋ (ಘ), ಉಜುಗುಲತೋ (ಚಛ). 11 ಯ್ಮೆ (ಕ). 12 ಳ್ಮಂ (ಕಖಗ). 13 ಸ್ವ (ಕಗ). 14 ಶಿಯೆಂ (ಕ).

[1]ಬ[1]ಳೆದತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವವಿಲಾಸವಿಭ್ರಮಂಗಳನೊಡೆಯೊಳ್ ಪಲವುಂ ತೆಱದ ಶುಭಲಕ್ಷಣಂಗಳಿಂದಂ ಕೂಡಿದಮೆಯ್ಯನೊಡೆಯೊಳ್ ನವಯೌವನೆ ದೇವಗಣಿಕೆಯನೆ ಪೋಲ್ವಳೊಂದು ದಿವಸಂ ಅಷ್ಟಮಿ[2]ಯಂ ನೋಂತು[2] ದೇವರನರ್ಚಿಸಲೆಂದು ಸಹಸ್ರಕೂಟ ಚೈತ್ಯಾಲಯಕ್ಕರ್ಚನೆಯಂ ಕೊಂಡು ಪೋದಳನ್ನೆಗಮರಸನು[3]ಮಾಗಳೆ ದೇವರಂ ಬಂದಿಸಲ್ ಬಂದೊಡರಸಂಗೆ ನಾಣ್ಚಿ ಬಸದಿಯೊಳಗಣ ಕಂಬದ ಮಱೆಯೊಳ್ ಕೇರಂ ಸಾರ್ದು ಪೊನ್ನ ಬೆಳಗುವ ಗಳಂತಿಗೆಯನಾದಮಾನು ಮೊಪ್ಪುತ್ತಿರ್ದುದಂ ಪಿಡಿದು ನಿಂದಿರ್ದೊಳನರಸಂ[3] ಕಂಡಿಲ್ಲಿಯ ಚಿತ್ರದ ಲೆಪ್ಪದ [4]ಕಾಷ್ಠಕರ್ಮದ[4] ರೂಪುಗಳೊಳೆಲ್ಲ[5]ವಿಾ ಸ್ತ್ರೀಯ ಜೀವ[6]ವಿದ್ದ[6]ಮಿಂತುಟತಿಶಯ[7]ಮೆಂದರಸನಾಕೆಯ ರೂಪಿಂಗಚ್ಚರಿವಟ್ಟು[7] ಪೊಗೞೆ ಕೆಲದೊಳಿರ್ದ ಕಟ್ಟಿದ್ದೇನದತ್ತ ನೀಕೆ ಕನ್ನೆ[8]ಯಿರ್ದೊ[8]ಳೆಂದು ಪೇೞ್ದಾಡಾರ ಮಗಳೆಂದು ಬೆಸಗೊಂಡೊಡೀ ಪೊೞಲ್ಗೆ ಪ್ರಧಾನಂ ನಾಗದತ್ತ ಸೆಟ್ಟಿಯ ಮಗಳೆಂದು ಪೇೞ್ದೊಡರಸಂ ಕೇಳ್ದು ಕೆಮ್ಮಗಿರ್ದು ದೇವರ್ಗೆ ನಮಸ್ಕಾರಂಗೆಯ್ದು [9]ಋಷಿಯರಂ ಬಂದಿಸಿ ತನ್ನ ಮನೆಗೆ ಪೋದನ್

ಇತ್ತ ಸುಕೇಶಿನಿಯುಂ ದೇವರನರ್ಚಿಸಿ ಬಂದಿಸಿ ಗುರುಪರಿವಿಡಿಯಿಂದಂ ರಿಸಿಯರಂ ಬಂದಿಸಿ ವ್ರತಂಗಳನೇಱಿಸಿಕೊಂಡು ಸಿದ್ಧಸೇಸೆಯಂ ತಾಯ್ಗಂ ತಂದೆಗಂ ಪೋಗಿ ಕೊಟ್ಟೊಡವರ್ಗಳುಂ[10] ತಲೆಯೊಳಿಟ್ಟುಕೊಂಡು ಯೌವನಂ ನೆಱೆದ ಕೂಸಿನ ರೂಪಂ ನೋ[11]ಡುತ್ತಿರ್ದಾ[11]ಗಳ್ ಕುಡುವಮೆಂದು ತಮ್ಮೊಳ್ ನುಡಿಯುತ್ತಿರ್ಪಿನಮರಸಂ ಕನ್ನೆಯ ರೂಪಂ ಕಂಡಾಟಿಸಿ ಕೂಸಿನ ತಾಯಪ್ಪ ಸುರೂಪೆಗೆ ಬಟಿಯನಟ್ಟಿ ಬರಿಸಿ ಕೂಸನಾರ್ಗೆ ಕೊಟ್ಟಪಿರೆಂದು ಬೆಸಗೊಂಡೊಡೆನ್ನ ತಮ್ಮಂ ವರಾಂಗನೆಂಬೊನಾತನ ಮಗಂ ಜಿತರಂಗನೆಂಬೊನೆನ್ನ ಸೋದರಳಿಯನಾತಂಗೆ ಕೊಟ್ಟಪೆನೆಂ[12]ದು ಪೇೞ್ದೊ[12]ಡರಸಂ ಮಧುಸೇನಂ ಮಧುಸೂದನರೆಂಬಿರ್ವರ್ ಪ್ರಧಾನವರ್ಗಡೆಗಳಂ ನಾಗದತ್ತಸೆಟ್ಟಿಯಲ್ಲಿಗೆ ಕೂಸಂ ಬೇ[13]ಡಿಯ[13]ಟ್ಟಿಯುತ್ತವಳನಾಗಿಯುವರ ಬಟಿಯನೆ ತಾನುಂ ನಾಗದತ್ತನ ಮನೆಗೆ ಪೋಗಿ ಕೂಸಂ ಬೇಡಿ ಪೆತ್ತಂ ನಾಗದತ್ತನುಮಷ್ಟಾಹ್ನಿಕ ಮಹಾಮಹಿಮೆಯನೆಂಟು ದಿವಸಂ ಮಾಡಿ ಪ್ರಶಸ್ತ [14]ದಿನ[14]ವಾರ ನಕ್ಷತ್ರ ಮುಹೂರ್ತ ಹೋರಾಲಗ್ನದೊಳ್ ಕೂಸಿನನುಕೂಲದೊಳ್ ಪಾಣಿಗ್ರಹಣ ಪುರಸ್ಸರಂ ಸುಕೇಶಿನಿಯುಂ ಗಂಧಭಾಜನನೆಂಬರಸಂಗೆ ಕೊಟ್ಟನಿಂತು ಮಹಾವಿಭೂತಿಯಿಂದಂ ಮದುವೆ ನಿಂದು ಗಂಧಭಾಜನ ನೃಪತಿಯುಂ ಸುಕೇಶಿನಿಯೊಳಿಷ್ಟ ವಿಷಯಕಾಮ ಭೋಗಂಗಳಂ ಪಲಕಾಲಮನುಭವಿಸುತ್ತಿರೆ

ಮತ್ತೊಂದು ದಿವಸಂ [15]ಕೌಶ[15]ಲಾಧಿಪತಿಯಪ್ಪ ತಿಬಳನೆಂಬರಸಂಗಂ ಕಳಿಂ

1 ಬೆ (ಕ). 2 ಯ ನೋಂಪಿಗೆ (ಕ). 3 (ಕಖಗ)ಗಳಲ್ಲಿ ಈ ಭಾಗ ಇಲ್ಲ. 4 ಕಲ್ಲುಮರದಲ್ಮಾಡಿದ (ಕಗ) 5 + ವಿಲ್ಲ (ಕ). 6 ರೂಪಿದು (ಕಖಗ) 7 ಮಪ್ಪ ರೂಪೆಲ್ಲಿಯುಮಿಲ್ಲೆಂದರಸಂ (ಖ.). 8 ವುಳ್ಳೊ (ಕ). 9 +ಪೊಡೆವಟ್ಟು (ಖ). 10 +ತಮಗಿತ್ತ ಸೇಸೆಯಂ (ಘಚಛ). 11 ಡಿತ್ತಿರ್ದೊಂತಾನಾ (ಕಖಗ). 12 ದೊ (ಕ). 13 ಡಲ (ಕ). 14 ದಿವಸ (ಖ). 15 ಕಂಸ (ಕ).

ಗಾಧಿಪತಿಯಪ್ಪ ಕಳಿಂಗನೆಂಬರಸಂಗಂ ತಮ್ಮೊಳ್ ವಿಗ್ರಹಮಾದೊಡೆ ಗಂಧಭಾಜನ ನೃಪತಿ ತನ್ನ ಮತಿ[1]ಶ್ರುತ[1]ನೆಂಬ ಮಂತ್ರಿಯನಟ್ಟಿ ಇರ್ವರ್ಗ್ಗಂ ಸಂಧಿಮಾಡಿದೊಡೆ ಕಳಿಂಗನೆಂಬರಸಂ ಮಧುಸೂದನನೆಂಬ ಪೆರ್ಗ್ಗಡೆಯ ಕೆಯ್ಯೊಳ್ ಮದಾಂಧ [2]ಗಂಧಹಸ್ತಿಯಂ[2] ಗಂಧಭಾಜನನೃಪತಿಗೆ ಪಾಗುಡಮಟ್ಟಿದೊಡದಂ ಸೊರ್ಕ್ಕಿನಿಂದಂ ಮಸಗಿದುದಂ ಗಂಧಹಸ್ತಿಯಂ ಸುಕೇಶಿನಿ ಕಂಡು ಜಾತಿಸ್ಮರೆಯಾಗಿ ಮೂರ್ಛೆವೋಗಿದ್ದೊರ್ಳಂ ದಾದಿ ಮೊದಲಾಗಿ ಕೆಲದೊಳಿದ್ದೋರೆಲ್ಲಂ ಚಂದನದ [3]ನೀರ್ಗಳಂ[3] ತಳಿದು ಬೀಸೆ ನೀಡಱಿಂದೆಟ್ಚತ್ತಳನ್ನೆಗಮರಸನುತ್ತವಳನಾಗಿ ಪರಿತಂದಿದೇನೀಕೆಗೇಕಿಂತಾಯ್ತೆಂದು ಬೆಸಗೊಳೆ ದಾದಿಯೆಂದಳ್ ಸೊ[4]ಕ್ಕಾರ್ನೆ[4]ಯಂ ಕಂಡು ಮೂರ್ಛೆವೋದಳೆಂದು ಪೇಟ್ದೊಡಾ ಮಾತನರಸಂ ಕೇಳ್ದು [5]ಮಱುಸೂಟನಾನೆಯಂ[5] ಕಂಡಂಜದಂ[6]ತಿರೆ[6] ಸುಕೇಶಿನಿಯ ಮಾಡದ ಕೇರ್ಗ್ಗಳೆಲ್ಲಾಯೆಡೆಗಳೊಳಂ ವ್ಯಾಳಂಗಳಪ್ಪಾನೆಗಳಂ ತನ್ನ ಚಿತ್ರಾರಿಗರಿಂದಂ ಬರೆಯಿಸಿದಂ ಮತ್ತೆ ಸುಕೇಶಿನಿಯುಂ ತನ್ನ ಮುನ್ನಿನ ಜನ್ಮದೊಳ್ ನೆಗಟ್ದುದೆಲ್ಲಮಂ ಪಟದೊಳ್ ತಾನೆ ಬರೆದಾರುಮಱಿಯದಂತಿರೇಕಾಂತದೊಳ್ ನೋಡುತ್ತಿರ್ಕ್ಕುಮಿಂತು ಕಾಲಂ ಸಲೆ

ಮತ್ತೊಂದು ದಿವಸಂ ಮುನ್ನಿನ ಗಂಧಹಸ್ತಿಯೊಡನೆ [7]ಬಾರಿ[7]ಯೊಳ್ ಮೂವತ್ತಿರಡು ಗಜಕ್ರೀಡೆಗಳಿಂದಂ ನೀಡುಂ ಬೇಗಂ ಕ್ರೀಡಿಸಿಯಾನೆಯಂ ಸೇದೆಗೆಡಿಸಿ ತನ್ನ ಬಸಕ್ಕೆ ಮಾಡಿಯೇಱಿಯಂಕುಸಮಂ ಪೊಳೆಯಿಸುತ್ತಮರಸಿಯಲ್ಲಿಗೆ [8]ವಂ[8]ದು ನಿಂದಿಂತಕ್ಕುಮೆ [9]ಮೆ[9]ಚ್ಚಿದಾ ಎಂದು ತನ್ನ ಸಾಹಸಮಂ ಪೇಟ್ದು ಮೆಱೆಯೆ ಸುಕೇಶಿನಿಯೆಂ[10]ದೊ[10]ಳಿದೇ[11]ನೆಂಬಾನೆ[11] ತಗರೊಳೋರಂತಪ್ಪುದು ಚಂದನಮಲಯಮೆಂಬ ಪಿರಿಯ ಪರ್ವತದೊಳ್ ಇಂದ್ರನೀಲ ಮಾಣಿಕದೊಳೋರಂತಪ್ಪ ಬಣ್ಣಮನೊಡೆಯದು ಮಲಯಸುಂದರನೆಂಬಾನೆಯುಂಟು ಹಸ್ತಿಯೂಥಕ್ಕೆಱೆಯನಪ್ಪುದು ಎಲ್ಲಾ ಕಾಲಮುಂ ಮದದಿಂದಂ ಪೆರ್ಚುತ್ತಿರ್ದುದು ಕೆಂದಾವರೆಯ ವಣ್ಣದೊಳೋರಂತಪ್ಪ ಬಣ್ಣಮನೊಡೆಯ ಪದ್ಮಾವತಿಯೆಂಬ ಪಿಡಿ[12]ಯೊಡನೆ[12] ಕ್ರೀಡಿಸುತ್ತಿರ್ಪ್ಪಾನೆಯಂ ನಿನ್ನ ವಸಕ್ಕೆ ಮಾಡಿ ಪಿಡಿದೇಱಿಕೊಂಡು ವಂದೊಡೆ ನಿನ್ನ ಗಜ[13]ಪ್ರಿಯತೆಯುಮೇಱಿಯಾಡಲ್[13] ಬಲ್ಮೆಯುಂ ಕಲಿತನಮುಂ ಸಾಹಸಮುಂ ಗಂಡಗುಣಮುಮನಱಿಯಲಕ್ಕುಮಾ ಯಾನೆಯಂ ತಂದಂದು ಗಂಡರ್ ನಿನ್ನನ್ನರೀ ಭುವನದೊಳಾರುಮಿಲ್ಲೆಂದೊಸೆದು ಮೆಚ್ಚಿ ಪೊಗೞ್ವೆನೆಂದೊಡರಸ[14]ನಿಂ[14]ತೆಂದಂ ನೀನಪ್ಪೊಡಿಲ್ಲಿ ಪುಟ್ಟಿದೆ ಆ ಯಾನೆಯನೆಲ್ಲಿ ಕಂ[15]ಡೆಯೆಂ[15]ತಱಿವೆಯೆಂದು ಬೆಸಗೊಳೆ ಸುಕೇಶಿನಿಯಿಂತೆಂದಳ್

---

[1] ವರ (ಘಚಝ). [2] ಸಿಂಧುರಮಂ (ಘಚಝ). [3] ಹಿಮಸಲಿಲಂಗಳಂ (ಘಚಝ). [4] ಕ್ಕಿರ್ದಾ (ಕ). [5] ಮಧುಸೂದನನಾನೆಯಂ (ಘಚಝ). [6] ತೆ (ಘಚ). [7] ಚಾಲಿ (ಕ), ಬಾಳಿ (ಖ), ಬಾಲಿ (ಗ), ಬಾವಿ (ಚ). [8] ಬಂ (ಕ). [9] ಮೆ (ಖ). [10] ಬ (ಕ). [11] ದೇತಱಾನೆ (ಚ). [12] ಯನೆ (ಕ). [13] ಬಂಧನೋಪಾಯಕುಶಳಿಕೆಯುಮಱಿವಿನೊಂದು (ಘಚಘ), ಪ್ರಿತಿಯತಿರ್ಕೆಯೂಮೇಱಿಯಾಡಲ್ (ಕಗ). [14] ಗಿಂ (ಖ). [15] ಡಱಿಯೆಯೆಂ (ಕ).

ಆಂ ಮುನ್ನಿನ ಜನ್ಮದೊಳ್ ಮನೋವೇಗೆಯೆನೆಂಬ ವಿದ್ಯಾಧರಿ ಎನ್ನಂದಿನ ಭರ್ತಾರಂ ಮಣಿ [1]ಚೂ[1]ಳನೆಂಬೊಂ ವಿದ್ಯಾಧರನಾತನೊಡನೆ ಭೌಮವಿಹಾರಾರ್ಥಂ ತೊೞಲ್ವಲ್ಲಿ ಚಂದನಮಲಯಮೆಂಬ ಪರ್ವತದೊಳ್ ಕರಿಣೀವೃಂದಂ ಬೆರಸಾಡುವ ಕರಿ[2]ಪತಿ[2]ಯನೈರಾವಣ ಸನ್ನಿಭಮಂ ಕಂಡೆನೆಂದುರ್ಕ್ಕೆವದಿಂದಂ ಪೇೞ್ದೊಡಾ ಮಾತನರಸಂ ಕೇಳ್ದು ಪೂರ್ವಜನ್ಮಾಂತರದೊಳ್ ಕಟ್ಟಿಪಟ್ಟ ಮುಳಿಸನೊಡೆಯೊಂ ತನ್ನುಳ್ಳ ಸಮಸ್ತ ಬಲಂಬೆರಸು ಪೋಗಿ ಮಲಯಪರ್ವತವೆಲ್ಲಮಂ ಬಳಸಿ ಸುತ್ತಿಮುತ್ತಿದಾಗ ಇಂದ್ರನೀಲಮಾಣಿಕದ ತೇಜದೊಳೋರಂತಪ್ಪ ಮೆಯ್ಯನೊಡೆಯ ಗಜಪತಿಯುಂ ಮುಗಿಲ ಧ್ವನಿಯ ಮೆಲ್ಗಂಭೀರಮಪ್ಪ ಗರ್ಜ್ಜನೆಯನೊಡೆಯದುಂ ಬಂದು ಪಡೆಯೆಲ್ಲಮಂ ಹತವಿತತಕೋಳಾಹಳಮೆೞೆದು ಕೊ[3]ಲ್ವು[3]ದನಾದಮಾನುಂ ಕಲಿಯಪ್ಪುದನರಸಂ ಕಂಡು ಪಿಡಿಯಲಾಱದಾನೆಯುಂ ಕೊಂದೆರಡುಂ ನಿಡಿಯ ತೋರಮಪ್ಪ [4]ಕೊಂಬುಗ[ಳುಮಂ][4] ಕುಂಭಸ್ಥಳದಮುತ್ತುಗ[4][ಳುಮಂ][4] ಕೊಂಡೊಸಗೆಯಿಂದಂ ಬೇಗಂ ಚಂಪಾಪುರಕ್ಕೆ ವಂದರಮನೆಯಂ ಪೊಕ್ಕರಸಿಯಂ ಕಂಡು ನಿನ್ನ ಸಚ್ಚುವ ಮಲಯಸುಂದರನ ಕೊಂಬುಗ[4][ಳುಮಂ][4] ಮುತ್ತುಗ [4][ಳುಮಂ][4] ಕೊಳ್ಳಿಂದವಂ ಸುಕೇಶಿನಿಯ ಮುಂದೆ ತಂದಿಟ್ಟೊಡೆ ಸುಕೇಶಿನಿಯುಂ ಹಾ ಮಲಯಸುಂದರಾ ಹಾ ಎನ್ನ ನಲ್ಲನೇ ಹಾ ಎನ್ನ ಮಲಯಸುಂದರನಪ್ಪ ಸ್ವಾಮಿಯೆಂದು ಪ್ರಳಾಪಂಗೆಯ್ದು ಎರಡು ಕೊಂಬುಗಳುಮಂ ತಕ್ಕೈಸಿಯಾದಮಾನುಂ ಬಿಗಿದಪ್ಪಿಕೊಂಡು ಸತ್ತಳ್ ಸುಕೇಶಿನಿ ಸತ್ತುದರ್ಕ್ಕರಸಂ ಮೊದಲಾಗಿ ಪರಿವಾರಮೆಲ್ಲಂ ಬೆಱಗಾಗಿ ವಿಸ್ಮಯಂಬಟ್ಟು ದುಃಖಂಗೆಯ್ದರ್

ಕೆಲವು ದಿವಸದಿಂ ಯಶೋಧರರೆಂಬ ಕೇವಲಜ್ಞಾನಿಗಳ್ ವಿಹಾರಿಸುತ್ತಮಾ ಚಂಪಾನಗರಕ್ಕೆ ವಂದು ಪ್ರಮದೋದ್ಯಾನವನದೊಳಿರ್ದ್ದರೆಂಬ ಮಾತನರಸಂ ರಿಸಿನಿವೇದಕನಿಂದಱಿದು ಸಪರಿವಾರಂ ಬೆರಸು ಬಂದರ್ಚಿಸಿ ಯಥೋಚಿತಸ್ಥಾನದೊಳಿರ್ದಂ ಮತ್ತಂ ನಾಗದತ್ತ ಸೆಟ್ಟಿಯುಂ ಸುರೂಪೆಯುಂ ವರಾಂಗನುಂ ಪ್ರಿಯಂಗುವುಂ ಮೊದಲಾಗೊಡೆಯ ಶ್ರಾವಕ ಜನಂಗಳ್ ಬಂದರ್ಚಿಸಿ ನಮಸ್ಕಾರಂಗೆಯ್ದರ್ [6]ತಮ್ಮಡಿ[6]ಗಳೊಳಿರ್ದು ಧರ್ಮಮಂ ಕೇಳ್ದು ತದನಂತರಮೆ ವೈರಾಗ್ಯಮಾಗಿ ಸುಕೇಶಿನಿಯ ದುಃಖಮಂ ಸೈರಿಸಲಾಱದೆ ಸುಕೇಶಿನಿಯ ತಂದೆಯಪ್ಪ ನಾಗದತ್ತ ಸೆಟ್ಟಿಯುಂ ತಾಯ್ ಸುರೂಪೆಯುಂ ಮಾವನಪ್ಪ ವರಾಂಗನುಂ ವರಾಂಗನ ಭಾರ್ಯೆಯಪ್ಪ ಪ್ರಿಯಂಗುವುಮಂತು ನಾಲ್ವರುಮೆೞ್ದಭಿಮುಖರಾಗಿ ದೀಕ್ಷಾಪ್ರಸಾದಂಗೆಯ್ಯಂಭಟಾರಾ ಎಂದು ಬೇಡಿ ತಪಂಬಟ್ಟರ್ ಮತ್ತಂ ಸುಕೇಶಿನಿಯಾ ಮಲಯಸುಂದರನೆಂಬಾನೆಯ ಕೊಂಬುಗಳನಪ್ಪಿ ಸತ್ತಳೆಂಬ ಮಾತಂ ವರಾಂಗನುಂ ಕೇಳ್ದು ಜನ್ಮಾನುಬಂಧಿಯಪ್ಪ ಸ್ನೇಹಂ ಕಾರಣಮಾಗಿ ದುಃಖಮಂ ಸೈರಿಸಲಾಱದೆ ತಪಂಬಟ್ಟು ನಿದಾನಸಹಿತಂ ತಪಂಗೆಯ್ದುನಿತ್ತ ಗಂಧಭಾಜನ ನೃಪತಿ ಯಶೋಧರ ಕೇವಲಿಗಳ

---

1 ಮಾ (ಭ). 2 ಯಪಿಂ (ಘಚಭ). 3 ಳ್ವು (ಖ). 4 ಕೋಡುಗಳ್ಮಂ (ಘಚಭ), ಕೊಂಬುಗಳ್ಮಂ (ಕಖಗ). 5 ಳ್ಮಂ (ಸ). 6 ತಂಮಂದಿರಂ (ಕ), ತಂತಮ್ಮಡಿಯೊ (ಘಚಭ).

ನಿಂತೆಂದು ಬೆಸಗೊಂಡಂ ಭಟಾರಾ ಸುಕೇಶಿನಿ ಮಲಯಸುಂದರನೆಂಬಾನೆಯ ಕೊಂಬುಗಳನಪ್ಪಿಕೊಂಡು ಸತ್ತುದರ್ಕ್ಕೆ ಕಾರಣಮೇನೆಂದು ಬೆಸಗೊಂಡೊಡೆ ಕೇವಲ ಜ್ಞಾನಿಗಳಿಂತೆಂದು ಪೇೞ್ದರ್

ದಕ್ಷಿಣಾ ಪಥದೊಳ್ [1]ದ್ರವಿಳ ವಿಷಯದೊಳ್[1] ದಕ್ಷಿಣ ಮಧುರೆಯೆಂಬುದು ಪೊೞಲದನಾಳ್ವೊಂ [2]ಸುಂದರ[2]ಪಾಂಡ್ಯನೆಂಬೊನರಸನಾತನರಸಿಯಮೃತಮಹಾದೇವಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಮಾ ಪೊೞಲೊಳಾರ್ಯನಂದಿಯೆಂಬೊಂ ಸೆಟ್ಟಿಯಾತನ ಪರದಿ[3]ಯುವಥಿ[3]ಯೆಂಬೊಳಾ ಇರ್ವ್ವರ್ಗ್ಗಂ ಸುಕೀರ್ತಿಯೆಂಬೊಳ್ ಮಗಳಾದಳ್ ಮತ್ತೊರ್ವನಾ ಪೊೞಲೊಳ್ ಸುದರ್ಶನನೆಂಬೊಂ ಪರದನಾತನ ಪರದಿ ವೀರಶ್ರೀಯೆಂಬೊಳಾಯಿರ್ವರ್ಗ್ಗಂ ಮಗಂ ಪ್ರಿಯದರ್ಶನನೆಂಬೊನಾತಂಗಾ ಸುಕೀರ್ತಿಯಂ ಕೊಟ್ಟರ್ ಸುಕೀರ್ತಿಯ ಕೆಳದಿ ಮಾಲೆಗಾರ್ತಿ ಪ್ರಿಯಸೇನೆಯೆಂಬೊ[4]ಳಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತೊಂದು ದಿವಸಂ ಸುಕೀರ್ತಿ ತನ್ನ ಭರ್ತಾರನನಿಂತೆಂದಳಡವಿಯೊಳಂ ಪರ್ವತಂಗಳೊಳಂ ಪುಳಿನಸ್ಥಳಂಗಳೊಳಮೆನಗೆ ಕ್ರೀಡಿಸಲೞ್ತಿಯಾದುದೆನೆ ನಿನ್ನೞ್ತಿಯಂ ನೆಱಪಲಕ್ಕುಮೆಂದು ಪ್ರಿಯದರ್ಶನನುಂ ಸುಕೀರ್ತಿಯುಂ ಪ್ರಿಯಸೇನೆಯುಮಂತು ಮೂವರುಂ ಪರಿವಾರಸಹಿತಮಡವಿಗೆ ಪೋಗಿಯಲ್ಲಿ [5]ಕಾನನ ವನ ಸರಿತ್ಸರೋವರ[5] ಪ್ರದೇಶಂಗಳೊಳ್ ಪರಿಜನಂಬೆರಸು ತದೀಪ್ಸಿತ ಪ್ರದೇಶಂಗಳೊಳ್ ವಿಹಾರಿಸಿ [6]ರಮ್ಯಮಪ್ಪ ಗಿರಿನದಿಯ ಪುಷ್ಪ ಪಲ್ಲವಲತಾ[6]ಕೀರ್ಣಮಪ್ಪ ಪುಳಿನ ಸ್ಥಳಂಗಳೊಳ್ ಕ್ರೀಡಿಸುತ್ತಿರ್ಪ್ಪನ್ನೆಗಂ ಹಸ್ತಿಯೂಥಂ ಬರ್ಪ್ಪುದಂ ಕಂಡಾಗಳೊಂದು ಮದಾಂಧಗಂಧಸಿಂಧುರಂ ಕರಿಣೀವೃಂದಂಗಳಿಂ ಪರಿವೇಷ್ಟಿತನಾಗಿ ಕರಿಣೀಗಣಂಗಳಾ[7] ಕಾಶಪುಷ್ಪಂಗಳಿಂ[7] ಚಾಮರಮಿಕ್ಕೆ ಮೃದು ಪಲ್ಲವಂಗಳಂ ಕಬಳಂಗೊಳುತ್ತುಂ ಲೀಲೆಯಿಂ ಬಂದು ಸ್ವಚ್ಛ [8]ವಿಚ್ಛಳಾಕಾರ[8]ಮಪ್ಪ ಮಡುವಂ ಪೊಕ್ಕು ಮನೋಹಾರಿಗಳಪ್ಪ ಕರಿಣೀಗಣದೊಡನೆ ಕ್ರೀಡಿಸುವುದಂ ಮೂವರುಂ ಕಂಡು ಹಸ್ತಿಭೋಗಂಗಳೊಳಪ್ಪ ಕಾಂಕ್ಷೆಯಿಂದಂ ನಿದಾನಂಗೆಯ್ದು ತಿರ್ಯ್ಯಗಾಯುಷ್ಯಮಂ ಕಟ್ಟಿದರಿಂತು ಕಾಲಂ ಸಲೆ ಮತ್ತೊಂದು ದಿವಸಂ ಬಱಸಿಡಿಲ್ ಪೊಡೆದು ಪ್ರಿಯಸೇನೆ ಸತ್ತಳ್ ಪ್ರಿಯದರ್ಶನನೊಂದು ದಿವಸಂ ತನ್ನ ಭಾರ್ಯೆವೆರಸು ಕದಳೀವನದೊಳ್ [9]ಮಱಲುಂದಿದಲ್ಲಿಗೆ[9] ಕಾಳಿಂಗನಾಗಂ ಬಂದೊಡದಱ ಮೇಗೆ ಕಾಲಂ ನೀಡಿದೊಡೆ ಕಚ್ಚಿರ್ತ್ತಾತನುಮಾಗಳೆ ಪರವಶನಾಗಿ ಪ್ರಾಣಪರಿತ್ಯಾಗಂಗೆಯ್ದನಂ ಕಂಡು ಸುಕೀರ್ತಿಯುಂ ಕಾದಲನ ವಿಯೋಗಂ ಕಾರಣಮಾಗೆ ಪ್ರಾಣವಲ್ಲಭನ ಸುರಿಗೆಯುಂ ಕೊಂಡು ತನ್ನಂ ತಾನಿಱಿದು[10] ಸತ್ತಳ್

---

[1] (ಕಖಗ) ಪ್ರತಿಗಳಲ್ಲಿಲ್ಲ. [2] ಗಂದರ (ಗ), ಗಾಂಡಾರ (ಘಚ) ಗಂದಾರ (ಛ). [3] ಯವಥಿ (ಕ), ತಿ ವೀರಶ್ರೀ (ಛ). [4] (ಕ)ದಲ್ಲಿ ಇಲ್ಲ. [5] (ಕ)ದಲ್ಲಿ ನಷ್ಟವಾಗಿದೆ. [6] (ಕ)ದಲ್ಲಿ ನಷ್ಟವಾಗಿದೆ. [7] ಳ್ ಪೊನಕುಸುಮಂಗಳಿಂ (ಘಚಛ). [8] ವಿಚ್ಛಾಳಾಕ (ಖ), ಲಿಚ್ಛಾಳಾಕ (ಕಗ). [9] ಪಟ್ಟಿರ್ದ್ದಲ್ಲಿಗೆ (ಘಚಛ). [10] +ಕೊಂಡು (ಕ).

ಅಂತಾ ಮೂವರಂ ಸತ್ತು ತೆಂಕಣ ಪಡುವಣ ಸಮುದ್ರದ ತಡಿಯೊಳ್ ಚಂದನಮಲಯಮೆಂಬಾದಮಾನುಂ ರಮ್ಯಮಪ್ಪ ಪರ್ವತದೊಳ್ ಪ್ರಿಯದರ್ಶನ ನಿಂದ್ರನೀಲ ಮಾಣಿಕದೊಳೋರಂತಪ್ಪ ಮೆಯ್ಯನೊಡೆಯದಾಗಿ ಸುಭದ್ರಜಾತಿ ಯಪ್ಪಾನೆಗೆ ಮಲಯಸುಂದರನೆಂಬಾನೆಯಾಗಿ ಪುಟ್ಟಿದೊಂ ಸುಕೀರ್ತಿಯುಂ ಧವಳ ವರ್ಣಮಪ್ಪ ಮಲಯಾವತಿಯೆಂಬ ಪಿಡಿಯಾಗಿ ಪುಟ್ಟಿದಳ್ ಪ್ರಿಯಸೇನೆಯುಂ ಕೆಂದಾವರೆಯ ವಣ್ಣದೊಳೋರಂತಪ್ಪ ಮೆಯ್ಯನೊಡೆಯ ಪದ್ಮಾವತಿಯೆಂಬ ಪಿಡಿ ಯಾಗಿ ಪುಟ್ಟಿದಳಾಯೆರಡುಂ ಪಿಡಿಗಳುಂ ಸುಭದ್ರಜಾತಿಯಪ್ಪಾನೆಗೆ ಪುಟ್ಟಿದವನ್ನಾ ಮೂಱುಕ್ಕರ್[1]ಮಾರಣ್ಯ[1]ನಿವಾಸಿಗಳಪ್ಪ ಜನಂಗಳುಂ ತಾಪಸಾದಿಗಳುಮವಂ ಕಂಡೊ ಗ್ಗರೆಲ್ಲಮೊಸೆದು ಮೆಚ್ಚಿ ತದ್ದೇಹಾನುಸಾರಿಗಳಪ್ಪ ಪೆಸರನಿಟ್ಟುದಱಿಂದಾ ನಾಡೊಳ್ ಪ್ರಸಿದ್ಧಿಗೆ ಸಂದುವಂತವರ್ಕ್ಕೆ ಕಾಲಂ ಸಲೆ ಮತ್ತಮಲ್ಲಿ ಯೂಥಾಧಿಪತಿ ಭದ್ರಜಾತಿ ಯಪ್ಪ ಸುಂದರನೆಂಬಾನೆ ಚಾರಣರಿಸಿಯರ್ಕ್ಕಳ ಪಾದಯುಗಳಂಗಳಂ ವಿದ್ಯಾಧರ ನರ್ಚಿಸಿ ಪೊಡೆವಟ್ಟು ಪೋಪುದಂ ಕಂಡು ತಾನುಂ ನಿಚ್ಚಮಾ ಸ್ಥಿತಿಯೊಳ್ ತಾಮರೆಯ ಪೂಗಳಂ ತಂದರ್ಚ್ಚಿಸಿ ಪೂಜಿಸಿ ಪೊಡೆವಟ್ಟು ಪೋಕುಮಿಂತು ಪುಣ್ಯಮಂ ನೆರಪುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಪ್ರಭಂಕರಿಯೆಂಬ ಸರೋವರದೊಳ್ [2]ಮಲಯಸುಂದರಂ ಪೂರ್ವಭವದ ಪ್ರಾಣವಲ್ಲಭೆಯರ್ಕಳಂ ಕಂಡತಿಸ್ನೇಹದಿಂದಂ ಪೊರ್ದಲಾಟಿಸುವುದಂ ಕಂಡು ಸುಂದರನೆಂಬಾನೆ ಸಾರಲೀಯದುದಱಿಂ ತದ್ವಿರಹ ಪರಿತಪ್ತ ಮನದಿಂದಂ ಸಲ್ವುದಂ ನವಯೌವನಮನೆಯ್ದಿ[2] ಆತ್ಮಬಲಮನದಱ ಬಲ ದೊಳ್ ವೃಕ್ಷಭಂಜನ ಸಾಮರ್ಥ್ಯದಿಂ ಪರೀಕ್ಷಿಸಿ ಮಱಿಯಾನೆಗಳಿಂ[3] ಪರಿಭವ ಮದನರ್ಕ್ಕೆ ಕಂಡು ವೃದ್ಧನಪ್ಪಾ ಸುಂದರನೊಳ್ ಯುದ್ಧಂಗೆಯ್ದು ಕೊಂದಾ ಯೂಥಕ್ಕೆಲ್ಲಮಧಿಪತಿಯಾಗಿ ಮಲಯಾವತಿಯುಂ ಪದ್ಮಾವತಿಯುಮನೊಡ ಗೊಂಡಿಷ್ಟ ವಿಷಯಕಾಮಭೋಗಂಗಳನನುಭವಿಸುತ್ತಮಾಯೆರಡುಂ ಪಿಡಿಗಳ್ ತಮ್ಮೊಳನ್ಯೋನ್ಯ ಸ್ನೇಹದೊಳ್ ಕೂಡಿದುವು ಮಲಯಸುಂದರನ್ ಬಲದ ದೆಸೆ ಯೊಳ್ ಮಲಯಾವತಿಗೆ ಪೋಪ ದಾಯಮನೆಡದ ದೆಸೆಯೊಳ್ ಪದ್ಮಾವತಿಗೆ ಪೋಪ ದಾಯಮನಿತ್ತಂತು ಪ್ರಭಂಕರಿಯೆಂಬ ಸರೋವರದೊಳ್ ಸ್ವೇಚ್ಛೆಯಿಂ ಕ್ರೀಡಿಸಿ ಪೊಱಮಡುವಾಗಳ್ ಮಲಯಾವತಿಯ ಮಸ್ತಕದೊಳ್ ವಿಕಸಿತ ಸಹಸ್ರಪತ್ರ ಕುಸುಮವನಿಡುವ ದಾಯಮಂ ಕೊಟ್ಟು ಸಲಿಸುತ್ತಂ ಉಳಿದ ಪಿಡಿಗಳೆಲ್ಲಮಂ ತೊಱೆ ದಾಯೆರಡಱೊಳಮಾಸಕ್ತನಾಗಿ ಕಾಮ ಭೋಗಂಗಳನನುಭವಿಸುತ್ತಮಿಂತು ಸುಖಿ ದೊಳಿರ್ಪ್ಪ ಕಾಲದೊಳ್

ಮತ್ತೊಂದು ದಿವಸಂ ಪ್ರಭಂಕರಿಯೆಂಬ ಕೊಳದೊಳ್ ಸ್ವೇಚ್ಛೆಯಿಂ ನೀಡುಂ ಕ್ರೀಡಿಸುತ್ತ[4]ಂ ತಡಂಬಂದು ಮನಃಪೂರ್ವಕಮಲ್ಲದೆ ಪೊಱಮಡುವಾಗಳ್ ಪದ್ಮಾವತಿ ಬಲದ ದೆಸೆಯೊಳಾಗಿ ಮಲಯಾವತಿಯೆಡದ ದೆಸೆಯೊಳಾಗಿ ಪೊಱಮಟ್ಟು ಬರೆ ಮದಾಂಧ ಗಂಧಸಿಂಧುರಂ ಮದದಿಂ ಮೆಯ್ಯಱಿಯದೆ ಬಲದ ದೆಸೆಯೊಳಿರ್ದ

---

[1] ಮೂಱಿನ್ನ (ಕ). [2] (ಕಖಗ)ಗಳಲ್ಲಿ ಇಲ್ಲ. [3] ಯಪ್ಪಂದಿನ (ಘಚಛ). [4] + ಮಾಡುತಂ ಮುಳುಗುತ್ತಂ (ಘಚಛ).

ಪದ್ಮಾವತಿಯಂ ಮಲಯಾವತಿಗೆತ್ತು ಪದ್ಮಾವತಿಯ ಮಸ್ತಕದೊಳ್ ವಿಕಸಿತ ಸಹಸ್ರಪತ್ರ ಕುಸುಮಮನಿಟ್ಟೊಡೆ ಮಲಯಾವತಿ ನೋಡಿ ತನ್ನಂ ಪರಿಭವಿಸಿದನೆಂದು ಪದ್ಮಾವತಿಯೊಳಪ್ಪ ಪುರುಡುಂ ಕಾರಣಮಾಗಿ ಮುಳಿಸಿನಿಂದಂ ಚಂದನಮಲಯ ಪರ್ವತದ ತುತ್ತತುದಿಯಂ ಬೇಗಂ ಪರಿದಡರ್ದಂತಲ್ಲಿಂದಂ ತನ್ನ ಸಿಕ್ಕಿ ಮಲಯಾವತಿ ಶತಖಂಡಮಾಗಿ ಬಿಡ್ದು ಸತ್ತತ್ತದಱ ಸತ್ತುದಂ ಮಲಯಸುಂದರಂ ಕಂಡು ಮಲಯಾವತಿಯ ವಿಯೋಗದೊಳಾದಮಾನುಂ ದುಃಖಂಗೈದು ಪದ್ಮಾವತಿಯಸೊಡಗೊಂಡು ಪೋಯ್ತು ಮತ್ತಾ ಮಲಯಾವತಿಯೆಂಬ ಪಿಡಿ ಸತ್ತು ಸುಕೇಶಿನಿಯೆಂಬೊಳಾದಳಾ ಪದ್ಮಾವತಿಯೆಂಬ ಪಿಡಿಯುಮಾಯುಷ್ಯಾಂತದೊಳ್ ಸತ್ತು ಸುಕೇಶಿನಿಯ ತಾಯ್ ಸುರೂಪೆಯ ಸೋದರ ತಮ್ಮಂ ವರಾಂಗನಾದೊಂ ಮತ್ತಾ ಮಲಯಸುಂದರನಿಂದಂ ಕೊ[1]ಲೆಸತ್ತ[1] ಸುಂದರಸೆಂಬಾನೆ ಸುವೇಗನೆಂಬ ವಿದ್ಯಾಧರನಿಂದಂ ಪೂಜಿಸೆಪಟ್ಟ ಚಾರಣರಿಷಿಯರ ಪಾದಪದ್ಮಯುಗಳಂಗಳುಮಂ ನೋಡಿಯುಪಶಮಕ್ಕೆ ಸಂದು ತಾನುಂ ತಾಮರೆಯ ಪೂಗಳಂ ತಂದು ಪ್ರತಿದಿನಮರ್ಚಿಸಿ ಪೂಜಿಸಿ ಪೊಡೆವಟ್ಟು ಪೋಕುಮಾ ಚಾರಣರಿಷಿಯರಡಿವೊಣರನರ್ಚಿಸಿದ ಪುಣ್ಯದಿಂದಂ ಸತ್ತಿಲ್ಲಿ ನೀಂ ಚಂಪಾಪುರಕ್ಕಧಿಪತಿಯಯ್ ಗಂಧಭಾಜನನೆಂಬರಸನಾದಯ್ ಸುಕೇಶಿನಿಯುಂ ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವದ ಭರ್ತಾರನಪ್ಪ ಮಲಯಸುಂದರನಂ ನೆನೆದು ನಿನ್ನಿಂದಂ ಕೊ[1]ಲೆಸತ್ತು[1]ದಱ ಕೋಟ್ಕಳನಾದಮಾನುಂ ಬಿಗಿದಪ್ಪಿಕೊಂಡು ಸತ್ತುದರ್ಕ್ಕಿದು ಕಾರಣಂ ಮತ್ತೆ ನೀಂ ಮುನ್ನೆ ಸುಂದರನೆಂಬಾನೆಯಾಗಿ ಚಾರಣರಿಷಿಯರ ಪಾದಯುಗಳಂಗಳನರ್ಚಿಸುವಂದು ನಿನ್ನಂ ಕಂಡಾಯೆರಡುಂ ಪಿಡಿಗಳ್ ನಿನ್ನೊಡವೋಗಿಯರ್ಚಿಸಿ ಪುಣ್ಯಮಂ ನೆರಪಿದ ಫಲದಿಂದಂ ಸುಕೇಶಿನಿಯುಂ ವರಾಂಗನುಮಾದರೆಂದು ಯಶೋಧರ ಕೇವಲಿಗಳ್ ಸವಿಸ್ತರಂ ಪೇೞ್ದೊಡೆ ಗಂಧಭಾಜನನೆಂಬರಸಂ ಕೇಳ್ದು ಮತ್ತಮಿಂತೆಂದಂ ಭಟಾರಾ ಸುಕೇಶಿನಿ ಸತ್ತೀಗಳೆಲ್ಲಿ ಪುಟ್ಟಿದಳೆಂದು ಬೆಸಗೊಂಡೊಡೆ ಭಟಾರರಿಂತೆಂದು ಪೇೞ್ದರ್

ಸು[2]ರಟ[2]ಮೆಂಬುದು ನಾಡಲ್ಲಿ ಗಿರಿನಗರವೆಂಬುದು ಪೊೞಲದನಾಳ್ವೊಂ ನಿನ್ನಾಳ್ ಮಹಾಸಾಮಂತನತಿರಥನೆಂಬೊನಾತನರಸಿ ಗೌರಿಯೆಂಬಳಾ ಇರ್ವರ್ಗ್ಗಂ ಸುಕೇಶಿನಿ ಸತ್ತು ಮನೋಹರಿಯೆಂಬೊಳ್ ಮಗಳಾಗಿ ಪುಟ್ಟಿದಳ್ ಮತ್ತಾ ಅರಸನ ಮಂತ್ರಿ ವಿಜಯನೆಂಬೊನಾತನ ಭಾರ್ಯೆ ವೀರಶ್ರೀಯೆಂಬೊಳಾ ಇರ್ವರ್ಗ್ಗಂ ಮಲಯಸುಂದರಂ ಸತ್ತು ಕುಬೇರಕಾಂತನೆಂಬೊಂ ಮಗನಾಗಿ ಪುಟ್ಟಿದೊಂ ವಿಭವೈಶ್ವರ್ಯಂಗಳಿಂದಂ ಕುಬೇರನೊಳೋರನ್ನನಪ್ಪೊಂ ಮತ್ತಾ ಪೊೞಲೊಳ್ ರಾಜಶ್ರೇಷ್ಠಿ ಧನ[3]ದನೆಂ[3]ಬೊನಾತನ ಪರದಿ ಧನಶ್ರೀಯೊಂಬೊಳಾ ಇರ್ವರ್ಗ್ಗಂ ಮಲಯಸುಂದರಂ ಸತ್ತುದಂ ಸುಕೇಶಿನಿ ಕಂಡು ಸೈರಿಸಲಾಱದೆ ಪ್ರಾಣಪರಿತ್ಯಾಗಂಗೆಯ್ದಳಂ ನೆನೆದು ದ್ರವ್ಯತಪದೊಳ್ ಕೂಡಿ ತಪಂಗೆಯ್ದು ವರಾಂಗಂ ಸತ್ತು ಶ್ರೀಧರನೆಂಬೊಂ ಮಗನಾಗಿ ಪುಟ್ಟಿದೊನಾತನ ಭಾರ್ಯೆ ಕುಬೇರಶ್ರೀಯೆಂಬೊಳಾ ಶ್ರೀಧರಂ ಕುಬೇರಕಾಂತಂಗಿಷ್ಟ

---

[1] ಲ್ಲಪ್ಪಟ್ಟ (ಕಖಗ). [2] ರಾಟ್ಟ (ಘ), ರಾಷ್ಟ್ರ (ಛ). [3] ದೇವನೆಂ (ಘಚಛ).

ಮಿತ್ರನಾಗಿ ಸಲೆ ಮತ್ತೊಂದು ದಿವಸಂ ಶ್ರೀಧರಂ ಕುಬೇರಕಾಂತನೊಡನೆ [1]ಮಱಲುಂದಿಯಾ[1]ತನ ರತ್ನಕಂಬಳಮಂ ಪೊದೆದು ತನ್ನ ಮನೆಗೆ ಬರ್ಪ್ಪೋನಂ ಕಂಡು ಸವತಿಯೊಳಪ್ಪ ಶಂಕೆಯಿಂದಂ ಪ್ರಾಸಾದದ ಮೇಗಣಿಂದಂ ನೆಲಕ್ಕಿಕ್ಕಿ ಬಿಟ್ಟು ಸತ್ತೊಳಾ ಸತ್ತೊಳಂ ಶ್ರೀಧರಂ ಕಂಡಾದಮಾನುಂ ದುಃಖಂಗೈದು ಶೋಕಾಭಿಭೂತನಾಗಿರ್ದ್ದೋನಂ ಕುಬೇರಕಾಂತಂ ಬಂದು ಕಂಡು ಶ್ರೀಧರಾ ಪರಮಮಿತ್ರಾ ಇಂತೇಕೆ [2]ಬರ್ದಿ[2] ಬಂಬಳಂ ಬಾಡಿ ಪಾಡಟಿದು ಬ್ಬೆಗಂಬಟ್ಟಿರ್ದ್ದೆಯೆಂದು ಬೆಸಗೊಂಡೊಡೆ ತನ್ನ ಕೆಳೆಯಂಗಿಂತೆಂದು ಶ್ರೀಧರಂ ಪೇೞ್ಗುಂ ನಿನ್ನ ರತ್ನಕಂಬಳಮಂ ಪೊದೆದು ಮನೆಗೆ ವಂದೊಡೆ ಸವತಿಯೊಳಪ್ಪ ಶಂಕೆಯಿಂದೆನ್ನ ಭಾರ್ಯ್ಯೆ ಕುಬೇರಶ್ರೀ ಮಾಡದ ಮೇಗಣಿಂದಂ ತನ್ನಂ ನೆಲಕ್ಕಿಕ್ಕಿ ಬಿಟ್ಟು ಸತ್ತಳಿನ್ನುಮಾಯಿರ್ದ್ದಳೆಂದು ತೋಱಿದೊಡೆ ಕುಬೇರಕಾಂತಂ ನೋಡೆ ನೋಡೆ ಜಾತಿಸ್ಮರನಾಗಿ ಕೆಳೆಯಂಗಿಂತೆಂದು ಪೇೞ್ಗುಮೆನ್ನ ಪೆಂಡತಿ ಮಲಯಾವತಿಯಪ್ಪ ಪಿಡಿ ಪುರುಡಿನಿಂದಂ ಚಂದನಮಲಯಮೆಂಬ ಪರ್ವ್ವತದ ಶಿಖರದಿಂದಂ ತನ್ನನಿಕ್ಕಿ ಸತ್ತಂತೆ ನಿನ್ನ ಪೆಂಡತಿಯುಂ ಸತ್ತಳೆಂದು [3]ಪೇೞ್ದು ಬ್ಬೆಗಂಬಡಲ್ವೇಡೆಂದು[3] ಸಂತಯಿಸಿ ತನ್ನ ಮನೆಗೆ ವೋಗಿ ಜಾತಿಸ್ಮರನಪ್ಪುದಱಿಂ ಕುಬೇರಕಾಂತಂ ತನ್ನ ಮುನ್ನಿನ ಮಲಯಸುಂದರನಪ್ಪ ಭವದ ನೆಗೞ್ತೆಗಳೆಲ್ಲಮಂ ಮಲಯಾವತಿ ಪದ್ಮಾವತಿ ಮೊದಲಾಗಿ ಕರಿಣೀವೃಂದಸಹಿತಂ ವನಹಸ್ತಿಕ್ರೀಡೆಗಳೆಲ್ಲಮನೊಂದು ಪಟದೊಳ್ ಬರೆದದಂ ನೋಡುತ್ತಂ ಪಾಡುತ್ತಂ ಹಾ ಎನ್ನ ಮಲಯಾವತಿ ಹಾ ಎನ್ನ ನಲ್ಲಳೆ ನೀನೀಗಳೆಲ್ಲಿರ್ದ್ದೆಯೆಂದೞಸುತ್ತಂ ಮರುಳ್ಗೊಂಡು ಪ್ರಳಾಪಂಗೆಯ್ಯುತ್ತಂ ಉಜ್ಜಯಂತ ಪರ್ವ್ವತಮಂ ಬಲಗೊಂಡು ಬರ್ಪ್ಪೋನಂ ಚಿತ್ರಾಂಗದನೆಂಬ ವಿದ್ಯಾಧರಂ ಕಂಡು ಕರುಣಿಸಿ ಧರ್ಮ್ಮವಾತ್ಸಲ್ಯದಿಂದಂ ತನ್ನ [4]ಕಾಮಮುದ್ರಿಕೆಯುಂ ಸ್ವೇ[4]ಪ್ಸಿತಕಾರ್ಯ್ಯಸಿದ್ಧಿಯಂ ಮಾಡುವ ವಿದ್ಯೆಯುಂ ಕುಬೇರಕಾಂತಂಗೆ ಕೊಟ್ಟಂ ಕುಬೇರಕಾಂತನುಂ ವಿದ್ಯಾದೇವತೆಯುಂ ಬೆಸಗೊಂಡೆನ್ನ ಮುನ್ನಿನ ಭವದ ಪ್ರಾಣವಲ್ಲಭೆಯೆಲ್ಲಿರ್ದ್ದಳೆನೆ ವಿದ್ಯಾದೇವತೆಯೆಂದಳ್ ನಿನ್ನ ಪ್ರಾಣವಲ್ಲಭೆಯತಿರಥನೆಂಬರಸಂಗೆ ಮಗಳ್ ಮನೋಹರಿಯಾಗಿರ್ದ್ದಳೆಂದು ವಿದ್ಯಾದೇವತೆ ಪೇೞೆ ಕೇಳ್ದಱಿದು ಪಿಶಾಚವೇಷಮಂ ಕೈಕೊಂಡರಮನೆಯಂಗಣದೊಳಿರ್ದ್ದು ಪಟಮಂ ನಿಮಿರ್ಚ್ಚಿಯೆತ್ತಿ ತೋಱ... ಪಾಡುತ್ತಮೆಲೆ ಮಲಯಾವತಿ ಹಾ ಎನ್ನ ಕಾದ[5]ಲಳೆ[5] ನೀನೀಗಳೆಲ್ಲಿರ್ದ್ದೆಯೆಂದು ಪಾಡುವುದಂ ಕೇಳ್ದು ಪಟಮಂ ನೋಡಿ ಮನೋಹರಿ ಜಾತಿಸ್ಮರೆಯಾಗಿ ತನ್ನ ಮುನ್ನಿನ ಭವಮನಱಿದು [6]ದಾಮರಥಿ[6]ಯೆಂಬ ತನ್ನ ದಾದಿಗೊಸಗೆಯಿಂದಮಿಂತೆಂದಳೀಯಂಗಣದೊಳ್ ಪಟಮಂ ತೋಱುವಾತನೆನ್ನ ಮುನ್ನಿನ ಭವದ ಭರ್ತ್ತಾರನೆಂದು ಪೇೞ್ದು ಮತ್ತಮಿಂತೆಂದಳಬ್ಬಾ ನೀನೆನ್ನ ಪ್ರಾಣಮಂ ಕಾವುದು ಕಾರಣಮಾಗಿ ಆತನಲ್ಲಿಗೆ ವೋಗಿ ಏಕಾಂತದೊಳಿಂತೆಂದು ಪೇೞ್ ಪದ್ಮಾವತಿಯ ತಲೆಯೊಳಟ್ಟೆಯಿಂದಂ ನೀಂ ತಾವರೆಯ ಪೂವಂ ಮುನ್ನವಿಟ್ಟು ಮಲಯಾವತಿ ಪ್ರಾಣವಲ್ಲಭೆ ಎಲ್ಲಿರ್ದ್ದೆ

---

[1] ನಿದ್ರೆಗೈದಾ (ಘಚಛ). [2] ಬಿಳ್ದು (ಘಛ), (ಚ)ದಲ್ಲಿ ನಷ್ಟವಾಗಿದೆ. [3] (ಕಖಗ)ಗಳಲ್ಲಿ ನಷ್ಟವಾಗಿದೆ [4] ನಾಮಮುಂ ಶ್ರೀರೈಯುಂ ಈ (ಕಖಗ). [5] ಲೊಳ್ (ಕಖ), ಲಳ್ (ಗ), ನಲ್ಲಳೆ (ಛ). [6] ವಾಮರತಿ (ಘಚಛ).

ಯೆಂದೀಗಳೇಕೆ ಮಲಯಸುಂದರಾ ನೀನಾರಯ್ದಪ್ಪೆಯೆಂದು ಪೇೞ್ದು ಮತ್ತ ಮಿಂತೆಂದು ಪೇೞ್ ನಿನ್ನ ಪ್ರಾಣವಲ್ಲಭೆ ನಿನ್ನನೆಯಱಿಸಿ ಬಯಸುತ್ತಿರ್ಪ್ಪಳಾಕೆ ನಿನ್ನೊಳ್ ಕೂಡುವನ್ನೆಗಮೀ ಪಟಮಂ ತೋಱಿಯಾಕೆಯ ಪ್ರಾಣಮಂ ಕಾವೆನೆಂದು ಪಟಮಂ ಬೇಡಿ ಕೊಂಡು ಬಾ ಎಂದು [1]ಕಲ್ಪಿ[1]ಸಿಯಟ್ಟಿದೊಡಾಕೆಯುಂ ಕಲ್ಪಿಸಿದ ಪಾಂಗಿನೊಳಾತನಲ್ಲಿಗೆವೋಗೇಕಾಂತದೊಳೆಲ್ಲಮಂ ನುಡಿ[2]ದು ಕುಬೇರಕಾಂತನ ಕೆಯ್ಯ ಪಟಮಂ ಬೇಡಿ ಕೊಂಡು ಪೋಗಿ ಮನೋಹರಿಗೆ ಕೊಟ್ಟಳ್ ಮನೋಹರಿಯುಮಾ ಪಟಮಂ ಕೊಂಡು ದೆವಸಕ್ಕಮಟ್ಕಱಿಯೊಳ್ ನೋಡುತ್ತಿರ್ಕ್ಕುಂ

ಮತ್ತಿತ್ತ ಕುಬೇರಕಾಂತಂ ತನ್ನ ಮರುಳ್ವೇಷಮಂ ತೊಱೆದು ಸ್ವಾಭಾವಿಕನಾಗಿ ತನ್ನ ಮನೆಗೆ ವಂದೊಡೆ ಪ್ರಸನ್ನ ರೂಪನಾಗಿರ್ದ್ದನಂ ವಿಜಯನಿಂತೆಂದು ಬೆಸಗೊಂಡಂ ಮಗನೆ ನೀನಿನಿತು ದಿವಸಮೇಕೆ ಮರುಳಾಗಿರ್ದ್ದೆ ಈಗಳೆಂತು ಮರುಳ್ತನಂ [3]ಪಿಂಗಿತೆಂದು[3] ಬೆಸಗೊಂಡೊಡೆ ಕುಬೇರಕಾಂತನಿಂತೆಂದು ಪೇೞ್ದ ನೀಯರಸರ ಮಗಳಪ್ಪ ಮನೋಹರಿ ಎನ್ನ ಮುನ್ನಿನ ಭವದ ಪೆಂಡತಿಯಾಕೆಯನಱಿಸಲ್ವೇಡಿ [ಇ]ನಿತು ದಿವಸಂ ಮರುಳ್ಗೊಂಡಿರ್ದ್ದೆಂ ಮತ್ತೀಗಳಾರಯ್ದಱಿಸಿ ಕಂಡೆನಪ್ಪುದಱಿಂದಂ ಮರುಳ್ತನಂ [3]ಪಿಂಗಿತೆಂದು[3] ಪೇೞ್ದೊಡೆ ತಂದೆಯೆಂದಂ ಮಗನೆ ನಿನ್ನ ಮುನ್ನಿನ ಪೆಂಡತಿಯೆಂದಱಿದೆಯಪ್ಪೊಡಮೀಗಳಾಕೆಯರಸನ ಮಗಳಾಗಿರ್ಪ್ಪುದಱಿಂ ನಿನಗತಿ ದುರ್ಲಭೆ ಭಾಗ್ಯಮಿಲ್ಲದುದಂ ಪೆಱಲಾಗ ನಿನಗಾಕೆಯೊಳಪ್ಪ ಬೇಂಟಮನುೞಿವುದು ಮಗನೆ ಎಂದೊಡೆ ಕುಬೇರಕಾಂತಂ ಕಾಮವಿದ್ಯೆಯಿಂದಂ ಹಸ್ತ್ಯಶ್ವರಥಪದಾತಿಬಲಸಮೂಹಮನೆನಿತಾನುಮಂ ವಿಭವೈಶ್ವರ್ಯ ಸಮನ್ವಿತಂ ತಂದೆಗೆ ತೋಱಿದೊಡೆ ತಂದೆಯುಂ ಮಗನ ಸಾಮರ್ತ್ಥ್ಯಮಂ ಕಂಡಾದಮಾನುಂ ಸಂತಸಂಬಟ್ಟಿರ್ದಂ ಮತ್ತೊಂದು ದಿವಸಂ ಅತಿರಥ ಮಹಾರಾಜಂ ಮಂತ್ರಿಯರ್ಕಳೊಡನೆ ಮಂತಣಮಿರ್ದ್ದಲ್ಲಿ ಮಂತ್ರಿಯರ್ಕಳನಿಂತೆಂದು ಬೆಸಗೊಂಡಂ ಮನೋಹರಿಗೆ ಯೌವನಂ ನೆಱೆದುದು ಕೂಸು [4]ಕುಡಲ್ಕಾರ್ದ್ದುದಾರ್ಗೆ ಕುಡುವಮೆಂದು[4] ಮಂತ್ರಿಯರ್ಕ್ಕಳಂ ಬೆಸಗೊಂಡೊಡೆ ಉೞಿದ ಮಂತ್ರಿಯರ್ಕಳೆಲ್ಲಂ ತಂತಮ್ಮ ಬಗೆದರಸುಗಳ ಪೆಸರ್ಗಳಂ ಪೇೞ್ದವರ್ಗೆ ಕುಡುವಮೆಂದೊಡೆ ಕುಬೇರಕಾಂತನ ತಂದೆಯಪ್ಪ ವಿಜಯನೆಂಬ ಮಂತ್ರಿಯುರ್ಕ್ಕವದಿಂದವರ ಪೇೞ್ದ ಮದವಕ್ಕಳಂ ನಿರಾಕರಿಸಿ ಮನೋಹರಿಯ ರೂಪಿಂಗಂ ಜವ್ವನಕ್ಕಂ [5]ಕಳಾಗುಣಂಗಳನಱಿವುದರ್ಕ್ಕಮವರ್ ಯೋಗ್ಯರ್ ಮದವಕ್ಕಳಲ್ಲರ್ ಕೂಸಿಂಗೆ ಸ್ವಯಂಬರಮಂ ಪಣ್ಣುವಂ ಸ್ವಯಂಬರದೊಳ್ ತನ್ನ ಭಾಗ್ಯದೊಳ್ ಮಚ್ಚಿದವರಂ ಕೆಯ್ಕೊಳ್ಗೆಂದು ನುಡಿದೊಡರಸನುಮಾತನ ಮಾತನೊಡಂಬಟ್ಟು ಸ್ವಯಂಬರಸಾಲೆಯಂ ಮಾಡಿಸಿ ಅರಸುಗಳ್ಗೆಲ್ಲಂ ಬೞಿಯನಟ್ಟಿ ಬರಿಸೆ ಸ್ವಯಂವರಸಾಲೆಯೊಳ್ ನೆರೆದಿರ್ದ್ದ

---

[1] ಲಿ (ಘಚಛ). [2] + ದಿಂತೆಂದಳ್ ಮಲಯ ಸುಂದರಾ ನೀಂ ಮುನ್ನ ಪದ್ಮಾವತಿಯ ಮಸ್ತಕದಲು ತಾಮರೆಯ ಪುಷ್ಪಮನಿಕ್ಕಿಯೀಗಳ್ ಮಲಯಾವತಿಯೆಂದಱಿಸಲ್ತಕ್ಕುದೆಯೆಂದೊಡಾಂ ಮೆಯ್ಮಱೆದಿಕ್ಕಿದೆನೆಂದೊಡಾಕೆಯಿಂತೆಂದಳಿಕ್ಕಿದೊಡಮೇಂ ನಿನ್ನ ಪ್ರಾಣವಲ್ಲಭೆಯಪ್ಪ ಮಳಯಾವತಿ ನಿನ್ನೊಳು ಕೂಡುವನ್ನೆಗಮೀ ಪಟಮಂ ಕುಡು ನೋಡುತ್ತಿರ್ಕುವೆಂ (ಘಚಛ). [3] ತಿಳಿದು ದೆಂದು (ಘಚಛ). [4] (ಕಖಗಘಚ) ಗಳಲ್ಲಿ ನಷ್ಟವಾಗಿದೆ. [5] + ತೇಜಕ್ಕಂ (ಛ).

ರಂಗ[1] ವೆಂಗಿ[1] ಕಳಿಂಗ ಕಾಂಭೋಜ [2]ಕಾಶಿ ಕೌ[2]ಶಲ [3]ಪಲ್ಲವ ಪಾಂಚಾಳ ಮಗಧ ಮಾಳವ ವತ್ಸ ಮಹಾರಾಷ್ಟ್ರ ಕುಣಾಳ ಕುರುಜಾಂಗಣ ದ್ರವಿಳ ಲಾಳ ಕರ್ನ್ನಾಟ ಗೌಳ ಸು[4]ಹುಮ[4] ಸುರ[5]ಕ್ರಾನ್ತ[5] ಸೂರ[6]ಸೇನೀ[6]ಯ ಪ್ರಭೃತಿ ನಾನಾ ವಿಷಯಾಧಿಪತಿಗಳಪ್ಪರಸುಗಳೆಲ್ಲಂ ನೆರೆದಿರ್ದ್ದರಲ್ಲಿಯಾರುಮಂ ಮೆಚ್ಚದೆ ದಾಂಟಿ ಪೋಗಿ ಕುಬೇರಕಾಂತಂಗೆ ಮಾಲೆಯಂ ಸೂಡಿ[7]ದಳಾಗಳರಸುಗಳೆಲ್ಲಂ[7] ನೆರೆದಾಮೇಕ್ಕೈಕ ಪ್ರಧಾನರಮಿರ್ದ್ದರಂತಿರೆ ಬಡವಂಗೇನುಮಲ್ಲದೊಂಗೆ ಮಾಲೆಯಂ ಸೂಡಿದಳೆಂದು ಸಭಾಕ್ಷೋಭಮಾಗಿ ಕುಬೇರಕಾಂತನೊಳನಿಬರುಂ ನೆರೆದು ಯುದ್ಧಂಗೆಯ್ವೊಡೆ ಸಂಗ್ರಾಮರಂಗದೊಳ್ ಸುವ[8]ರ್ಮ್ಮವರ್ಮ್ಮರಂ[8] ಮೊದಲಾಗೊಡೆಯರಸರ್ಕ್ಕಳೆಲ್ಲರುಮಂ ಗೆಲ್ದು ಮನೋಹರಿಯಂ ಪಾಣಿಗ್ರಹಣ ಪುರಸ್ಸರಂ ಮದುವೆನಿಂದು [9]ಸೋಪಾರ[9]ಕ್ಕಧಿಪತಿಯಾಗಿರ್ದ್ದನ್

ಇಂತು ಕುಬೇರಕಾಂತಂ ಮನೋಹರಿಯೊಳಿಷ್ಟವಿಷಯಕಾಮಭೋಗಂಗಳನನುಭವಿಸುತ್ತಮಿರೆಯಿರೆ ಸುವ[10]ರ್ಮ್ಮ ವರ್ಮ್ಮ[10]ನೆಂಬರಸಂ ರಾಜ್ಯಪರಿಭ್ರಷ್ಟನಾಗಿ ತಾಪಸತಪಮಂ ಕೈಕೊಂಡು ನೆಗೞ್ದು ಸತ್ತು ಪ್ರತಿಸೂರ್ಯನೆಂಬ ವ್ಯಂತರದೇವನಾಗಿ ಪುಟ್ಟಿದೊಂ ಮತ್ತೆ ಶ್ರೀಧರನುಂ ಕುಬೇರಕಾಂತನುಂ ಮನೋಹರಿಯುಮನ್ಯೋನ್ಯಾತಿ ಸ್ನೇಹದೊಳ್ ಕೂಡಿ ರಾಜ್ಯಂಗೆಯ್ದು ತಮ್ಮ ಗೆಯ್ದ ದಾನಧರ್ಮದ ಫಲದಿಂದಂ ಅನ್ಯಜನ್ಮದೊಳಿಂತಪ್ಪ ವಿದ್ಯೆಯಕ್ಕೆಂದು ಮೂವರುಂ ನಿದಾನಂಗೆಯ್ದು ಮುನ್ನಂ ಶ್ರೀಧರಂ ಸತ್ತು ವಿಜಯಾರ್ಧಪರ್ವತದ ಉತ್ತರ ಶ್ರೇಣಿಯೊಳ್ ಅಳಕಾಪುರಮೆಂಬುದು ಪೊೞಲದನಾಳ್ವೊಂ ಗಗನವಲ್ಲಭನೆಂಬೊನಾತನ ಭಾರ್ಯೆ ಅನಂಗಮಾಲೆಯೆಂಬೊಳಾಯಿರ್ವ್ವರ್ಗ್ಗಂ ಶ್ರೀಧರಂ ಚಂಡವೇಗನೆಂಬೊಂ ಮಗನಾಗಿ ಪುಟ್ಟಿದೊಂ ಆ ಚಂಡವೇಗನ ಮಹಾದೇವಿ ವಿದ್ಯು[11]ಲ್ಲ[11]ತೆಯೆಂಬೊಳಾಯಿರ್ವ್ವರ್ಗ್ಗಂ ಕುಬೇರಕಾಂತಂ ಸತ್ತು ವಿದ್ಯುನ್ಮಾಳಿಯೆಂಬ ಮಗನಾಗಿ ಪುಟ್ಟಿದೊಂ ಮತ್ತಂ ದಕ್ಷಿಣಶ್ರೇಣಿಯೊಳ್ ವಿದ್ಯು[11]ಲ್ಲ[11]ತೆಯ ಸೋದರ ತಮ್ಮಂ ಮೇಘಕೂಟಾಧಿಪತಿ ಮೇಘಮಾಳಿಯೆಂಬೊಂ ವಿದ್ಯಾಧರನಾತನ ಮಹಾದೇವಿ ರತಿಬಿಂದುವೆಂಬೊಳಾಯಿರ್ವ್ವರ್ಗ್ಗಂ ಮನೋಹರಿ ಸತ್ತು ವಿರಳವೇಗೆಯೆಂಬೊಳ್ ಮಗಳಾಗಿ ಪುಟ್ಟಿದಳ್ ಮತ್ತೊಂದು ದಿವಸಂ ಚಂಡವೇಗನುಂ ವಿದ್ಯುನ್ಮಾಲಿಯುಮಂತು ತಮ್ಮಿರ್ವ್ವರುಂ ಉಜ್ಜಯಂತ ಪರ್ವತದ ಶಿಖರದೊಳ್ ಅರಿಷ್ಟನೇಮಿ ಭಟ್ಟಾರರ ಪರಿನಿರ್ವ್ವಾಣಭೂಮಿ[12]ಯೊಳ್ ಭಕ್ತಿಯಿಂ ಪೂಜಿಸಲೆಂದರ್ಚನೆಯುಂ ಕೊಂಡು[12] ಪೋದೊಡಾಪರ್ವ್ವತದ ಶಿಖರಮಂ ಕಂಡು ವಿದ್ಯುನ್ಮಾಲಿ ಮೂರ್ಛೆ[13]ವೋ[13]ಗಿ ಜಾತಿಸ್ಮರನಾಗಿ ಮನೋಹರಿಯಂ ನೆನೆದು ಮಾಸೋಪವಾಸಂಗೆಯ್ದು ಪ್ರ[14]ಜ್ಞ[14]ಪ್ತಿಯೆಂಬ ಮಹಾವಿದ್ಯೆಯಂ ಸಾಧಿಸಿದೊಡಾ ವಿದ್ಯೆ ಬೆಸನೇನೆಂದು ಮುಂದೆ ನಿಲೆ ಎನ್ನ ಮುನ್ನಿನ ಭವದ

1 (ಕಖಗ) ಗಳಲ್ಲಿಲ್ಲ, ವಂಗ (ಛ). 2 ಕಲುಶಿಕವು (ಕಖಗ). 3 ಪಾಂಬ (ಚ), ಪಾಂಡ್ಯ (?). 4 ರಮ್ಯ (ಘಚಛ). 5 ಕಾನ್ತ (ಚಛ). 6 ವೀರ್ಯ (ಕಖ). 7 ದೊಡರಸುಗಳೆಲ್ಲರಿಂದಾ (ಘಚಛ). 8 ರ್ಣ ವರ್ಣರಂ (ಘಚಛ). 9 ಸೋಪಾನಗರ (ಘಚಛ). 10 ರ್ಣ ವರ್ಣ (ಘ). 11 ಲ್ಲ (ಕ). 12 ಯಂ ಕಂಡು (ಕಗ). 13 ಯೋ (ಕ). 14 ಜ್ಞಾ (ಕ.).

ಪ್ರಾಣವಲ್ಲಭೆಯಪ್ಪ ಮನೋಹರಿ ಈಗಳೀ ಲೋಕದೊಳೆಲ್ಲಿರ್ದ್ದಳೆಂಬುದನಱಿಸಿ ಬೇಗ ಮೆನಗೆ ಪೇ[1]ೞೆಂ[1]ದೊಡಾ ವಿದ್ಯೆಯಿಂತೆಂದು ಪೇೞ್ದತ್ತು

ವಿಜಯಾರ್ಧ ಪರ್ವತದ ದಕ್ಷಿಣ ಶ್ರೇಣಿಯೊಳ್ ಮೇಘಕೂಟ ಪುರಾಧಿಪತಿ ಮೇಘಮಾಳಿಯೆಂಬೊಂ ವಿದ್ಯಾಧರಂ ನಿನ್ನ ಸೋದರ ಮಾವನಾತಂಗೆ ಮನೋಹರಿ ಸತ್ತು ವಿರಳವೇಗೆ[2]ಯೆಂಬೊಳ್ ಮಗಳಾಗಿ[2]ರ್ದ್ದೊಳೆಂದೊಡಂತಪ್ಪೊಡೆ [3]ನೀನೆನ್ನ[3] ಮಾವನ ಮನೆಗೆ ವೋಗಿ ವಿರಳವೇಗೆಗಿಂತೆಂದು ಪೇೞ್ ಎಲೆ ಮನೋಹರಿ ನೀಂ ಮುನ್ನಿನ ಭವದೊಳ್ ಕುಬೇರಕಾಂತನೊಡನೆ ಕ್ರೀಡಿಸಿದ ಕ್ರೀಡೆಗಳಂ ನೆನೆದಾ ಎಂದು ಪೇೞೆಂದು ವಿದ್ಯೆಯಂ ಕಳ್ಪಿಸಿಯಟ್ಟಿದೊಡಾ ವಿದ್ಯೆಯುಂ ಪೋಗಿ [4]ಕಳ್ಪಿಸಿದ ಪಾಂಗಿನೊಳೆ[4] ನುಡಿದೊಡೆ ವಿರಳವೇಗೆ ಮೂರ್ಛೆವೋಗಿರ್ದ್ದು ನೀಡಱಿಂ[5]ದೆೞ್ಚತ್ತು[5] ಜಾತಿಸ್ಮರೆಯಾಗಿ ವಿರಹಸಂತಾಪದಿಂ ತನ್ನ ಮುನ್ನಿನ ಭರ್ತಾರನಂ ನೆನೆಯುತ್ತಿರೆ ವಿದ್ಯುನ್ಮಾಳಿಯುಂ ತನ್ನ ಮನೆಗೆ ವೋಗಿ ತಂದೆ[6] ಚಂಡವೇಗಂಗೆ ತನ್ನ ವೃತ್ತಾಂತಮೆಲ್ಲಮಂ ಪೇೞ್ದೊಡಾ ತನುಮಾದಮಾನುಮೊಸೆದು ತನ್ನ ಮೈದುನನಪ್ಪ ಮೇಘಮಾಳಿ ವಿದ್ಯಾಧರನಲ್ಲಿಗೆ ಪೆರ್ಗ್ಗಡೆಗಳಂ ಕೂಸಂ ಬೇಡಿಯಟ್ಟಿ ಪೆತ್ತು ವಿರಳವೇಗೆಯುಂ ವಿದ್ಯುನ್ಮಾಲಿ ಮದುವೆ ನಿಂದಾಕೆಯೊಳಿಷ್ಟವಿಷಯಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ

ಮತ್ತೊಂದು ದಿವಸಂ ವಿದ್ಯಾನಿರ್ಮಿತ ವಿಚಿತ್ರಮಾ[7]ಗುತ್ತಿ[7]ರ್ದ ವಿಮಾನಮ[8]ನೇಱಿಕೊಂಡು ಪೋಪಲ್ಲಿ[8] ಹಿಮವಂತ ಪರ್ವತದ ಮೇಗೆ ಪಾಱುವ ವಿಮಾನಮಮುಂ ಪೇೞ್ದ ಪ್ರತಿಸೂರ್ಯನೆಂಬ ವ್ಯಂತರದೇವಂ ಕಂಡು ತನ್ನ ಸುವರ್ಮ್ಮವರ್ಮ್ಮನಪ್ಪ ಭವದ ಪಗೆಯಂ ನೆನೆದಿರ್ವ್ವರುಮಂ [9]ಕೂಡಿ ಕೊಂದ[9]ನಿಂತಿರ್ವ್ವರುಂ ಸತ್ತು ಗಂಗೆಯೆಂಬ ಮಹಾನದಿಯ ತೆಂಕಣ ಪಡುವಣ ಕೋಣೊಳ್ ಸುಕೌಶಳಮೆಂಬ ವಿಷಯದೊಳಯೋಧ್ಯಾಪುರಮೆಂಬ ಪೊೞಲೊಳ್ ಸಾಗರಸೇನನೆಂ[10]ಬೊಂ[10] ರಾಜಶ್ರೇಷ್ಠಿಯಾತನ ಭಾರ್ಯೆ ಧರಣಿಯೆಂಬೊಳಾಯಿರ್ವ್ವರ್ಗ್ಗಂ ವಿದ್ಯುನ್ಮಾಳಿಯೆಂಬ ವಿದ್ಯಾಧರಂ ಕಾಲಂಗೆಯ್ದು ಸಿದ್ಧಾರ್ಥನೆಂಬೊಂ ಮಗನಾಗಿ ಪುಟ್ಟಿದೊಂ ಪಿತೃಮಾತೃ[11]ಗಳೊ[11]ಸಗೆಯಂ ಮಾಡುತ್ತಂ ಶ್ರೀವಿಭವ ರೂಪಕಾಂತಿ ಸೌಭಾಗ್ಯಾದಿಗುಣಂ[12]ಗಳಿಂ ನೆ[12]ಱೆದೊಂ

ಮತ್ತಿತ್ತ ಮ[13]ಗಧೆ[13]ಯೆಂಬುದು ನಾಡಲ್ಲಿ ರಾಜಗೃಹಮೆಂಬ ಪೊೞಲೊಳ್ ಸಮುದ್ರವಿಜಯನೆಂಬೊಂ ರಾಜಶ್ರೇಷ್ಠಿಯಾತಂಗೆ ಸಾಗರಸೆಟ್ಟಿಯ ಸೋದರ ತಂಗೆ [14]ಸುಮತಿಯೆಂಬೊಳಂ ಕೊಟ್ಟರಾ[14]ಯಿರ್ವ್ವರ್ಗ್ಗಂ ವಿರಳವೇಗೆಯೆಂಬ ವಿದ್ಯಾಧರಿ ಕಾಲಂಗೆಯ್ದು ಶ್ರೀಕಾಂತೆಯೆಂಬೊಳ್ ಮಗಳಾಗಿ ಪುಟ್ಟಿದೊಳತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ ಹಾವ ಭಾವ ವಿಲಾಸ ವಿಭ್ರಮಂಗಳಿಂ ಕೂಡಿದೊಳ್ ದೇವಗಣಿಕೆಯನೆ

---

1 ಬ್ಬಿತ್ತೆಂ (ಕಗ). 2 ಯಾಗಿ (ಕ). 3 ನೀಂ (ಖ). 4 (ಕ) ದಲ್ಲಿ ನಷ್ಟವಾಗಿದೆ. 5 (ಕ) ದಲ್ಲಿ ಇಲ್ಲ. 6 + ಗೆ (ಕ). 7 ಗಿ (ಕ). 8 ನಿರ್ವರುಮೇಱಿ ಭೌಮವಿಹಾರಕ್ಕೆಂದು ತೊಳಲ್ವಲ್ಲಿ (ಘಚ ಛ). 9 ಕಾದಿಕೊಂಡ (ಖ) 10 ಬ (ಕ). 11 ಸ್ವಜನಪರಿಜನಂಗಳೆಲ್ಲಮೊ (ಘಚಛ). 12 ಳೊಳ್ಮೆ (ಖ). 13 ರವಸೆ (ಘಛ). 14 (ಕಖಗ) ಗಳಲ್ಲಿಲ್ಲ.

ಪೋಲ್ವ ಳಾಕೆಯಂ ಸೋದರ ಮಾವನ ಮಗಂಗೆ [1]ಪಿರಿದುಂ ವಿಸ್ತಾರದಿಂ ಸಿದ್ಧಾರ್ಥಂಗೆ[1] ಕೊಟ್ಟರಂತು ಸಿದ್ಧಾರ್ಥನುಂ ಶ್ರೀ ಕಾಂತೆಯುಂ ತಮ್ಮೊಳನ್ಯೋನ್ಯ ಸ್ನೇಹದೊಳ್ ಕೂಡಿ[ಇ]ಷ್ಟ ವಿಷಯಕಾಮಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಮತ್ತೊಂದು ದಿವಸಂ ಸಪ್ತತಳಪ್ರಾಸಾದದ ಮೇಲಿರ್ವ್ವರುಮಿಷ್ಟಪರಿವಾರ ಸಹಿತಂ [2]ದಿಶಾವಳೋಕಸಂಗೆಯ್ಯುತ್ತಂ[2] ಸುಖಸಂಕಥಾವಿನೋದದಿಂದಿರ್ಪ್ಪನ್ನೆಗಂ ವಿಚಿತ್ರ ಮಾಗುತ್ತಿರ್ದ್ದ ವಿಮಾನಮನೇಱಿ ಆಕಾಶಪಥಕ್ಕೊಗೆದು ಮೇಗೆ ಪೋಪ ವಿದ್ಯಾಧರ ಯುಗಳಮಂ ಕಂಡಿರ್ವ್ವರುಂ ಮೂರ್ಛೆವೋಗಿ ನೀಡಱಿಂದೆಚ್ಚೆತ್ತು ಜಾತಿಸ್ಮರರಾಗಿ ತಮ್ಮ ಮುನ್ನಿನ ಭವಮಂ ನೆನೆದು [3]ಸಂಸಾರದ[3] ಪೊಲ್ಲಮೆಯುಮನನಿತ್ಯತೆಯುಮಂ ಬಗೆದು ವೈರಾಗ್ಯಪರರಾಗಿ ಇರ್ವ್ವರುಂ ತಪಂ ಬಡುವ ಬುದ್ಧಿಯನೊಡೆಯರಾಗಿ [4]ಸ್ವಜ[4]ನ ಪರಿಜನ ಮಂತ್ರಿಮಿತ್ರವರ್ಗ್ಗಕ್ಕೆಲ್ಲಂ ಬಱಿಯನಟ್ಟಿ ಬರಿಸಿ ಸಂಸಾರದ ಪೊಲ್ಲಮೆಯುಮಂ [5]ತಂತಮ್ಮ ಬಗೆದ ಕಾರ್ಯ್ಯಮುಮ[5]ನವರ ಮುಂದೆ ನುಡಿದೊಡವರ್ಗ್ಗಳೆಲ್ಲಂ ನೆರೆದಿಂತೆಂದರಮ್ಮಾ ಪೂರ್ವದಿಂದಂ ಬಂದ ಕುಲಸಂತತಿಯಂ ಕಾವೊರಾರುಮಿಲ್ಲಿನಿತು ಭಾರಮನಾರ್ಗ್ಗೊಪ್ಪಿಸಿ ತಪಂಬಟ್ಟಪ್ಪಿರದಱಿಂ ಕೆಲವು ಕಾಲದಿಂ ಮಗನಾದೊಡೆ ಮಗಂಗೆ ಸಮಸ್ತ ಭಾರಮಂ ನಿರೂಪಿಸಿ ತಪಂಬಡುವುದೆಂದು ನುಡಿದೊಡೆ ಸಿದ್ಧಾರ್ಥನೆಂದಂ ನಿಮ್ಮೆಲ್ಲರ ಪೇೞ್ದುದನಿಂ[6]ಬುಗೆಯ್ದಪ್ಪೆನೆಂದು ಮಗನಾದಂದೆನ್ನ ತಪಂಬಡುವಂದಾರುಂ ವಕ್ರಂಬರಸಲ್ಲೆಂದು ನುಡಿದೊಡಂಬಡಿಸಿ ಕೆಲವು ಕಾಲಂ ಪರಿವಾರಂ ಬಾರಿಸೆ ಮಾಣ್ದಿರ್ದ[7]ಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆಯಿರೆ

ಮತ್ತೆ ಸಿದ್ಧಾರ್ಥನ ಪಿರಿಯರಸಿ [8]ಜಯಾವತಿಯೆಂಬೊಳ್ ಮಕ್ಕಳಂ ಬೇಡಿ ದೇವರ್ಗ್ಗಂ ದೇವತೆಗಳ್ಗಂ ಪರಸಿ ಪೂಜೆಯಂ ಮಾಡುತ್ತಿರ್ಪ್ಪೊಳೊಂದು ದಿವಸಂ ವಿಜಯಭದ್ರರೆಂಬ ಭಟಾರರವಧಿಜ್ಞಾನಿಗಳ್ ಚರಿಗೆವೊಕ್ಕೊಡೆ ಕಂಡವರಂ ಜಯಾವತಿ ನಿಱಿಸಿಯಾದಮಾನುಂ ಭಕ್ತಿಯಿಂ[9]ದಂ ಕೈಯಲಿಕ್ಕಿ ನಿರಂತರಂ ಮಾಡಿ ಕುಳ್ಳಿರ್ದ್ದ ಬೞಿಕ್ಕಿಂತೆಂದು[9] ಬೆಸಗೊಂಡಳ್ ಭಟಾರಾ ಎನಗೆ ಮಕ್ಕಳಕ್ಕುಮೊ ಆಗದೊ ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ ವಿಭವೈಶ್ವರ್ಯ ರೂಪಕಾಂತಿ ಸೌಭಾಗ್ಯಾದಿ ಗುಣಂಗಳಿಂದಂ ಸಿದ್ಧಾರ್ಥನಿಂದಗ್ಗಳಂ ಕುಲತಿಲಕನಪ್ಪ ಮಗನಂ ಪೆಱುವಯ್ ಪೆತ್ತಾಗಳೆಂತು ಪುಣ್ಣಮಿಯಂದಿನ ಚಂದ್ರನಂ ಕಂಡಾಗಳಾದಿತ್ಯನಸ್ತಮಾನಕ್ಕೆ ಸಲ್ಗುಮಂತೆ ಮಗನಂ ಕಂಡಾಗಳೆ ನಿನ್ನ ಭರ್ತಾರನುಂ ತಪಂಬಡುಗುಮಾ ರಿಸಿಯರಂ ಕಂಡಾಗಳೆ ಮಗನುಂ ತಪಂಬಡುಗುಮೆಂದು ಭಟಾರರ್ ಪೇೞ್ದುಪೋದರಿತ್ತ ಜಯಾವತಿಗೆ ಹರ್ಷ ವಿಷಾದಂಗಳೆರಡುಮೊರ್ಮ್ಮೊದಲಾಗೆ ಕಾಲಂ ಸಲೆ ಮತ್ತಿತ್ತ ಚಂಡವೇಗಂ ಪಲಕಾಲ ಮರಸುಗೆಯ್ದು ಆಯುಷ್ಯಾಂತದೊಳ್ ಕೞಿದು ಜಯಾವತಿಯ ಗರ್ಭದೊಳ್ ನೆಲಸಿ

---

[1] ರೂಪವಿಭವ ಸಂಪನ್ನಂಗೆ (ಕಖಗ). [2] (ಕಖಗ) ಗಳಲಿಲ್ಲ. [3] ಮಾಡಿದ (ಕಖಗ). [4] ವಿಶ್ವಜ್ಞ (ಕಗ), ವಿದ್ವಜ್ಞ (ಖ). [5] ತಪಂಬಡುವ ಪರಿಚ್ಛೇದಮುಮ (ಘಚಛ). [6] + ಗೆಯ್ದುಡಿ (ಖ). [7] + ದುರ್ಕಣ್ಗಂ ಮನಕ್ಕಂ ಮೆಚ್ಚಿಪಡುವ ಶ್ರಿಯಾ ದೇವತೆಗಳನೆ ಪೋಲ್ವ ಪಲರೊಳ್ವೆಂದ ರೊಡನೆ (ಘಚಛ) [8] ವಿಜಯಾವತಿಯೆಂದು (ಘಚಛ) ಪ್ರತಿಗಳಲ್ಲಿದೆ. [9] ದಮೂಡಿ ಕುಳ್ಳಿರವೇಳ್ದಿಂತೆಂದು (ಘ, ಚ, ಛ).

ಗರ್ಭಮಾದೊಡೆ ಜಯಾವತಿ ಮುಂ ನೆಲಮನೆಯುಂ ಮಾಡಿಸಿ ಎನಗೆ ಕುತ್ತುಂ ಜಲೋದರ ಮಾದುದರ್ಕೆ [1]ಕ್ರಿಯೆ[1]ಗೆಯ್ಸಿದಪ್ಪೆನೆಂದು ಸಿದ್ಧಾರ್ಥಂಗೆ ಪೇೞ್ದು ಕುತ್ತಮಂ ಭಾವಿಸಿ ನೆಲಮನೆಯೊಳಗಿರ್ದು ನವಮಾಸಂ ನೆಱೆದಂದು ಪ್ರಸೂತೆಯಾಗಿ ಮಗನಂ ಪೆತ್ತು ತಾನುಂ ದಾದಿಯುಂ ಮತ್ತಂ ಬೆಸಕೆಯ್ವ ತೊೞ್ತುಮಿಂತು ಮೂವರು ಮಱಿವರುೞಿದರಾರುಮಱಿಯರಿಂತು ದಿವಸಂಗಳ್ ಸಲೆ

ಮತ್ತೊಂದು ದಿವಸಂ ಬೆಸಕೆಯ್ವ ತೊೞ್ತು ನೀರಂ ತರಲ್ ಪೋದಲ್ಲಿ ನೀರ ಪೊಱೆಯೊಳಾಕೆಯ ಕೆಳದಿ ನಾಗ[2]ಬ್ಬೆ[2]ಯೆಂಬೊಳಾಕೆಯುಂ ಕಂಡಿಂತೆಂದು ಬೆಸಗೊಂಡ ಳೆಲೆಗೆ ಕುಂದ[3]ಬೆ[3] ಪಲದಿವಸದಿಂದಂ ನಿನ್ನಂ ಕಂಡೆನಿಲ್ಲಿನಿತು ದಿವಸದಿಂ ಮುಂ ಕಾಣ ದುದರ್ಕೆ ಕಾರಣಮಂ ಪೇೞೆಂದು ಬೆಸಗೊಂಡಳ್ಗೆ ಕಾರಣಮಂ ನಿನಗೆ ಪೇೞ್ವೆಂ ನೀನಾರ್ಗಂ ಪೇೞೆಯಪ್ಪೊಡೆಂದು ಸೂ*ರು*ಳಿಸಿ ಇಂತೆಂದು ಪೇೞ್ದಳ್ ನೋಡಾ ಎಮ್ಮ ಸೆಟ್ಟಿತಿ ಜಯಾವತಿ ಬೆಸಲೆಯಾದಳ್ ಕಿರುಂಡೆ[4]ಗನಂ ಪೆ[4]ತ್ತಳಾರುಮನಱಿಯ ಲೀಯದೆ ನೆಲಮನೆಯೊಳಡಂಗಿಪ್ಪಳೆಂದು ಪೇೞ್ದೊಡಾ ಮಾತನಲ್ಲಿಯೊರ್ವಂ ಸಂಜೆವಾರಿಸುತ್ತಿರ್ದ ಬ್ರಾಹ್ಮಣಂ ದಾರಿದ್ರ್ಯಾಭಿಭೂತಂ ಸೋಮಶರ್ಮನೆಂಬಾತಂ ಕೇಳ್ದಾದಮಾನುಂ ಸಂತೋಷಂಬಟ್ಟು ಪಿರಿದೊಂದು ಮಾದುಫಲಮಂ ಕೊಂಡು ಪೋಗಿ ಸಿದ್ಧಾರ್ಥನಂ ಕಂಡಿಂತೆಂದು ಬಿನ್ನವಿಕುಂ ಸಿದ್ಧಾರ್ಥಸೆಟ್ಟಿ ಮಹಾಪುರುಷಾ ನಿನಗಾನೊಂದೊಸಗೆಯುಂ ಪೇೞಲ್ ಬಂದೆಂ ಜಯಾವತಿ ಬೆಸಲೆಯಾದಳ್ ಮಗಂ ಬೆತ್ತಳೆಂದು ಪೇೞ್ದೊಡೆ ಪೇೞ್ದ ಭಟ್ಟಂಗೆ ಕಟಕ ಕಟಿಸೂತ್ರಂ ಮೊದಲಾಗೊಡೆಯ ಅಂಗಚಿತ್ತಮುಮಂ ಪಿರಿದು ಕಸವರಮುಮಂ ಕೊಟ್ಟು ಪಾರ್ವಂಗೆ ದಾರಿದ್ರ್ಯ ಮೋ[5]ಕ್ಷ[5]ಮಂ ಮಾಡಿ ಸಿದ್ಧಾರ್ಥನೀ ಪಾರ್ವನ ಮಾತಂ ಕೇಳ್ದಾಗಳೆ ಪುತ್ರಮುಖ ಮಂ ನೋೞ್ಪೆನೆಂದು ಭೋಂಕನೆ ನೆಲಮನೆಯೊಳಗಂ ಪೊಕ್ಕು ನೋೞ್ಪನ್ನೆಗಂ ಜಯಾ ವತಿ ತನ್ನ ನೋಂಕಿಲ ಮೇಗಿ[6]ಟ್ಟಾ[6]ಡಿಸುತ್ತಿರ್ಪ ಕೂಸಂ ಎಳನೇಸಱ ತೇಜದೊಳೋರಂ ತಪ್ಪನಂ ಕಂಡು ಪಲವು ಕಾಲಂ ಬಾೞ್ವೆಯಾಗೆಂದು ಮಗನಂ ಪರಸಿ ಮತ್ತಮಿಂತೆಂದ ನೆನ್ನ ಮೂವತ್ತೆರಡು ಕೋಟಿ ಕಸವರಕ್ಕಂ ರಾಜಶ್ರೇಷ್ಠಿಪದಕ್ಕಮೆನ್ನ ಸಂತತಿಗಮೆಲ್ಲ ವಿನ್ನಿಂದಿತ್ತ ನೀನೆ ಅರಸನೆಂದು ನುಡಿದು ಸಮಸ್ತಭಾರಮೆಲ್ಲಮಂ ಕೂಸಿಂಗೆ ಸಮರ್ಪಿಸಿ ನೋಂಕಿಲೊಳಿರ್ದ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ ಪರಸಿ ಸೇಸೆಯನಿಕ್ಕಿ ನೋಂಕಿಲೊ ಳಿರ್ದನಂ ಕಂಡನಪ್ಪುದಱಿಂ ಸುಕೌಶಲಸ್ವಾಮಿಯೆಂದು ಪೆಸರನಿಟ್ಟು ನೆಲಮನೆಯುಂ ಪೊಱಮಟ್ಟು ಸ್ವಜನ ಪರಿಜನ ಬಂಧುವರ್ಗಕ್ಕೆಲ್ಲಂ ನಿಶ್ಶಲ್ಯಂಗೆಯ್ದು ನೀಮಿನಿಬರುಂ ಸುಕೌಶಲಸ್ವಾಮಿಯುಂ ಪಿಡಿದು ಬಾೞಿಮೆಂದು ಕಲ್ಪಿಸಿ ಸಂತಯಿಸಿ ವಿನಯಂಧರರೆಂಬಾ ಚಾರ್ಯರ ಪಕ್ಕದೆ ಪಲಂಬರುಂಬೆರಸು ತಪಂಬಟ್ಟಂ ಮತ್ತೆ ಶ್ರೀಕಾಂತೆ ಮೊದಲಾ ಗೊಡೆಯ ಪಲಂಬರ್ ಪೆಂಡಿರ್ಕಳ್ ವಿನಯಂಧರಭಟ್ಟಾರರ್ ಗುರುಗಳಾಗೆ ಗುಣ ಮತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಪಲಕಾಲಮುಗ್ರೋಗ್ರ ತಪಶ್ಚರಣಂ

---

[1] ವೈದ್ಯಂ (ಘ ಚ ಛ). [2] ಜಿ (ಕ), ವತಿ (ಘ ಚ ಛ). [3] ದೆ (ಕ), ವೆ (ಚ).
* ೞು (ಘ). [4] ಗಂಜಿ (ಕ ಗ), ಗಂಬಿ (ಖ), ಮಗನಂ ಪೆ (ಛ), ತಿರುಂಡಿ ಮಗನಂ ಪೆತ್ತಳ್ ಎಂದಿರಬಹುದೆ? [5] ಚನಂ (ಕ). [6] ರ್ದೂ (ಖ), ಮೇಗಿರ್ದುವೊಲೆಯೂ (ಕ).

ಗೆಯ್ದು ಸಮಾಧಿ ಮರಣದಿಂದಂ ಮುಡಿಪಿ ದೇವಲೋಕದೊಳನಿಬರುಂ ಪುಟ್ಟಿದರ್ ಮತ್ತಿತ್ತ ಸಿದ್ಧಾರ್ಥರಿಸಿಯುಂ ಪನ್ನೆರಡು ವರುಷಂಬರಂ ಗುರುಗಳನಗಲದೆ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತೇಕವಿಹಾರಿಯಪ್ಪೆಂ ಭಟಾರಾ ಎಂದು ಗುರುಗಳಂ ಬೆಸಗೊಂಡವರನುಮತದಿಂದೇಕವಿಹಾರಿಯಾಗಿ [1]ಗ್ರಾಮೇ ಏಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ವಿಹಾರಿಸುತ್ತಂ [2]ಛಟ್ಟಟ್ಟಮ ದಸಮ ದುವಾಳ[2]ಸಾಷ್ಟೋಪವಾಸ ಪಕ್ಷೋಪವಾಸ ಮಾಸೋಪವಾಸಂಗಳಂ ಮಾಡುತ್ತಂ ಪಲಕಾಲಂ ತಪಂಗೆಯ್ಯುತ್ತಮಿರ್ದರ್

ಇತ್ತ ಜಯಾವತಿಯುಂ ಭಟಾರರ್ ಪೇಳ್ದಾದೇಶಮಂ ನೆನೆದು ತನ್ನ ಮನೆಯಂ ರಿಸಿಯರಂ ಪುಗಲೀಯದಂತಿರೆ ಬಾಗಿಲ್ಗಾಪಿನವರಂ ಕಲ್ಪಿಸಿದೊಳ್ ಮತ್ತಂ ಸಿದ್ಧಾರ್ಥರಿಸಿಯರ ಮೇಗೆ ಕ್ರೋಧಮಂ ಭಾವಿಸಿ ಬಾಲವದ್ಧಿಯಂ ಕೂಸಂ ಸಿಸುವನವ್ಯಕ್ತನಂ ಬಿಸುಟ್ಟಿಂತು ತಪಂಬಟ್ಟ ಪಾಪಕರ್ಮ ದಯೆಯಿಲ್ಲದೊಂ ನಿಷ್ಕರುಣಿ ಎಂದು ಒಯ್ದಳ್ ಮತ್ತಂ ಸುಕೌಸಳ ಸ್ವಾಮಿಯುಂ ಮೊಲೆಯೂಡುವ ದಾದಿ ಸುಬ್ರತೆಯೆಂಬೊಳ್ ಸುಮತಿಯೆಂಬೊಳೂಡುವ ದಾದಿ ನಂದೆಯೆಂಬೊಳಾಡಿಸುವ ದಾದಿ ಸುಪ್ರಭೆಯೆಂಬೊಳ್ ಮಜ್ಜನಂಬುಗಿಸುವ ದಾದಿ ಮೇಘಮಾಲೆಯೆಂಬೊಳ್ ಪಸದನಂಗೊಳಿಸುವ ದಾದಿ ಇಂತಯ್ವರ್ ದಾದಿಯರ್ಕಳ್ ನಡಪೆ ಸುಖದಿಂದಂ ಬಳೆದು ಪದಿನಾಱುಂ ವರುಷಂಬೋಗಿ ಯೌವನವಾದೊಡೆ ಮೂವತ್ತಿರ್ವರರಸು ಮಕ್ಕಳ ಕೂಸುಗಳನತ್ಯಂತ ಲಾವಣ್ಯಸೌಭಾಗ್ಯಕಾಂತಿಹಾವ ಭಾವವಿಲಾಸ ವಿಭ್ರಮಂಗಳಿಂ ಕೂಡಿದೊರಂ ಬೇಡಿಯೊಂದೆ ಪಸೆಯೊಳ್ ಮದುವೆ ನಿಱಿಸಿದಳ್ ಮತ್ತೇಕಶಾಲ ದ್ವಿಶಾಲ ತ್ರಿಶಾಲ ಚತುಃಶಾಲ ಸ್ವಸ್ತಿಕ ನಂದ್ಯಾವರ್ತಂ ಮೊದಲಾಗೊಡೆಯ ಮಾಡಂಗಳುಮಂ ಮೂವತ್ತೆರಟ್ಬಳ್ಳಿಮಾಡಂಗ[3][ಳುಮಂ][3] ಮಾಡಿಸಿ ತನ್ನ ಮನೆಯಂಗಣದೊಳ್ ಸೆಂಡಾ[4]ಡುವ ತಟಿಯುಮಾನೆಯನೇಱುವ ವಿನೋದಂ[4] ಮೊದಲಾಗೊಡೆಯ ವಿನೋದ ಸ್ಥಾನಂಗಳೆಲ್ಲಮಂ ಮಾಡಿಸಿ ಪೊಱಮಡಲೀಯದಂತು ಕಾಪಂ ಮಾಡಿ ಮಗನೈಶ್ವರ್ಯಮಂ ವಿನೋದಮುಮನಱ್ತಿಯಿಂದಂ ದಿವಸಕ್ಕಂ ನೋಡುತ್ತಿರ್ಕ್ಕುಮಾ ಸುಕೌಶಳ ಸ್ವಾಮಿಯುಂ ಮೂವತ್ತಿರ್ವರ್ ಪೆಂಡಿರ್ಕ್ಕಳೊಡನೆ ಇಷ್ಟವಿಷಯ ಕಾಮಭೋಗಸುಖಂಗಳಂ ಪಲಕಾಲಮನುಭವಿಸುತ್ತಿರೆ

ಮತ್ತೊಂದು ದಿವಸಂ ಸುಕೌಶಳಸ್ವಾಮಿಯುಂ ಪೃಥ್ವೀ[5]ಧರ[5]ಮೆಂಬ ಪ್ರಾಸಾದ ಏೞನೆಯ ನೆಲೆಯ ಮೇಗೆ ತಾನುಂ ತಾಯುಂ ಸುವ್ರತೆ ಮೊದಲಾಗೊಡೆಯ ಅಯ್ವರ್ ದಾದಿಯರುಂ ಸ್ವಯಂಪ್ರಭೆ ಮೊದಲಾಗೊಡೆಯ ಮೂವತ್ತಿರ್ವರ್ ಪೆಂಡಿರ್ಕ್ಕಳಿಂತನಿಬರಿಂದಂ ಪರಿವೇಷ್ಟಿತನಾಗಿ ಗವಾಕ್ಷಜಾಲಾಂತರದೊಳ್ ದಿಶಾವಲೋಕನಂಗೆಯ್ಯುತ್ತಂ ಸುಖಸಂಕಥಾವಿನೋದದಿಂದಿರ್ಪನ್ನೆಗಮಿತ್ತ ಸಿದ್ಧಾರ್ಥರಿಸಿಯರ್ ಗ್ರಾಮನಗರಖೇಡಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ

[1] (ಖ) ಪ್ರತಿಯಲ್ಲಿ ನಷ್ಟವಾಗಿದೆ. [2] ಛಷ್ಟಾಷ್ಟಮದಂ ದಶಮ ದ * * * (ಕಖಗ). "ಷಷ್ಠಾಷ್ಟಮದಶಮದ್ವಾದಶ" ಎಂದು ಇದಕ್ಕೆ ಸರಿಯಾದ ಸಂಸ್ಕೃತ ಪಾಠ. [3] ಳ್ಮಂ (ಕ). [4] ಡಲುಂ ವೈಹಾಳಿ (ಘಚಛ). [5] ತಿಲಕ (ಘಚಛ).

ವಿಹಾರಿಸುತ್ತಮಯೋಧ್ಯಾನಗರಮಂ ಬಂದು ಮಾಸೋಪವಾಸದ ಪಾರಣೆಯಂದು ಚರಿಗೆವೊಕ್ಕು ಕಿಱುಮನೆ ಪೆರ್ಮನೆಯೆನ್ನದುಣಲ್ ತಕ್ಕ ಮನೆಗಳಂ ಯಥಾಕ್ರಮದಿಂ ಪುಗುತ್ತಂ ಬರ್ಪರ್ ಸುಕೌಸಳಸ್ವಾಮಿಯ ಮನೆಯಂ ಪೊಕ್ಕು ಪೊಱಮಡುವರ್ ಗಿಡಿಗಿಡಿಜಂತ್ರಂ ಮಿಳಿಮಿಳಿನೇತ್ರರಪ್ಪ ಮಾಸೋಪವಾಸಂಗೆಯ್ದು ರಿಸಿಯರ್ ಪೋಪುದಂ ಸುಕೌಶಳಸ್ವಾಮಿ ಕಂಡೀ ಪೋಪರೇನೆಂಬರಬ್ಬಾ ಅಪೂರ್ವರೂಪರಿನ್ನರನೆಂದುಂ ಕಂಡಱಿಯೆನೆಂದು ತಾಯಂ ಬೆಸಗೊಂಡೊಡೆ ತಾಯ್ ಇಂತೆಂದು ಪೇೞ್ದಳ್ ಮಗನೆ ಈತನಂಗ[1]ಡಿಯಲ್ಲವಡಂ ಪೆಱುಕಿ ತಿಂದು ಬಾೞ್ವೊಂ[1] ಬೈಕಂಗುಳಿ ಬೇಡಿ ಪೊಱಲೆಲ್ಲಮುಂ ತೊಱಲ್ದು ಬಸಿಱಂ ಪೊರೆವೊಂ ದೇಸಿಗನಾರುಮಿಲ್ಲದೊಂ ಕೋವಣಕ್ಕಪ್ಪೊಡಂ ಭಾಗಸಮಿಲ್ಲದೊನೆಂದು ಜಯಾವತಿ ಪೇೞ್ದೊಡೆ ಸುವ್ರತೆಯೆಂಬ ದಾದಿ ಮಾರ್ಕೊಂಡಿಂತೆಂದಳ್ ಹಾ ಪೊಲ್ಲ[2]ದಂ ನು[2]ಡಿದಯ್ ಸ್ವಾಮಿಯಂ ಪರಮೇಶ್ವರನಂ ನೀಂ ಮೊದಲಾಗೊಡೆಯ ಮೂವತ್ತಿರ್ವ್ವರುಮೊಳ್ಪೆಂಡಿರ್ಕ್ಕಳುಮಂ ಮೂವತ್ತೆರಡ್ಕೋಟಿ ಕಸವರಮುಮಂ ಕೊ[3]ಱದ[3] ಪುಲ್ಲದರ್ಕ್ಕಂ ತೊಱೆವಂತನಿತುಮಂ ತೊಱೆದು ಕರ್ಮಕ್ಷಯಾರ್ಥಂ ತಪಂಬಟ್ಟಾತನನಿಳಿಸಿ ಪರಿಭವಿಸಿ ಮುಟ್ಟುಗಿಡಿಸಿ ನುಡಿಯಲ್ವೇಡೆಂದು ಬಾರಿಸಿದೊಳಂ ಜಯಾವತಿ ಕಣ್ಕೆತ್ತಿ ಬಾರಿಸಿದೊಡೆ ಕೆಮ್ಮಗಿರ್ದ್ದು ಪೞಪೞವನೆ ನುಡಿಯಲ್ ತಗುಳ್ದೊಡೆ ಸುಕೌಶಳಸ್ವಾಮಿಯವರಿರ್ವರ ನುಡಿಗಳ್ ಸಗ[4]ರ್ಭ[4]ವಚನಂಗಳೆಂದು ತನ್ನ ಮನದೊಳೆ ಬಗೆಯುತ್ತಿರ್ಪಿನಂ ಬಾಣಸಿಗಂ ಬಂದು ಬೋನಮೆತ್ತಿಯೋಗರಮಾಱಿದಪ್ಪುದೆಂದು ಪೇೞ್ದೊಡೆ ತಾಯುಂ ಸುವ್ರತೆ ಮೊದಲಾಗೊಡೆಯ ದಾದಿಯರಯ್ವರುಮಾತನ ಪೆಂಡಿರ್ಕ್ಕಳ್ ಸ್ವಯಂಪ್ರಭೆ ಶ್ರೀದತ್ತೆ ಬಂಧುಮತಿ ಭಾನುಮತಿ ಮಿತ್ರಸೇನೆ ಪ್ರಿಯಂಗು ಸುಂದರಿ ಪ್ರಿಯದೆ ಶ್ಯಾಮಲತೆ ವಿದ್ಯುಲ್ಲತೆ ಅಚಲೆ ವಿಮಳಮತಿ ಶ್ರೀಕಾಂತೆ ಶಶಿಪ್ರಭೆ ಸೂರಸೇನೆ ಅನಂತಮತಿ ಸರಸ್ವತಿ ವಿಜಯೆ ವೈಜಯಂತೆ ಅಪರಾಜಿತೆ ಕನಕಮಾಳೆ ಧಾನ್ಯೆ ಧನಶ್ರೀ ವಸುಂಧರೆಯೆಂದಿವರ್ ಮೊದಲಾಗೊಡೆಯರೆಲ್ಲರ್ ನೆರೆದಿಂತೆಂದರ್ ವೇಳಾತಿಕ್ರಮಮಾದಪುದಾರೊಗಿಸಲ್ಕೇೞಿಮೆಂದು ನುಡಿದೊಡೆ ಸುಕೌಶಳಸ್ವಾಮಿಯಿಂತೆಂದನೀ ವೃತ್ತಾಂತಮೆಲ್ಲಮನಱಿದೊಡಲ್ಲದುಣ್ಬೆನಲ್ಲೆನದಱಿಂ ಪೇೞ್ ಸುವ್ರತೆ ಏನಂ ಕಂಡಿರಾರುಳ್ಳುದನುಳ್ಳಂತೆ ಪೇೞೆಯಪ್ಪೊಡೆ ನಿನಗೆನ್ನಾಣೆಯೆಂದು ತನ್ನ ಮೇಗೆ ಸೂರುಳಿಸಿ ಬೆಸಗೊಂಡೊಡೆ ಸುವ್ರತೆಯೆಂಬೊಳ್ ಮೊಲೆಯೂಡಿದ ದಾದಿಯಿಂತೆಂದು ಪೇೞ್ದಳ್ ಕೇಳ್ ಮಗನೆ ಇವರ್ ನಿನ್ನ ತಂದೆವಿರ್ ಸಿದ್ಧಾರ್ಥರೆಂಬೊರ್ ನೀನ್ ತೊಟ್ಟಿಲೊಳಿರ್ದ್ದಂತೆ ನಿನಗೆ ಸೆಟ್ಟಿವಟ್ಟಂಗಟ್ಟಿ ಸಂಸಾರಕ್ಕೆ ಪೇಸಿ ಕರ್ಮಕ್ಷಯಾರ್ಥಂ ತಪಂಬಟ್ಟೀ ಮೆಯ್ಯಂ ನಿಱಿಸಲ್ವೇಡಿ ಪೊಱಲೊಳಗೆ ಚರಿಗೆವೊಕ್ಕು [5]ಬಾವರಿವುಗುತ್ತುಂ[5] ಬಂದು ನಿನ್ನ ಮನೆಯಂ ಪೊಕ್ಕು ಪೊಱಮಟ್ಟು ಪೋದರೆಂದು ಪೇೞ್ದೆನ್ನಾರೊಗಿಸಲ್ವೇೞ್ಕುಂ ಏೞು ಮಗನೆ ಎಂದೊಡೆ ಸುಕೌಸಳಸ್ವಾಮಿಯೆಂದನಂತಪ್ಪೊಡಾನುಮವರಂತಪ್ಪ ರೂಪಂ ಕೈಕೊಂಡಲ್ಲದುಣ್ಣೆನೆಂದು

[1] ಗದಿಯಲವಟು ಪೆಱುಕಿ ತಿ . . . (ಕಖ), ಗಡಿಯಲವಟು ಪೆಱುಕಿ ತಿ. ಬಾಳ್ವೊಂ (ಗ). ಗಡಿಯಲವಡಂ ಪಿಱಿಕಿ ತಿಂದು ಬಾಳ್ವೊಂ (ಚಛ). [2] ದುಮಾ (ಕಖಗ). [3] ಳದ (ಕಖಗ). [4] ರ್ವ (ಕಖಗ). [5] ತಿರಿಯುತ್ತಂ (ಘಚ), ತಿರುಗುತ್ತಂ (ಛ).

ಪ್ರತಿಜ್ಞೆಗೆಯ್ದಿರ್ದೊಡೆ ಸ್ವಜನ ಪರಿಜನ ಬಂಧುವರ್ಗಮೆಲ್ಲಂ ನೆರೆದಿಂತೆಂದರ್ ನೀನಿನ್ನುಂ [1]ಕೂಸಯ್[1] ಕಾಮಭೋಗಂಗಳನುಭವಿಸುವ ದಿವಸಂಗಳ್ ತಪಂಬಡುವ ದಿವಸಮಲ್ಲಂ ಪ್ರಾಯಂ ಬೋದಿಂಬೞಿಕ್ಕೆ ನಿನ್ನಮ್ಮನೆಂತು ನಿನಗೆ ಸೆಟ್ಟಿವಟ್ಟಂಗಟ್ಟಿ ಸಮಸ್ತಭಾರಮಂ ಸಮರ್ಪಿಸಿ ತಪಂಬಟ್ಟನಂತೆ ನೀನುಂ ನಿನಗೆ ಮಗನಾದೊಡೆ ಮಗಂಗೆ ಸೆಟ್ಟಿವಟ್ಟಂ ಗಟ್ಟಿ ಸಮಸ್ತ ಭಾರಮಂ ನಿರೂಪಿಸಿ ತಪಂಬಡುವುದೆಂದೆಲ್ಲರುಂ ನುಡಿದೊಡಿಂತೆಂದನನ್ನೆಗಮೇಂ ಸಾವರೊ ಬಾೞ್ವರೊ ಎಂತೞಿಯಲಕ್ಕುಂ ಮಾನಸವಾಣೆಂಬುದು ಪನಿವುಲ್ಲ ಮುಗಿಲ ಸಂಜೆಯೊಳೋರಂತಪ್ಪುದಱಿಂದಾರ್ ಬಾರಿಸಿದೊಡಂ ನಿಲ್ವೆನಲ್ಲೆಂದು ಸ್ವಯಂಪ್ರಭೆಯೆಂಬೊಳ್ ಬಸಿಱ ಪೆಂಡತಿಯಾಕೆಯ ಬಸಿಱ ಕೂಸಿಂಗೆ ಸೆಟ್ಟಿವಟ್ಟಂಗಟ್ಟಿ ಮನೆಯಿಂದಂ ಪೋಱಮಟ್ಟು ರಿಸಿಯರಿರ್ದೆಡೆಯಂ ಬೆಸಗೊಳುತ್ತಂ ಪೋಗಿ ಬಹಿರುದ್ಯಾನವನದೊಳ್ ಸ್ಫಟಿಕಶಿಲಾತಲದ ಮೇಗಿರ್ದ ಸಿದ್ಧಾರ್ಥ ಭಟ್ಟಾರರಂ ಕಂಡು ಸುಕೌಶಳಸ್ವಾಮಿ ಜಾತಿಸ್ಮರನಾಗಿ ದರ್ಶನವಿಶುದ್ಧಿಯೊಳ್ ಕೂಡಿದ ಶುಭಪರಿಣಾಮದಿಂದಂ ಬಂದಿಸಿದಾಗಳವಧಿಜ್ಞಾನಮುಮಾಗೆ ಅವರ ತನ್ನ ಮುನ್ನಿನ ಭವಾಂತರಂಗಳೆಲ್ಲಮಂ ಪ್ರತ್ಯಕ್ಷಮಾಗಱಿದು ಮನದೊಳಿಂತೆಂದು ಬಗೆದನಿವಂ ಮುನ್ನಿನ ಭವಾಂತರದೊಳ್ ಪ್ರಿಯದರ್ಶನನೆಂಬ ಸೆಟ್ಟಿ ಕಾಲಂಗೆಯ್ದು ಮಲಯ ಸುಂದರನೆಂಬಾನೆಯಾಗಿ ಪುಟ್ಟಿದನಲ್ಲಿಂ ಬೞಿಯಂ ಕುಬೇರಕಾಂತನೆಂಬೊನಾದನಲ್ಲಿಂ ಬೞಿಯಂ ವಿದ್ಯುನ್ಮಾಳಿಯೆಂಬ ವಿದ್ಯಾಧರನಾದನಲ್ಲಿಂ ಬೞಿಯಂ ಸಿದ್ಧಾರ್ಥನೆಂಬೊನೀಗಳಾಗಿ ತಪಂಬಟ್ಟನಂತು ಸಿದ್ಧಾರ್ಥ ಭಟ್ಟಾರರ ಭವಂಗಳೈದು ಮತ್ತಾಂ ಮುನ್ನಿನ ಭವದೊಳ್ ಪ್ರಿಯಸೇನೆಯೆಂಬ ಮಾಲೆಗಾರ್ತಿಯೆಂ ಕಾಲಂಗೆಯ್ದು ಪದ್ಮಾವತಿಯೆಂಬ ಪಿಡಿಯಾಗಿ ಪುಟ್ಟಿದೆನಲ್ಲಿಂ ಬೞಿಯಂ ವರಾಂಗನಾದೆನಲ್ಲಿಂ ಬೞಿಯಂ ಶ್ರೀಧರನಾದೆನಲ್ಲಿಂ ಬೞಿಯಂ ಚಂಡವೇಗನೆಂಬ ವಿದ್ಯಾಧರನಾದೆನಲ್ಲಿಂ ಬೞಿಯಂ ಸಿದ್ಧಾರ್ಥಂಗಂ ಜಯಾವತಿಗಂ ಮಗನೆನಾಂ ಸುಕೌಶಳಸ್ವಾಮಿಯಾಗಿ ಪುಟ್ಟಿದೆನಿಂತೆನ್ನ ಭವಾಂತರಮಾಱು ಮತ್ತಾಂ ಪ್ರಿಯಸೇನೆಯಪ್ಪಂದೆನ್ನ ಕೆಳದಿ ಸುಕೀರ್ತಿಯೆಂಬಳ್ ಪ್ರಿಯದರ್ಶನನ ಭಾರ್ಯೆ ಕಾಲಂಗೆಯ್ದು ಮಲಯಾವತಿಯೆಂಬ ಪಿಡಿಯಾಗಿ ಪುಟ್ಟಿದೊಳಲ್ಲಿಂ ಬೞಿಯಂ ಸುಕೇಶಿನಿಯಾದಳಲ್ಲಿಂ ಬೞಿಯಂ ಮನೋಹರಿಯಾದಳಲ್ಲಿಂ ಬೞಿಯಂ ವಿರಳವೇಗೆಯೆಂಬ ವಿದ್ಯಾಧರಿಯಾದಳಲ್ಲಿಂ ಬೞಿಯಂ ಶ್ರೀಕಾಂತೆಯಾದೊಳಾಕೆಯಂ ಸಿದ್ಧಾರ್ಥಂಗೆ ಕೊಟ್ಟುದಂತು ಶ್ರೀಕಾಂತೆಯ ಭವಾಂತರಮಾಱುಂತು ಮೂವರ ಭವಾಂತರಂಗಳನಱಿದು ಸಂಸಾರಕ್ಕೆ ವೈರಾಗ್ಯಮಾಗಿ ಸಿದ್ಧಾರ್ಥ ಭಟ್ಟಾರರ[2]ಪಕ್ಕದೆ[2] ಸುಕೌಸಳಸ್ವಾಮಿ ತಪಂಬಟ್ಟಂ ಸುಪ್ರಭೆಯುಂ ಬೞಿಯೆ ಉೞಿದ ಮೂವತ್ತಿರ್ವರ್ ಪೆಂಡಿರುಂ ಸಿದ್ಧಾರ್ಥ ಭಟಾರರ್ ಗುರುಗಳಾಗೆ ಗುಣಮತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು ಪಲಕಾಲಮುಗ್ರೋಗ್ರ ತಪಶ್ಚರಣಂಗೆಯ್ದು ಸಮಾಧಿ ಮರಣದಿಂ ಮುಡಿಪಿ ದೇವಲೋಕದೊಳ್ ಪುಟ್ಟಿದರ್

ಮತ್ತಿತ್ತ ಜಯಾವತಿಯುಂ ತನ್ನಂ ಬಾರಿಸೆವಾರಿಸೆ ಸುಕೌಶಲಸ್ವಾಮಿ ತಪಂ

---

[1] ಕಿಱುಕೂಸನ್ನೈ (ಘಚ). [2] ಪಾದಮೂಲದೊಳ್ (ಘಚಛ).

ಬಟ್ಟನೆಂದು ಮುಳಿದು ಜಿನಧರ್ಮಮಂ ಪಟಿದು[1] ಉನ್ಮಾರ್ಗೋಪದೇಶದಿಂದಾರ್ತಧ್ಯಾನದೊಳ್ ಕೂಡಿ ಸತ್ತು ಮೊಗ್ಗಳಗಿರಿಯೆಂಬ ಪರ್ವತದೊಳ್ ಪೆಣ್ಬುಲಿಯಾಗಿ ಪುಟ್ಟಿದಳ್ ಮತ್ತಿತ್ತ ಸುಕೌಸಲಸ್ವಾಮಿ ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳೊಡನೆ ಗ್ರಾಮನಗರಖೇಡಖರ್ವಡಮಡಂಬಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಪಲಕಾಲಂ ತಪಂಬಟ್ಟು ಮೊಗ್ಗಳಗಿರಿಯೆಂಬ ಪರ್ವತಕ್ಕೆ ವಂದು ಮಡೆಗಾಲದೊಳಿರ್ವರುಮೊಂದೆ ಗುಹೆಯೊಳ್ ಜೋಗುಗೊಂಡು ನಾಲ್ಕು ತಿಂಗಳಿರ್ವರುಮುಪವಾಸಂಗೆಯ್ದು ಜೋಗು ನೆಱೆದೊಡೆ ಚಾತುರ್ಮಾಸದ ಪಾರಣೆಯಂದು ಸುಕೌಸಲಸ್ವಾಮಿಯುಮಪ್ಪ ರಿಸಿಯರ್ ಗುಹೆಯಿಂದಂ ಮುನ್ನ ಪೊಱಮಟ್ಟು ದೆಸೆಗಳಂ ನೋಟ್ಪರನ್ನೆಗಂ ತಾಯಪ್ಪ ಪೆಣ್ಬುಲಿ ಪಲವು ದಿವಸಮಾಹಾರಮಂ ಪೆಱದೆ ಪಸಿದು ಮಲ್ಕಲ ಮಱುಗುತಿರ್ದ್ದುರ್ ರಿಸಿಯರಂ ಕಂಡು ಮುಳಿದು ಮಸಗಿ ಮೇಲ್ವಾಯಲಾ ಪರಿತಪ್ಪುದಂ ಕಂಡು ಸುಕೌಸಲಸ್ವಾಮಿ ಆಹಾರ ಶರೀರಕ್ಕೆ ಯಾವಜ್ಜೀವಂ ನಿವೃತ್ತಿಯೆಂದು ಕಾಯೋತ್ಸರ್ಗಂ ಗೆಯ್ದು

ಗಾಹೆ|| ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝು ಣ ಕೇಣಚಿ ||
ಮಜ್ಝು ಸ[2]ಹಾವಂ ಣಾ[2]ಣಂ ದಂಸಣಚರಣಂ ಣಕೋವಿ ಲಾವ[3]ಣ್ಣಂ[3]
ಜೋ ಸವ್ವಯಣಗ್ಗಾಹಿ ಸೋ ಹಂ ಣೋ ಗಾಹವೇಯಾದಾ || ([1])
ಛಜ್ಜಉ ಭಿಜ್ಜಉ ಜಾಉ ಖಉ ಜೋಇಯ ಏಹು ಸರೀರು
ಅಪ್ಪಾ ಭಾ[4]ವ[4]ಹಿ ಣಿ[5]ಮ್ಮ[5]ಲಉ ಜೇಂ ಪಾವಹಿ ಭವತೀರು ||

ಎಂದಿಂತು ಕ್ಷಮೆಯಂ ಭಾವಿಸಿ ಧರ್ಮಧ್ಯಾನ ಶುಕ್ಲ ಧ್ಯಾನಂಗಳಂ ಧ್ಯಾನಿಸುತ್ತಿರೆ ಪುಲಿ ಬಂದು ಪಾಯ್ದು ಬಸಿಱಂ ಪೋಟ್ಟು ಸತ್ತ್ರರಂ ಕುಡಿದು ತೆಗಲ್ತೆಯಂ ಪೋಟ್ದು ತಿನ್ವಾಗಳ್ ಸಿದ್ಧಾರ್ಥರಿಸಿಯುಂ ಗುಹೆಯಂ ಪೊಱಮಟ್ಟು ಬಂದು ಕಂಡು ಹಾ ಪಂಚಮಹಾಪಾತಕಿ ಮಗನನೇಕೆ ಕೊಂದು ತಿಂದೆ ಮುನ್ನೆ ಕುಂಕುಮಪಂಕಿತಮಪ್ಪ ದಿಬ್ಯದೇಹದೊಳ್ ಬೆಮರ ಬಿಂದುಗಳಂ ಕಂಡು ನೆತ್ತರೆಂದು ಬಗೆದು ಮೂರ್ಛೆಗೆ ಸಲ್ವಾಕೆಯೆ ಈಗಳ್ ಮಗನಂ ಪೋಟ್ದು ತಿಂದಪ್ಪಯ್ |ಅಹೊ ಕಷ್ಟಂ ಸಂಸಾರಮೆಂದು ಸಿದ್ಧಾರ್ಥ ಭಟ್ಟಾರರಾ ನುಡಿವ ವಚನಮಂ ಕೇಳ್ದು ವಕ್ಷಃಸ್ಥಳದ ಶ್ರೀಲಾಂಛನಮಂ ಕಂಡು ಜಾತಿಸ್ಮರೆಯಾಗಿ ಮೂರ್ಛೆಗೆ ಸಂದು ನೀಡಱಿಂದೆೞ್ಚತ್ತು ಹಾ ಪಂಚಮಹಾಪಾತಕಿಯೆನ್ನ ಮಗನಂ ಪೋಟ್ದು ತಿಂದೆನೆಂದು ತನ್ನಂ ತಾಂ ನಿಂದಿಸಿ ತಲೆಯಂ ಕಾಲ್ಗಳಂ ಪಾಷಾಣವೃಕ್ಷಂಗಳೊಳ್ ಶತಚೂರ್ಣಮಾಗೆ ಬಡಿದುಕೊಂಡು ಹಾ ಮಗನೆ ಪೊಲ್ಲದಂಗೆಯ್ದೆನೆಂದು ಪ್ರಳಾಪಂಗೆಯ್ದು [6]ಮಹಾಶೋಕಂಗೆಯ್ಯುತ್ತಿರೆ ಭಟ್ಟಾರರದರ್ಕೆ ಧರ್ಮಶ್ರವಣಂಗೆಯ್ದು ಸಂಸಾರ ಸ್ಥಿತಿಯನಱಿಯೆ ಪೇಟ್ದು ವ್ರತಂಗಳ ನೇಱಿಸಿದೊಡುಪಶಮಕ್ಕೆ ಸಂದಾಹಾರ ಶರೀರಕ್ಕೆ ಯಾವಜ್ಜೀವಂ ನಿವೃತ್ತಿಗೆಯ್ದು[6]

[1] (ಖ) ದಲ್ಲಿ ನಷ್ಟವಾಗಿದೆ. [2] ಹೋವಣೊ (ಕ). [3] ವರಣಂ (ಕ). [4] ವಾ (ಗ). [5] ವಾ (ಕ). ಕೊನೆಯ ಎರಡು ಗಾಹೆಗಳು (ಖಘಚಛ)ಗಳಲ್ಲಿ ದೊರೆಯುವುದಿಲ್ಲ. [6] ಈ ಭಾಗ (ಕಖಗ) ಪ್ರತಿಗಳಲ್ಲಿಲ್ಲ. ಇದಕ್ಕೆ ಬದಲಾಗಿ 'ತೊಱೆದು' ಎಂದಿಷ್ಟೇ ಇದೆ.

ಶುಭಪರಿಣಾಮದೊಳ್ ಕೂಡಿ ಮುಡಿಪಿ ಸೌಧರ್ಮ ಕಲ್ಪದೊಳ್ ಪುಟ್ಟಿತ್ತು ಅಪ್ಪಾರ್ಥರಿಸಿಯರುಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಕರ್ಮಕ್ಷಯಂಗೆಯ್ದು ಮೋಕ್ಷಮನೆಯ್ದಿದರ್[1] ಸುಕೌಸಲಸ್ವಾಮಿಯುಂ ತಿರಿಕೋಪಸರ್ಗಮಂ ಸೈರಿಸಿ ಸರ್ವಾರ್ಥಸಿದ್ಧಿಯೊಳ್ ಸಯುಸತ್ತಮ ದೇವನಾಗಿ ಪುಟ್ಟಿ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯನಪ್ಪಹಮಿಂದ್ರನಾದೊನ್

ಎಂಬಿದೆಲ್ಲಮಂ ಯಶೋಧರ ಕೇವಲಿಗಳ್ ಪೇಳೆ ಚಂಪಾಪುರಾಧಿಪತಿಯಪ್ಪ ಗಂಧಭಾಜನನೆಂಬರಸಂ ಕೇಳ್ದಾದಮಾನುಂ ಸಂತುಷ್ಟಚಿತ್ತನಾಗಿ ಭಟಾರರ್ಗೆಱಗಿ ಪೊಡೆವಟ್ಟು ಸಂಸಾರ ಶರೀರ ಭೋಗ ನಿರ್ವೇಗ ಪರಾಯಣನಾಗಿ ಧಾತ್ರೀವಾಹನನೆಂಬ ತನ್ನ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ನೂರ್ವರರಸು ಮಕ್ಕಳ್ವೆರಸು ಯಶೋಧರ ಕೇವಲಿಗಳ ಪಕ್ಕದೆ ತಪಂಬಟ್ಟಂ ಮತ್ತಪ್ಪರಸಿಯಕ್ಕರ್ಕಳೊಳೋರನ್ನರಪ್ಪರಸಿಯರಯ್ನೂರ್ವರುಂ ಯಶೋಧರ ಕೇವಲಿಗಳ್ ಗುರುಗಳಾಗೆ ಪದ್ಮಾವತಿ ಕಂತಿಯರ್ ಕಂತಿಯರಾಗೆ ತಪಂಬಟ್ಟು [2]ಸಮಾಧಿ ಮರಣದಿಂದಂ ಮುಡಿಪಿ ಸೌಧರ್ಮಂ ಮೊದಲಾಗೊಡೆಯ ದೇವಲೋಕದೊಳ್ ಪುಟ್ಟಿದರಿತ್ತ ಗಂಧಭಾಜನ ಮುನಿಯುಂ ದ್ವಾದಶಾಂಗ ಚತುರ್ದಶ ಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಪಲ ಕಾಲಮುಗ್ರೋಗ್ರ ತಪಶ್ಚರಣಂಗೆಯ್ದು ಗ್ರಾಮನಗರಖೇಡಖರ್ವಡಮಡಂಬಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಪೋಗಿ ಪಾಂ[3]ಡ್ಯ[3] ವಿಷಯದೊಳ್ [4]ಸಳಿಕುಂತಳೆಯೆಂ[4]ಬ ಪರ್ವತದ ಮೇಗಿರ್ದು ಬಾಹ್ಯಾಭ್ಯಂತರ ಪರಿಗ್ರಹ ಪರಿತ್ಯಾಗ ಪೂರ್ವಕಂ ಕಾಯೋತ್ಸರ್ಗಂಗೆಯ್ದು ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ಕರ್ಮಕ್ಷಯಂಗೆಯ್ದು ಸುರಾಸುರೇಂದ್ರರ್ಕಳಿಂ ಪೂಜೆಯನೆಯ್ದಿ ಮೋಕ್ಷಕ್ಕೆ ಪೋದರ್

ಮತ್ತಾರಾಧಕರಪ್ಪವರ್ಗಳ್ ಸುಕೌಶಲಸ್ವಾಮಿಯ ತಿರಿಕೋಪಸರ್ಗಮಂ ಮನದೆ ಬಗೆದು ಪಸಿವುಂ ನೀರಡ್ಕೆ ದಾಹವಾತಂ ಸೂಲೆಯೆಂದಿವು ಮೊದಲಾಗೊಡೆಯ ವೇದನೆಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿ ಮರಣದಿಂ ಮುಡಿಪಿಯಭ್ಯುದಯ ನಿಶ್ರೇಯಸ ಸುಖಂಗಳನೆಯ್ದುಗೆ

---

[1] ಈ ಭಾಗ (ಕಖಗ) ಪ್ರತಿಗಳಲ್ಲಿಲ್ಲ. [2] ಈ ಭಾಗ (ಕಖಗ) ಗಳಲ್ಲಿಲ್ಲ. [3] ಡು (ಘಚಛ).
[1] ಪಿಳಿಕುಂಧನೆಂ (ಘಚಛ).

೩. ಗಜಕುಮಾರನ ಕಥೆ

ಗಜಕುಮಾರನ ಕಥೆಯಂ ಪೇೞ್ವೆಂ :

ಗಾಹೆ || ಭೂವಿೞಾಎ ಸಮಂ ಖೀಲಾಭಾಇದ ದೇಹೋವಿ ಅಲ್ಲಚಮ್ಮಂ ವ |
ಭಗವಂ ಪಿ ಗಜಕುಮಾರೋ ಪಡಿವಣ್ಣೋ ಉತ್ತಮಂ ಅಟ್ಠಂ ||

[[1]ಭೂಮಿೞಾ ಎ ಸಮಂ—ನೆಲದೊಳೋರಂತಾಗೆ ಮಲರ್ಚಿ ಕ್ಕಿಯುರದಿಂ ತಗುೞ್ದು ನಾಭಿವರೆಗಂ ಬಸಿಱಂ ಪೋೞ್ದು, ಅಲ್ಲಚಮ್ಮಂ—ಪಂದೊವಲಂ ತೆಗೆದು, ಖೀಲಾಭಾಇದದೇಹೋವಿ[1]—ಕಾಯ್ದು ಕರ್ಬೊನ್ನ ನಿಡಿಯವುಂ ತೋರಮುಮಪ್ಪ ಕೀಲ್ಗಳಿಂದಂ ಮೆಯ್ಯೆಲ್ಲಮುಮಂ ನಿರಂತರಮುರ್ಚಿ ಪೋಗಿ ನೆಲನಂ [2]ತಾಪಿಸಂ ಕೀ[2]ಲಿಱಿಯೆಪಟ್ಟ ಮೆಯ್ಯನೊಡೆಯನಾಗಿಯುಂ, ಭಗವಂ—ಪಿರಿದಪ್ಪ ಪೆರ್ಮೆಯನೊಡೆಯಂ, ಗಜಕುಮಾರೋಪಿ—ಗಜಕುಮಾರನುಂ, ಪಡಿವಣ್ಣೋ—ಪೊ[3]ರ್ದಿ[3]ದೊಂ, ಉತ್ತಮಂ ಅಟ್ಠಂ—ಮಿಕ್ಕದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಸುರ[4]ಟ[4]ಮೆಂಬುದು ನಾಡಲ್ಲಿ ದ್ವಾರಾವತಿಯೆಂಬುದು ಪೊೞಲದನಾಳ್ವೊಂ [5]ವಿಷ್ಣು ಅರ್ಧಚಕ್ರಿ[5]ಯಾತನ ತಂದೆ ವಸುದೇವಸ್ವಾಮಿಯೆಂಬೊನಾ [6]ವಸುದೇವಸ್ವಾಮಿಯ[6]ರಸಿ ಗಾಂಧರ್ವದತ್ತೆಯೆಂಬೊಳಾಯಿರ್ವರ್ಗಂ ಗಜಕುಮಾರನೆಂಬೊಂ ಮಗ[7]ನಪ್ಪೊನಂತವರ್ಗಳಿಷ್ಟ ವಿಷಯಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತಿತ್ತ ಸೂರದತ್ತಮೆಂಬುದು ನಾಡಲ್ಲಿ ಪೌದನಪುರಮೆಂಬುದು ಪೊೞಲದನಾಳ್ವೊನಪರಾಜಿತನೆಂಬೊನರಸ[7]ನಾದಮಾನುಂ ಪ್ರಚಂಡ ಬಳಗರ್ವಿತನಾರುಮನುಱಿದೊಂ ವಿಷ್ಣು[8]ಗಂ ಬೆಸ[8]ಕೆಯ್ಯನೊಂದು ದಿವಸಂ ವಿಷ್ಣು ಪೊೞಲೊಳ್ [9]ಗೋಸಣೆ[9]ಯಂ ತೊೞ[10]ಲ್ಚಿ ದನಾ[10]ವನೊರ್ವಂ ಪೌದನಪುರಾಧಿಪತಿಯಪ್ಪಪರಾಜಿತನಂ ಸಂಗ್ರಾಮದೊಳ್ ಕಾದಿ ಗೆಲ್ದು ಪಿ[11]ಡಿ[11]ಕೊಂಡು ಬರ್ಕುಮಾತಂಗೆಯಾತನ ಬೇಡವುದೆಲ್ಲಮಂ ಕುಡುವೆನೆಂದು ತೊೞಲ್ವ ಗೋಸಣೆಯಂ ಗಜಕುಮಾರಂ ಪಿಡಿದೊಡಾ ಮಾತನರಸಂ ಕೇಳ್ದು ಗಜಕುಮಾರನಂ ಕರೆಯಿಸಿಯಾತನೊಡನೆ ಚಾತುರ್ದಂತ ಬಳಮಂ ಕೂಡಿಯಟ್ಟಿದೊಡಾತನುಂ ಪೋಗಿಯಪರಾಜಿತನೊಡನೆ ಮಹಾಯುದ್ಧಂಗೆಯ್ದು ಗೆಲ್ದು ಪಿಡಂಗೆಯ್ಯುಡಿಯೆ ಕಟ್ಟಿ ಗಜತುರಗವಸ್ತುವಾಹನಸಹಿತಂ ತಂದು ವಿಷ್ಣುಗೊಪ್ಪಿಸಿದೊಡಾತನುಮೊಸೆದು ನೀನ್ ಮೆಚ್ಚಿದುದಂ ಬೇಡಿ

---

1 ಭೂವಿೞಾಎ—ಸಮನೆಲ ತೆವರಂ, ಅಲ್ಲಚಮ್ಮಮಂ ಪಪಓ—ಒರ್ವನ ತೋಳಂ ತೆಗೆದು, ನಿರಖಾಇರದೇಹೋಪಿ (ಘಚಥ). 2 ತಾಂಗ (ಘಥ). 3 ಳ್ದಿ (ಕಖಗ). 4 ಥ (ಘಚಥ). 5 ವಿಷ್ಣು ಅರ್ಧಚಕ್ರವರ್ತಿ (ಗ) ವಿಷ್ಣುವರ್ಧನ ಚಕ್ರವರ್ತಿ (ಘಥ). ಅರ್ಧ ಚಕ್ರವರ್ತಿಯಪ್ಪ ವಿಷ್ಣುವೆಂಬನಾ (ಚ). 6 ತನ (ಘಚಥ). 7 (ಕಖಗ) ಗಳಲ್ಲಿ ಇಲ್ಲ. 8 ಗವಿಂಬು (ಘಚಥ). 9 ಘೋಷಣೆ (ಕಖಗ). 10 ಚ್ಚಿರ್ಯಾ (ಕಖಗ). 11 ಡಿದು ಕಟ್ಟಿ (ಘಥ).

ಕೊಳ್ಳನೆ ಪೆಱತೇನುಮನೊಲ್ಲೆನ್ ನಿಮ್ಮ ಪ್ರಸಾದದಿಂದೆನಗೆಲ್ಲಮುಂಟು ಒಂದಂ ಬೇಡ್ವೆಂ ನಿಮ್ಮಂತಃಪುರಮುೞಿಯೆ ಪೊೞಲೊಳಗೆನ್ನ ಮೆಚ್ಚಿದ ಪೆಂಡಿರನೆ ಕೊಂಡೆನ್ನಿಚ್ಛೆಯೊಳ್ ಮೆಚ್ಚಿದಂತೆ ಬಾೞ್ವೆನೀ ವಾಯಮಂ ಬೇಡಿದೆರ್ನಿದನೆನಗೆ ದಯೆಗೆಯ್ದು ಸಲಿಸುವುದೆಂದೊಡರಸನುಮಂತೆಗೆಯ್ವೆಂದು ಗಜಕುಮಾರಂಗೆ ಬೇಡಿದುದಂ ಕೊಟ್ಟಂ

ಗಜಕುಮಾರನುಂ ತನ್ನ ಬೇಡಿ[1]ದ ವರಮಂ[1] ಪೆತ್ತು ಪುರದ ಪಾರ್ವರೊಕ್ಕಲಿಗರ ಸಾಮಂತರ ಪೊೞಲೊಳಗುಳ್ಳ ಒಳ್ಳೆಂಡಿರೆಲ್ಲರಂ ಕಣ್ಗಂ ಮನಕ್ಕಂ ಮೆಚ್ಚಿದವರೊಳ್ ತನ್ನಿಚ್ಛೆಯಿ[2]ಂದಂ ಮೊಱೆದು[2]ಮೊಟ್ಟೆಯಿಸಿ[3]ಯುಯ್ದು[3]ಬಾೞುತ್ತಿರೆ ಮತ್ತಮಾ ಪೊೞಲೊಳ್ [4]ಪಂಗುಳ[4]ನೆಂಬ ಸುವರ್ಣ[5]ಗಾಱ[5]ನ ಪೆಂಡತಿ ವಸುಂಧರಿಯೆಂಬೊಳತ್ಯಂತ ರೂಪಲಾವಣ್ಯಸೌಭಾಗ್ಯಕಾಂತಿ ಹಾವಭಾವವಿಲಾಸ ವಿಭ್ರಮಂಗಳನೊಡೆಯೊಳಂ ಕಂಡು ಗಜಕುಮಾರನಾಕೆಗಾಟಿಸಿ ತನ್ನ ಮನೆಯೊಳಿಟ್ಟಾಕೆಗಾಸಕ್ತನಾಗಿ ಬಾೞುತ್ತಿರ್ಕುಮಾ ವಣಿಗನುಂ ಪೆಂಡತಿಯ ವಿಯೋಗದೊಳ್ ಸಂತಾಪದಿಂದಮಿರುಳುಂ ಪಗಲುಮನವರತಂ ಬೇ[6][ಯು][6]ತ್ತಮುಸಮರ್ಥನಪ್ಪುದಱಿಂದಂ ಮನದೊಳ್ ಗಜಕುಮಾರಂಗೆ ಮುಳಿಯುತ್ತಿರ್ಕುಂ

ಇಂತು ಪಲಕಾಲಂ ಸಲೆ ಮತ್ತೊಂದು ದಿವಸಮರಿಷ್ಟನೇಮಿ ಭಟ್ಟಾರರ ಸಮವಸರಣಂ ವಿಹಾರಿಸುತ್ತಂ ದ್ವಾರಾವತಿಗೆ ವಂದೊಡೆ ವಿಷ್ಣುವನೊಡನೆ ಗಜಕುಮಾರಂ ತ್ರಿಭುವನ ಪರಮೇಶ್ವರನಲ್ಲಿಗೆ ಪೋಗಿ ವಂದಿಸಿ ಪೂಜಿಸಿದರ್ ಭಟಾರರ್ ಧರ್ಮಮಂ ಪೇೞ್ವಲ್ಲಿಯುಗಮ್ಯಾಗಮನಂಗೆಯ್ವೊಡಂ ಪೆಱರ ಸಜ್ಜನಂಗಳೊಳ್ ಬ[7]ದ್ದೊರ್ಕಪ ಮುಯ್ದುವ[7] ದುರ್ಗತಿಗಳೊಳಪ್ಪ ದುಃಖಂಗಳಂ ಪೇೞೆ ಕೇಳ್ದು ನಾನ್ಯಥಾಜಿನಭಾಷಿತಮೆಂದು ನಂಬಿ ಭೋಗಂಗಳ್ಗೆ ಪೇಸಿ ವೈರಾಗ್ಯಮಾಗಿ ಎಲ್ಲಮಂ ತೊಱೆದರಿಷ್ಟನೇಮಿ ಭಟ್ಟಾರರ ಪಕ್ಕದೆ ತಪಂಬಟ್ಟುಗ್ರೋಗ್ರ ತಪಶ್ಚರಣಂಗೆಯ್ದು ಪನ್ನೆರಡು ವರ್ಷಂ ಪೋದೊಡೆ [8]ಗ್ರಾಮನಗರಖೇಡಖರ್ವಡ ಮಡಂಬಪಟ್ಟಣ ದ್ರೋಣಾಮುಖಂಗಳಂ[8] ವಿಹಾರಿಸುತ್ತಂ ಮತ್ತಮಾ ದ್ವಾರಾವತಿಗೆ ವಂದು [9]ಕೇವತೋ[9]ದ್ಯಾನ ವನದೊಳ್ ರಾತ್ರಿ ಪ್ರತಿಮೆನಿಂದೊನಂ ಸ್ವಜನ ಪರಿಜನ ಬಂಧುವರ್ಗಮುಂ ಶ್ರಾವಕರ್ಕಳುಂ ಬಂದರ್ಚಿಸಿ ಪೊಡೆವಂಟು ಪೋಪರಂ [10]ಪಂಗುಳ[10]ನೆಂಬ ಸುವರ್ಣಕಾರಕಂ ಕಂಡು ಬೆಸಗೊಂಡು ಭಟಾರರ ಬರವಂ ಕೇಳ್ದಱಿದು ಪಗೆ[11]ವನ[11]ನಿಱಿಯಲ್ವೆತ್ತೆನೆಂದು ರಾಗಿಸಿ ಪಲವು ನಿಡಿಯವುಂ ತೋರಮುಮಪ್ಪ ಕಬ್ಬೊನ್ನ ಕೀಲ್ಗಳಂ ಕೊಂಡು ಬಂದು ಕ್ಷಮಾಂಗನಾಲಿಂಗಿತನಪ್ಪ ಮಹಾಮುನಿಯಂ [12]ಮಲಚ್ಚ[12] ಪಟ್ಟಿರಿಸಿಯುರಃಸ್ಥಲಮಂ ನಾಭಿವರೆಗಂ [13]ವಿದಾರಿಸಿ ಪಂದೊವಲಾ ಪೊರೆತಾಪಿನೆಗಂ[13] ಸಮ[14]ಸ್ತ[14]ವಯವ

---

[1] ದುದಂ (ಛ) [2] ದ ಮಳೆದು (ಕಖಗ), ದಂ ಮಱೆದು (ಘಚ). [3] (ಘಚಛ) ಗಳಲ್ಲಿಲ್ಲ. [4] ಪಿಂಗಲ (ಘಚ), ಪಿಂಗಳ (ಛ). [5] ಕಾರ (ಘಚ), ಕಾರಕ (ಛ). [6] ವು (ಕಖಗಘಚಜ), ಡು (ಛ). [7] ದುರ್ಗಯ್ವ (ಚ), ದರ್ಡುಮೆಯ್ದುವ (ಕಖಗ). [8] (ಘ) ದಲ್ಲಿ ಇಲ್ಲ, ಗ್ರಾಮೇಕರಾತ್ರಂ ನಗರೇ ಪಂಚರಾತ್ರಮಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ ನಾನಾ ದೇಶಂಗಳಂ (ಚಛ). [9] ಪ್ರಮದೋ (ಘಚಛ). [10] ಪಿಂಗಲ (ಘಚಛ). [11] ಯ (ಕಖಗ). [12] ಮರಳ್ಚಿ (ಘಛ), ಮರಲ್ಚಿ (ಚ). [13] ಬೆಂದೋಲ್ತೊಲುಗಿದು (ಕಖಗ), ವಿದಾರಿಸಿಬಂದೊಲ್ಪರಿತಾಪಿನೆಗಂ (ಘಛ). [14] ಸ್ತ (ಕಖಗ).

ಪ್ರದೇಶಂಗಳೊಳ್ ಕಾಯ್ದ ಕಬ್ಬೊನ್ನ ಕೀಲ್ಗಳಂ ಸೆಲಸಂ ತಾಪಿಸಮುರ್ಚೆ ಪೋಗಿ [1]ೞ[1]ದೊಡ ಕ್ಷಮೆಯಂ ಭಾವಿಸಿ ಧರ್ಮಧ್ಯಾನ ಶುಕ್ಲಧ್ಯಾನಂಗಳಂ ಜಾನಿಸಿ ರತ್ನತ್ರಯಮಂ ಸಾಧಿಸಿ ಸಮಾಧಿಮರಣದಿಂ ಮುಡಿಪಿ ದೇವಲೋಕಮೆಂಬ ಪ್ರಾಸಾದಕ್ಕೆ ಕಳಸಮಾಗುತ್ತಿರ್ದ ಸರ್ವಾರ್ಥಸಿದ್ಧಿಯೆಂಬ ಸ್ವರ್ಗದೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯ ಸ್ಥಿತಿಯನೊಡೆಯನೇಕ ಹಸ್ತಪ್ರಮಾಣಮುಂ [2]ಪುಂಡರೀಕ ವರ್ಣಂಗಳನೊಡೆಯೊ[2]ನಹಮಿಂದ್ರ ದೇವನಾಗಿ ಪುಟ್ಟಿದೊಂ

ಮತ್ತಂ ಪೆಱರುಮಾರಾಧಕರಪ್ಪವರ್ಗಳ್ ಗಜಕುಮಾರನ ಮನುಷ್ಯೋಪಸರ್ಗದೊಳಾದ ವೇದನೆಯಂ ಮನದೊಳ್ ಭಾವಿಸುತ್ತಂ ಪಸಿವು ನೀರಡ್ಕೆ ದಾಹವಾತಂ ಸೂಲೆ ಮೊದಲಾಗೊಡೆಯ ವೇದನೆಗಳಂ ಸೈರಿಸಿ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸಮಾಧಿಮರಣದಿಂದಂ ಮುಡಿಪಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

---

1 ೞ (ಳ). 2 (ಕಖಗ) ಗಳಲ್ಲಿಲ್ಲ.

೪. ಸನತ್ಕುಮಾರ ಚಕ್ರವರ್ತಿಯ ಕಥೆ

ಸನತ್ಕುಮಾರ ಚಕ್ರವರ್ತಿಯ ಕಥೆಯಂ ಪೇೞ್ವಂ :

ಗಾಹೆ || [1]ಕಚ್ಛು[1]ಜರಖಾಸ ಸೋಸೋ ಭತ್ತಚ್ಛದಿ ಅಚ್ಛಿಕುಚ್ಛಿದುಕ್ಖಾಣಿ |
ಅ[2][ಧಿಯಾಸಿ][2]ದಾಣಿ ಸಮ್ಮಂ ಸಣಂಕುಮಾರೇಣ ವಾಸಸದಂ ||

[[3]ಕಚ್ಛು—ಕೆರಕುಂ, ಜರ—ನರೆಯುಂ,[3] ಖಾಸ—ಕೆಮ್ಮುಂ, ಸೋಸೋ—ಬಾಯಾ ಬತ್ತುವುದುಂ, ಭತ್ತಚ್ಛದಿ—ಛರ್ದಿಯುಂ, ಅಚ್ಛಿಕುಚ್ಛಿದುಕ್ಖಾಣೀ—ಕಣ್ಣ ಬಸಿಱ ಬೇನೆಗಳುಮೆಂದಿವು ಮೊದಲಾಗೊಡೆಯ, ಅ[ಧಿಯಾಸಿ]ದಾಣಿ—ಸೈರಿಸೆ ಪಟ್ಟುವು, ಸಮ್ಮಂ—ಒಳ್ಳಿತ್ತಾಗಿ, ಸಣಂಕುಮಾರೇಣ—ಸನತ್ಕುಮಾರ ಚಕ್ರವರ್ತಿ ರಿಸಿಯಿಂದಂ, ವಾಸಸದಂ—ನೂಱು ವರುಷಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಕುರುಜಾಂಗಣಮೆಂಬುದು ನಾಡಲ್ಲಿ ಹಸ್ತಿನಾಪುರಮೆಂಬುದು [4]ಪೊಲ[4]ದನಾಳ್ವೊಂ ವಿಶ್ವಸೇನ ಮಹಾರಾಜನೆಂಬರಸನಾತನ ಮಹಾದೇವಿ ಸಹದೇವಿಯೆಂಬೊಳಾಯಿರ್ವರ್ಗ್ಗಂ ಸನತ್ಕುಮಾರನೆಂಬೊಂ [5]ಪುಟ್ಟಿದೊನಾತಂ ಸರ್ವಲಕ್ಷಣಸಂಪೂರ್ಣಂ ಸಕಳಕಳಾಪಾರಗಂ ಚೆಲ್ವಿನಿಂ ದೇವಾಸುರರ್ಕ್ಕಳ[6]ಂ[6] ಗೆಲ್ವ ರೂಪನೊಡೆಯನಾತಂಗೆ ಕೆಳೆಯಂ ಸಿಂ[7]ಹ[7]ವಿಕ್ರಮನೆಂಬ ಸಾಮಂತನ ಮಗಂ ಮಹೇಂದ್ರಸಿಂಹನೆಂಬೊನಂತವರ್ಗ್ಗಿರ್ಸ್ವ್ಯೇಸ್ಸು ಪ್ರೀತಿಯಿಂದಂ ಕಾಲಂ ಸಲೆ

ಮತ್ತೊಂದು ದಿವಸಂ ಏಕಚಕ್ರಪುರಾ[8]ಧೀಶಂ[8] ಭೂರಾಮನಾಮಧೇಯನೆಂಬ [9]ಶತ್ರುಂದಮಂ[9] ವಿಶ್ವಸೇನ ಮಹಾರಾಜಂಗೆ ವಾಗುಡ[10]ಮನಟ್ಟೆ [10]ಪಟ್ಟೆ[11]ವಾರಮರಗಮೆಂಬ[11]ದುಷ್ಟಾಶ್ವಮಂ ಕುಮಾರನೇಱು ಲಕ್ಷ್ಮೀಗೃಹಮೆಂಬುದ್ಯಾನವನದ ಮ[12]ಧ್ಯಮಪ್ಪ[ಸ್ಥಳದೊಳ್]ಸಲ್ವನಾ ದುಷ್ಟಾಶ್ವಮಂ ಕೊಸಗೊಳೆ ಗಾಳಿಯಿಂದಂ ಬೇಗಮಾಗಿ ವಾರಿತಪೂರಿತಂ ಪರಿದು ಕುಮಾರನಂ ಕೊಂಡು ಮಹಾಟವಿಯಂ ಪೊಕ್ಕುದಿತ್ತ ವಿಶ್ವಸೇನ ಮಹಾರಾಜನ ಮಹಾಸಾಮಂತರ್ಕ್ಕಳುಂ ಪರಿವಾರಮುಮೆಲ್ಲಂ ಕುದುರೆವಡಿವಜ್ಜೆಯಂ ನೋಡಿ ನಾಡೆ*ಗೆಟ್ಟುಪೋಗಿ[12]ಮೂಱನೆಯ ದಿವಸದಂದು

---

[1] ಕಂಛಂಕಂ ಕಂಛ (ಘಚಛ). [2] ಡಿಹಾಸಿ (ಕಖಗ), ವಿಹಾಸ (ಘಚಛ). [3] ತತ್ಸ-ಕೆರಕುಂ ಜ್ವರವೆಯ್ಗಳುಂ (ಕಖಗ), ಕಂಛಂಕಂ-ಕೆರಕುಂ ಜ್ವರನರೆಯುಂ (ಛ) [4] ಪುರಮ (ಕಖಗ). [5] + ಮಗಂ (ಛ) [6] ಳ್ಕ್ರಂ (ಗ) [7] ಗ (ಕಖಘ). [8] ಧಿಪತಿ (ಕಖ) ಧಿಪಂ (ಗ). [9] ಸತ್ರುವಿಂದ್ (ಕಗ), ಶತ್ರುವಿಂದಂ (ಖ). [10] ಮಟ್ಟೆ (ಕಖಗ). [11] ವಾರತುರಗವೆಂಬ (ಗ), ವಾಂತ (ಘಛ), ವಾಹನ (ಚ). [12] ಈ ಭಾಗ (ಕಖಗ) ಗಳಲ್ಲಿ ಮಾತ್ರವಿದೆ, ಸ್ಥಲದೊಳ್ ಕುಮಾರನಂದು ದುಷ್ಟಾಶ್ವಮೆತ್ತಿಕೊಂಡು ಪೋಗೆ (ಘಚ), ಸ್ಥಿತಿಕದೊಳು (ಛ). *ಗೆಂಟು ಎಂದಿರಬಹುದೆ?

ಅಡಿವಜ್ಜೆ ಕೆಟ್ಟೊಡೆ ಪೋದ ದೆಸೆಯುಮಱಿಯದೆ ಹಾ ಪುತ್ರಾ ಎಂದು ಮಹಾ ದುಃಖಾಕ್ರಾಂತನಾಗಿ ಪ್ರಲಾಪಂಗೆಯ್ವ ನೃಪತಿಯುಂ ಮಹೇಂದ್ರಸಿಂಹಂ ಸಂತಯಿಸಿ ಇಂತೆಂದು ನುಡಿದಂ ಕುಮಾರನಂ ಪಾತಾಳಮಂ ಪೊಕ್ಕನಪ್ಪೊಡಮಱಿಸಿಕೊಂಡು ಬರ್ಪೆಂ ನಿಮ್ಮಡಿ ನೀಮುಬ್ಬೆಗಂಬಡದೆ ಮಗುೞಿಮೆಂದರಸನಂ ಮಗುೞ್ಚಿ ಪರಿವಾ[1]ರಂಬೆರಸು[1] ಮಹಾಟವಿಯುಂ [2]ಪೊಕ್ಕು[2] ತೊೞಲ್ದು ನೋ[3][ೞ್ಪಿ][3]ನಂ ಪರಿ[4]ಜನಂಗಳ್ ಕುಮಾರನನಱಸಿ ಕಾಣದೆ ಬೇಸತ್ತು ಮಹೇಂದ್ರಸಿಂಹನಂ ಬಿಸುಟ್ಟು ಪೊೞಲ್ಗೆ ಪೋದರ್

ಇತ್ತ ಮಹೇಂದ್ರಸಿಂಹನೊರ್ವನೆ ನಾನಾ ವಿಧ ಗಿರಿಗಹನ ವಿಷಯ ವಿಷಮ ಪ್ರದೇಶಂಗ[5][ಳುಮಂ][5] ವ್ಯಾಘ್ರನಿವಾಸಂಗ[5][ಳುಮಂ][5] ಯಥಾ[6]ಕ್ರಮದಿಂದಂ[6] ಕೞಿದು ಪೋಗಿ ಪ್ರಿಯಂಗು[7]ಷಂಡ[7]ಮೆಂಬ ವನಮನೆಯ್ದಿ ತದ್ವನ ಮಧ್ಯಸ್ಥ ಗೃಹದೊಳಿರು[8]ಳಿರ್ದ್ದ[8] ಮಿತ್ರನ ವಿಯೋಗದೊಳಪ್ಪ ದುಃಖದಿಂದಂ ಕಾರುಣ್ಯಮಾಗೆ ಪ್ರಳಾಪಂಗೆಯ್ದು[9]ಟ್ಟು[9] ದೇವತೆಯ ಮುಂದೆ ನಿದ್ರೆಗೆಯ್ದೊ(ನ್)ರ್ ಮನೋಹರಿಯೆಂಬ ಜಾವ[10]ದಾಗಳ್[10] ಕರಿಣೀ ಶತಂಗಳಿಂ ಪರಿವೇಷ್ಟಿತನಾಗಿ ತಿಳಿನೀರ ಕೊಳದೊಳಗೆ ಕ್ರೀಡಿಸುವ ನೊಕ್ಕಾನೆಯುಮಂ ಫಲಭರಿತಮಾದ ಮಾವಿನ ಮರನುಮಂ ಕನಸಿನೊಳ್ ಕಂಡು ಮನೋರಥ ಸಿದ್ಧಿಯಾಯ್ತೆಂದು ಒಸೆದು ಮಗುೞ್ದು ನಿದ್ರಾವಶಗತನಾದೊನಂ ಕಂಡು ಕರುಣಿಸಿ ಭೂತಾಂಬರನೆಂಬ ವ್ಯಂತರ ದೇವನೆತ್ತಿಕೊಂಡು ಪೋಗಿ ವಿಜಯಾರ್ಧ ಪರ್ವತಕ್ಕಾಸನ್ನಮಪ್ಪ ಭೂತರಮಣಮೆಂಬ ವನದ ನಡು[11]ವಿನೊಳಿರ್ದ್ದ[11] ಕ್ಷುಲ್ಲಕ ಮಾನಸಮೆಂಬ ಸರೋವರದ ತಡಿಯೊಳಿಕ್ಕಿ ಪೋದನ್

ಆಗಳಾತನುಂ ನೇಸಮ್ಮೂಡುವಾಗಳ್ ತೂಂಕಡುಗೆಟ್ಟು ದೆಸೆಗಳಂ ನೋ[12]ಟ್ಟಂ[12] ಸಮುದ್ರದೊಳೋರಂತಪ್ಪ [13]ಕೋಕನದ[13] ಕುಮುದ ಕುವಲಯ ಕಲ್ಹಾ[14]ರೇಂದೀವರಾದಿಗಳಿಂದಂ[14] ಹಂಸ ಚಕ್ರ[15]ವಾ[15]ಕ ಬಳಾಕವಿಪಕ್ಷಿ ಗಣಂಗ[16]ಳ್[16] ನೀರೊಳಗಾಡುತ್ತುಂ[17] ಮುೞುಗುತ್ತುಂ ನಾನಾ ಪ್ರಕಾರದಿಂ[18]ದಂ ಮಾ[18]ಱುಲಿವ ದನಿಗಳಿಂದ ನುತಿರಮಣೀಯಮಪ್ಪ ಕೊಳನಂ ಕಂಡಾದಮಾನುಂ ವಿಸ್ಮಯಚಿತ್ತನಾಗಿ ಆ ಭೂತರಮಣಮೆಂಬ ವನದೊಳಶೋಕ ಪುನ್ನಾಗ ವಕುಲ ಚಂಪಕನಹಕಾರಲವಂಗ ಕ್ರಮುಕ ನಾಳಿಕೇರನಾಗವಲ್ಲೀ[19]ಪ್ರಸಿದ್ಧ[19]ದ್ರುಮಷಂಡ ಮಂಡಿತ[20]ಮನಿಂ[20]ದ್ರವನದೊಳೋರಂತಪ್ಪುದಂ ನೋಡುತ್ತುಂ ತೊೞಲ್ವೊಂ ತನಗನುಕೂಲಮಪ್ಪ ಶಕುನನಿಮಿತ್ತಂಗ[21][ಳುಮಂ][21] ಕಂಡಿಂದಮೋಘಮೆನ್ನ ಸ್ವಾಮಿಯುಂ ಕಾಣ್ಬೆನೆಂದು ಸಂತುಷ್ಟಚಿತ್ತನಾಗಿಯಾ ಬನದ ನಡುವೆ ತೊೞಲ್ವೊಂ ಮೃದುಮಧುರಗಂಭೀರಧ್ವನಿಯೊಳ್

1 ರಜನಂಗಳಿಂ ಬೆರಸಿ (ಕಖಗ). 2 (ಕಖಗ) ಗಳಲ್ಲಿಲ್ಲ. 3 ಪ್ರ್ಗ (ಕಖಗ). 4 + ವಾರ (ಕಖಗ). 5 ಳ್ತುಂ (ಸ). 6 ಮಂಗಳಿಂ (ಕಖಗ). 7 ಷ್ರ (ಘಚಛ). 8 ಳ್ (ಘಚ). 9 ತ್ತು (ಕಖಗಛ). 10 ದೊಳ್ (ಘಚ). 11 ವೆ (ಚಛ) 12 ಳ್ಳನ್ನೆಗಂ (ಚ). 13 ಕೊಳದ (ಘ) 14 ರ ಕಲ್ಹಾಮರೇಂದ್ರ ದೇವಾದಿಗಳಿಂದಂ (ಕಖಗ) 15 ಬ (ಘ). 16 ಳಿಂದಂ (ಕಖಗ). 17 + ಮೂಡುತ್ತುಂ (ಘಚಛ). 18 ದವ (ಕಖಗ). 19 ವಿನಮ್ರ (ಘಚಛ) 20 ಮಹೇಂ (ಕಖ). 21 ಳ್ತುಂ (ಸ).

ಕೂಡಿದ ಮೃದಂಗವಂಶ ತಾಳಾದಿಗಳ ಧ್ವನಿಗ[1][ಳುಮಂ][1] ಮಂದ್ರತಾರಲಯಾನ್ವಿತಮಾಗೆ[2] ಕಿವಿಗಂ ಮನಕ್ಕಂ ಸೊಗಯಿಸುವಂತಪ್ಪ [3]ಪಾಟಮು[3]ಮಂ ಕೇಳ್ದು ಹರಿಚಂದನ ಕಾಳಾಗರು ಮಲಯಜ ತುರುಷ್ಕಾದಿಗಳ ಕಂಪು ಬಂದು ತೀಡಿದೊಡಿದು ದೇವನಿವಾಸಮಕ್ಕುಮೆಂದು ಬಗೆದು ಭಯಾಶ್ಚರ್ಯದಿಂದಂ ವ್ಯಾಕುಳಿತ ಮನದೊನಾಗಿ ಇನ್ನಿದನಮೋಘಂ ನೋಡ್ವೆನೆಂದಾ ದೆಸೆಗಾಗಿ [4]ಸಲ್ವನಾಂ[4] ಕನತ್ಕನಕವಿನಿರ್ಮಿತಮಂ ನಾನಾಮಣಿಗಣ [5]ವಿನದ್ಧಮುಂ ಚಳತ್ಕೇತುಪತಾಕಾದ್ಯಮಂ[5] ವಿದ್ಯಾಧರ ಯುವತೀ ಜನಕ್ರೀಡನಾರ್ಥಮಪ್ಪ ಪ್ರಾಸಾದಮುಮಂ ಕಂಡು ವಿಸ್ಮಯಚಿತ್ತನಾಗಿಯದಱ ಸಮೀಪಕ್ಕೆ ಸಾರ್ದೊಂದು ಮರನಂ ಮಱೆಗೊಂಡು ನೋಡ್ಪೊಂತತ್ಪುರಃಸ್ಥಿತಮಪ್ಪ ಮಣಿಮಂಟಪದೊಳ್ ದಿವ್ಯಸ್ತ್ರೀಜನಂಗಳ್ [6]ವಿಲಾಸದಿಂ[6] ಚಾಮರವಿಕ್ಕೆ ದಿವ್ಯಶಯ್ಯಾತಳದ ಮೇಗಿರ್ದು ನಾಟಕಮಂ ನೋಡ್ಪ ಕುಮಾರನಂ ಕಂಡು ಹರ್ಷಚಿತ್ತದಿಂದಂ ಕುಸುಮಿತ ಕದಂಬ ವೃಕ್ಷಂಬೊಲ್ ಕಂಟಕಿತ ರೋಮಾಂಚಿತ ಗಾತ್ರನಾಗಿ[7] ಪರಿದು ಪೊರ್ನಂ [8]ಕಂಡಿದಿರೆ[9]ಯ್ದು[ಯಾ][9]ತನುಂ ಕುಮಾರನ ಚರಣಾರವಿಂದಂಗಳ್ಗೆ[10]ಱಗಿ ಬಿರ್ದು ಮೂರ್ಛಾಗತನಾದೊಡಾಗಳ್ ಶೀತಳ ಕ್ರಿಯೆಗಳಿಂದೆಚ್ಚತ್ತುಱುದಿಂಗ[11]ಳಿಂ[11] ಕಂಡೆಂ ಸ್ವಾಮಿ [12]ನಿನ್ನಂ ನೆಂಬಿರ್ದೆ[12]ನಾನೆಂದು ಮಹಾ ದುಃಖದಿಂದಳ್ವನಂ ಸಂತಯಿಸಿ ವಿಪುಳಶ್ರೀಯೆಂಬ[13]ವಿದ್ಯಾಧರ[13]ವಿಳಾಸಿನಿಯಂ ಕರೆದಿಂತೆಂದು ಪೇಳ್ದನೆನ್ನ ಸಹೋದರನೆಂತುಂ ಶ್ರಮಮಂ ನೀಗಿ ಸುಖದಿಂ ತಣಿದೊನಕ್ಕುಮಂತಾಗೆ ಸ್ನಾನಪಾನಭೋಜನಾದಿ ಕ್ರಿಯೆಗಳಿಂ ಬೇಗಂ ಮಾಡೆಂದು ಪೇಳ್ದೊಡಾಕೆಯುಮಂತೆಗೆಯ್ವೆನೆಂದಾತನಂ ಮಹಾ ವಿಭೂತಿಯಿಂದಂ ವಿದ್ಯಾಧರ ವಿಲಾಸಿನಿ ಮಜ್ಜನಂಬುಗಿಸಿ ದಿವ್ಯಾಹಾರಮನೂಡಿ ವಸ್ತ್ರಾಭರಣ ಗಂಧಮಾಲ್ಯಾದಿ ತಾಂಬೂಲಾದಿಗಳಿಂ ತಣಿಪಿದಾಗಳಾತನುಂ ಮುನ್ನಿನ ದುಃಖಮೆಲ್ಲಮಂ ಮಱೆದಂ ಮುನ್ನಂ ಕ್ಲೇಶಭಾಗಿಯಪ್ಪ ಪುರುಷಂ ಸ್ವರ್ಗಮನೆಯ್ದಿ [14]ಮಾಱ[ಪ್ಪೊ]ಲೆ[ಆ]ಯ್ತು[14]ಗಳಲ್ಲಿಂ ಒಂದು ಕುಮಾರನೋರಾಸನದೊಳಿರ್ದು ಸರ್ವಾಭರಣ ಭೂಷಿತನಾಗಿ ನೇತ್ರ ಮನೋ[15]ಹರಿಯೆಂಬ[15] ದಿವ್ಯ ಸಭೆಯುಮಂ ನೋಡಿ ವಿಸ್ಮಯಚಿತ್ತನಾಗಿ ಇಂತೆಂದಂ ಸ್ವಾಮಿ ವ್ರತಶೀಲೋಪವಾಸ ತಪಶ್ಚರಣ ಸಂನ್ಯಸನಾದಿ [16]ಶುಭಾ[16]ನುಷ್ಠಾನ ಕ್ರಿಯೆಗಳಿಂ ಸತ್ಪುರುಷಂ ಮಱುಭವದೊಳ್ ದೇವಾಂಗನೆಯ[17]ರ್ಕಳ್[17]ಱೆಯನಕ್ಕುಂ ನೀಮಿಾಭವದಿಂದಿಂತಪ್ಪ ವಿಭವಮನೆಯ್ದಿದಿರೆನಗೆ ಮಹಾವಿಸ್ಮಯಮೆನೆ ಕುಮಾರನಿಂತೆಂದನಿವರ್ಗಳ್ ದೇವಕನ್ನೆಯರಲ್ಲರ್ ವಿದ್ಯಾಧರಿಯರ್ಕಳೆನೆ ಇವರ್ಗಳಂ ನೀನೆಂತು

---

1 ಳ್ತ್ರಂ (ನ). 2 + ಪಾಡುವಂ (ಕಖಗ). 3 ಗೀತಮು (ಘಚಛ). 4 ಸಾರ್ವಂ (ಘಚಛ) 5 ವಿನದಮುಪ್ಪ ಪಲತೆಱದ ಕೌತುಕಮಂ (ಘಚಛ). 6 ಲಟಹದಿಂ (ಘಚಛ) 7 + ಮಹೇಂದ್ರಸಿಂಹಂ (ಘಚಛ). 8 + ಸನತ್ಕುಮಾರಂ (ಘಚಛ). 9 ಳ್ದು ಮಾ (ಕಖಗ), ಯ್ದುಮಾ (ಖ), ಳ್ದು ಬಂದ (ಘಚಛ). 10 + ಮಹೇಂದ್ರಸಿಂಹನೆ (ಘಚಛ). 11 ಳಿಂಗೆ (ಘಚಛ) 12 ನಿನ್ನಿಂ ಬಾಳ್ವೆ (ಘಚಛ). 13 ಬಿಂಬಾಧರ (ಘಚಛ). 14 ಮಾಱಿಪ್ಪೊಲೆಯಾ (ಗ), ಮಾಱಿಪ್ಪೊಲೆಂದಾ (ಕಖ), (ಘಚಛ). 15 ಹಾರಿಯಪ್ಪ (ಘಚಛ). 16 ಸುಖಾ (ಕಖಗ). 17 ರ್ಗೆ (ಘಚಛ).

ಪೆತ್ತಿರಲ್ಲಿ ಮೋಹಾವ ಸ್ವರೂಪದಿಂ ಬಂದಿರ್ದನೆನಗೆ ತಿಳಿಯೆ ಪೇೞಿಮೆನೆ ಕುಮಾರ ನಿರುಳೆಲ್ಲಮತಿರಂಜನೆಯೆಂಬ ನಾಟಕಮುಮಂ ನೋಡಿ ನಿದ್ರಾಸುಖಮುಮಂ [1]ಪೆಱದೊನಾ[1] ಕಮಳಮತಿಯೆಂಬ ವಿದ್ಯಾಧರ ವಿಳಾಸಿನಿಯುಂ ವಿದಗ್ಧೆಯುಂ ಕರೆದೆನ್ನ ಸಂಬಂಧಿಯಪ್ಪ ಕಥೆಯೆಲ್ಲಮುಮಂ ಮಹೇಂದ್ರಸಿಂಹಂಗೆ ಪೇೞೆಂದು ನಿದ್ರಾವಶಗತನಾಗಿ ವಾಸಗೃಹಮಂ ಪೊಕ್ಕು ನಿತ್ರಾಕೆಯುಮಾತಂಗಿಂತೆಂದು ಪೇೞಲ್ ತಗುಳ್ದಳ್

ಕುಮಾರನಿಂದಾರೂಢಮಪ್ಪ ದುಷ್ಟಾಶ್ವಂ ಕುಮಾರನಂ ಕೊಂಡು ಮನೋವೇಗದಿಂ ಗಿರಿ ವನ ದರಿ ನದೀಪ್ರದೇಶಂಗಳೊಳ್ ಮೂಱುದಿವಸಮಿರುಳುಂ ಪಗಲುಂ ಪರಿಯುತ್ತಿರ್ದುದು ಕರುಳ್ ಪಱಿದು ತೆಗಲೆಯೊಡೆದು ಕಾಲಂಗೆಯ್ವುತ್ತಾಗಳ್ ಕುಮಾರನುಂ ಪಸಿವುಂ ನೀರಡ್ಕೆಯುಂ[2]ದವಾದದಂ ಬಾಧಿಸೆಪಟ್ಟು[2] ಬಸಮುಳಿದು ಪಿರಿದೊಂದಾಲದ ಮರದ ಕೆೞಗೆ ಶಿಲಾತಳದ ಮೇಗೆ [3]ಪಟ್ಟಿರ್ದ[3]ನಾಗಳಲ್ಲಿಯಾ ವಟವೃಕ್ಷವಾಸಿಯಪ್ಪ ಮನೋಹರನೆಂಬ ಯಕ್ಷಂ ಕಂಡೀ ಪುರುಷಂ ಸಕಲಚಕ್ರವರ್ತಿಯಪ್ಪನೆಂದಱಿದು ಗಂಧೋದಕಮುಮಂ ಮೇಲೆ ತಳಿದು ತಣ್ಣಾಳಿಯುಂ ಪಿಗುಪ್ಪಿರ್ದ ದೇಹಕ್ಕಾಪ್ಯಾಯನಂ ಮಾಡೆ ಸ್ವರ್ಣ ಭಾಜನದಿಂದಾಮೋದ ಸುಗಂಧಮಪ್ಪ ಕೋಡುವ ನೀರನಾತಂಗೆ ಕುಡಿಯಲೆಱೆದನಾಗಳ್ ಕುಮಾರಂ ನೀನಾರ್ಗೆ ನೀರನೆಲ್ಲಿಂ ತಂದೆಯ್ ಪೇೞೆಂದು ಬೆಸಗೊಂಡೊಡಾತನಿಂತೆಂದನಾನೀ ವಟವೃಕ್ಷನಿವಾಸಿಯೆನ್ ಮನೋಹರನೆಂಬ ಯಕ್ಷನೆನ್ ಕ್ಷುಲ್ಲಕಮಾನಸಮೆಂಬ [4]ಸರೋವರದಿಂ[4] ತಂದೆನೀ ನೀರನನೆ ಅಂತಪ್ಪೊಡೆ ನೀನೆನ್ನನಾ ಕೊಳ[5]ಕ್ಕೊಡಗೊಂಡು[5] ಪೋಗಲ್ಲಿಯಾ ನೀರಂ ಮಿಂದು ಕುಡಿದೊಡಲ್ಲದೆನಗೆ ನೀರಡ್ಕೆ ಕಿಡದೆಂದು ಪೇೞ್ದೊಡೆ ಕುಮಾರನನೆತ್ತಿಕೊಂಡು ಪೋಗಿ ಯಕ್ಷನಾ ಸರೋವರದ ತಡಿಯೊಳಿ[6]ೞಿ[6]ಸಿ ಪೋದನ್

ಆ [7]ಅವಸರದೊಳ್[7] ಸಿತಯಕ್ಷನೆಂಬ ವ್ಯಂತರದೇವಂ [8]ಕುಮಾರನ ಪೂರ್ವವೈರಿ ಭೌಮವಿಹಾರಕ್ಕೆ ಬಂದು ಕುಮಾರನಂ ಕಂಡು ಕ್ರೋಧಾಗ್ನಿ ಪೆರ್ಚ್ಚೆ ಭೈರವ ರೂಪಧಾರಿಯಾಗಿ ಕಳಕಳಧ್ವನಿಯಿಂದಂ ಗರ್ಜಿಸಿ ಬರ್ಪ್ಪನಂ ಕಂಡಾಗಳ್ ಸಿಂಹನಾದಂಗೆಯ್ದು ಬೆಟ್ಟಸನ್ನಿಭಮಪ್ಪ ಮಹಾಶಿಲೆಯಂ ಕಿೞ್ತೆತ್ತಿಕೊಂಡು ಪ್ರತಿರಾಕ್ಷಸಂಬೊಲ್ ನಿಂದ ಕುಮಾರನಂ ನೋಡಿ ವ್ಯಂತರದೇವಂ[8] ನಾಗಪಾಶದಿಂದಂ ವೇಷ್ಟಿಸಿದೊಡೆ ಕುಮಾರನದಂ ಹಸ್ತತಳದಿಂ ಪಱಿಯೆ ಪೊಯ್ದನಾಗಳಾ ದೇವಂ ನಾನಾವಿಧ ಮಾಯಾ ಯುದ್ಧಂಗಳಿಂ ಕಾದೆ ಕುಮಾರನಂ ಯಷ್ಟಿ ಮುಷ್ಟಿ ಪ್ರಹಾರಾದಿಗಳಿಂ ಗೆಲ್ವುದೊರ್ವನನೆತ್ತಿಕೊಂಡು ಸಮುದ್ರದ ಬಡವಾಮುಖದೊಳಿಕ್ಕಿ ಕೊಲ್ವೆನಮೋಘನೆಂದು ನೆಲದಿಂದು[9]ರ್ಚಿ[9] ಬಂದಾಕಾಶಕ್ಕೆ ನೆಗಪಿದೊನ ಸ್ಕಂಧಮಂ ತಿವಿದೊಂ ಕುಮಾರನ [10]ಅನ್ಯಷ್ಟಿ ವಜ್ರಘಾತಂಬೊಲಪ್ಪ[10] ಮುಷ್ಟಿಯಿಂ ದಿವ್ಯಪುರುಷನ

[1] ಪಿರಿದೊಂವ (ಕಖ), ಪಿರಿದೊಂವ (ಗ), ಪಿಱಿದೊನನಾ (ಘಛ). [2] ಸೇದೆವಟ್ಟು ಮಱೆವಂತಾ (ಘಚಛ). [3] ನಿದ್ರೆಗೆಯ್ದ (ಕಖಗ). [4] ಕೊಳದಿಂ (ಘಚಛ). [5] ಕ್ಕೆ ಕೊಂಡು (ಕಖಗ). [6] ರಿಸಿ (ಚಛ). [7] ಸರೋವರದೊಳ್ (ಘಚಛ). [8] (ಘಚಛ) ಗಳಲ್ಲಿ ಇಲ್ಲ. [9] ಚ್ಚಿ (ಕಗ). [10] ನುಂ ಆಮುಷ್ಟಿ ವಜ್ರಘಾತಮೆಂಬೊಲಾ (ಕಗ), ನವಜ್ರಘಾತಂಬೊಲಪ (ಘಚಛ)

ಹಸ್ತ ಪ್ರಹಾರಮೆಂಬ [1]ಮುದ್ರಾಪೀಡೆಯಿಂ[1] ತ್ರಸ್ತಾ[2]ಭಿಭೂ[2]ತನಾಗಿ ಬೆಸ್ಸಿತ್ತೋಡಿದ ನಾಗಳ್ ತನ್ನಿವಾಸಿಗಳಪ್ಪ ಯಕ್ಷಕಿನ್ನರಾದಿಗಳ್ ಮಸ್ತಕದೊಳ್ ನ್ಯಸ್ತಹಸ್ತರ್ಕ್ಕಳಾಗಿ ಜಯಜಯ [3]ಶಬ್ದಂಗಳಿಂದಂ[3] ಪು[4]ಷ್ಪಾ[4]ದಿಗಳಿಂ ಕುಮಾರನಂ ಪೂಜಿಸಿದರ್

ಆ ಅವಸರದೊಳಿಂದ್ರಪ್ರಭನೆಂಬ ವಿದ್ಯಾಧರಂ ಬಂದು ಕುಮಾರನ ಚರಣಾರವಿಂದಂಗಳ್ಗೆಱಗಿ ಪೊಡೆವಟ್ಟಿಂತೆಂ[5]ದನಾ ಸ್ವಾ[5]ಮಿ ಮೂವ[6]ತ್ತಾಱು[6] ವರುಷಂ ನಿನ್ನ ಬರವನಾನೆಮ್ಮರಸನ ಬೆಸದಿಂ ಪಾರುತ್ತಿರ್ದ್ದೆಂ ನೀನೆನ್ನ ಭಾಗ್ಯದಿನಿಲ್ಲಿಗೆ ಬಂದಯಾ ಏಱು ವಿಮಾನಮನೆನೆ ಅಂತೆಗೆಯ್ವೆನೆನ್ನ ಬಯಕೆಯುಂ ತೀರ್ಚಿ[7]ದ ಒಟ್ಟಿಕ್ಕೋ[7]ಱುವೆನೆಂದು ಕೊಳನಂ ಪೊಕ್ಕು ಸ್ವೇಚ್ಛೆಯಿಂ [8]ಕ್ರೀಡಿಸಿ[8] ಪೊಱಮಟ್ಟನನಾ ಖೇಚರಂ ಕೊಂಡು ಪೋಗಿ ತದ್ವನದೊಳತಿ ರಮಣೀಯಮಪ್ಪ ಪ್ರದೇಶದೊಳಾಡುತ್ತಿರ್ದ್ದ ವಿದ್ಯಾಧರ ಕನ್ನೆಯರ್ಕ್ಕಳ ಪಕ್ಕದಿರಿಸಿ ಪೋದನ್ ಇತ್ತ ಖೇಚರ ಕನ್ನೆಯರ್ಕ್ಕಳ ಕಣ್ಗಳೆಂಬ ಮೀನಂಗಳ್ ಕುಮಾರನ ರೂಪೆಂಬ ಗಾಳದಿಂ ತೆಗೆಯೆಪಟ್ಟು [9]ತಪನ[9] ತಾಪನ ದಹನ ವ[10]ಮೋಹನ ಮ[10]ರಣ ಸ್ವರೂಪದ ಕಾಮ ಶರಂಗಳವಗ್ಗಳಿಸೆಯಸುರ್ಚಿಪೋಗಿ ಪರವಸೆಯರಾಗಿ ಮಱುಗಿದೞುನೀರ ಮೀನಂಗಳ್ವೊಲಾದರದೇಂ ಚೋದ್ಯಮೊ ಕುಸುಮಬಾಣನ ಬಲ್ಲ್ಮೆ

ಶ್ಲೋಕ|| ಅಹೋ ಧನುಷಿ ಕೌಶಲ್ಯಂ ಮನ್ಮಥಸ್ಯ ಮಹಾತ್ಮನಃ |
ಅಸ್ಪೃಶನ್ನಪಿ ಗಾತ್ರಾಣಿ ಭಿನತ್ತ್ಯಂತರ್ಗತಂ ಮನಃ ||

ಇವರ್ಗ್ಗಳ್ [11]ತ[11]ನ್ಮುಖ ನಿರೀಕ್ಷಣದೊಳಾಸಕ್ತೆಯರಾಗಿರ್ದ್ದರಾಗಳಾ ಇಂದ್ರಪ್ರಭನೆಂಬ ವಿದ್ಯಾಧರಂ ಪ್ರಿಯ[12]ಸಂಗ[12]ಮಮೆಂಬ ಪೊಱಲನೆಯ್ದಿ ಭಾನುವೇಗನೆಂಬ ವಿದ್ಯಾಧರಂಗೆ ಪೇೞ್ದನಾದೇಶ ಪುರುಷನಂ ತಂದು ಭೂತರಮಣದ ಜ್ಯೋತಿರ್ಗ್ಗತಾನಮೆಂಬ ಮಣಿಮಂಟಪದೊಳ್ ಕನ್ನೆಯರ ಪಕ್ಕದಿರಿಸಿ ಬಂದೆನೆನೆ ಆಗಳಾತಂಗೆ ತಣಿವಿನೆಗಂ ತುಷ್ಟಿದಾನಂಗೊಟ್ಟು ವಿಪುಳಶ್ರೀಯೆಂಬ ಖೇಚರಿಯುಂ ಕರೆದಿಂತೆಂದಂ ಶೀಘ್ರಂ ಪೋಗಿ ಕೀರ್ತಿಧವಳಂಗೆ ಭೋಜನಾದಿ ವಿಧಿಯಂ ಮಾಡೆಂದು ಪೇೞ್ದೊಡಾಕೆಯುಮಂತೆಗೆಯ್ವೆನೆಂದು ಸಪರಿವಾರಂಬೆರಸು ಬಂದಾತಂಗೆ ಮಜ್ಜನ ಭೋಜನ [13]ಪ್ರಸಾಧ[13]ನಾದಿಗ[14]ಳುಮಂ ಮಾಡಿ[14] ಮತ್ತೆ ಕುಮಾರನಂ ದಿವ್ಯಶಯ್ಯಾತಳದೊಳ್ ಸುಖದಿನಿರಿಸಿ ಅನಂಗ[15]ಸುಂ[15]ದರಿಯೆಂಬ ವಿದ್ಯಾಧರಿಯನಾಡಪೇೞ್ದು ನಾಟಕಮ[16]ನಭಿನಯಿ[16]ಸುತ್ತಂ ಕುಮಾರನ ಮುಂದೆ ವಿನಯಾನ್ವಿತೆಯಾಗಿರ್ದ್ದಳಂ ಕುಮಾರಂ ನೋಡಿ ಇಂತೆಂದಂ ನೀಮೆನಗೇದೃಗ್ವಿಧಮಪ್ಪುಪಕಾರಮನೇಕೆ ಗೆಯ್ದಪ್ಪಿರ್ ನೀಮೇನಾರ್ಗ್ಗಳೆಂದು ಬೆಸಗೊಂಡೊಡಾಕೆಯಿಂತೆಂದಳ್

---

1 ಮಹಾಮುದ್ರೆಯಂ ಪಿಡಿಯೆ (ಘಚಛ) 2 ಭೀ (ಕಖಗ). 3 ನಿನಾದಪೂರ್ವಕಂ (ಘಚಛ), 4 ಜ್ವಾ (ಕಖಗ). 5 ದನಾ (ಸ—ಛ.) 6 ತ್ತು (ಘಚಛ). 7 ದೊಡೇ (ಛ). 8 ನೀರಂಕುಡಿದು (ಘಚಛ) 9 ತೊಟ್ಟನೆ (ಘಚಛ), ತರ್ಪಣ (ಖ). 10 ರಹಕಾ (ಘಚಛ) 11 ಮ (ಕಖಗ). 12 ವಂಶ (ಘಛ) 13 (ಘಚಛ) ಗಳಲ್ಲಿಲ್ಲ 14 ಳಿಂ ಸಂತೊಸಂಬಡಿಸಿ (ಘಚಛ). 15 ಸಾಂ (ಕಖಗ). 16 ನಾಡಿ (ಘಛ).

ಕೇಳ್ ಪೇೞ್ವೆಂ ಸ್ವಾಮಿ ವಿಜಯಾರ್ಧ ಪರ್ವತದೊಳ್ ಪ್ರಿಯಸಂಗಮ ಪುರಾಧಿಪತಿಯಪ್ಪ ಭಾನುವೇಗನೆಂಬ ವಿದ್ಯಾಧರಂಗೆ ಶ್ರೀಮಾಲೆ ಮೊದಲಾಗೊಡೆಯ ಮಹಾದೇವಿಯರೆಣ್ಬರವರ್ಗ್ಗೆ ಪುಟ್ಟಿದೋರೀಯೆಣ್ಬರುಂ ಕನ್ನೆಯರ್ಕಳ್ ಲ[1]ಕ್ಷ್ಮೀ[1]ಮತಿ ಕನಕಕಾಂತೆ ಮಂದಾರಸೇನೆ ಅಳಕೆ ಅಲಂಭೂಷೆ ಹೇಮವತಿ ಹೇಮಮಾಳಿನಿ ವಿಜಯಾರ್ಧವತಿಯೆಂದೀ ಪೆಸರ್ಗಳನೊಡೆಯರೆಣ್ಬರುಂ ಮ[2]ಕ್ಕ[2]ಳನಾರ್ಗೆ ಕುಡುವ ಮೆಂದೊಂದು ದಿವಸಂ ನೈಮಿತ್ತಿಕನಂ ಭಾನುವೇಗಂ ಬೆಸಗೊಂಡೊಡಾತನಿಂತೆಂದಂ ಕ್ಷುಲ್ಲಕಮಾನಸಮೆಂಬ ಕೊಳದೊಳ್ ಸಿತಯಕ್ಷನೆಂಬ ದೇವನಂ ಸಂಗ್ರಾಮದೊಳಾವೊಂ ಗೆಲ್ಗುಮಾತಂಗೆ ಕೂಸುಗಳಂ ಕುಡಿಮೆಂದು ಪೇೞ್ದನದಱಿಂ ನೀನೆಮ್ಮ ಸ್ವಾಮಿಯೆಂದು ಪೇೞ್ದವಸರದೊಳ್ ಮಹಾವಿಭೂತಿಯಿಂ ಬರ್ಪ್ಪ ಖೇಚರೇಂದ್ರನಂ ತೋಱಿದೊಡೀತಂ ನಿಮ್ಮ ಮಾವನೆಂದಾಗಳ್ ಕುಮಾರನುಮಿದಿರೆೞ್ದು ತದ್ಯೋಗ್ಯಮಪ್ಪ ವಿನಯಮಂ ಗೆಯ್ದಿರ್ದೊನಂ[3] ವಿದ್ಯಾಧರೇಂದ್ರಂ ಕುಮಾರನಂ ನೋಡಿ ತ್ರಿಭುವನಕ್ಕೆಲ್ಲಂ ತಿಳಕಮಾಗಿರ್ದ್ದಳಿಯನಂ ನಾನೆ ಪೆ[4]ತ್ತೆ[4]ನೆಂದಾದಮಾನುಂ ಸಂತುಷ್ಟಚಿತ್ತನಾಗಿ ಕುಮಾರನಂ ಕೊಂಡುಪೋಗಿ ತನ್ನ ಪೊೞಲಂ ಪೊಕ್ಕಾ ದೆವಸದೊಳೆಣ್ಬರಾ ಕನ್ನೆಯರ್ಕ್ಕಳಂ ಕೈನೀರೆಱೆದು ಕುಮಾರಂಗೆ ಕೊಟ್ಟಂ ಕುಮಾರನುಂ ದಿವ್ಯಾಂಗನೆಯರ್ಕ್ಕಳೊ[5]ಡನೆ[5] ಸುಖದಿಂ[6]ದೊಂದಿದ[6]ನಾಗಳೊಂದು ವನದೇವತೆ ಬಂದು ಸುನಂದೆಯೆಂಬ ಕನ್ನೆಯ ದುಃಖಮಂ ಕಾಣಲಾಱದೆ ಕರುಣಿಸಿ ಕುಮಾರನನೆತ್ತಿಕೊಂಡು ಪೋಗಿ ಹರಿಕೂಟಮೆಂಬ [7]ಪರ್ವತದ[7] ಜ್ಯೋತಿರ್ವನದೊಳ್ ದಿವ್ಯಶಯ್ಯಾತಳಮಂ ವಿಗುರ್ವಿಸಿಯದಱ ಮೇಗೆ ಕುಮಾರನನಿಟ್ಟು ಪೋದೊಡಾತನುಂ ಪ್ರಭಾತಸಮಯದೊಳೆೞ್ಚತ್ತು ದೆಸೆಗಳಂ ನೋಡುವನಾ ವನಮುಮಂ ತನ್ನಿರ್ದ್ದ ಲತಾ[8]ಮಂಟಪ[8]ಮುಮಂ ನೋಡಿ ಎನಗಿದು ಮಹಾ ವಿಸ್ಮಯಂ ರಾತ್ರಿಯೊಳ್ ವಿವಾಹಕಲ್ಯಾಣಮೆನಗೆ ಸ್ವಪ್ನದೊಳಾದುದೊ ನಿರುತ[9]ಮೊ[9] ಎಂದು ಸಂ[10]ದೇಹ[10]ಚಿತ್ತನಾಗಿ ತನ್ನ ಕೈಯೊಳ್[11]ಕಟ್ಟಿದ[11] ಕಂಕಣಮಂ ನೋಡಿಕಂಡು ಕುಮಾರನಿಂತೆಂ[12]ದು ಬಗೆದಂ[12]

ಶ್ಲೋಕ॥ ಭವಿತವ್ಯಂ ಭವತ್ಯೇವ ಕರ್ಮಣಾಮೇಷ ನಿಶ್ಚಯಃ।
ವಿಪತ್ತೌ ಕಿಂ ವಿಷಾದೇನ ಸಂಪತ್ತೌ ವಿಸ್ಮಯೇನ ಕಿಂ॥

ಎಂದಿಂತು ವಸ್ತುಸ್ವರೂಪಮಂ ಕುಮಾರಂ ಬಗೆಯುತ್ತಿರ್ಪಿನೆಗಂ ದೂರಾಂತರದೊಳ್[13]ಸಂಛ[13]ನ್ನಮಾಗುತ್ತಿರ್ದ್ದ [14]ವನದೊಳಿರ್ದ[14] ಕನ್ನೆಯಿಂತೆಂದು ಪುಯ್ಯಲಿಟ್ಟಳ್ ಸಾಕೇತಪುರಾಧಿಪತಿಯಪ್ಪ ಸುರಧನೆಂಬರಸಂಗಂ ಚಂದ್ರ[15]ಯಶಿ[15]ಯೆಂಬ ಮಹಾದೇವಿಗಂ ಪುಟ್ಟಿದೆನ್ ಸನತ್ಕುಮಾರನ ಭಾರ್ಯೆಯೆನ್ ಸುನಂದೆಯೆನೆಂಬೆನೆನ್ನನನ್ಯಾಯದಿಂ ವಜ್ರವೇಗನೆಂಬ ವಿದ್ಯಾಧರಂ ತಂದಂ ಕಿನ್ನರ ಕಿಂಪುರುಷ ಗರುಡ ಗಂಧರ್ವ ಯಕ್ಷರಾಕ್ಷಸಾದಿ ದೇವರ್ಕ್ಕಳಿರಾ ವಿದ್ಯಾಧರರ್ಕ್ಕಳಿರಾ ಶರಣಾಗಿಮಾರ

---

[1] ಕ್ಷ (ಕಖ). [2] ರ್ಕ್ಕ (ಕಖಗ). [3] ಯ್ದಿಳ್ದನಂ (ಕಖಗ). [4] ೞ್ತೆ (ಕಗ). [5] ಳುಂತಾನುಂ (ಕಖಗ) [6] ನಿದ್ರೆಗೈದ (ಘಚಛ). [7] (ಘಚಛ) ಗಳಲ್ಲಿಲ್ಲ. [8] ವನ (ಕಖಗ). [9] ಮೇಯಾದುದೊ (ಕಖಗ). [10] ದೆಗ (ಕ), ತುಷ್ಟ (ಚಛ). [11] (ಘಚಛ) ಗಳಲ್ಲಿಲ್ಲ. [12] ದಂ (ಘಚಛ). [13] ಸ್ವಚ್ಛ (ಕಗ). [14] (ಕಗ) ಗಳಲ್ಲಿಲ್ಲ. [15] ಲೇಖೆ (ಘಚಛ).

ಪ್ಪೊಡಮೆನ್ನಂ ರಕ್ಷಿಸಿಮೆಂಬ ಕಾರುಣ್ಯಸ್ವರಮಂ ಕೇಳ್ದಾಶ್ಚರ್ಯಮನದೊನಾಗಿ ದೆಸೆಯಂ ನೋಡಿ ಸಲ್ವೊಂ ಸ್ಫಟಿಕಮಯಮಪ್ಪ ಶಿಲಾ[1]ಗೃಹ[1]ದ ಕೆೞಗಿರ್ದ್ದ [2]ಯಕ್ಷ[2]ಕನ್ನೆಯಂ ಕಂಡು ನೀನಾರ್ಗ್ಗೇನೆಂಬೆಯಾ ಸನತ್ಕುಮಾರನೆಂಬೊನಾರ್ಗ್ಗೆಂದು ಕುಮಾರಂ ಬೆಸಗೊಂಡೊಡಾಕೆಯಿಂತೆಂದು ಪೇೞ್ದಳ್

ಅಯೋಧ್ಯಾಪುರಮನಾಳ್ವೊಂ ಸುರಥನೆಂಬೊನರಸನಾತನ ಮಹಾದೇವಿ ಚಂದ್ರಯಶಿಯೆಂಬೊಳಾಯಿರ್ವರ್ಗ್ಗಂ ಪುಟ್ಟಿದೆಂ ಸುನಂದೆಯೆಂಬೆಂ ಸನತ್ಕುಮಾರಂಗೆ ಗರ್ಭದೊಳಿರ್ದ್ದಂತೆ ನಿವೇದಿ[3]ಸೆಪಟ್ಟೆ[3]ನೆನ್ನಂ ಮದನೋದ್ಯಾನದೊಳುಯ್ಯಲಾಡುತ್ತಿರ್ದ್ದೋಳಂ ಭೌಮವಿಹಾರಾರ್ಥಂ ಬಂದು ವಜ್ರವೇಗನೆಂಬ ವಿದ್ಯಾಧರಂ ಕಂಡೆನ್ನನೆತ್ತಿಕೊಂಡು [4]ಪುಯ್ಯಲಿಡೆಯಿಡೆ[4] ಬಂದನಿಂದಿಂಗೇೞು ದಿವಸಮುಂಟು ಮತ್ತಾ ಸನತ್ಕುಮಾರನೆಂಬೊಂ ಹಸ್ತಿನಾಪುರಮನಾಳ್ವೊಂ ವಿಶ್ವಸೇನ ಮಹಾರಾಜನೆಂಬೊನರಸನಾತನ ಮಹಾದೇವಿ ಸಹದೇವಿಯೆಂಬೊಳಾಯಿರ್ವ್ವರ್ಗ್ಗಂ ಪುಟ್ಟಿದಂ ಸನತ್ಕುಮಾರನೆಂಬೊನೆಂದು ಪೇೞ್ವೊಡೆ ಕುಮಾರನೆಂದನಾತನಂ ಕಂಡೊಡೇನಱಿವೋ[5] ಎಂದು ಬೆಸಗೊಂಡೊಡೆ ಸುನಂದೆಯಿಂತೆಂದಳ್ ಎನ್ನ ತಂದೆ ವಿಶ್ವಸೇನ ಮಹಾರಾಜನೊಳಪ್ಪ ಮಿತ್ರಸಂಬಂಧದಿನೊಂದು ದಿವಸಂ ಹಸ್ತಿನಾಪುರಕ್ಕೆ ಪೋಗಿ ಕುಮಾರನಂ ಕಂಡಾತನ ರೂಪಂ ಪಟದೊಳ್ ಬರೆದು ತಂ[6]ದಾ[6] ರೂಪನೆಲ್ಲಾ ಪೊೞ್ತುಂ ನೋೞ್ಪೆನುಂ ಬರೆವೆನುಂ ಭಾವಿಸುತ್ತಿರ್ಪೆನಪ್ಪುದಱಿಂದಱಿವೆನಾ ರೂಪುಂ ನಿಮ್ಮನೆ ಪೋಲ್ಕುಮೆನೆಯಂತಪ್ಪೊಡಾಂ ಸನತ್ಕುಮಾರನೆನಪ್ಪೆನೆಂದಾಗಳ್ ಹರ್ಷರೋಮಾಂಚಕಂಚುಕಿತೆ ವಿಕಸಿತವದನೆಯಾಗಿ [7]ಯಱಿಪ ಬಳ್ಳಿ ಕಾಲ್ತೊಡರ್ದತ್ತೆಂಬಂತೆವೊಲಾಯ್ತೆನ್ನ[7] ಭಾಗ್ಯದಿಂದಂ ಸ್ವಾಮಿ ನೀಮಿಲ್ಲಿಗೆ ಬಂದಿರ್ ಆ ವಜ್ರವೇಗಂ ತನ್ನ ತಂಗೆಯನೆನಗೆ ಕಾಪಿಟ್ಟು ತನ್ನ ಪೊೞಲ್ಗೆ [8]ನಿದ್ರೆಗೆಯ್ಯೆ[8] ಪೋದನಾಕೆಯುಂ ಜಲಕ್ರೀಡೆಗೆ ಪೋದವಳ್ ಬಾರದನ್ನೆಗಂ ಬೇಗಂ ಪೋಪಮೆನೆ ಕುಮಾರನಿಂತೆಂದನಂಜದಿರ್ ನಿನ್ನ ತಂದೊನನಮೋಘಂ ಮೃತ್ಯುಮುಖ[9]ಕ್ಕೆಯ್ದದಲ್ಲದೆ[9] ಪೋಗೆನೆನೆ ಭಯದಿಂದಂ ನಡುಗಿ ಇಂತೆಂದಳಾತನಾಕಾಶಗಾಮಿ ನೀಮೆಂತುಕೊಲ್ವಿರೆನೆ ಕುಮಾರಂ ನಕ್ಕಿಂತೆಂದಂ ಆಕಾಶಗಾಮಿಯಪ್ಪ ಕಾಗೆಯುನೇಂ ಕೊಲ್ವುದರಿದೆ ಎಂದು ನುಡಿಯುತ್ತಿರ್ಪನ್ನೆಗಂ ವಜ್ರವೇಗನ ಬರವಂ ಕಂಡಾ ಕನ್ನೆಯಂಜಿ ಪ್ರಾಸಾದದೊಳಗೆ ಪೋಗಿ ಪೊಕ್ಕಿರ್ದಳ್

ಖೇಚರನುಂ ಕುಮಾರನಂ ಕಂಡು ಪುರುಡಿಂ ಮುಳಿಸು ಪೆರ್ಚ್ಚೆಯೆನ್ನ ಪೆಂಡತಿಯೊಡನೆ ನುಡಿಯುತ್ತಿರ್ದ್ದೊನನಮೋಘಂ ಕೊಲ್ವೆನೆಂದು ಕಿೞ್ತ ಬಾಳ್ವೆರಸು ಬಂದೆಱಗಿ ಇಱಿದಾತನೇಱಂ ಬಂಚಿಸಿ ಸಿಂಹಲಂಘನದಿಂ ಮೇಗೆ ನೆಗೆದು ವಜ್ರಸಮಾನಮಪ್ಪ ಕೈಯಿಂದಂ ಕುಮಾರನಾತನ ತೆಗಲೆಯಂ ತಿವಿದೊಡಾತನಲ್ಲ ತನ್ನ ವಿದ್ಯಾಧರ[10]ಕರಣ[10]ಮಂ ತೋರ್ಪ್ಪಂಬೊಲೆ ಮೇಗುಚ್ಚಳಿಸಿ ಬಿೞ್ದಾಗಡೆ ಮಡಿದಂ

---

1 ತಳ (ಕಗ). 2 ಕ್ಷ (ಘಛ). 3 ಸಲ್ಪಟ್ಟೆ (ಕಗ). 4 (ಕಖಗ) ಗಳಲ್ಲಿಲ್ಲ. 5 ವಾ (ಕಖಗ), ವೆಯೊ (ಚ). 6 ದೊಡಾ (ಘಚಛ). 7 ಯಱಿಸಿ ಪೋಪಬಳ್ಳಿ ಕಾಲೊಳ್ ತಗುಳ್ದತ್ತೆಂಬವೊಲೆನ್ನ (ಘಚಛ). 8 (ಘಚಛ) ಗಳಲ್ಲಿಲ್ಲ. 9 ಕ್ಕೊಯ್ವಲ್ಲದೆ (ಕಖಗ). 10 ಗುಣ (ಚ), ಗರಣ (ಛ).

ಕುಮಾರನಿಂತೆಂದು ಬಗೆದನೊರ್ವಳ್ ಇರ್ದ ಸ್ತ್ರೀಯು ಪಕ್ಕದೆ ಸತ್ಪುರುಷಂಗಿರಲ್ ತಕ್ಕುದಲ್ಲೆಂದು ಮುನ್ನೆ ತನ್ನಿರ್ದ ಲತಾಮಂಟಪದೊಳ್ ಪೋಗಿರ್ದನನ್ನೆಗಮಿತ್ತ ವಜ್ರವೇಗನ ತಂಗೆ ಸಂಧ್ಯಾವಳಿಯೆಂಬೊ[1]ಳ್ ಮಾನಸ[1] ಸರೋವರದೊಳ್ ಜಲಕ್ರೀಡೆಯಾಟ ಬರ್ಪೊಳನ್ನೆಗಂ ತಮ್ಮಣ್ಣಂ ಸತ್ತುದಂ ಕಂಡು ಮೂರ್ಛಾಗತೆಯಾಗಿ ಬಿಟ್ಟು ನೀಡಱಿಂದೆೞ್ಚತ್ತು ಕ್ರೋಧಾಗ್ನಿ ಪೆರ್ಚಿ ಎಮ್ಮಣ್ಣನಂ ಕೊಂದ ದುರಾತ್ಮನಂ ಪಾತಾಳಮಂ ಪೊಕ್ಕಿರ್ದನಪ್ಪೊಡಮಱಸಿ ಕೊಲ್ವೆನಮೋಘಮೆಂದು ಭಯಂಕರ ರೂಪಂ ಕೈಕೊಂಡು ದೆಸೆಗಳಂ ನೋೞ್ಪೊಳನ್ನೆಗಮಾರುಮಂ ಕಾಣದೆ ಸುನಂದೆಯಂ ಬೆಸಗೊಂಡೊಡಾಕೆಯಿಂತೆಂದಳ್ ದುಷ್ಟನಿಗ್ರಹ ಶಿಷ್ಟಪ್ರತಿಪಾಲನ ಸ್ವರೂಪದಿಂ ಪೃಥ್ವಿಯಂ ರಕ್ಷಿಸುವ ಸ್ವಾಮಿ [2]ಚೋರಜಾರ ಪಾದರಿಗ[2]ರ್ಕಳಂ ಕೊಲ್ಲದಿರ್ಕ್ಕುಮೆ ಎಂದೊಡಾತನಾವೊನಲ್ಲಿರ್ದೊಂ ತೋಱೆಂದು ಬೆಸಗೊಂಡೊಡೆ ಸುನಂದೆಯುಂ ಪೋಗಿ ಕುಮಾರನಂ ತೋಱಿದೊಡಾಕೆಯುಮಸಿಖೇಟಕಹಸ್ತೆಯಾಗಿ ವಿಭೀಷಣಮಪ್ಪ ರೂಪುಮಂ ವಿಗುರ್ವಿಸಿ ಕೊಲ್ವೆನೆಂದು ಸಾರ್ದಾಗಳ್ ಕುಮಾರಂ ಸೌಷ್ಠವದೊಳಿರ್ದ್ದನಂ ನೋಡಿ ಕ್ರೋಧಂಗೆಟ್ಟು ಸ್ನೇಹಂ [3]ಪೆರ್ಚಿ[3] ಕಾಮಶರಂಗಳಿಂ [4]ಸ್ಮರ[4]ವಶಹೃದಯೆಯಾಗಿ ಇಂತೆಂದು ತನ್ನೊಳ್ ಬಗೆದೊಳೆಮ್ಮಣ್ಣಂ ತನ್ನ ದೋಷದಿಂ ಸತ್ತೊಂ ನೀತಂಗೇನುಂ ದೋಷಮಿಲ್ಲೆಂದು ವಿಕಾರ[5]ಮಪ್ಪ[5] ರೂಪಮನುಪಸಂಹರಿಸಿ ತನ್ನ ಮುನ್ನಿನ ಸ್ವಾಭಾವಿಕಮಪ್ಪ ರೂಪಂ ಕೈಕೊಂಡು ತಮ್ಮಣ್ಣನಂ ಸಂಸ್ಕರಿಸಿ ನೀರಿೞಿದು ತದ್ವಿರಹಾನಳನಿಂ ಬೆಂದು ಕರಗಿ ಕೊರಗಿ ಬಸಮೞಿದಿರ್ದ್ದು ಮೆಯ್ಯನೊಡೆಯೊಳ್ ಬಂದು ಸುನಂದೆಗಿಂತೆಂದಳ್ ನಿನ್ನ ಪ್ರಸಾದದಿಂ ಬಾೞ್ವೆಂ ನೀನೆನಗೆ ಸೋದರಮುಂ ಕಲ್ಯಾಣಮಿತ್ರೆಯುಮಾದಯ್ ಅದಱಿಂ ನೀನೀಕುಮಾರಂಗೆ ಪೋಗಿ ಇಂತೆಂದು ಪೇೞು ವಿಜಯಾರ್ಧ ಪರ್ವತದೊಳಗ್ರಮಂದಿರಪುರಾಧಿಪತಿಯಪ್ಪಶನಿವೇಗನೆಂಬ ವಿದ್ಯಾಧರಂಗಂ ವಿದ್ಯುತ್ಪ್ರಭೆಯೆಂಬ ಮಹಾದೇವಿಗಂ ಮಗಳ್ ಸಂಧ್ಯಾವಳಿಯೆಂಬೊಳ್ ನೀಮ ಶರಣೆಂದಿರ್ದೊಳಾಕೆಯಂ ನೀಮಮೋಘಂ ಕೈಕೊಳಲ್ವೇೞ್ಕುಮೆಂದಿಂತು ನುಡಿಯೆಂದು ಕಲ್ಪಿಸಿಯಟ್ಟಿದೊಡಾಕೆಯುಂ ಕುಮಾರಂಗೆ ತದ್ವೃತ್ತಾಂತಮೆಲ್ಲಮಂ ಪೇೞ್ದೊಡಾತನುಂ ಪಿತೃಮಾತೃಗಳೀಯದ ಸ್ತ್ರೀಯರಂ ಕೈಕೊಳ್ವುದೆನಗಯೋಗ್ಯಮೆಂದು ಮಱುಮಾತುಗೊಟ್ಟೊಡೆ ಸುನಂದೆಯೆಂಬೊಳ್ ಮಿತ್ರಸಂಬಂಧಿಗಳಪ್ಪ ಜನಂಗಳ್ ಮುಂ[6]ತಿಟ್ಟು[6] ಕುಡೆ ಕೊಳಲ್ ತಕ್ಕುದೆಂದು ನುಡಿದೊಡಂಬಡಿಸಿ ಇಷ್ಟದೇವತೆಗಳನೆ ಬಾಂಧವಜನಮಾಗೊಡೆಯಳಂ ಮಹಾವಿಭೂತಿಯಿಂದಂ ಪಾಣಿಗ್ರಹಣ ಪುರಸ್ಸರಂ ಸಂಧ್ಯಾವಳಿಯಂ ಕುಮಾರಂಗೆ ಕೊಟ್ಟಳ್ *ಸಂಧ್ಯಾವಳಿಯುಂ ಸುನಂದೆಯಂ ಕುಮಾರಂಗೆ ಕೊಟ್ಟಳಿಂ*ತನ್ನೋನ್ಯ ಸಂಬಂಧದಿಂ ಗಾಂಧರ್ವವಿವಾಹದಿಂ [7]ಕಲ್ಯಾಣದೊಳ್ಕೂಡಿ[7] ಸುಖದಿಂದಿರ್ಪೊರ್

ಅನ್ನೆಗಮಿತ್ತಶನಿವೇಗಂ ತನ್ನ ಮಗಂ ಪಿರಿದು ಪೊೞ್ತು ಪೋಗಿ ತಡೆದನೆಂದು

---

[1] ಳಾ (ಚಛ). [2] ಜಾರ ಚೋರ (ಘಚ), ಚೋರ ಜಾರ (ಛ). [3] ಪುಟ್ಟ (ಛ). [4] ಪರ (ಚಛ). [5] ಸ್ವ (ಕಗ) [6] ದಿರ್ದು (ಕಖಘ). ** (ಘಚಛ) ಗಳಲ್ಲಿಲ್ಲ. [7] ಕಯ್ಗೂಡಿ (ಘಚಛ).

ಮಗನವಸ್ಥೆಯನಱಿದು ಬಾಯೆಂದವಳೋಕಿನಿಯೆಂಬ ವಿದ್ಯೆಯನಾರಯ್ಯಲಟ್ಟಿದೊಡಾ
ವಿದ್ಯೆಯುಂ ಪಾರಾವತ ರೂಪದಿಂದಾರೈದು ಪೋಪುದಂ ಸಂಧ್ಯಾವಳಿಯಱಿದಂತೆಂದು
ತನ್ನ ಭರ್ತಾರಂಗೆ ಪೇೞ್ಗುಂ ಸ್ವಾಮಿ ಎನ್ನ ತಂದೆ ವಿದ್ಯಾಧರನಾದಮಾನುಂ
ಪ್ರಚಂಡ ಮಹಾಬಳ ಪರಾಕ್ರಮಂ ವಜ್ರವೇಗನ ಸಾವನಱಿದಮೋಘಂ ನಿಮ್ಮ
ಮೇಲೆ ಬರ್ಕುಮದಱಿಂ ನೀಮಿಾ ಪ್ರಜ್ಞಪ್ತಿಯೆಂಬ ಮಹಾವಿದ್ಯೆಯಂ ಕೊಳ್ಳಿಮೆನೆ
ಕುಮಾರಂ ನಕ್ಕು ಪ್ರಹಸಿತವದ[1]ನ[1]ನಾಗಿ ಖೇಚರಕಂ[2]ಜಿಪ್ಲಲ್[2]ಗಳಂ [3]ನಿಪಾತಿ[3]ಸಲ್ಕೆನಗೆ
ವಿದ್ಯೆ[4]ಯುಂ ಬೇೞ್ಕುಮೆ ಎಂ[4]ದೊಲ್ಲದಿರ್ದೊಡನ ಪಾದದ್ವಯಂಗಳ್ಗೆಱಗಿ ಪೊಡೆವಟ್ಟ
ಮೋಘಂ ಕೊಳಲೆವೇೞ್ಕುಮೆಂದು ಬಲಾತ್ಕಾರದಿಂ ವಿದ್ಯೆಯಂ ಕೊಟ್ಟೊಡಾ
ಅವಸರದೊಳ್

ಮತ್ತಿತ್ತ ರಥನೂಪುರ ಚಕ್ರವಾಳ ಪುರಾಧಿಪತಿಯಪ್ಪ ಚಂದ್ರಯಶನೆಂಬ
ವಿದ್ಯಾಧರಂಗಂ ವಿದ್ಯುದ್ವೇಗೆಯೆಂಬ ಮಹಾದೇವಿಗಮುಂತಿರ್ವರ್ಗಂ ಪುಟ್ಟಿದರ್
ಚಂದ್ರವೇಗನುಂ ಭಾನುವೇಗನುಮೆಂಬರ್ ಮಕ್ಕಳಾಗಿ ಇಂತಿಷ್ಟವಿಷಯಕಾಮ
ಭೋಗಂಗಳನನುಭವಿಸುತ್ತಿರೆ ಮತ್ತೊಂದು ದಿವಸಂ ನೃಪತಿಗೆ ಸಂಸಾರವೈರಾಗ್ಯಮಾಗಿ
ಚಂದ್ರವೇಗನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಕಿಱಿಯಾತನಪ್ಪ ಭಾನು
ವೇಗಂಗೆ ಯುವರಾಜಪಟ್ಟಮಂ ಕಟ್ಟಿ ಗುಣಧರರೆಂಬ ಚಾರಣರಿಸಿಯರ ಪಕ್ಕದೆ
ಜೈನದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು ಸಮ್ಮೇದ ಪರ್ವತದೊಳ್
ಮೋಕ್ಷಕ್ಕೆ ಪೋದರ್ ಮತ್ತಾ ಚಂದ್ರವೇಗಂಗೆ ನೂರ್ವರ್ ಪೆಣ್ಗೂಸುಗಳಾ
ಮೊರವಗ್ಗಳತಿಶಯ ರೂಪುಲಾವಣ್ಯಮನೊಡೆಯೊರವರನಾ ಅಶನಿವೇಗಂ †ತನ್ನ
ಮಗಂ ವಜ್ರವೇಗಂಗನವರತಂ ಪಾಗುಡಮುಂ ಪೆರ್ಗಡೆಗಳುಮನಟ್ಟುತ್ತಿರ್ಕ್ಕುಂ
ಮತ್ತಂ ಪೆಱರುಂ ವಿದ್ಯಾಧರರ್ಕ್ಕಳನವರತಂ ಕೂಸುಗಳಂ ಬೇಡಿಯಟ್ಟುತ್ತಿರೆ ಆರ್ಗಂ
ಕುಡಲೊಲ್ಲದೆ ಮತ್ತೊಂದು ದಿವಸಂ ಮಕ್ಕಳನಾರ್ಗೆ ಕುಡುವಮೆಂದು ದೈವಜ್ಞನಂ
ಬೆಸಗೊಂಡೊಡಾತನಿಂತೆಂದು ಪೇೞ್ದಂ ಮಾನಸಸರೋವರದೊಳ್ ಸಿತಯಕ್ಷನಂ
ಯುದ್ಧದೊಳಾವೊಂ ಗೆಲ್ವೊಂ ಮತ್ತಶನಿವೇಗನ ಮಗಂ ವಜ್ರವೇಗನುಮಂ ಮುಷ್ಟಿ
ಪ್ರಹಾರದಿಂ ಕೊಲ್ವೊನಾ ಅಶನಿವೇಗನುಮಂ ಸಂಗ್ರಾಮದೊಳ್ ನಿಪಾತಿಸುವ
ನಾವನೊರ್ವನಾತಂಗೆ ನಿಮ್ಮ ಮಗಳಂ ಕುಡಿಮೆಂದು ದೇವಗುರುವೆಂಬ ನೈಮಿತ್ತಿಕಂ
ಪೇೞ್ದಂ ಮತ್ತೆಯಾತನುಪದೇಶದಿಂ ತಱಿಸಂದ ಮನದೊನಾಗಿ ಸರ್ವಾಯುಧ
ಸನ್ನದ್ಧರಾಗಿ ದಿವ್ಯರಥಂಬೆರಸು ಹರಿಶ್ಚಂದ್ರ ಚಂದ್ರಸೇನರ್ಕ್ಕಳೆಂಬ ಮಕ್ಕಳನಟ್ಟಿ
ದೊಡವರ್ಗಳುಂ ಬಂದು ಕುಮಾರಂಗೆಱಗಿ ಪೊಡೆವಟ್ಟಿಂತೆಂದರ್ ರಥನೂಪುರ
ಚಕ್ರವಾಳಪುರೇಶ್ವರನಪ್ಪ ಚಂದ್ರವೇಗಂಗಂ ಮಣಿದೇವಿಗಂ ಪುಟ್ಟಿದೆವು ಹರಿಶ್ಚಂದ್ರ
ಚಂದ್ರಸೇನರ್ಕ್ಕಳೆಮೆಮ್ಮಮ್ಮನ ಬೆಸದಿಂ ನಿಮ್ಮನೋಲಗಿಸಲ್ ಬಂದೆಮೆಂದು ಪೇೞ್ದು
ಸುಖಸಂಕಥಾವಿನೋದದಿಂದಿರ್ಪನ್ನೆಗಮವರ ಬೞಿಯನೆ ಸಹೋದರರ್ಕ್ಕಳಪ್ಪ ಚಂದ್ರ
ವೇಗನುಂ ಭಾನುವೇಗನುಂ ತಮ್ಮೊಳ್ಳ ಸಮಸ್ತಬಲಂಬೆರಸು ಕುಮಾರನಂ ಕೂಡಿದರ್

[1] ನಾರವಿಂದ (ಘಚ). [2] ಬೊರತಿ (ಕಖ), ಬೊರತ್ತೀ (ಗ). [3] ಹತಿಯಿ (ಘಚಛ)
[4] ಯೇವುದೆಂ (ಘಚಛ). †† (ಘಚಛ) ಗಳಲ್ಲಿ ಈ ಭಾಗ ಇಲ್ಲ.

ಮತ್ತಿತ್ತ ಶನಿವೇಗಂ ತನ್ನ ಮಗನ ಕಟಿದ ವೃತ್ತಾಂತಮೆಲ್ಲಮನವಳೋಕಿನಿಯೆಂಬ ವಿದ್ಯೆ ಪೇಟೆ ಕೇಳ್ದು ಮುಳಿದು ಮುಳಿದು ಗರ್ಜಿಸಿ ಮಸಗಿ ಸಮಸ್ತ ಬಲಂ ಬೆರಸಿಂದ್ರನ ಮಱವೊಕ್ಕಡಮಮೋಘಂ ಕೊಲ್ವೆನೆಂದು ಮೇಲೆತ್ತಿಂದನಂ ಚಂದ್ರವೇಗಂ ಕಂಡು ಸನತ್ಕುಮಾರಂಗಿಂತೆಂದಂ ದೇವಾ ನಾನಾವಿಧಮಪ್ಪ ವಿದ್ಯಾಧರ ಯುದ್ಧಮಂ ನೀಂ ಕೆಮ್ಮನೆ ನೋಡುತ್ತಿರಾನೆ ಸಾಲ್ವೆನೆಂದು† [1]ಸಂಗ್ರಾಮಮುಕ್ಕ[1]ಘಮುಖನಾಗಿ ಕಾದಲ್ ತಗುಳ್ದನಿತ್ತ ಕುಮಾರನುಂ ಗಗನ ತಳದೊಳ್ ವಜ್ರಸಾರಮೆಂಬ ರಥಮನೇಱ ಛತ್ರಚಾಮರ ಪಿಂಛಾತಪತ್ರ ಪಾಳಿಧ್ವಜ ಪತಾಕಾದ್ಯನೇಕ ಮಹಾ ವಿಭೂತಿಯೊಳ್ ಕೂಡಿ ಸಂಗ್ರಾಮಮಮಂ[2] ನೋಡುತ್ತಮಿರೆ ಮತ್ತಶನಿವೇಗಂ ಕುಮಾರನಂ ಕಂಡು ಕ್ರೋಧಾಗ್ನಿ ಪರ್ಚೆ ಎನ್ನ ಮಗನಂ ಕೊಂದೊನಂ ಬೇಗಂ ಮೃತ್ಯು [3]ರಾಜನಂ ಕಾಣ್ಬಂತಿರೆ ಮಾಟ್ಪೆ[3]ನೆಂದು ಮುಳಿದು ಮಸಗಿ ಬರ್ಪನಂ ಕುಮಾರಂ ಕಂಡಾಗಡೆ ಬಾಣಾಸನ ಹಸ್ತನಾಗಿ ಅರ್ಧಚಂದ್ರಮೆಂಬ ಸರದಿಂದಾತನ ತಲೆಯಂ ಮೊಕ್ಕನೆಮೋ[4]ಗೆಚ್ಚಂ ಅ[4]ದು ಜ್ವಲನ್ಮಣಿಮಕುಟಕುಂಡಲಂಗಳಿದೊಪ್ಪುತ್ತಿರ್ದುದು ವಿದ್ಯುತ್ಕಪಾಲಂಬೊಲ್ ನೆಲದೊಳ್ ಬಿಟ್ಟತ್ತಾಗಳಾ ತಲೆಯಂ ಮಱವಕ್ಕದವರ್ ಕಂಡು ಕೆಲರಂಜಿ ತ್ರಸ್ತಾ[5]ಭಿಭೂ[5]ತರಾಗಿಯೋಡಿ ಕೆಲರ್ ಶರಣೆಂದು ಕುಮಾರನ ಕಾಲ್ಗೆಱಗಿ ಪುಲ್ಲಂ ಕರ್ಚಿ ಪೊಡೆವಟ್ಟರ್ ಕುಮಾರನುಮಾಗಳಭಯ ಘೋಷಣೆಯಂ ಪೊಯ್ಸಿಯವರ್ಗ್ಗಭಯ ದಾನಮಂ ಕೊಟ್ಟನಾಗಳ್ ಚಂದ್ರವೇಗನುಂ ಸಂಗ್ರಾಮ ಭೂಮಿ[6]ಯನರ್ಚಿಸಿ[6] ಮಹಾವಿಭೂತಿಯಿಂ ಕುಮಾರನನೊಡಗೊಂಡು ಪೋಗಿ ಪೊೞಲಂ ಪೊಕ್ಕು ಪ್ರಶಸ್ತ ದಿನ ವಾರ ನಕ್ಷತ್ರ ಹೋರಾ ಮುಹೂರ್ತ ಲಗ್ನದೊಳ್ ತನ್ನ ಮಕ್ಕಳ್ ಚಂದ್ರಮತಿ ಚಂದ್ರಶ್ರೀ ಚಂದ್ರಲೇಖೆ ಶಶಿಕಾಂತೆ ಮನೋ[7]ಹಾರಿಣಿ[7] ಹರಿಣಾಂಕೆ ಕಮಲಮುಖಿ ಪ್ರಿಯದರ್ಶನೆಯೆಂದಿವರ್ ಮೊದಲಾಗೊಡೆಯ ನೂರ್ವರ್ ಕನ್ನೆಯರ್ಕ್ಕಳಂ ಪಾಣಿಗ್ರಹಣ ಪುರಸ್ಸರಂ [8]ಕೊಟ್ಟನಂತಾ ನೂರ್ವರ್ ಕನ್ನೆಯರ್ಕ್ಕಳುಂ [9]ಮುನ್ನಿನ ಖೇಚರಿಯರ್ಕ್ಕಳುಂ[9] ಪೆಱ[10]ವುಮೆಂದಿವರೊಳ್[10] ಕೂಡಿ ಕುಮಾರಂ ವಿದ್ಯಾಧರ ಶ್ರೇಣಿಯೊಳ್ ಸುಖಮನನುಭವಿಸುತ್ತಿರ್ಪನ್ನೆಗಂ

*ಮತ್ತೊಂದು ದಿವಸಂ ಚಂದ್ರವೇಗಂ ಸಿದ್ಧಕೂಟಕ್ಕೆ ವಂದನಾಭಕ್ತಿಗೆ ಪೋಗಿ ದೇವರನರ್ಚಿಸಿ ವಂದಿಸಿ ಸುಮಾಳಿಗಳೆಂಬ[11]ವಧಿ[11]ಜ್ಞಾನಿಗಳಪ್ಪ ಚಾರಣರಿಸಿಯರಂ ಗುರುಭಕ್ತಿಗೆಯ್ದು ವಂದಿಸಿ ಧರ್ಮಮಂ ಕೇಳ್ದು ತದನಂತರಮಿಂತೆಂದಂ ಭಟಾರಾ ಸನತ್ಕುಮಾರಂಗಂ ಸಿತಯಕ್ಷಂಗಂ ವೈರಸಂಬಂಧಕ್ಕೆ ಕಾರಣಮೇನೆಂದು ಬೆಸಗೊಂಡೊಡೆ ಭಟಾರರುಂ ತತ್ಸಂಬಂಧಿಯಪ್ಪ ಕಥೆಯನಿಂತೆಂದು ಪೇೞಲ್ ತೊಡಗಿದರ್

[1] ಕುಮಾರಂಗ (ಘಚಛ). [2] + ನಡೆ (ಘಚಛ). [3] ಜಂಗೆ ಪಾಗುಡಮಟ್ಟುವೆ (ಘಚಛ). [4] ಗಲೆಸುವುದುಮ (ಘಚಛ). [5] ಭೀ (ಕಖಗ). [6] ಯಂ ಪೊಱಮಟ್ಟು (ಛ) [7] ರಮ (ಘಚ). [8] + ಕುಮಾರಂಗೆ (ಘಚಛ). [9] (ಘಚಛ) ಗಳಲ್ಲಿಲ್ಲ. [10] ರ್ ಕನ್ನೆಯರೊಳಂ (ಘಚಛ). * (ಖ) ದಲ್ಲಿ ನಷ್ಟವಾಗಿದೆ. [11] ದಿವ್ಯ (ಘಚಛ).

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕಾಂಚನಮೆಂಬುದು ಪೊೞಲದನಾಳ್ವೊಂ ಪ್ರತಿಮುಖನೆಂಬರಸನಸ್ಟಶತಮಂತಃಪುರಕ್ಕಧಿಪನಾಗಿ ಕಾಲಂ ಸಲೆ ಮತ್ತಾ ಪೊೞಲೊಳ್ ನಾಗಚಂದ್ರನೆಂಬೊಂ ಸಾರ್ಥಾಧಿಪತಿಯಾತನ ಭಾರ್ಯೆ ವಿಷ್ಣುಶ್ರೀಯೆಂಬೊಳತ್ಯಂತ ರೂಪಲಾವಣ್ಯಸೌಭಾಗ್ಯಕಾಂತಿಹಾವಭಾವವಿಳಾಸವಿಭ್ರಮಂಗಳಿಂ ಕೂಡಿದೊ[1]ಳೊಂದು[1] ದಿವಸಂ ಅರಸನು[1]ದ್ಯಾನವನಕ್ಕೆ ಪೋಗುತ್ತಂ ಪ್ರಾಸಾದ[2]ದೊಳಿರ್ದ ದೇವಾಂಗನಾಸನ್ನಿಭೆಯಪ್ಪ[3]ಳಂಕಂಡು ಕಾಮಶರಂಗಳಿಂ ಜರ್ಝರಿತ ಹೃದಯನಾಗಿ [4]ಮಂ[ತ್ರ][4] ಪ್ರಯೋಗದಿಂದಂ ವಿಷ್ಣುಶ್ರೀಯನೊಳಕೊಂಡನಾಕೆಯುಮಾತಂಗಗ್ರ ವಲ್ಲಭೆಯಾಗಿ ಸಲ್ವೊಳಂ [5]ಸಮಸ್ತಮಂತಃಪುರಮಾ[5]ಕೆಗೆ ಮುಳಿಯುತ್ತಿ[6]ರ್ಕುಮೊಂ[6]ದು ದಿವಸಂ ಸಾರ್ವಭೌಮನೆಂಬ ಪಟ್ಟವರ್ಧನ ಗಜಂ ಸೊರ್ಕಿ ಮಸಗಿ [7]ಕ[7]ಟ್ಟುಗಳೆಲ್ಲಮಂ ಪಱಿದು ಹತತವಿತತ ಕೋಳಾಹಳಮೆಸೆದು ಪೊೞಲೆಲ್ಲಮಂ ಕೊಲ್ವುದನರಸಂ ಕೇಳ್ದಾನೆಯಂ ಕಟ್ಟಿಸಲೆಂದು ಪೋದನನ್ನೆಗಮಿತ್ತ ಅನಿಬರರಸಿಯರ್ಕಳ್ ನೆರೆದು ವಿಷಪ್ರಯೋಗದಿಂದಂ[8] ಕೊಂದಾರುಮಱಿಯದಂತಿರೆ ಶ್ಮಶಾನದೊಳೀಡಾ[9]ಡಿದೊ[9]ರನ್ನೆಗಮರಸನುಮಾನೆಯುಮಂ ಕಟ್ಟಿಸಿ ಬಂದರಸಿಯಂ ಕಾಣದೆಲ್ಲಿರ್ದಳೆಂದು ಬೆಸಗೊಂಡೊಡೆ ಸತ್ತಳಂ[10]ಬಾ[10] ಮಾತಂ ಕೇಳ್ದು ಮೂರ್ಛಿತನಾಗಿ ನೀಡಱಿಂದೆೞ್ಚತ್ತು ಮಹಾದುಃಖಂ ಗೆಯ್ದು ಶ್ಮಶಾನಕ್ಕಾಕೆಯ ದೇಹಮಂ ನೋಡಲೆಂದು ಪೋಗಿಯದಱ ಭೀಭತ್ಸಮಂ ಕಂಡಾದಮಾಸುಂಪೇಸಿ ಶರೀರವೈರಾಗ್ಯಮನೊಡೆಯನಾಗಿ ಅನ್ಯಾಯದಿಂ ಪರಸ್ತ್ರೀಹರಣಂಗೆಯ್ದಂ ಮಹಾಪಾತಕನೆನೆಂದು ತನ್ನಂ ತಾನಾದಮಾಸುಂ ನಿಂದಿಸಿ ವಿಮಳವಾಹನನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಸುವ್ರತರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಪಲಕಾಲಂ ತಪಂಗೆಯ್ದು[11] ಸಮಾಧಿ ಮರಣದಿಂ ಮುಡಿಪಿ ಪ್ರಾಣತಕಲ್ಪದೊಳಿರ್ಪತ್ತು ಸಾಗರೋಪಮಾಯುಷ್ಯಸ್ಥಿತಿಯನೊಡೆಯೊಂ ಪ್ರತೀಂದ್ರನಾಗಿ ಪುಟ್ಟಿ ದೇವಲೋಕದ ದಿವ್ಯಸುಖಮಂ ಪಲಕಾಲಮನುಭವಿಸಿ ಬಂದಿಲ್ಲಿ ಜಂಬೂದ್ವೀಪದ ಭರತ ಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕನಕ[12]ಮೆಂಬುದು ಪೊೞಲದನಾಳ್ವೊಂ ಹರಿವಾಹನನೆಂಬರಸಂ ಮತ್ತಮಾ ಪೊೞಲೊಳ್ ರಾಜಶ್ರೇಷ್ಠಿ ಅರ್ಹದ್ದಾಸನೆಂಬೊನಾತನ ಭಾರ್ಯೆ ಜಿನದತ್ತೆಯೆಂಬೊಳಾ ಇರ್ವರ್ಗ್ಗಂ ಮಗಂ ಜಿನವರ್ಮನೆಂಬೊನಾಗಿ ಪುಟ್ಟಿ ರೂಪಲಾವಣ್ಯ ಸೌಭಾಗ್ಯ ಕಾಂತಿತ್ವದಿಂದಾದಮಾನುಂ ನೆಱೆದೊನಾಗಿ ಇಂತು ಕಾಲಂ ಸಲೆ ಅರ್ಹದ್ದಾಸಂಗೇನಾನುಮೊಂದು ಕಾರಣದಿಂ[13]ದಂ ವೈರಾಗ್ಯಮಾಗಿ ಜಿನವರ್ಮಂಗೆ ರಾಜಶ್ರೇಷ್ಠಿ ಪದಮಂ ಕೊಟ್ಟು

---

1 ಳ್ ಮತ್ತಾ ಪ್ರತಿಮುಖನೊಂದುದಿವಸಂ ಬಹಿರು (ಘಚಛ). 2 + ತಳ (ಘಚಛ). 3 + ವಿಷ್ಣುಶ್ರೀಯಂ (ಘಚಛ). 4 ಮಂತ್ರಿಯ (ಕಖಗ), ಮಂತ್ರಿ (ಘಚಛ). 5 ಕಂಡಾತನುಳಿದರಸಿಯರಾ (ಘಚಛ). 6 ದ್ದೊರ್ಗಂ (ಘಚಛ). 7 ಕಾಲ್ಗ (ಘಚಛ). 8 + ವಿಷ್ಣುಶ್ರೀಯಂ (ಘಚಛ). 9 ಡಿಸಿದೋ (ಚ). 10 ದೊಡಾ (ಚ). 11 + ಸಮ್ಯಗ್ದರ್ಶನ ಜ್ಞಾನ ಚಾರಿತ್ರಮಂ ಸಾದಿಸಿ (ಘಚಛ). 12 + ಪುರ (ಛ). 13 ದಾದಮಾನುಂ (ಘಚಛ).

ಶಿವಗುಪ್ತಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು [1]ತಪಂಗೆಯ್ದು[1] ಮೋಕ್ಷಕ್ಕೆ ಪೋದನ್ ಮತ್ತಿತ್ತ ಜಿನವರ್ಮನುಂ ಪಲವುಂ ಜಿನಾಲಯಂಗಳಂ ಮಾಡಿಸಿ ದಾನಪೂಜೆ ಶೀಲೋಪವಾಸಮೆಂಬಿಂತು ಚತುರ್ವಿಧಮಪ್ಪ ಶ್ರಾವಕಧರ್ಮದೊಳಗ್ಗಳನಾಗಿ ನೆಗೞುತ್ತಮಿಂತು ಪಲಕಾಲಂ ಸಲೆ

ಮತ್ತಾ ಮುನ್ನಿನ ಭವದ ನಾಗಚಂದ್ರನೆಂಬೊಂ ಸಾರ್ಥಾಧಿಪತಿ ವಿಷ್ಣುಶ್ರೀಯೆಂಬ ತನ್ನ ಭಾರ್ಯೆಯ ವಿಯೋಗಂ ಕಾರಣಮಾಗಿ ಆರ್ತಧ್ಯಾನದಿಂ ಸತ್ತು [2]ತಿರ್ಯಙ್ನರ[2]ಕಾದಿಗಳೊಳ್ ಪಲಕಾಲಂ ತೊೞಲ್ದೀ ಭರತಕ್ಷೇತ್ರದೊಳ್ ಕಪಿಲನೆಂಬ ಪಾರ್ವಂಗಂ ಗಂಗೆಯೆಂಬ ಪಾರ್ವಂತಿಗಂ ಭಾರದ್ವಾಜನೆಂಬ ಮಗನಾಗಿ ಪುಟ್ಟಿ ಕನಕದಂಡಿಯೆಂಬ ಪರಿವ್ರಾಜಕಂಗೆ ಶಿಷ್ಯನಾಗಿ ನಾನಾದೇಶಂಗಳಂ ವಿಹಾರಿಸುತ್ತಂ ಕನಕಪುರಕ್ಕೆ ವಂದು ಮಾಸೋಪವಾಸಂಗೆಯ್ಯುತ್ತಂ ಮಹಾತಪಸ್ವಿಯಾಗಿ ನೆಗೞುತ್ತಿರೆ ತತ್ಪುರಾಧಿಪಂ ಹರಿವಾಹನನೆಂಬರಸಂ ಕಂಡಾದಮಾನುಮಾ ತಪಸ್ವಿಗೆ ಭಕ್ತನಾಗಿ ಬೆಸಕೆಯ್ಗೆ ಕಾಲಂ ಸಲೆ ಮತ್ತೊಂದು ದಿವಸಮರಸನೊಡನೆ ಜಿನವರ್ಮನಾ ಪರಿವ್ರಾಜಕನ ನಿವಾಸಕ್ಕೆ ಪೋದೊಡೆ ಜಿನವರ್ಮನಂ ಕಂಡು [3]ಪೂರ್ವ ವೈರ[3] ಸಂಬಂಧದಿಂದಾದ ಕ್ರೋಧಾಗ್ನಿ ಪೆರ್ಚೆ ಮುೞುಗುತ್ತಿರ್ದ್ದ ಮನಮನೊಡೆಯ [4]ತಪಸ್ವಿಯ[4]ನರಸನಿಂತೆಂದಂ ನೀಮೆಮ್ಮ ಮನೆಯೊಳ್ [5]ಪಾರಿಸಲ್ವೇೞ್ಪುದೆಂ[5]ದು ಪ್ರಾರ್ಥಿಸಿದೊಡಾತನಿಂತೆಂದಂ ಒಂದು ಪಾಂಗಿನೊಳ್ ನಿಮ್ಮ ಮನೆಯೊಳ್ [6]ಪಾರಿಸು[6]ವೆನೀ ಜಿನವರ್ಮನ ಬೆನ್ನೊಳ್ ಕಡಿಯಿಲ್ಲದ ತಳಿಗೆಯನಿಟ್ಟು ಬಿಸಿಯ ತುಯ್ಯಲನುಣ್ಬುದೆನಗಿಷ್ಟಂ ಪೆಱ ಪಾಂಗಿನೋಗರಮನೂಡಲಾಪ್ಪೊಡುಣ್ಬೆನಲ್ಲದಾಗಳುಣ್ಣೆನೆಂದು ಪೇೞ್ದೊಡೆ ಕೇ[7][ಳ್ದುಜ್ಜು][7]ಗನಾದರಸನಂ ಜಿನವರ್ಮಂ ಕಂಡಿಂತೆಂದಂ ದೇವಾ ತಪಸ್ವಿಗಾವ ಪಾಂಗಿನೊಳ್ ಮೆಚ್ಚು ಮೆಚ್ಚಿದ ಪಾಂಗಿನೊಳುಣ್ಗೆಂದೊಡಂಬಟ್ಟನಾಗಳಾ ಗರ್ಭಸುಖಿಯ ಬೆನ್ನೊಳ್ ಪಿರಿಯ [8]ಪರಿಯಾಣಮ[8]ನಿಟ್ಟದಂ ತೆಕ್ಕನೆ ತೀವಿ ಬಡ್ಡಿಸಿದೊಡೆ ಕುದಿಯುತ್ತಿರ್ದ್ದ ತುಯ್ಯಲಂ [9]ತಣ್ಣಿತ್ತಾಗಿಯಾ[9]ಱುವನ್ನೆಗಂ ಪಾರುತ್ತಿರ್ದು ನೀಡುಂ ಬೇಗಮುಂಡು ಸಮೆದಬೞಿಕ್ಕೆ ತಳಿಗೆಯನೆತ್ತಿದೊಡಾ ತಳಿಗೆಯೊಡನೆ ಬೆನ್ನ ತೊ[10]ವ[10]ಲೆಲ್ಲಮುದ್ದಿ ಪೋದುದನರಸಂ ಕಂಡೀತಂ ತಪಸ್ವಿಯಲ್ಲಂ* ರಾಕ್ಷಸಂ ಪಂಚಮಹಾಪಾತಕನನೀ ಪೊೞಲೊಳಿರಲೀಯದಟ್ಟಿ ಕ[11]ಳೆಯಿ[11]ಮೆಂದು ನೃಪತಿ ಮುಳಿದೊಡೆ ಜಿನವರ್ಮಂ ತಪಸ್ವಿಗೆ ಮುಳಿಯಲ್ವೇಡೆಂದು ಬಾರಿಸಿ ಈತಂಗೇನುಂ ದೋಷಮಿಲ್ಲೆನ್ನ ಪೂರ್ವಕೃತ[12]ಕರ್ಮ[12]ಫಳವಿಪಾಕಮೆಂದು ನೃಪತಿಗೆ ಪೇೞ್ದು ಪರಿವ್ರಾಜಕಂಗೆ ನಿಶ್ಶಲ್ಯಂಗೆಯ್ದರಸನುಮಂ ಸ್ವಜನ ಪರಿಜನ ಬಂಧುವರ್ಗಮುಮಂ ಬಿಡಿಸಿ ಶ್ರೀವರ್ಮರೆಂಬಾಚಾರ್ಯರ ಪಕ್ಕದೆ ದೀಕ್ಷೆಯಂ ಕೈಕೊಂಡು ಮಹಿಷಗಿರಿಯೆಂಬ ಪರ್ವತದೊಳೀ ಪು[13][ಣ್][13] ತೀರ್ವನ್ನೆಗಂ ಕೈಯನೆತ್ತಿಕೊಳ್ಳೆನೆಂದು ಕಾಯೋ

---

[1] ಸಮ್ಯಗ್ದರ್ಶನ ಜ್ಞಾನ ಚಾರಿತ್ರಮುಮಂ ಸಾಧಿಸಿ (ಘಚಥ). [2] ನರಕತಿರಿ (ಕಗ). [3] (ಕಗ) ಗಳಲ್ಲಿಲ್ಲ. [4] (ಕಗ) ಗಳಲ್ಲಿಲ್ಲ. [5] ಪರಸಲ್ವೇಳ್ಪುದೆಂ (ಕಖಗ). [6] ಪರಸು (ಕಖಗ). [7] ಕಗಿಜ್ಜ (ಕಗ), ಳ್ದುಜ್ಜು (ಘಚಥ). [8] ತಳಿಗೆಯ (ಘಚಥ). [9] ತನ್ನಿಂ ತಾನಾ (ಕಗ). [10] ಗ (ಕಗ). [11] ಳಿಪಿ (ಘಚಥ). [12] (ಕಖಗ) ಗಳಲ್ಲಿಲ್ಲ. [13] ಂಣು (ಸ).

ತ್ಸರ್ಗದಿಂ ನಿಂದೊನಂ ಗೃಧ್ರವಾಯಸಾದಿಗಳ್ ಪುಣ್ಣಂ ತೋಡಿ ತಿನೆ ಮೇರುಪರ್ವತಂ ಪೋಲಚಳಿತ ಧೈರ್ಯನಾಗೊಂದು ತಿಂಗಳ್ವರೆಗಂ ಸೈರಿಸಿ[1] ಸಮಾಧಿಮರಣದಿಂ ಮುಡಿಪಿಯಚ್ಯುತಕಲ್ಪದೊಳಿಪ್ಪತ್ತೆರಡು ಸಾಗರೋಪಮಾಯುಷ್ಯಸ್ಥಿತಿಯನೊಡೆಯೊನಚ್ಯುತೇಂದ್ರನಾಗಿ ಪುಟ್ಟಿಯಲ್ಲಿಯ ದೇವಲೋಕದ ದಿವ್ಯಸುಖಮಂ ಪಲಕಾಲಮನುಭವಿಸಿ ಬಂದಿಲ್ಲಿ ಸನತ್ಕುಮಾರನಾದನಾ ಪರಿವ್ರಾಜಕನುಮಾಯಚ್ಯುತೇಂದ್ರಂಗೆ ವಾಹನ ದೇವನಾ[2]ದೊನ[2]ಲ್ಲಿಂ ಬಟ್ಟಿ ಬಂದಿಲ್ಲಿ ಚತುರ್ಗತಿ ಸಂಸಾರದೊಳ್ ನೀಡುಂ ತೊಳಲ್ದಂಜನಗಿರಿಯೆಂಬ ಪರ್ವತದ ತಟದೊಳ್ ತಾಪಸಾಶ್ರಮದೊಳ್ ವಸಿಷ್ಠನೆಂಬ ತಾಪಸಂಗಂ [3]ಘೂಕ[3]ಯೆಂಬ ತಾಪಸಿಗಂ [4]ಬಕ[4]ನೆಂಬೊಂ ಮಗನಾಗಿ ಪುಟ್ಟಿ ತಾಪಸ ತಪಮಂ ಕೈಕೊಂಡು ನೆಗಳ್ದು ಮುಡಿದು ಸಿತಯಕ್ಷನಾದನೆಂಬಂತಿರ್ವರ ಪೂರ್ವಭವವೈರಸಂಬಂಧಿಯಪ್ಪ ಕಥೆಯಂ ಸವಿಸ್ತರಮಾಗಿ ಸುಮಾಳಿಗಳೆಂಬವಧಿಜ್ಞಾನಿಗಳಪ್ಪ ಚಾರಣರಿಸಿಯರ್ ಪೇಳೆ ಎಮ್ಮ ಸ್ವಾಮಿಯಪ್ಪ ಖಚರೇಂದ್ರಂ ಕೇಳ್ದಾದಮಾನುಂ ಸಂತುಷ್ಟಚಿತ್ತನಾಗಿ ಭಟಾರರಂ ಬಂದಿಸಿ ತನ್ನ ಪೊಳಲ್ಗೆ ಪೋದನಾ

ಎಂದಿಂತು ಕಥಾಸಂಬಂಧಮೆಲ್ಲಮಂ ಕಮಳಮತಿಯೆಂಬ ಖೇಚರವಿಳಾಸಿನಿ ಸನತ್ಕುಮಾರಂ ಪೇಳೆವೇಳ್ದೊಡೆ ಮಹೇಂದ್ರಸಿಂಹಂಗೆ ಪೇಳ್ದೊಳಾ [5]ಅವಸರದೊಳ್ ಕುಮಾರಂ ನಿದ್ರಾಸುಖವಿಮುಕ್ತನಾದೊಡಾತನ ಸಮೀಪಕ್ಕೆ ಮಹೇಂದ್ರಸಿಂಹಂ ಪೋಗಿ ಇಂತೆಂದಂ[6] ನಿನ್ನ ವಿಯೋಗದೊಳಪ್ಪ ದುಃಖದಿಂದಂ [7]ವಿಶ್ವಸೇನ ಮಹಾರಾಜನುಂ ಸಹದೇವಿ ಮಹಾದೇವಿ ಮೊದಲಾಗೊಡೆಯವರ್ಗಳೆಲ್ಲಂ ಪ್ರಾಣಸಂದೇಹಮಾಗಿರ್ಕುರ್[7]ಮದಱಿಂ ನಿಮ್ಮ ಪೊಳಲ್ಗೆ [8]ಪೋಗಲ್ವೇಳ್ಕು[8]ಮೆಂದು ಪೇಳ್ದೊಡಾತನುಮಂತೆಗೆಯ್ವೆನೆಂದು ತಮ್ಮ ಮಾವಂಗಳಂ [9]ಬಿಡಿ[9]ಸಿ ವಿಚಿತ್ರಮಪ್ಪ ರಥಗಜತುರಗ ಗರುಡ ಕಳಹಂಸ ಮಯೂರ ಮಕರ ಸಿಂ[10]ಹ ವಿಮಾನಾಧಿರೂಢರ್ಕಳಪ್ಪ[10] ವಿದ್ಯಾಧರರ್ಕಳುಮಪ್ಪಸಹಸ್ರ ಸಂಖ್ಯಾ ಪ್ರಮಾಣಮಪ್ಪರಸಿಯರ್ಕಳುಂ ಬೆರಸು ಮಹಾವಿಭೂತಿಯಿಂದಂ ಒಂದು ಹಸ್ತಿನಾಪುರಮಂ ಪೊಕ್ಕನಿಬರುಂ ವಿಶ್ವಸೇನ ಮಹಾರಾಜಂಗಂ ಸಹದೇವಿ ಮಹಾದೇವಿಗಂ ಸಾಷ್ಟಾಂಗಮೆಱಗಿ ಪೊಡೆವಟ್ಟು ಅವರಾಶೀರ್ವಚನ ಶತಸಹಸ್ರಂಗಳನಾಂತು ಕೊಂಡು ಸುಖದಿಂದಿರೆ ಸನತ್ಕುಮಾರಂಗೆ ಚಕ್ರಂಪುಟ್ಟಿ ಸಕಳ ಚಕ್ರವರ್ತಿಯಾಗಿ ಭೋಗೋಪಭೋಗಂಗಳೆಂಬ ಮಹಾಸಮುದ್ರದೊಳ್ ಪಲಕಾಲಂ ಕ್ರೀಡಿಸುತ್ತಿರ್ಪನ್ನೆಗಂ

ಮತ್ತೊಂದು ದಿವಸಂ ಸೌಧರ್ಮ ಕಲ್ಪದೊಳಾ ಸೌಧರ್ಮೇಂದ್ರಂ ತನ್ನ ದೇವ ಸಭೆಯ ನಡುವೆ ಸಿಂಹಾಸನ ಮಸ್ತಕಸ್ಥಿತಂ ದೇವರ್ಕಳಿಂ ಪರಿವೇಷ್ಟಿತನಾಗಿ [11]ಸೌದಾ[ಮಿ]ನಿ[11]ಯೆಂಬ ನಾಟಕಮಂ ನೋಡುತ್ತಿರ್ಪನ್ನೆಗಂ ಈಶಾನಕಲ್ಪದಿಂದಂ

[1] + ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ (ಘಚಛ). [2] ನಾಗಿ ಪುಟ್ಟಿಯ (ಕಖಗ). [3] ಗರ್ಘ್ಯಂಗೆ (ಕಖಗ). [4] ಜರರ (ಕಖಗ) [5] ಪ್ರಸ್ತಾವ (ಘಚಛ). [6] + ನಿನ್ನ ತಾಯ್ಗಂ ತಂದೆಗಂ (ಚಛ). [7] ಪ್ರಾಣಸಂದೇಹಕ್ಕೆ ವಂದಿರ್ಕುಂ (ಚಛ). [8] ಬೇಗಂಪೋಪ (ಚಛ). [9] ಬರಿ (ಕಗ). [10] ಹಾದ್ಯನೇಕ ವಿವಿಧ ವಾಹನಾರೂಢರ್ಕಳುಮಪ್ಪ (ಛ). [11] ಸೋಕಾಮಣಿ (ಕಖಗ), ಸೌದಾಮನಿ (ಘಚಛ).

[1]ಸಹೋ[1]ತ್ಪನ್ನ ಸಂಗಮದೇವಂ ಬಂದು ಸೌಧರ್ಮೇಂದ್ರನ ಸಭೆಯ[2]ನವಯವ[2]ದಿಂ ಪೊಕ್ಕಿರ್ದಾಗಳಾ ಸಭೆಯೊಳಿರ್ದ ದೇವರ್ಕಳ ರೂಪುಂ ತೇಜಮುಂ ಲಾವಣ್ಯಮು ಮೆಲ್ಲಮಂ ಮಾಸಿಸಿ ತನ್ನ ತೇಜಮೆಯಗ್ಗಳಮಾಗಿರ್ದೊಡೆಂತು ಚಂದ್ರನುದಯಂ ಗೆಯ್ವಾಗಳ್ ಗ್ರಹನಕ್ಷತ್ರತಾರೆಗಳ ತೇಜಂ ಕುಂದುಗುಮಂತೆಲ್ಲರ ತೇಜಮುಮಂ ಕುಂದಿಸಿ ತಾನೆಯಗ್ಗಳಮಾಗೆ [3]ಬೆಳಗುತ್ತಿರ್ದೊನಂ[3] ದೇವರ್ಕಳೆಲ್ಲಂ ವಿಸ್ಮಯಂಬಟ್ಟು ನೋಡಿ ಸೌಧರ್ಮೇಂದ್ರನನಿಂತೆಂದು ಬೆಸಗೊಂಡರ್ ಸ್ವಾಮಿ ಈ ಸಂಗಮನೆಂಬ ದೇವನತಿಶಯಮಪ್ಪ ರೂಪುಂ ಲಾವಣ್ಯಮುಂ ತೇಜಮುಂ ದ್ವಾದಶಾದಿತ್ಯರ್ಕಳೊಮ್ಮೊದಲೆ ಉದಯಂಗೆಯ್ದಂತೆ ಬೆಳಗಿದಪ್ಪುದೇಕಾರಣದಿಂದಾದುದೆಂದು ಬೆಸಗೊಂಡೊಡಿಂತೆಂದು ಸೌಧರ್ಮೇಂದ್ರಂ ಪೇಳಲ್ ತೊಡಗಿದನ್

ಈತಂ ಮುನ್ನಿನ ಭವದೊಳ್ ಈ ಜಂಬೂದ್ವೀಪದ[4] ಪೂರ್ವವಿದೇಹದೊಳ್ [5]ಸೀತೆಯೆಂಬ ತೊಱೆಯ ಬಡಗಣ ದೆಸೆಯೊಳ್[5] ಪುಷ್ಕಳಾವತಿಯೆಂಬುದು ನಾಡಲ್ಲಿ ಪುಂಡರೀಕಿಣಿಯೆಂಬುದು ಪೊಳಲದನಾಳ್ವೊಂ ಸಕಳ ಚಕ್ರವರ್ತಿ ವಿಮಳವಾಹನ ನೆಂಬರಸನಾತನ ಮಹಾದೇವಿ [6]ವಿಮಳ[6]ಮತಿಯೆಂಬೊಳಾ ಇರ್ವರ್ಗ್ಗಂ ಪುಟ್ಟಿದೊಂ ಮಗಂ ಕ್ಷೀರಕುಮಾರನೆಂಬೊನಾತಂ ವೈರಾಗ್ಯಮನೊಡೆಯನಾಗಿ ತಪಂಬಡಲ್ವೇಂಡು ಬಗೆದಿರ್ದೊಡೆ ತಾಯ್ ತಪಂಬಡಲೀಯದೆನಿತಾನುಂ ತೆಱದಿಂ ನುಡಿದು [7]ತಗುಳ್ದೊಡೆ[7] ತಾಯ ವಚನಮನತಿಕ್ರಮಿಸಲಾಱದೆ ಮನೆಯೊಳಿರ್ದಂತೆ ಬ್ರಹ್ಮಚರ್ಯಂ ಮೊದಲಾಗೊಡೆಯ ಬ್ರತಂಗಳಂ ಪ್ರತಿಪಾಳಿಸಿ [8]ಆಚಾಮ್ಲವರ್ಧನ[8]ಮೆಂಬ ನೋಂಪಿಯಂ ಪನ್ನೆರಡು ವರ್ಷಂಬರಂ ನೋಂತು ಸಮಾಧಿಮರಣದಿಂದಂ ಮುಡಿಪಿ ಇಂತಪ್ಪ ರೂಪುಂ ತೇಜಮುಂ ಲಾವಣ್ಯಮುಮುದಱಿಂದೀತಂಗಾದುದೆಂದು ಸೌಧರ್ಮೇಂದ್ರಂ ಪೇಳ್ದೊಡೆ ಮತ್ತಂ ದೇವರ್ಕಳಿಂತೆಂದು ಬೆಸಗೊಂಡರ್ ಸ್ವಾಮಿ ಈತನಂತಪ್ಪ ರೂಪುಂ ತೇಜಮುಂ ಲಾವಣ್ಯಮುಮನೊಡೆಯರ್ ಪೆಱರಾರಾನುಮೊಳರೆ ಎಂದು ಬೆಸಗೊಂಡೊಡೆ ಸೌಧರ್ಮೇಂದ್ರ[9]ನೆಂದನೊಳನ್[9] ಹಸ್ತಿನಾಪುರದೊಳ್ ಕುರುವಂಶದಾತಂ ಸನತ್ಕುಮಾರನೆಂಬೊಂ[10] ಚಕ್ರವರ್ತಿಯಾತಂ[11] ದೇವರ್ಕಳ ರೂಪುಂ ಲಾವಣ್ಯಮುಂ ತೇಜಮುಮನೊಡೆಯನಾದಮಾನುಮಗ್ಗಳಮೆಂದು ಪೇಳ್ದೊಡೆ

ಇಂದ್ರನ ಮಾತಂ ನಂಬದೆ ವಿಜಯ ವೈಜಯಂತರೆಂಬಿರ್ವರ್ ದೇವರ್ಕಳ್ ಪಾರ್ವರ ರೂಪಂ ಕೈಕೊಂಡು ಹಸ್ತಿನಾಪುರಕ್ಕೆ ಸನತ್ಕುಮಾರ ಚಕ್ರವರ್ತಿಯ ರೂಪಂ ನೋಡಲೆಂದು ಬಂದು ಬಾಗಿಲೊಳಿರ್ದ ಪಡಿಯಱರನೆಂದರ್ ನಿಮ್ಮರಸಂಗಿಂತೆಂದು ಪೇೞಿಂ ಗಂಟಱುಂ ಬಂದೆ[12]ವು[12] ನಿಮ್ಮ ರೂಪನಟ್ಟಿವಟ್ಟು ನೋಡಲ್ವೇಂಡೊಡವರುಂ ಪೋಗಿ ತಮ್ಮರಸಂಗಱಿಪಿದೊಡೆ ಅರಸನನುಮತದಿಂದವರ ಮನೆಯಂ ಪೊಕ್ಕರಸನ ನಾರವೋಗಿ ನೋಡ್ವಾಗಳರಸಂ ಸುಗಂಧ ತೈಲದಿಂ

1 ಸಾಹನೋ (ಘಚಛ) 2 ನೆವ (ಘಚಛ) 3 ಸಭೆಯೊಳಿರ್ದ (ಕಖಗ). 4 + ಭರತದ (ಖ). 5 (ಘಚಛ) ಗಳಲ್ಲಿಲ್ಲ. 6 ಲಕ್ಷ್ಮೀ (ಘಚಛ). 7 ನಿಲಿಸಿದೊಡೆ (ಘಚಛ). 8 ಯಾಯಲವರ್ಧಮಾನ (ಕಗ), ಯಾಯಲವರ್ಗಮಾನ (ಖ), ಯಾಯಬಿಲಂವರ್ಧಮಾನ (ಚ). 9 ನೊರ್ವನೊಳನಾತಂ (ಛ). 10 + ಸಕಲ (ಚಛ). 11 + ಗೆ (ಸ). 12 ಮುಂ (ಕಖಗಛ).

ಪೊಯ್ಕುನಿಷ್ಕ್ರಂಗಸಂಗೆಯ್ದು ಮಜ್ಜನಂಬುಗಲೆಂದಿರ್ದವಸರದೊಳ್ ದೇವರ್ಕಳ್ ಸನತ್ಕುಮಾರ ಚಕ್ರವರ್ತಿಯ ರೂಪಂ ವಾಳಾಗ್ರದಿಂ ತೊಟ್ಟು ನಖಾಗ್ರಂಬರೆಗಂ ನಖಾಗ್ರದಿಂ ತೊಟ್ಟು ವಾಳಾಗ್ರಂಬರೆಗಂ [1]ಏಱೆಯುಮಿೞಿಯೆಯುಂ[1] ನೀಡುಂ ಭಾವಿಸಿ ನೋಡಿ ಚೋದ್ಯಂಬಟ್ಟಿಂತು ರೂಪುಂ ತೇಜಮುಂ ಗಾಡಿಯುಂ ಯೌವನಮುಂ ದೇವರ್ಕಳ್ಗಮಿಲ್ಲೆಂದು ಚಕ್ರವರ್ತಿಯ ರೂಪಂ ಪೊಗೞೆ ದರಸನಿಂತೆಂದಂ ನೀಮಾರ್ಗೆನೆಂಬಿರೆಲ್ಲಿಂ ಬಂದಿರೆಂದು ಬೆಸಗೊಂಡೊಡವರೆಂದರ್ ದೇವಲೋಕದಿಂ ಬಂದೆ[2]ವು ದೇವರ್ಕಳೆವು ಸೌಧರ್ಮಕಲ್ಪದೊಳ್ ದೇವರ್ಕಳ ಸಭೆಯ ನಡುವೆ ಸೌಧರ್ಮೇಂದ್ರಂ ನಿಮ್ಮ ರೂಪನಾದಮಾನುಂ ನಚ್ಚಿ ಬಣ್ಣಿಸಿದೊಡಿಂದ್ರನ ಮಾತಂ ನಂಬದೆ ನಿಮ್ಮಂ ನೋಡಲ್ ಬಂದೆವೆಮಿಂದ್ರನ ವ್ಯಾವರ್ಣಿಸುವುದರ್ಕ್ಕಗ್ಗಳಮೆ ನಿಮ್ಮ ರೂಪುಂ[3] ಯವ್ವನಮುಂ ಲಾವಣ್ಯಮುಮಂ ಕಂಡೆವೆಂದು ಪೇೞ್ದಾಮಿನ್ನೆಮ್ಮ ದೇವಲೋಕಕ್ಕೆ ಪೋಪೆವೆಂದೊಡರಸಂ ಮನಂ ಪೆರ್ಚಿ [4]ತನ್ನೊಳ್ ತನ್ನ ರೂಪಂ ನಚ್ಚಿ[4] ಕಿಱಿದುಬೇಗಂ ಮಾಣಿಮಭ್ಯಂಗನಂ ಗೆಯ್ದು ರೂಪಂ ಕಂಡಿರಿಂ ಮಜ್ಜನಂ ಬೊಕ್ಕು ಪಸಧನಂಗೊಂಡಿರ್ದ ರೂಪಂ ನೋಡಿ [5]ಪೋಗಿ[5]ಮೆಂದರಸಂ ನುಡಿದೊಡಂತೆ ಗೆಯ್ವೆಮೆಂದು ದೇವರ್ಕಳಿರ್ದೊಡರಸನುಂ ಮಜ್ಜನಂಬೊಕ್ಕು ಬೇಗಂ ಸರ್ವಾಭರಣ ಭೂಷಿತನಾಗಿ ಆಸ್ಥಾನ ಮಂಟಪದೊಳ್ ಸಿಂಹಾಸನ ಮಸ್ತಕ ಸ್ಥಿತನಾಗಿ ಸಾಮಂತ ಮಹಾಸಾಮಂತರ್ ಮೂವತ್ತಿರ್ಛಾಸಿರ್ವರ್ ಮಕುಟ ಬದ್ಧರ್ಕಳುಂ ವಿದ್ಯಾಧರರ್ಕಳುಂ [6]ಯಕ್ಷದೇವರ್ಕಳುಂ[6] ಬಳಸಿಯುಮಿರ್ದೋಲಗಿಸೆ [7]ಮೂವತ್ತೆರಡುಂ[7] ಚಾಮರಂಗಳಿಕ್ಕೆ ಸೌಧರ್ಮೇಂದ್ರನಿಪ್ಪಂತಿರ್ದು ದೇವರ್ಕಳ್ಗೆ ಬೞಿಯಟ್ಟಿ ಬರಿಸಿ[8] ನೋಡಿಮೆನ್ನೆನ್ನ ರೂಪನೆಂದು ತನ್ನಂ ತೋಱಿದೊಡೆ ದೇವರ್ಕಳ್ ನೋಡಿ ವಿಸ್ಮಯಂ ಬಟ್ಟಿದೇಂ ಚೋದ್ಯಮೊ[9]

ಶ್ಲೋಕ || ಅನೇಕ ರಾಗ ಸಂಕೀರ್ಣಂ ಘನಲಗ್ನಮಪಿ ಕ್ಷಣಾತ್ |
ಮಾನುಷಂ ಯೌವನಂ ಕಷ್ಟಂ ನಶ್ಯತೀಂದ್ರಧನುರ್ಯಥಾ ||

ಎಂದೀ ಕ್ಷಣಮಾತ್ರದೊಳೆ ಮನುಷ್ಯರ ರೂಪುಂ ಗಾಡಿಯುಂ ಚೆಲ್ವುಂ ತೇಜಮುಂ ಯೌವನಮುಂ ಕುಂದಿತ್ತೆನೆ ಚಕ್ರವರ್ತಿಯೆಂದನೆನ್ನ ರೂಪಂ ಮುನ್ನೆ ನೀಮ್ ಪೊಗೞ್ದುದೀಗಳೇಕೆ ಪೞಿದಪ್ಪಿರೆನೆ [10]ದೇವರೆಂದರ್ ಕೇಳರಸಾ[10] ದೇವರ್ಕಳ [11]ತೇಜಮುಂ ಲಾವಣ್ಯಮುಂ[11] ಪುಟ್ಟಿದ ಪ್ರಥಮ ಸಮಯದಿಂ ತೊ[12]ಟ್ಟು ಪೆರ್ಚುತ್ತುಂ ಪೋಕುಮಾಯುಷ್ಯದ ನಡುವರೆಗಮಲ್ಲಿಂದತ್ತ ಕುಂದುತ್ತುಂ ಪೋಕುಮಾಯುಷ್ಯಾಂತಂಬರೆಗಂ[12] ಮತ್ತಮನುಂ ನಿಮ್ಮ ರೂಪಂ ಯೌವನ ಭರಮೊಳಿರ್ದುದುಮಂ ಕಂಡೆ

1 ಏಱಲುವಿೞಿಯೆ (ಕ), ಏಱೆಮುಮಿೞಿಯೆಯುಂ (ಖಘಚ), ನೇರಲುವಿೞಿಯೆ (ಗ). 2 ಮುಂ (ಕಖಗ). 3 + ತೇಜಮುಂ (ಛ). 4 ತನ್ನ ರೂಪ ನಚ್ಚಿ (ಕಖಗ). 5 (ಕಖಗ) ಗಳಲ್ಲಿಲ್ಲ. 6 (ಘಚ)ಗಳಲ್ಲಿಲ್ಲ. 7 ಮೂವತ್ತಿರ್ವರ್ ವಿಲಾಸಿನಿಯರ್ (ಘಚ), ಮೂವತ್ತಿರ್ವರ್ ಕನ್ನೆಯರ್ (ಛ). 8 ದೊಡೀ (ಘ), ದಾಡಿ (ಚಛ). 9 ಮುಂ (ಕಖಗಘಛ). 10 ದೇವರ್ಕಳರಸಾ (ಛ). 11 ಚೆಲ್ವುಂ ಯೌವನಮುಂ ವಿಭವಮುಂ (ಘಚಛ), ರೂಪುಂ ಗಾಡಿಯುಂ (ಛ). 12 ಟ್ಟುಱುದಿಂಗಳಾಯುಷ್ಯಮುಂಟೆನೆಯೆಡೆಯೊಳೆಲ್ಲಿಯುಂ ಕಿಡದೇಕಸ್ಥಿತಿಯೊಳ್ ಸ್ಥಿರಮಾಗಿರ್ಕ್ಕುಮಲ್ಲಿಂದತ್ತ ಕುಂದುತ್ತಂ ಪೋಕು (ಘಚಛ).

ಮೀಗಳಾಯುಷ್ಯಮುಂ ತೇಜಮುಂ ರೂಪುಂ ಲಾವಣ್ಯಮುಂ ಯೌವನಮುಂ[1] ಕಿಱಿದು ಕುಂದಿದುದಂ ಕಂಡೆಮೆನೆ ಚಕ್ರವರ್ತಿ ನೀಮೆಂತಱಿದಿರೆಂದು ಬೆಸಗೊಂಡೊಡೆ ದೇವರ್ಕ್ಕಳೆಂದರೆಮಗವಧಿಜ್ಞಾನಮುಂಟಪ್ಪುದಱಿಂದಱಿ[2]ದೆವು[2] ಮನುಷ್ಯರ್ಗ್ಗಱಿಯಲಾಗದೆಂದೊಂದು ದೋಣಿ[3]ಕೊಂ[3]ಡಮಂ ತರಿಸಿ ನೀರಂ ತೆಕ್ಕನೆ ತೀವಿಯದಱೊಳಗೆ ಚಮರಿಯನರ್ದ್ದಿ ತೆಗೆದು ಬಳಸಿಯಂ ಬೀಸಿದಾಗಳ್ ಸಭೆಯೊಳಿರ್ದ ಮಾನಸರ ಮೇಗೆಲ್ಲಂ ನೀರ್ ಪನಿತುದಂ ತೋಱಿ ದೇವರೆಂದರ್ ಪೇೞಿಮೀ ಚಮರಿಯೊಳ್ ತಗುಳ್ದ ಬಿಯಮಾದನಿತು ನೀರಂ ಕೊಂಡದೊಳ್ ಕುಂದಿ[4]ದುದಂ[4] ತೋಱಿಮೆಂದೊಡವರುಮಱಿಯದಿರ್ದ್ದೊಡೆಂತಿದಂ[5]ನೀಮಱಿ[5]ಯಲಾಗದಂತೆ ಮಾನಸರಾಯುಷ್ಯಮುಂ ತೇಜಮುಂ ಲಾವಣ್ಯಮುಂ ಯೌವನಮುಂ ಪ್ರತಿಸಮಯಂ ಕುಂದು[6]ತಿರ್ಕುಮಾವೀಚಿಮರಣಮಂ[6] ನಿಮಗಱಿಯಲಾಗದೆಂದು ಪೇೞ್ದು ಹೇತು ದೃಷ್ಟಾಂತಂಗಳಿಂದಂ ಪ್ರತ್ಯಕ್ಷಮಂ ತೋಱಿ ಚಕ್ರವರ್ತಿಯಂ ನಂಬೆ ನುಡಿದು ದೇವರ್ಕ್ಕಳ್ ತಮ್ಮ ಸೌಧರ್ಮಕಲ್ಪಕ್ಕೆ ಪೋದರ್

ಮತ್ತಿತ್ತ ಸನತ್ಕುಮಾರ ಚಕ್ರವರ್ತಿಗದುವೆ [7]ನಿರ್ವೇಗ[7]ಕ್ಕೆ ಕಾರಣಮಾಗಿ ಶರೀರಭೋಗಕ್ಕೆ ಪೇಸಿ ಇಂತೆಂದು ಮನದೊಳ್ ಬಗೆಗುಂ :

ವ|| ರೂಪಂ ಯೌವನಮಾಯುರಕ್ಷ ವಿಷಯಾ ಭೋಗೋಪಭೋಗಾ ವಪುಃ |
ವೀರ್ಯಂ ಸ್ವೇಷ್ಟಸಮಾಗಮೋ ವಸುಮತಿಸ್ಸೌಭಾಗ್ಯಭಾಗ್ಯಾದಯಃ ||
ನೋ ನಿತ್ಯಾಃ ಸ್ಫುಟಮಾತ್ಮನಸ್ಸಮುದಿತ ಜ್ಞಾನೇಕ್ಷಣಾಭ್ಯಾಮೃತೇ |
ಶೇಷಾ ಇತ್ಯನುಚಿಂತಯಂತು ಸುಧಿಯಃ ಸರ್ವೇ ಸದಾಽನಿತ್ಯತಾಂ ||

ಶ್ಲೋಕ|| ಆದೌ ಜನ್ಮ ಜರಾರೋಗೌ ಮಧ್ಯೇಪ್ಯಂತೇ ಖಿಳಾಂತಕಃ |
ಇತಿ ಚಕ್ರೈಕ ಸಂಭ್ರಾಂತಿರ್ಜಂತೋರ್ಮಧ್ಯೇ ಭವಾರ್ಣವಂ ||

ಎಂದಿಂತು ವೈರಾಗ್ಯಮಂ ಭಾವಿಸಿ ವಿಜಯಕುಮಾರನೆಂಬ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಪರಿವಾರಕ್ಕೆಲ್ಲಂ ನಿಶ್ಶಲ್ಯನಾಗಿ ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದು ಪಲಂಬರ್ ಮಕುಟಬದ್ಧ[8]ರ್ಕಳಪ್ಪರಸುಮಕ್ಕಳ್ವೆರಸು[8] ವಿನಯಂಧರ ಭಟಾರರ ಪಕ್ಕದೆ ತಪಂಬಟ್ಟು ದೀಕ್ಷೋಪವಾಸತ್ರಿರಾತ್ರಂಗೆಯ್ದು ಶರೀರಸಂಧಾರಣ ನಿಮಿತ್ತಂ ಚರಿಗೆವೊಕ್ಕೊಡೊರ್ವ್ವಳ್ ಬಡ[9]ಬಿರ್ದ್ದ[9] ನಿಱಿಸಿ ಪ್ರಥಮ ದಿವಸದೊಳ್ ಪಾರಕ್ಕಿನ ಕೂೞು[10]ಮವರೆಯುಮೆಣ್ಣೆ[10]ಯುಮಡಿಸಳೆಯುಮಪ್ಪುದಂ ಇದಿತ್ತಿಸಿದೊಡದನಮೃತಮನುಣ್ಬಂತುಂಡು ಮತ್ತಂ ತ್ರಿರಾತ್ರಕ್ಕೆ [11]ಪಚಖ್ಖಾಣಂ[11]ಗೊಂಡರಾ ಕಾಲದಿಂ ತೊಟ್ಟಾಹಾರದೊಳಪ್ಪ ದೋಷದಿಂದಂ 'ಕಚ್ಛುಜರಖಾಸಸೋಸೋ ಭತ್ತಚ್ಛದಿ ಅಚ್ಛಿಕುಚ್ಛಿದುಕ್ಖಾಣಿ' ಎಂದಿವು ಮೊದಲಾಗೊಡೆಯವೇೞುನೂಱು

[1] + ಕಿಱಿ (ಘಚಛ). [2] ವೆಮುಂ (ಕಗಖ). [3] ಗೊಂ (ಘಚ). [4] ಡೆಡೆಯಂ (ಘಜಛ). [5] ನಿಮಗ (ಘಚಛ) [6] ತಿರ್ದವೀಚಿಯೆಂಬ ಮರಣಮುಮಂ (ಕಖಗ), ರ್ಕುಮಾವಿ ಚಿಮರಮಂ (ಘಚ) [7] ವೈರಾಗ್ಯ (ಛ) [8] ರ್ ವೆರಸು ಅರಸಿಯರ್ ಬೆರಸಿ (ಕಗ), ರ್ ವೆರಸು ಅರಸಿಯರುಂವೆರಸಿ (ಖ), (ಘಚ) ಗಳಲ್ಲಿಲ್ಲ. [9] ಳ್ದಿ (ಕಖಗ), ದ್ದಿ (ಚಛ). [10] ಮಾವರೆಯೆಣ್ಣೆ (ಕಗ) [11] ಪ್ರತ್ಯಾಖ್ಯಾನಂ (ಘಚ).

ವ್ಯಾಧಿಗಳಂ ನೂಱು ವರುಷಂಬರಂ ಒಳ್ಕೊತ್ತಾಗಿ ಸೈರಿಸಿ ಉಗ್ರೋಗ್ರ ತಪದಿಂ ದೀಪ್ತತಪಂ ಮಹಾತಪಂ ಘೋರತಪಮೆಂದಿವು ಮೊದಲಾಗೊಡೆಯ ತಪಂಗಳಂ ಗೆಯ್ಯೆ ತಪದ ಮಾಹಾತ್ಮ್ಯದಿಂದಂ ಆಮೋಷಧಿ ಖೇಳೋಷಧಿ ಜಲ್ಲೋಷಧಿ ವಿಪ್ರೋಷಧಿ ಸರ್ವೌಷಧಿಯೆಂದಿವು ಮೊದಲಾಗೊಡೆಯ ಋದ್ಧಿಗಳ್ ಪುಟ್ಟಿದೊ[1]ಡಂ[1] ವ್ಯಾಧಿಗೆ ತಕ್ಕ ಪ್ರತೀಕಾರಮಂ ಮಾಡದಿಂತು ಘೋರವೀರ ತಪಶ್ಚರಣಂ ಗೆಯ್ಯೆ

ಮತ್ತೊಂದು ದಿವಸಂ ಸೌಧರ್ಮೇಂದ್ರಂ ತನ್ನ [2]ಸಭೆಯೊಳ್[2] ಸಿಂಹಾಸನಮಸ್ತಕಸ್ಥಿತನಾಗಿ ಧರ್ಮಶ್ರವಣಾನಂತರಂ ರಿಸಿಯರ್ಕಳ ಗುಣಂಗಳಂ ವ್ಯಾವರ್ಣಿಸುತ್ತಿರ್ದು ಸನತ್ಕುಮಾರ ರಿಸಿಯ ಗುಣಗಣಮನಾದಮಾನುಂ ಕೈಕೊಂಡಿಂತೆಂದು ಪೇೞಲ್ ತಗುಳ್ದೊನಾ ವಾತ ಪಿತ್ತ ಶ್ಲೇಷ್ಮ ಶ್ವಾಸ ಖಾಸ ಜರಾರು[3]ಚಿಭರ್ದ್ಯ[3]ತಿಸಾರಾಕ್ಷಿ ಕುಕ್ಷಿ ವೇದನಾಸ್ಫೋಟಕಂ ಪಿಟಕಂ ಶೂಲ ಭಗಂದರಂ ಕುಷ್ಠ ಕ್ಷಯ ಗಂಡ[4]ಶಿರೋವೇದನೆ ಮೊದಲಾಗೊಡೆಯವೇೞ್ನೂಱು ವ್ಯಾಧಿಗಳೊರ್ಮೊದಲೆ ಮೆಯ್ಯೊಳ್ ಪುಟ್ಟಿದೊಡಂತು ತಾಮುಂ ಋದ್ಧಿಸಂಪನ್ನರಾಗಿಯುಂ ವ್ಯಾಧಿಗೆ ತಕ್ಕ ಪ್ರತೀಕಾರಂಗೆಯ್ಯದೆ ನೂಱು ವರುಷಂಬರೆಗಂ ಒಳ್ಕೊತ್ತಾಗಿ ಸೈರಿಸಿ ತಪಂಗೆಯ್ದಪ್ಪರೆಂದು ಸೌಧರ್ಮೇಂದ್ರಂ ಪೊಗೞ್ವುದಂ ಕೇಳ್ದು ಮುನ್ನೆ ಬಂದ ದೇವರ್ಕಳಿರ್ವರುಂ ವೈದ್ಯರ ರೂಪಿನೊಳ್ ಮರ್ದುಗಳಂ ಪಸುಂಬೆಯೊಳ್ ತಕ್ಕನೆ ತೀವಿ ಪರೀಕ್ಷಿಸಲ್ಕೆಂದು ಸಾರ್ದು ವಂದಿಸಿ ಇಂತೆಂದರ್ ಭಟಾರಾ ನಿಮ್ಮ ಮೆಯ್ಯ ಕುತ್ತಂಗಳೆಲ್ಲಮಂ ಮರ್ದಂ ಮಾಡಿ ಕಿಡಿಸಲ್ ನೆಱೆವೆ[5]ವು[5] ಮರ್ದಂ ಮಾ[6]ಡು[6]ವುದನೊಡಂಬ[7]ಡವೇೞ್ಕುಮೆಂದೊಡೆ[7] ಭಟ್ಟಾರರುಂ ಮೋನಂಗೊಂಡು ನುಡಿಯದೆ ಕೆಮ್ಮಗಿರ್ದೊಡೆ ಪಿರಿದುಂ ಬೇಗಮಿ[8]ರ್ದೆ[8]ೞ್ದು ಪೋಗಿ ಮಱುದಿವಸಂ ಮಗುೞ್ದು ಬಂದಿಂತೆಂದರ್ ಭಟಾರಾ ವೈದ್ಯಶಾಸ್ತ್ರದೊಳಾ[9]ದಮಾನುಂ[9] ಕುಶಲರೆ[10]ಮ್ಮುಂ[10] ಗ್ರಂಥಾರ್ಥ [11]ಸ್ವರೂಪದಿಂದೆಲ್ಲಾ ಕುಶಲರೆಮ್ಮುಂ[11] ಕರ್ಮಜ್ಞರೆಮ್ಮುಂ ಮರ್ದುಗಳುಮಥಿಸವಂಗಳಾದಮೊಳ್ದವಿರ್ದುವುಂ ನಿಮ್ಮ ಮೆಯ್ಯ ಕುತ್ತಂಗಳೆಲ್ಲಮನೇೞು ದಿವಸದಿಂದೊಳಗೆ ಕಿಡಿಸಿ ನೀರೋಗಮಪ್ಪಂತಿರೆ ಮಾಡುವೆವು ಬೞಿಕ್ಕೇನುಂ ಸಂಕ್ಲೇಶಮಿಲ್ಲದೆ ತಪಂಗೆಯ್ಯಿಮೆಂದೊಡೆ ಭಟಾರರವರೊಡನೆ ನುಡಿವಾಗಳುಗು[12]ೞ ಸೀ[12]ಕರಂಗಳ್ ತಮ್ಮ ಮುಂಗೆಯ್ಯ ಮೇಗೆ ಬಿದ್ದೊಡೆ ಬೆರಲಿಂ [13]ನೀಂಟಿ[13] ತೋಱಿದಾಯೆಡೆ ಸುವರ್ಣಾಯಮಾನಮಾಗಿ ತೊಳಗುತ್ತಿರ್ದ ಮೆಯ್ಯ ತೇಜಮುಮಂ ದೇವರ್ಕಳ್ ವಿಸ್ಮಯಂಬಟ್ಟು ನೋಡುತ್ತಿರೆ ಭಟಾರರಿಂತೆಂದರೆಮಗೆ ಮರ್ದು ಬಾಹ್ಯಯಪ್ಪೊಡೆಮಗಾಮೆ ಮರ್ದಂ ಬಲ್ಲೆ[14]ಮೆ[14]ಮಗದು ಬಾಹ್ಯಯಲ್ತು ನೀಮುಂ ಜಾತಿಜರಾಮರಣಂಗಳೆಂಬ ಕುತ್ತಮಂ ಕಿಡಿಸಲಾರ್ಪೊಡಾ ಮರ್ದನೊಡಂಬಡುವೆಮುೞಿದಾವ ಮರ್ದುಮ

---

1 ಡವಂ (ಕಖಗ). 2 ಪರಿವಾರಂಬೆರಸು (ಘಚಛ). 3 ಜಿರಾದ್ಯೋ (ಕಖಗ). 4 + ಮಾಲಾ (ಘಚ). 5 ಮುಂ (ಕಖಗ). 6 ಡಿ ಕೆಡಿಸು (ಛ). 7 ದುವಿರಪ್ಪೊಡೆನೆ (ಚಛ). 8 ಳ್ದು (ಕಖಗ). 9 ದಂ (ಘಚಛ). 10 ವು (ಘಚಛ). 11 ಪ್ರಯೋಗಂಗಳೆಲ್ಲಮುಮಗೆ ಪಾರಂ (ಘಚಛ). 12 ಡಳಸಿಖ (ಖ). 13 ತೊಡೆದು (ಘಚಛ). 14 ವೆ (ಛ).

ನೊಡಂಬಡುವೆ[1]ಮಲ್ಲೆಮಂ[1]ದೊಡೆ ದೇವರ್ಕಳುಮಿಂತೆಂದರ್ ಜಾತಿಜರಾಮರಣಂಗಳೆಂಬ ಕುತ್ತಮಂ ಕಿಡಿಸಲ್ಕಾಪಮಾಱೆಮಾ ಕುತ್ತಮಂ ಕಿಡಿಸಲ್ಕೆ ಭಟಾರಾ ನೀಮೆ ಸಮ[2]ರ್ಥರಿರ್ ಪರಮ[2]ವೈದ್ಯರಿರದಕ್ಕೆಂದು ಮತ್ತಂ ದೇವರ್ಕಳೆಂದರ್ ಭಟಾರಾ ಸೌಧರ್ಮೇಂದ್ರಂ ನಿಮ್ಮ ತಪದೊಳಪ್ಪ ಗುಣಂಗ[3][ಳುಮಂ][3] ವ್ಯಾಧಿಗಳಂ ಸೈರಿಸಿ ನೆಗಟ್ಟ ನೆಗೞ್ತೆಯುಮಂ ದೇವರ್ಕಳ ಸಭೆಯ ನಡುವೆಯಾದಮಾನುಂ ಕೈಕೊಂಡು ಪೊಗೞ್ದೊಡಾಮಿಂದ್ರನ ಮಾತಂ ನಂಬದೆ ನಿಮ್ಮಂ ಪರೀಕ್ಷಿಸಲ್ಕೆಂದು ಬಂದೆ[4]ವು[4] ಸೌಧರ್ಮೇಂದ್ರನ ಪೊಗೞ್ದುದೇನುಂ ತಪ್ಪಿಲ್ಲೆಂದು ನುಡಿದು ಗುಣಂಗೊಂಡು ಮಗುೞ್ದು ವಂದಿಸಿ ಮರ್ದುಗಳೆಲ್ಲಮನೊಂದು ಪೞವಾವಿಯೊಳ್ ಪೊಯ್ದು ದೇವರ್ಕಳ್ ತಮ್ಮ ದೇವಲೋಕಕ್ಕೆ ಪೋದೊರಾ ಮರ್ದಿನ ಬಾವಿಯ ನೀರಂ ಮಿಂದೊರ್ಗ್ಗೆಲ್ಲಂ ಕುತ್ತಂಗಳ್ ಕೆ[5]ಡುವುಪಾದವು[5]

ಸನತ್ಕುಮಾರ ಭಟಾರರುಮೇೞುನೂಱುಂ ವ್ಯಾಧಿಗಳಂ [6]ನೂಱುವರುಷಂಬರೆಗಂ[6] ಸೈರಿಸಿ [7]ಘೋರವೀರತಪಶ್ಚರಣಂಗೆಯ್ದು ಆಲದ ಮರದ ಕೆೞಗೆ ಸಂನ್ಯಸನಂಗೆಯ್ದು ಸಮಾಧಿಮರಣದಿಂ ಮುಡಿಪಿ ಮಿಕ್ಕ ರತ್ನತ್ರಯಂಗಳಂ ಸಾಧಿಸಿ[7] ಸನತ್ಕುಮಾರಕಲ್ಪದೊಳ್ ಏೞು ಸಾಗರೋಪಮಾಯುಷ್ಯಸ್ಥಿತಿಯನೊಡೆಯೊನಿಂದ್ರನಾಗಿ ಪುಟ್ಟಿದೊಂ

ಮತ್ತಾರಾಧಕರಪ್ಪ ಭವ್ಯರ್ಕಳೆಲ್ಲಂ ಸನತ್ಕುಮಾರ ಭಟಾರರಂ ಮನದೊಳ್ ಬಗೆದು ವ್ಯಾಧಿಗಳೊಳಪ್ಪ ವೇದನೆಗ[ಳುಮಂ] ಪಸಿವುಂ ನೀರೞ್ಕೆ ಮೊದಲಾಗೊಡೆಯ [8]ಬಾಧೆಯುಮಂ ಸೈರಿಸಿ [9]ದೇವರಂ ಧ್ಯಾನಿಸುತ್ತಂ ಪಂಚನಮಸ್ಕಾರಮಂ ಮನದೊಳುಚ್ಚರಿಸುತ್ತಂ [10]ಮಿಕ್ಕ ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ[10] ಸ್ವರ್ಗಾಪವರ್ಗಸುಖಂಗಳನೆಯ್ದುಗೆ

---

[1] ವಲ್ಲಿವೆಂ (ಘ). [2] ರುಂ ಖಿಪ್ಪರಮ (ಕ). [3] ಳ್ತಂ (ಸ) [4] ಮುಂ (ಸ-ಭ).
[5] ಟ್ಟುಪೋಪವಾ (ಚ), ಟ್ಟುವಾ (ಭ). [6] (ಘಚಭ) ಗಳಲ್ಲಿಲ್ಲ. [7] (ಘಚಭ) ಗಳಲ್ಲಿಲ್ಲ.
[8] + ಪರೀಷಹಂಗಳೊಳಾದ (ಘಚಭ) [9] ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ (ಘಚಭ). [10] ಮುಡಿಪಿ (ಘಚಭ)

(೫) ಅಣ್ಣಿಕಾಪುತ್ರನ ಕಥೆ

ಅಣ್ಣಿಕಾಪುತ್ರನ ಕಥೆಯಂ ಪೇೞ್ವೆಂ :

ಗಾಹೆ|| ಣಾವಾಏ ಣಿಬ್ಬುಡಾಏ ಗಂಗಾಮಜ್ಝೇ ಅಮೂಢಮಾಣಮದೀ |
ಆರಾಧಣಂ ಪವಣ್ಣೋ ಕಾಲಗದೋ [1][ಏಣಿಯಾ][1] ಪುತ್ತೋ ||

[ಣಾವಾಏ—ನಾವೆ, ಣಿಬ್ಬುಡಾಏ—ಮುೞುಗಿದುದಾದೊಡೆ, ಗಂಗಾಮಜ್ಝೇ—ಗಂಗಾಮಹಾನದಿಯ ನಡುವೆ, ಅಮೂಢಮಾಣಮದೀ—ಮೋಹಿಸದ ಬುದ್ಧಿಯ ನೊಡೆಯನಾಗಿ, ಆರಾಧಣಂ—[2]ನಿಜಾತ್ಮಾರಾಧನೆಯಂ[2], ಪವಣ್ಣೋ—ಲೇಸಾಗಿ ಪೊರ್ದಿದೊಂ, ಕಾಲಗದೋ—ಕಾಲಂಗೆಯ್ದೊನಾಗಿ, [1][ಏಣಿಯಾ][1]ಪುತ್ತೋ—ಅಣ್ಣಿಕೆಯ ಮಗಂ]
ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಉತ್ತರ ಮಧುರೆಯೆಂಬುದು ಪೊೞಲದನಾಳ್ವೊಂ ಪ್ರಜಾಪಾಳನೆಂಬೊನರಸನಾತನ ಮಹಾದೇವಿ ಸುಪ್ರಭೆಯೆಂಬೊಳಂತವರ್ಗ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಪೊೞಲೊಳ್ ಸಾರ್ಥಾಧಿಪತಿ ಧನದತ್ತನೆಂಬೊಂ ಪರದಂ ಧನಕನಕ ಸಮೃದ್ಧನಾತನ ಭಾರ್ಯೆ ಧನಶ್ರೀಯೆಂಬೊಳಾಯಿರ್ವರ್ಗಂ ಮಗಂ ಧನದೇವನೆಂಬೊನಂತವರ್ಗಳ್ಗೆ ಸುಖದಿಂ ಕಾಲಂ ಸಲೆ

ಮತ್ತೊಂದು ದಿವಸಂ ಧನದೇವಂ ಪರದಿಂಗೆಂದು ಪಿರಿದುಂ ಸಾರ[3]ಮಪ್ಪ ಭಂಡಮಂ ತೀವಿಕೊಂಡು ಪಿರಿದುಂ ಸಾರ್ಥಂಬೆರಸು ದಕ್ಷಿಣ ಮಧುರೆಗೆ ಪೋದೊಡಾ ಪೊೞಲ ರಾಜಶ್ರೇಷ್ಠಿ ತಿಳಕಶ್ರೇಷ್ಠಿಯೆಂಬೊನಾತನ ಭಾರ್ಯೆ ನಂದೆಯೆಂಬೊಳಾಯಿರ್ವರ್ಗಂ ಮಕ್ಕಳ್ ಪದ್ಮಾವತಿ[4] ಸುಮತಿ ಗುಣಮತಿಯೆಂದಿವರ್ ಮೊದಲಾಗೊಡೆಯ ಎಣ್ಬರ್ ಪೆಣ್ಮಕ್ಕಳಾದೊ[5]ಡ[5]ವರೊಳಗೆಲ್ಲರಿಂ ಕಿಱಿಯಳಣ್ಣಿಕೆಯೆಂಬೊಳಾಕೆಯುಂ ಧನದತ್ತನ ಮಗನಪ್ಪ ಧನದೇವನಂ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಗುಣಂಗಳಿಂ ಕೂಡಿದೊನಂ *ತಿಳಕಶ್ರೇಷ್ಠಿಯುಂ ನಂದೆಯುಂ ಕಂಡಾತಂಗೆ ಬಯಸಿ ಅಣ್ಣಿಕೆಯೆಂಬ ಕೂಸಂ ಕೊಟ್ಟೊಡೆ ಕೆಲವು ದಿವಸಮಾ ಪೊೞಲೊಳಿರ್ದು ತಮ್ಮ ಕೊಂಡು ಪೋದ ಭಂಡಮಂ ಮಾಱಿ ಪೆಱದಂ ತಮ್ಮ ನಾ[6]ಡ್ಗ[6]ಪೂರ್ವಮಪ್ಪ ಭಂಡಮಂ ತೀವಿಕೊಂಡು ತಮ್ಮ ಪೊೞಲುತ್ತರ ಮಧುರೆಗೆ ಬಂದಿರ್ದರನ್ನೆಗ ಮಣ್ಣಿಕೆಗೆ ಗರ್ಭಮಾಗಿ ಮಗಂ ಪುಟ್ಟಿದೊಡೆ ಧನದೇವನ ತಾಯುಂ ತಂದೆಯುಂ ನಂಟರುಮೆಲ್ಲಂ ನೆರೆದಣ್ಣಿಕೆಯ ಮಗನಂ[7]ದಾತಂ[7]ಗಣ್ಣಿಕಾಪುತ್ರನೆಂದು ಪೆಸರನಿ[8]ಟ್ಟೊಡಾ[8]ತಂ ಕ್ರಮಕ್ರಮದಿಂ ಸುಖದಿಂ [9]ಬಳೆದು ನವಯೌವನನಾಗಿ[10]ಪ್ಪನ್ನೆಗಂ

---

[1] ಅಣ್ಣಿಕಾ (ನ). [2] ದರ್ಶನಜ್ಞಾನ ಚಾರಿತ್ರಂಗಳಾರಾಧನೆಯುಂ (ಘಚಛ). [3] + ಧನ (ಘಚಛ). [4] + ಪ್ರಭಾವತಿ (ಘಚಛ) [5] ರ (ಘಚ). *ಪು. ೬೬-೬೯ (ಖ) ದಲ್ಲಿ ನಷ್ಟವಾಗಿದೆ. [6] ಳ್ಗಳ್ಗ ಅ (ಕಗ). [7] ದೊಡಾತಂ (ಘಛ). [8] ಟ್ಟರಾ (ಘಚಛ) [9] ಬೆ (ಕಗಚ) [10] + ಸುಖಮಿ (ಘಚಛ)

ಇತ್ತ [1]ದಮ[1]ಸೂರಿಗಳೆಂಬವರವಧಿಜ್ಞಾನಿಗಳಪ್ಪ ಆಚಾರ್ಯರ್ ಪಿರಿದುಂ ರಿಸಿ ಸಮುದಾಯಂಬೆರಸು ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೋರುತ್ತರ ಮಥುರೆಗೆ ಬಂದು ಬಹಿರುದ್ಯಾನವನದೊಳಿರ್ದರ್ ಅರಸನಣ್ಣಿಕಾಪುತ್ರಂ ಪೋಗಿ [2]ವಂದಿಸಿ ಧರ್ಮಮಂ ಕೇಳ್ದು ಸಮ್ಯಕ್ತ್ವಪೂರ್ವಕಂ ಶ್ರಾವಕವ್ರತಂಗಳೆಲ್ಲಮಂ ಕೈಕೊಂಡು ತದನಂತರಮೆ ಭಟಾರಾ ಎನಗಾಯುಷ್ಯಮೆನಿ[3]ತೆಂದು[3] ತನ್ನಾಯುಷ್ಯ ಪ್ರಮಾಣಮಂ ಬೆಸಗೊಂಡೊಡೆ ಭಟಾರರುಂ ಕಿಱಿದೆ ನಿನಗಾಯುಷ್ಯಮೆಂದು ಪೇೞ್ದೊಡೆ ವೈರಾಗ್ಯಪರಾಯಣನಾಗಿ ತಾಯುಂ ತಂದೆಯುಮಂ ನಂಟರುಮಂ ಬಿಡಿಸಿ ನಿಶ್ಶಲ್ಯಂಗೆಯ್ದು [1]ದಮ[1]ಸೂರಿಗಳೆಂಬಾಚಾರ್ಯರ ಪಕ್ಕದೆ ತಪಂಬಟ್ಟು ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಗುರುಗಳನೊಡಂಬಡಿಸಿ ಏಕವಿಹಾರಿಯಾಗಿ ಗ್ರಾಮೇಕರಾತ್ರಂ ನಗರೇ ಪಂಚರಾತ್ರಂ ಅಟವ್ಯಾಂ ದಶರಾತ್ರಮೆಂಬೀ ನ್ಯಾಯದಿಂ [4]ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ[4] ತೀರ್ಥಂಗಳೆಲ್ಲಮಂ ವಂದಿಸಲ್ಕೆಂದು ಗಂಗಾಮಹಾನದಿಯುಮಂ ಪಾಯ್ದು ಪೋಪ ಬಗೆಯಿಂದಂ ನಾವೆಯನೇಱಿದೊಡದೊಂದುತ್ಪಾತ ವಾತದಿಂದಂ [5]ಗಂಗಾಮಹಾನದಿಯ[5] ನಡುವೆ ಮಡುವಿನೊಳ್ ಭಯಂಕರಮಾಗುತ್ತಿರ್ದರ್ ತೆರೆ[6]ಯ[6]ನೊಡೆಯದಱೊಳ್[7] ಮುೞುಗಿದೊಡಾ ಅಣ್ಣಿಕಾಪುತ್ರನೆಂಬ ರಿಸಿ ಪಿರಿದಪ್ಪ ಮಾಹಾತ್ಮ್ಯಮಂ ಮೋಹಿಸದ ಬುದ್ಧಿಯನೊಡೆಯೊಂ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಯಾವಜ್ಜೀವಂ ನಿವೃತ್ತಿಗೆಯ್ದು [8]ಕಾಯೋತ್ಸರ್ಗಂ ನಿಂದು [9]ಧರ್ಮಧ್ಯಾನ[9] ಶುಕ್ಲಧ್ಯಾನಂ[10]ಗಳಂ[10] ಜಾನಿಸಿ ಸಕಳ ಕರ್ಮಂಗಳಂ ಕಿಡಿಸಿ [11]ಅಂತರ್ಗತ[11] ಕೇವಲಿಯಾಗಿ ಮೋಕ್ಷಕ್ಕೆ ವೋದರ್

ಮತ್ತಂ ಪೆಱರಾರಾಧಕರಪ್ಪವರ್ಗಳೆಲ್ಲಮಣ್ಣಿಕಾಪುತ್ರನೆಂಬ ರಿಸಿಯುಂ ಮನದೊ[12]ಳಿಟ್ಟು [ಅ][12]ಚೇತನೋಪಸರ್ಗಂ ಮೊದಲಾಗೊಡೆಯ ಉಪಸರ್ಗಂಗಳುಮಂ [13]ನೀರಡ್ಕೆ ಮೊದಲಾಗೊಡೆಯ ಪರೀಷಹಂಗಳುಮಂ ಸೈರಿಸಿ[14] ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗದ ಸುಖಂಗ[15]ಳಂ ಭವ್ಯರ್ಕಳ[15]ಯ್ದುಗೆ

---

[1] ದಮದರ (ಘ), ದಮವರ (ಚ), ಯಮಧರ (ಛ). [2] + ಕಂಡು (ಛ). [3] ತುಂಟೆಂದು (ಘಚ). [4] (ಘಚಛ) ಗಳಲ್ಲಿಲ್ಲ. [5] (ಘಚಛ) ಗಳಲ್ಲಿಲ್ಲ. [6] ಗಳ (ಘಚಛ). [7] + ನಾವೆ (ಘಛ). [8] ಉ (ಕಗ). [9] ಸಮ್ಯಗ್ದರ್ಶನಜ್ಞಾನ ಚಾರಿತ್ರಂ ಗಳಂ ಸಾಧಿಸಿ (ಘಚಛ). [10] ಮ (ಚ). [11] ಅನಂತರಂ (ಘಚಛ). [12] ಳ್ ಬಗೆದ (ಘಚಛ). [13] + ಪಸಿವುಂ (ಘಚಛ). [14] + ಸಮ್ಯಕ್ (ಘಚಛ). [15] ಳನೆ (ಚ).

(೬) ಭದ್ರಬಾಹು ಭಟ್ಟಾರರ ಕಥೆ

ಭದ್ರಬಾಹು ಭಟ್ಟಾರರ ಕಥೆಯಂ ಪೇೞ್ವಂ :

ಗಾಹೆ|| ಓಮೋದರಿಏ ಘೋರಾಏ ಭದ್ದಬಾಹೂ ಅಸಂಕಿಲಿಟ್ಠಮದೀ |
ಘೋರಾಏ ತಿಗಿಂಚ್ಛಾಏ ಪಡಿವಣ್ಣೋ ಉತ್ತಮಂ ಅಟ್ಠಂ ||

[ಓಮೋದರಿಏ—ಅರೆ ಉಣಿಸಿನಿಂದಂ, ಘೋರಾಏ—ಆದಮಾನುಂ ಕಟಿದಪ್ಪುದ ಱಿಂದಂ, ಭದ್ದಬಾಹೂ—ಭದ್ರಬಾಹು ಭಟ್ಟಾರರ್, ಅಸಂಕಿಲಿಟ್ಠಮದೀ—ಸಂಕ್ಲೇಶ [1]ಪರಿಣಾಮಮಿಲ್ಲದೊನಾಗಿ[1], ಘೋರಾಏ—ಕಟಿದಪ್ಪ, ತಿಗಿಂಛಾಏ—ಪಸಿವಿನಿಂದಂ,* ಪಡಿವಣ್ಣೋ—ಪೊ[2]ರ್ದಿ[2]ದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನಜ್ಞಾನ ಚಾರಿತ್ರಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ [3]ಪುಂಡ್ರವರ್ಧನಮೆಂಬುದು ನಾಡಲ್ಲಿ[3] [4]ಕೌಂಡಿನೀ[4] ನಗರಮೆಂಬುದು ಪೊೞಲದನಾಳ್ವೊಂ ಪದ್ಮರಥನೆಂಬೊನರಸನಾತನ ಮಹಾದೇವಿ ಪದ್ಮಶ್ರೀಯೆಂಬೊಳಂತವರ್ಗಳಿಷ್ಟವಿಷಯಕಾಮಭೋಗಂಗಳನನುಭವಿ ಸುತ್ತಿರೆ ಮತ್ತಾ ಅರಸನ [5]ಪುರೋಹಿತಂ[5] [6]ನಾಲ್ಕು ವೇದಮುಮಾಱಂಗಮುಂ[6] ಪದಿನೆಂಟು ಧರ್ಮಶಾಸ್ತ್ರಂಗಳುಮಂ ಬಲ್ಲೊಂ ಸೋಮಶರ್ಮನೆಂಬೊಂ ಪಾರ್ವ ನಾತನ ಭಾರ್ಯೆ ಪ್ರತ್ಯಕ್ಷ ಶ್ರೀಯಾದೇವತೆಯನೆ ಪೋಲ್ವ ಸೋಮಶ್ರೀಯೆಂಬೊ ಳಾಯಿರ್ವರ್ಗ್ಗಂ ಮಗಂ ಪುಟ್ಟಿದೊಂ ತಾಯ್ಗಂ ತಂದೆಗಮೆಲ್ಲಾ ನಂಟರ್ಗೆ ಯುತ್ಸಾಹಮುಂ ಸುಖಮುಂ ವಿಭವಮುಮಂ ಪಡೆವುದಱಿಂದಮಾ ಕೂಸಿಂಗೆ ಭದ್ರ ಬಾಹುವೆಂಬ ಪೆಸರನೆಲ್ಲರುಂ ನೆರದಿಟ್ಟೊಡಾತನುಂ ಬಿದಿಗೆಯ ಚಂದ್ರನಂತೆ ಕ್ರಮ ಕ್ರಮದಿಂ ಸುಖದಿಂ ಬೆಳೆದು ಮುಂಜಿಗಟ್ಟುವ ಪ್ರಾಯಮಾದೊಡೆ ಪ್ರಶಸ್ತ ದಿವಸ ವಾರ ನಕ್ಷತ್ರ ಮುಹೂರ್ತದೊಳ್ [7]ಮುಂಜಿಬಂಧನ ಕ್ರಿಯೆಯಂ[7] ಮಾಡಿದ ಬೞಿಕ್ಕ ತನ್ನೋರಗೆಗಳಪ್ಪ ಪಲಂಬರ್ [8]ಮಾಣಿಗ[8]ಳ್ವೆರಸು ಪೊೞಪೊೞಲೊಳ್ ಬಟ್ಟಾಡುತ್ತಿರೆ ಭದ್ರಬಾಹು[9]ವೆಂಬ ಮಾಣಿ[9]ಯೊಂದು ಬಟ್ಟಿನ ಮೇಗೆ ಪದಿನಾಲ್ಕು ಬಟ್ಟನೊಂದೊಂದಱ ಮೇಗೋಳಿಯೊಳಿಟ್ಟಾಡುತ್ತಿರ್ಪನ್ನೆಗಂ

ಇತ್ತ ವರ್ಧಮಾನಭಟ್ಟಾರರ್ ಮೋಕ್ಷಕ್ಕೆವೋದಿಂಬೞಿಕ್ಕೆ ಚತುರ್ದಶಪೂರ್ವ ಧಾರಿಗಳಪ್ಪ ಶ್ರುತಕೇವಳಿಗಳ್ ನಾಲ್ಕನೆಯವರ್ ಗೋವರ್ಧನರೆಂಬ ಭಟಾರರುಜ್ಜ ಯಂತ[10]ಮಂ[10] ವಂದಿಸಲೆಂದು ವಿಹಾರಿಸುತ್ತಂ ಬರ್ಪೊರಾ [11]ಕೌಂಡಿನೀ[11]

---

[1] ವಿಲ್ಲದ ಪರಿಣಾಮಮನೊಡೆಯನಾಗಿ (ಘಚಛ). * + ಅಪಿ—ಮತ್ತೆ (ಸ). [2] ಳ್ದಿ (ಕಖಗ) [3] (ಘಚಛ) ಗಳಲ್ಲಿಲ್ಲ. [4] ಕಾಳಿಂಗ (ಘಛ), ಕಳಿಂಗ (ಚ). [5] ಪಾರ್ವಂ (ಘಚಛ). [6] (ಘಚಛ) ಗಳಲ್ಲಿಲ್ಲ [7] ಮುಂಜಿಗಬದ್ಧನ ಕ್ರಿಯೆಗಳಂ (ಕಗ). [8] ಮಕ್ಕ (ಗ), + ಬ್ರಹ್ಮಚಾರಿಗಳಪ್ಪ (ಘಚಛ). [9] (ಘಚಛ) ಗಳಲ್ಲಿಲ್ಲ. [10] ಗಿರಿಯಂ (ಛ) [11] ಕಳಿಂಗ (ಘಚಛ)

ನಗರಕ್ಕೆ ವಂದು ಪೊೞಲ್ವೊೞಲೊಳೊಂದು ಬಟ್ಟೆನಮೇಗೆ ಪದಿನಾಲ್ಕುಂ ಬಟ್ಟ[1]ನೊಂದೊಂದಱಮೇಗೋಳಿಯೊಳಿಟ್ಟಾ[1]ಡುತ್ತಿರ್ಪ ಭದ್ರಬಾಹುಮಾಣಿಯಂ ಗೋವರ್ಧನ ಭಟ್ಟಾರರ್ ಪಿರಿದುಂ ಬೇಗಂ ನೋಡುತ್ತಿರ್ದಿಂತೆಂದು[2]ದ್ದೇ[2]ಶಂ ಗೆಯ್ದೊರೀತನೆಮ್ಮಿಂಬೞಿಕ್ಕೆ ಚತುರ್ದಶಪೂರ್ವಧಾರಿಯು[3]ಪ್ಪ ಮಾಹಾತ್ಮ್ಯಮನೊಡೆಯೊಂ ಭದ್ರಬಾಹು ಭಟಾರರೆಂಬೊರಪ್ಪೊರೆಂದು ಬಗೆದಾತನವರ ಮನೆಗೊಡಗೊಂಡು ಪೋಗಿಯವರ ತಾಯ್ತಂದೆಗಮಿಂತೆಂದರೀತನನೆಮಗೊಪ್ಪಿಸಿಮೆಲ್ಲಾ ಶಾಸ್ತ್ರಂಗ[4]ಳುಮಂ[4] [5]ಕಲ್ಪಿಸಿ[5] ಪಂಡಿತನಂ ಮಾಡಿ ನಿಮಗೊಪ್ಪಿಸುವೆಮೆಂದೊಡವರುಮಂತೆ+ಗೆಯ್ವೆಮೆಂದೊಡಾತನನೊಡಗೊಂಡು ಪೋಗಿ ಕೆಲವು ದಿವಸದಿಂದೊಳಗೆ ವ್ಯಾಕರಣಂ ಪ್ರಮಾಣಂ ಛಂದಮಲಂಕಾರ ನಿಘಂಟು ಕಾವ್ಯ ನಾಟಕಂ ಮೊದಲಾಗೊಡೆಯ ಲೋಕದೊಳುಳ್ಳ ಶಾಸ್ತ್ರಂಗಳೆಲ್ಲ[6]ಮಂ ಕಲ್ಪಿಸಿ[6]ದೊಡಧಿಗಮ ಸಮ್ಯಗ್ ದೃಷ್ಟಿಯಾಗಿ ಯಾಗಮದೊಳೆಲ್ಲಮನಱಿದು ಸಂಸಾರ ಶರೀರ ಭೋಗ ವೈರಾಗ್ಯಪರಾಯಣನಾಗಿ ಭಟ್ಟಾರಾ ಎನಗೆ ದೀಕ್ಷೆಯಂ ದಯೆಗೆಯ್ವುದೆನೆ ಭಟಾರರೆಂದರೆಮಗಂತು ದೀಕ್ಷೆಯಂ ಕುಡಲಾಗ ಮಗನೆ ನಿನ್ನ ಪೊೞಲ್ಗೆ ನೀಂ ಪೋಗಿ ನಿನ್ನ ಕಲ್ತವಿದ್ಯೆಯಂ ಪಂಡಿತ[7]ಕ್ಕೆ[7]ಯುಮನಾ ಪೊೞಲೊಳ್ ನೆಗೞ್ದ ನೆಗೞ್ದ ಪಂಡಿತರ್ಕಳೊಡನೆ ವಾದಂಗೆಯ್ದವರಂ ಗೆಲ್ದು ದಶದಿಶೆಗಳೊಳೆಲ್ಲಂ ನಿನ್ನ ಪಾಂಡಿತ್ಯದ ಯಶಮಂ ಪ[8]ಸರಿ[8]ಸಿ ನಿನ್ನನಾವೊಡಗೊಂಡು ಒಂದುದರ್ಕೆ ತಾಯ್ತಂದೆಗಂ ಸಂತೋಷಂಮಾಡಿಯವರಂ ಬಿಡಿಸಿಯೊಡಂಬಡಿಸಿ ಒಂದೊಡೆ ತ[9]ಪಮಂ ಕು[9]ಡಲಕ್ಕುಮಂತೆಯಾಗದೆಂದೊಡೆ ಭದ್ರಬಾಹು[10]ಮಾಣಿಯುಂ[10] ಭಟ್ಟಾರರಂ ವಂದಿಸಿ ತನ್ನ ಪೊೞಲ್ಗೆ ಪೋಗಿ ತಾಯುಂ ತಂದೆಯುಮಂ ಕಂಡು ಪೊೞಲೊಳ್ ನೆಗೞ್ದ ಪಂಡಿತರ್ಕಳೊಡನೆ ವಾದಂಗೆಯ್ದು ಗೆಲ್ದು ದಶದಿಶೆಗಳೊಳೆಲ್ಲಂ ತನ್ನ ಪಾಂಡಿತ್ಯದ ಯಶಮಂ ಪಸರಿಸಿ ತಾಯ್ತಂದೆಗಂ ಸಂತೋಷಂ ಮಾಡಿಯವರನೊಡಂಬಡಿಸಿ ಬಂದು . ಗೋವರ್ಧನ ಭಟ್ಟಾರರ ಪಕ್ಕದೆ ಕುಮಾರ ಬ್ರಹ್ಮಚಾರಿಯಾಗಿ ಭದ್ರಬಾಹು ತಪಂಬಟ್ಟು ಕೆಲವು ದಿವಸದಿಂದೊಳಗೆ ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಗ್ರಂಥಾರ್ಥ ಸ್ವರೂಪದಿಂ ಕಲ್ತು ಸಕಲ ಶಾಸ್ತ್ರ ಪಾರಾವಾರಗನಾಗಿ ಎಲ್ಲಾ ವೋದುಗಳುಮಂ ನೆಱೆಯೋದಿ ಕಲ್ತು[11] ಶ್ರುತದೊಳಪ್ಪ ಭಕ್ತಿಕಾರಣಮಾಗಿ ಪ್ರತಿಮಾಯೋಗಂ ನಿಂದೊರಂ ದೇವರ್ಕಳುಂ ಮನುಷ್ಯರ್ಕಳುಂ ಬಂದು ಪಿರಿದಪ್ಪ ಪೂಜೆಯಂ ಮಾಡಿಯರ್ಚಿಸಿ [12]ಪೂಜಿಸಿ ಬಂದ್ದಿಸಿದೊಡೆ[12]ಲ್ಲಾ ಋಷಿಸಮುದಾಯಮುಮಂ ಪ್ರತಿಪಾಲಿಸಲ್ಕೆ ಸಮರ್ಥರಾಗಿರ್ಪನ್ನೆಗಂ ಗೋವರ್ಧನ ಭಟ್ಟಾರರ್ ಸಮಾಧಿ ಮರಣದಿಂದಂ ರತ್ನತ್ರಯಮುಮಂ ಸಾಧಿಸಿ ಮುಡಿಪಿ ದೇವಲೋಕಕ್ಕೆ ವೋದರ್

---

[1] ನೋಳಿಯೋಳಿ (ಘಚಛ). [2] ಪದೇ (ಗ). [3] + ಯ್ದನೆಯ ಶ್ರುತಕೇವಳಿಯವಧಿ ಜ್ಞಾನಿ ಪಲವು ರುದ್ಧಿಗಳಿಂದಂ ಕೂಡಿದೊಂ ದೇವರಿಂದಂ ಮನುಷ್ಯರಿಂದಂ ಅರ್ಚಿಸೆ ಪೂಜಿಸೆ ಪಡುವ್ಪೊಂ ಪಿರಿದ (ಘಚಛ). [4] ಳ್ತ್ರಂ (ಘಚಛ). [5] ನೋದಿಸಿ (ಘಚಛ). [6] ಮನೋದಿಸಿ (ಘಚಛ). [7] ರ್ಕೆ (ಕಗ). [8] ರಪಿ (ಘಚಛ). [9] ಪಂಗು (ಘಚಛ). [10] ಭಟ್ಟನುಂ (ಚಛ). [11] + ಬಳಿಕನವರತಿ ಸ್ಥಿತಿಯಿಂ (ಘಚಛ). [12] ದರಿಂತೆ (ಘಚಛ).

ಇತ್ತ ಭದ್ರಬಾಹು ಭಟ್ಟಾರರ್ ಚತುರ್ದಶಪೂರ್ವಧಾರಿಗಳುಂ [1]ಕಡೆ[ಯಾ]ಣಿಸಿ[1]ಯಯ್ದನೆಯ ಶ್ರುತಕೇವಳಿಗಳವಧಿಜ್ಞಾನಿಗಳುಂ ಪಲವುಂ ಋದ್ಧಿಗಳಿಂ ಕೂಡಿದೂರೆಲ್ಲಾ ಋಷಿಸಮುದಾಯಮುಮಂ ಪ್ರತಿಪಾಳಿಸುತ್ತಂ ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸು[2]ತ್ತಿರ್ಪ್ಪನ್ನೆಗಂ ಮತ್ತಿತ್ತ ಮಗಧೆಯೆಂಬುದು ನಾಡಲ್ಲಿ ಪಾಟಳೀಪುತ್ರಮೆಂಬುದು ಪೊೞಲದನಾಳ್ವಂ ನಂದನೆಂಬರಸಂ ಪಲಕಾಲಮರಸುಗೆಯ್ಯುತ್ತಿರೆ ಮತ್ತೊಂದು ದಿವಸಂ ಚಾಣಾಕ್ಯನೆಂಬ ಭಟ್ಟನಂ ನಂದಂ ಪರಿಭವಿಸಿ ನೂಂಕಿಯಟ್ಟೆ ಕಳಿಯಿಸಿದೊಡಾತನುಂ ಮುಳಿದು ನಂದನಂ ಕಿಡಿಸಿ ನಂದನ ರಾಜ್ಯಸ್ಥಾನದೊಳ್ ಪೞನೂರ್ವನಂ ಚಂದ್ರಗುಪ್ತನೆಂಬೊನಂ ನಿಱಿಸಿದೊಡಾತನುಂ ಪಲಕಾಲಮರಸುಗೆಯ್ದು ಕೞಿದೊಡಾತನ ಮಗಂ ಬಿಂದುಸಾಗರನೆಂಬೊನರಸುಗೆಯ್ದು ಕೞಿದ ಬೞಿಕ್ಕಾತನ ಮಗನಶೋಕನೆಂಬೊನರಸುಗೆಯ್ಯುತ್ತಿರೆ ಆತನ ಮಗಂ ಪ್ರತಾಪದಿಂ ತೇಜದಿಂದಾದಿತ್ಯನೊಳೋರನ್ನನಪ್ಪೊಂ ಕುಣಾಳನೆಂಬೊನಂತವರ್ಗಳಿಷ್ಟವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಮಶೋಕ ಮಹಾರಾಜಂ ಪರಚಕ್ರದ ಮೇಗೆತ್ತಿ ಪೋಗಿ [3]ಅಲ್ಲಿಂದಂ[3] ಮಂತ್ರಿ ಪುರೋಹಿತ ತಳವಱಾದಿಗಳ್ಗಿಂತೆಂದೋಲೆಯನಟ್ಟಿದೊನುಪಾಧ್ಯಾಯಂಗೆ ಕಱಮೆಯ ಕೂೞುಂ ತುಪ್ಪಮುಂ [4]ಕೊವೆಯು[4]ಮನುಣಲ್ಕೊಟ್ಟು ಕುಮಾರನನೋದಿಸುಗೆಂದೋಲೆಯನಟ್ಟಿದೊಡೆ ವಾಚಕನೋಲೆಯರ್ಥಮನಱಿಯದೆ ವಿಪರೀತಮಾಗಿಂತೆಂದು [5]ಬಾಚಿಸಿದನ್[5]

[6]ಉಪಾಧ್ಯಾಯಂ ಶಾಲಿಂ ಕೂರಂಚ ಮಷಿಂ ಘೃತಂ ದತ್ವಾ ಕುಮಾರಮಂಧಾಪಯೇತ್

ಎಂದಿಂತು ವಿಪರೀತಮಾಗಿ ಲೇಖಾರ್ಥಮುಂ ಬಾಚಿಸಿದೊಡನಿಬರುಂ ಕೇಳ್ದು ಅಪ್ರತಿಹತಶಾಸನನಪ್ಪ ನೃಪತಿಯಾಜ್ಞೆಗೆ ಭಯಸ್ಥರ್ಕಳಾಗಿ ಉಪಾಧ್ಯಾಯಂಗೆ ಕಱಮೆಯ ಕೂೞುಂ ಮಸಿಯುಂ ತುಪ್ಪಮುಮನುಣಲ್ಕೊಟ್ಟು ಕುಣಾಳನೆಂಬ ಕುಮಾರನೆರಡುಂ ಕಣ್ಗಳುಮನೊಡೆದು ಕುರುಡಂ ಮಾಡಿದ ಕೆಲವು ದಿವಸದಿಂದರಸಂ ಪರಚಕ್ರಮುಮಂ ಸಾಧಿಸಿ ಬಂದು ಮಗಂ ಕುರುಡಾದುದಂ ಕಂಡಾದಮಾನುಮುಬ್ಬೆಗಂಬಟ್ಟು ಸೈರಿಸಲಾಱದೆ ಕುಣಾಳನರಸಿ ಚಂದ್ರಾನನೆಯೆಂಬೊಳ್ಗೆ ಮಗಂ ಪುಟ್ಟಿದೊಡಾತಂಗೆ [7]ಸಂಪ್ರತಿ[7] ಚಂದ್ರಗುಪ್ತನೆಂದು ಪೆಸರನಿಟ್ಟು ರಾಜ್ಯಾಭಿಷೇಕಂಗೆಯ್ದು ಪಟ್ಟಂಗಟ್ಟಿ ಸಮಸ್ತ ರಾಜ್ಯ[8]ಭಾರಮೆಲ್ಲ[8]ಮಂ ನಿರೂಪಿಸಿ ಕುಣಾಳನುಮನೆಂದಂ ಮಗನೆ ಬೇಡು ನೀನೆಂದೊಡಾತನುಂ ಕಾಕಿಣೀ ರತ್ನಮಂ ಬೇಡಿದೊಡಾ ರತ್ನಂ ಚಕ್ರವರ್ತಿಗಲ್ಲದಿಲ್ಲೆಂದು ಮಗಂಗೆ ಮಱುಮಾತುಗೊಟ್ಟು ಸಂಸಾರ ವೈರಾಗ್ಯಮಾದಮಾನುಂ ಪರ್ಚಿ ಸುವ್ರತರೆಂಬ ಭಟ್ಟಾರರ ಪಕ್ಕದೆ ಜಿನದೀಕ್ಷೆಯಂ ಕೈಕೊಂಡು ಪರತ್ರೆಯಂ ಸಾಧಿಸಿದೊಂ ಮತ್ತಿತ್ತ ಸಂಪ್ರತಿ ಚಂದ್ರಗುಪ್ತಮಹಾರಾಜನರಸುಗೆಯ್ಯುತ್ತಿರೆ ಸನಾಥ [illegible]

1 ಕಂಡುಮಾರು..ನ (ಖ), ಕಡೆ (ಘಚಛ), ಕಡಮಾರಿಸಿ (ಕಗ). [illegible] (ಖ) ದಲ್ಲಿ ನಷ್ಟವಾಗಿದೆ. 2 ತ್ತಂ ಕಾಲಂಸಲೆ (ಚ). 3 ಅಲ್ಲಿರ್ದು (ಘಚಛ) 4 ಕೋಯ (ಕಗ). 5 ಬಾಜಿಸಿದನ್ (ಖಗಘ), ಬೆಸಸಿದರ್ (ಛ). 6 + ಶ್ಲೋಕ|| (ಚ). 7 ಪ್ರತಿ (ಘಚಛ), ಮುಂದೆಯೂ ಈ ಪ್ರತಿಗಳಲ್ಲಿ ಇದೇ ಪ್ರಕಾರ 8 (ಘಚಛ) ಗಳಲ್ಲಿಲ್ಲ

ಗುಪ್ತರೆಂಬಾಚಾರ್ಯರವಧಿಜ್ಞಾನಿಗಳ್ ವಿಹಾರಿಸುತ್ತಂ ಬರ್ಪರಾ ಪಾಟಳೀಪುತ್ರಕ್ಕೆ ವಂದು] ಪೊೞಲ್ವೊೞಲ ಬಹಿರುದ್ಯಾನವನದೊಳಿರ್ದೊರ್ದರಂ ಸಂಪ್ರತಿ ಚಂದ್ರಗುಪ್ತಂ ಪೋಗಿ ವಂದಿಸಿ ಧರ್ಮಮಂ ಕೇಳ್ದು ತದನಂತರಂ ತನ್ನ ಭವಾಂತರಂಗಳಂ ಬೆಸ [1]ಗೊಂಡೊಡೆ[1] ಭಟಾರ[2]ರ್ ಪೇೞಲ್ತೊಡಗಿ[2]ದರ್

ಈ ಜಂಬೂದ್ವೀಪದ ಭರತಕ್ಷೇತ್ರದೊಳವಂತಿಯೆಂಬುದು ನಾಡಲ್ಲಿ ವೈದಿಶ ಮೆಂಬುದು ಪೊೞಲದನಾಳ್ವಂ ಜಯವರ್ಮನೆಂಬೊನರಸನಾತನ ಮಹಾದೇವಿ [3]ಧಾರಿಣಿ[3]ಯೆಂಬೊಳಂತವರ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಿರೆ ಮತ್ತಾ ಪೊೞಲ ಸಾರೆ [4]ಪಲಾಶ[4]ಕೂಟಮೆಂಬೂರೊಳ್ ದೇವಿಲನೆಂಬೊಂ ಶಾಕ[5]ಟಿ[5]ಕಂ ಪರದನಾತನ ಭಾರ್ಯೆ ಪೃಥ್ವಿಶ್ರೀಯೆಂಬೊಳಾಕೆಯ ಗರ್ಭದೊಳ್ ಪಾಪಕರ್ಮ ಜೀವಂ ನೆಲಸಿದೊ[6]ಡೇನುಂ[6] ನೆವಮಿಲ್ಲದೆ ಕಸವರಮೆಲ್ಲಂ ಕೆ[7]ಟ್ಟತ್ತು[7] ಮತ್ತೊಂದು ದಿವಸಂ ಪಲಂಬ[8]ರ್ ಶಾಕಟಿಕ[8]ಪರದರುಂಬೆರಸು ಬಂಡಿಗಳೊಳ್ ಪ[9]ತ್ತಿ[9]ಯುಂ ಧಾನ್ಯಮಂ ತೀವಿಕೊಂಡು ಪೊೞಲ್ಗೆ ಮಾಱಲೆಂದು ಪೋಪನ್ನೆಗಮೆಡೆಯೊಳಡವಿ ಯೊಳ್ [10]ಕಳ್ಳರ್[10] ಬಟ್ಟೆಗಟ್ಟಿ [11]ಮೇಲ್ವಾಯ್ದುಱಿ[11]ದೊಡೆ ದೇವಿಲಂ ಮೊದಲಾ [12]ಗೊಡೆಯ[12] ಪಲಂಬರ್ ಪರದರ್ ಸತ್ತರುೞಿದರೆಲ್ಲಮೋಡಿ ಕೆಟ್ಟೊಡೆ ಬಂಡಮುಂ ಮೆಟ್ಟುಗಳುಂ ಮೊದಲಾಗೆಲ್ಲಮುಂ ಕಳ್ಳರ್ ಕೊಂಡುಪೋದರಾ ಪ್ರಸ್ತಾವದೊಳ್ ಪೃಥ್ವಿಶ್ರೀ ಬೆಸಲೆಯ್ದಾಗಿ[13] ನಂದಿಮಿತ್ರನೆಂದಾ ಕೂಸಿಂಗೆ ಪೆಸರನಿಟ್ಟು ಎರ[14]ಡುಮೂಱು ತಿಂಗಳಿಂಗೆ[14] ತಾಯ್ ಕಡಿದೊಡೆ [15]ಒಂದ ನಂಟರ್ ನಡಪೆ ಬಳೆದೊದಾ ನಂಟರುಂ ಕಡಿದುಳ್ಳರೆಲ್ಲಂ ಸತ್ತು[15] ಕುಲಕ್ಷಯಮಾದೊಡೂರವರೆಲ್ಲ ಮಿಂತೆಂದರೀ ತರುವಲಿ ನಮ್ಮೂರೊಳಿರೆ ನಮಗೆ ಸಾವುಂ ಕೇಡುಮಕ್ಕುಮಿವನನಟ್ಟಿ[16] ಕಳೆ[17]ವ[17] ಮೆಂದೂರಿಂದನಿಬರುಮಟ್ಟಿ ಕಳೆದೊದಾತನ್ ಕೆಲದೂರ್ಗಳುಮಂ ನಾ[18]ಡ್ಗಳುಮಂ[18] ತ್ತೊೞಲ್ದು ಬೈಕಂದಿರಿದೆಲ್ಲಿಯಾನುಂ ಪೆತ್ತುಂ ಪೆಱದೆಯುಮಿಂತು ಬಾೞುತ್ತಂ ಪದಿನೈದು ಪದಿನಾಱು ವರುಷದ ಪ್ರಾಯದಾತನಾಗಿ ವೈದಿಶಮೆಂಬ ಪೊೞಲ್ಗೆ ವರ್ಪೊನ್

ಅನ್ನೆಗಂ ಕಾಷ್ಠಕೂಟನೆಂಬ ಬೆಸದವಂ ಪುಳ್ಳಿಯ ಪೊಱೆಯುಂ ಪೊತ್ತು [19]ಪೊೞಲ್ಗೆ[19] ವರ್ಪೊನಂ ಕಂಡಾತನೊಡನೆ ಗೊಟ್ಟಿಯೊಳ್ ಬಂದು ಪೊೞಲ್ವೊೞ ಲೊಳಾರವೆಯೊಳ್ [20]ಕಾಷ್ಠಕೂಟಂ ಸೇದೆಗೆಟ್ಟು ಪುಳ್ಳಿಯ ಪೊಱೆಯನಿೞಿಪಿ ಪಟ್ಟಿರ್ದೊಡೆ ತಾನುಂ ಪಟ್ಟಿರಲೆಂದು ಬಗೆದು ತಲೆಯತ್ತಿಡಲ್ಕಱಿಯೇನುಮಂ ಕಾಣದೆ ತಪ್ಪೊನಣ್ಬರಿಂದಂ ತಳರ್ಚಲಾಱದಂತಪ್ಪ ಪಿರಿದೊಂದು ಸಿಲೆಯುಂ ತಂದು ತಲೆಯತ್ತಿಟ್ಟು ಪಟ್ಟಿರ್ದುದಂ ಕಾಷ್ಠಕೂಟನಾತನ ಒಲವುಮಂ ಕಂಡು ತನ್ನ[20] ಮನೆ

---

[1] ಳೆ (ಘಚಛ). [2] ರಿಂತೆಂ (ಚ). [3] ವಾರಣಿ (ಕಖ). [4] ಪಲಾಲ (ಘಚಛ). [5] ವಿಕಂ (ಕಖಗ). [6] ಡೊಂದುಂ (ಘಚಛ). [7] ಟ್ಟು (ಘಚಛ). [8] ರುಂ ಶಾಕಟಿಕ (ಕಖಗ). [9] ತ್ತಿ (ಸ-ಕ). [10] ಬೇಡರುಂ (ಕಖಗ). [11] ಮೇಲ್ವಾಯ್ದುಱಿಗಿ (ಕ) ಮೇಲ್ವೊಯ್ದುಱಿಗಿ (ಗ), ಇರುಳು ಹಾದಿಯನಿಱಿ (ಘಛ). ಹಾದಿಯನಿರುಳು ತಾಗಿ (ಚ). [12] ಗಿ (ಕಖಗ) [13] + ಯಾವೂರ್ಗೆ ವಂದು (ಘಚಛ). [14] ದು ಮೂಱು ತಿಂಗಳೊಳಗೆ (ಸ-ಕ) [15] ಬಡ ನಂಟರುಂ ಕಳಿದು (ಕಖಗ). [16] + ಕಟ್ಟಿ (ಘಚಛ). [17] ವ (ಘಚಛ). [18] ಡ್ಗಳುಮಂ (ಖ), ಡ್ಗಳ್ಗಂ (ಗಘಚಛ). [19] ಪೋಗಲ್ಕೆ (ಕಖಗ), [20] ಪುಳ್ಳಿಯುಂ ಮಾಱಿ (ಕಖಗ).

ಗೊಡಗೊಂಡು ಪೋಗಿಯೂಡಿ ನಿನಗೀ ಪೊೞಲೊಳಾರಾನುಂ ನಂಟರೋಳರೆಯೆಂದು ಬೆಸಗೊಂಡೊಡಾರುಮಿಲ್ಲೆಂದೊಡಂತಪ್ಪೊಡೆ [1]ನೀನೆಸ್ಸೊಡನಿರೆತ್ತಲುಂ ಪೋಗದಿರೆಂದು[1] ತಾಂಗಿ ತಾನುಮಾತನುಮಂತಿರ್ವರುಂ [2]ದಿವಸಕ್ಕಂ[2] ಪುಳ್ಳಿಯಂ ತರೆ ಪದಿಂಬರಾ ತರ್ಪ ಪೊಱೆಯುಮೊರ್ವನೆ ತರ್ಪನಂತು ಪಲವು ದಿವ[3]ಸಂ ಸಲೆ[3] ಕಾಷ್ಠಕೂಟಂ ತನ್ನ ಪಂಡತಿ [4]ಜಯ[4]ಘಂಟೆಯೆಂಬೊಳನಿಂತೆಂದು ಕಲ್ಪಿಸಿದನೀತಂಗೆ ನೀಂ ಬಸಿಱಾತೀವ ಬಡ್ತಿಸದಿರನ್ನೆಯಂ ತಿಣ್ಣಮೆಱೆಯದಿರ್ ಪಾಯಲ್ ಬೇಡಿದೊಡಮೆಱೆಯದಿರೆಂದು [5]ಕಲ್ಪಿಸಿದೊ[5]ಡಾಕೆಯುಮಾ ಪಾಂಗಿನೊಳ್ [6]ದಿವಸಕ್ಕಂ[6] ಬಡ್ತಿಸೆ ಸಂದಿಮಿತ್ರನುಂ ಪಿರಿಯ[7] ಪುಳ್ಳಿಯ ಪೊಱೆಗಳಂ ದಿವಸಕ್ಕಂ ತಂದು ಕುಡಲಮಂ ಮಾಱು ಕಾಷ್ಠಕೂಟನೊಡೆಯೊನಾದೊನಿಂತು ದಿವಸಂಗಳ್ ಸಲೆ ಮತ್ತೊಂದು ದಿವಸಂ ಜಯಘಂಟೆ ಕರುಣಿಸಿ ತಣಿಯೆ ಬಡ್ಡಿಸಿದೊಡುಂಡು ಮಱುದಿವಸಮಿರ್ವರುಂ ಪುಳ್ಳಿ[8]ಗೆಪೋದಲ್ಲಿ ಸಂದಿಮಿತ್ರನೆಂದನಯ್ಯಾ [9]ಎನಗುಡಲಿಲ್ಲೇನುಮೊಂದು ದಮ್ಮಕ್ಕಾದೊಡಂ[9] ಸೀರೆಯಂ [10]ಕೊಂಡೀಯಿ[10]ಮೆಂದೊಡಂತೆ ಗೆಯ್ವೆಮೆಂದು ಮಱುಮಾತುಗೊಟ್ಟಿರ್ವರುಂ [11]ಪುಳ್ಳಿಯ ಪೊಱೆಯಂ[11] ಮನೆಗೆ [12]ತಂ[12]ದ ಬೞಿಕ್ಕ [13]ಕಾಷ್ಠಕೂಟಂ[13] ಪಂಡತಿಯನೆಂದನೀತಂಗೆ ನೀಂ ಬಸಿಱಾತೀವೆಯುಣಲಿಕ್ಕಿದಾ ಎಂದೊಡೆ ಕರುಣಿಸಿ ಪರ್ವನೆಂದು ತಣಿಯೆಯುಣಲಿಕ್ಕಿದೆನೆಂದೊಡೆ ಮುಳಿದು ಸಾಯೆಬಡಿದು ಮನೆಯಿಂ ಪಂಡತಿಯನಟ್ಟಿ ಕಳೆದೊಡೆ ಸಂದಿಮಿತ್ರಂ ಪೋಗಿ ಜಯಘಂಟೆಯಂ ಬೆಸಗೊಂಡನ್ ನಿನ್ನನೇಕೆ ಕಾಷ್ಠಕೂಟಂ ಬಡಿದ[14]ನಬ್ಬಾ ಎಂದು ಬೆಸಗೊಂಡೊಡೆ[14] ನಿನಗೆ ನಿನ್ನೆ ತಣಿಯೆಯುಣಲಿಕ್ಕಿದೆನೆಂದು ಮುಳಿದು ಬಡಿದಟ್ಟಿಕಳೆದೊನೆಂದೊಡಿಂತಪ್ಪ ಪಂಚಮಹಾಪಾತಕನ ಮನೆಯೊಳ್ ಮಾರಿಯಿರ್ಕೆಂದು ಕಾಷ್ಠಕೂಟನಂ ಬಿಸುಟ್ಟು ಪೋಗಿ ಬೇಱೆ ತನಗೆ ಪುಳ್ಳಿಗಳಂ ದಿವಸಕ್ಕಂ ತಂದು ಮಾಱಲ್ ತಗುಳ್ದೊಡೆಂಟು ದಮ್ಮದ ಪುಳ್ಳಿಯಂ ತಂದೊಡಮೊಂದು [15]ಪಣ[15]ಮನಪ್ಪೊಡಂ ಪಡೆದೆ ಬಸಿರ್ಗಟ್ಟುಮಂಬಲಿಗಮೆಣ್ಣೆಗಂ ಕಟಿಗಂ ಕೊಟ್ಟು ಪೋಕುಮಿಂತು ಬಾೞುತ್ತುಮಿರೆ

ಮತ್ತೊಂದು ದಿವಸಂ ಪುಳ್ಳಿಗೆ ಪೋಗಿ ಪುಳ್ಳಿ[16]ಯ ಪೊಱೆಯಂ[16] ಪೊ[17]ತ್ತು[17] ಬರ್ಪೊನನ್ನೆಗಮೆಡೆಯೊಳ್ ಶಿವಗುಪ್ತಾಚಾರ್ಯರಪ್ಪಾಂಗ ನಿಮಿತ್ತಂಗಳಂ ಬಲ್ಲೊರ ತಪಿಗ ಪೋಗಿ ಸಿದ್ಧಾಂತಮಂ ಪರಿವಿಡಿಗೆಯ್ಯುಂದಿನ ದಿವಸಮಲ್ಲಿಯೆ ದೇವರಂ ವಂದಿಸಿ ಪಕ್ಷೋಪವಾಸದ ಪಾರಣೆಗೆಂದು ಪೊೞಲ್ಗೆ ಚರಿಗೆವುಗುತಂ[18]ದೊಪ[18] ಸಂದಿಮಿತ್ರಂ ಕಂಡಾಶ್ಚರ್ಯಭೂತನಾಗಿ ನೀಡುಂ ನೋಡಿಯಿವರಲ್ಲಿಗೆ ಪೋದಪ್ಪರೋ

---

1 ನೀನೆತ್ತಲುಂ ಪೋಗಲ್ವೇಡೆನ್ನೊಡನಿರೆಂದು (ಘಚಛ). 2 ನಿಚ್ಚ ನಿಚ್ಚಂ (ಘಚಛ) 3 ಮಂತರ (ಕಖಗ). 4 ಯಮ (ಘಚಛ), ಮುಂದಕ್ಕೂ ಇದೇ ಈ ಪ್ರತಿಗಳ ಪಾಠ. 5 ಪೇೞ್ದೊ (ಘಚ). 6 (ಘಚಛ) ಗಳಲ್ಲಿಲ್ಲ. 7 + ವಪ್ಪ (ಘಚಛ). 8 ಯತರವ್ಪೋ (ಘಚಛ). 9 ಎಮಗುಡಲಿಲ್ಲೇನುಮೊಂದು ದಮ್ಮಕ್ಕಪ್ಪಡಂ (ಘ), ಎನಗೊಂದು (ಚ), ಎಮಗುಡಲೊಂದು ದಮ್ಮಕ್ಕಪ್ಪಡಂ (ಛ). 10 ಕುಡಿ (ಕಗ). 11 (ಘಚಛ) ಗಳಲ್ಲಿಲ್ಲ. 12 ವಂ (ಘಚಛ). 13 (ಕಖಗ) ಗಳಲ್ಲಿಲ್ಲ. 14 ಟ್ಟಿ ಕಳೆದನೆಂದೊಡೆ (ಘಚಛ). 15 ದಮ್ಮ (ಘಚಛ). 16 ಯಂತಲೆಪೊಱೆ (ಘಚಛ). 17 ಳ್ತು (ಕಖಗ). 18 ದರಂ (ಘಚಛ).

ಎಂದು ಬಱಿವಱಿಯನೆ ವಂದು ಪೊಱವೊೞಲ ಬಸದಿಯ ಪ್ರಾಕಾರದೊಳಗೆ ಪುಳ್ಳಿಯ ಪೊಱು[1]ಯನಿಕ್ಕಿ ನೋಟ್ಪನನ್ನೆಗಮಿವರನೆಂದವರಂ ಬಱಿವಱಿಯನೆ ಬರ್ಪನ್ನೆಗಮಾ[1] ದಿವಸಮರಸಂ ಶಿವಗುಪ್ತ ಭಟ್ಟಾರಕರ್ಗ್ಗಂ ಪಾರಣೆಯಂ ಮಾಡುವೆಂ ನೆಱರಾರುಂ ನಿಱಿಸಲ್ ಸಲ್ಲೆಂದು ಪೊೞಲೊಳಗೆಲ್ಲಂ [2]ಗೋಸನೆ[2]ಯಂ [3]ತೊೞಲ್ಚಿ[3]ದೊಡಂಜಿಯಾರುಂ ನಿಱಿಸುವರಿಲ್ಲದೆ ಭಟಾರರುಂ ಕಿಱುಮನೆ ಪೆರ್ಮನೆಯೆನ್ನ[4]ದುಣಲ್ಕಕ್ಕ[4] ಮನೆಗಳಂ ಚರಿಗೆವುಗುತ್ತಂ ಬರ್ಪೊರರಮನೆಯಂ ಪೊಕ್ಕಾಗಳ್ ಕಂಡರಸನುಂ ಮಹಾದೇವಿಯುಂ [5]ಸುವರ್ಣ[5]ಪೂರ್ಣ ಕಳಶಮುಂ ಕನ್ನಡಿಯುಂ ಪೂವುಮಕ್ಕಿಯುಂ ಮಾದುಫಲಮುಂ ಮೊದಲಾ[6]ಗೊಡೆಯನೇಕಾರ್ಚನೆಯಿಂದಿದಿರಂ[6] ಬಂದು ನಿಱಿಸಿ ಬಲಗೊಂಡುಬಂದು ಭಟಾರರ ಕಾ[7]ಲಂ[7] ಮಹಾದೇವಿ ನೀ[8]ರ್ವೊಯ್ಯೆ[8] ಅರಸಂ ತಾನೆ [9]ಪ್ರಕ್ಷಾಳಿಸಿ[9] ಬಱಿಕ್ಕೊಡವೋದ ಬೋಟಡಲೆಯ ದೇಸಿಗನ ಕಾಲಂ ಬ್ರಹ್ಮಯ್ಯಾ ನೀಡಿಂ ನಿಮ್ಮ ಕಾಲಂ [10]ತೊಳೆ[10]ವೆಮೆಂದು ಮಹಾದೇವಿ ತಾನೆ ಕಾಲಂ ಕರ್ಚಿ ಭಟ್ಟಾರಕರ್ಗೆ[11]ಱಿ ಕುಳ್ಳಿರಿಸಿ[11] ಪಿರಿಯ ಪೊನ್ನ ತಳಿಗೆಯುಮುಚ್ಚಮಪ್ಪಡ್ಡಣಿಗೆಯುಮನಿಟ್ಟು ಬ್ರಹ್ಮ ಚಾರಿಗಂ ಪೊನ್ನ ತಳಿಗೆಯುಮಡ್ಡಣಿಗೆಯುಮನಿಟ್ಟು ಭಟ್ಟಾರಕರ್ಗರಸಂ ತಾನೆ ಬಡ್ಡಿಸಲ್ತಗು[12]ಳ್ದ, ಬಱಿಯಂ[12] ರಾಜಾನ್ನದ ಕೂೞುಂ ಪೆಸಱತೊವೆಯುಂ ಪೆಸ ಗಾಸಿದಾಮೋದ ಸುಗಂಧ ಪರಿಮಳಂ [13]ನಾರ್ಪ[13] ತುಪ್ಪಮುಂ ಪಲವುಂ ತೆಱದ [14]ಬಾಡು[14]ಗಳುಂ ತುಯ್ಯಲುಂ ಪೂರಿಗೆಯಿಡ್ಡಲಿಗೆ[15] [16]ಸೋದಿಗೆ[16] ಲಾವಣಿಗೆ ಘೃತ ಪೂರಂ ಲಡ್ಡುಗೆ ಮಂಡಗೆ ಮೊದಲಾಗೊಡೆಯ ಪದಿನೆಂಟುಂ ತೆಱದ ಭಕ್ಷ್ಯ ರೂಪಂ[17]ಗಳುಮಂ[17] ನಾನಾಪ್ರಕಾರದ ಪಾನಂ[17]ಗಳುಮಂ[17] ಭಟ್ಟಾರರ್ಗೆ ಬಡ್ಡಿಸಿ ದಂತೆ ಬ್ರಹ್ಮಯ್ಯಂಗೆ ಮಹಾದೇವಿ ಬಡ್ಡಿಸಿದೊಡೆ ದೇಸಿಗಂ ಕಂಡು ಬೆಱಗಾಗಿ ಪುಟ್ಟಿದಂದಿಂ ತೊಟ್ಟಿಂತಪ್ಪುಣಿಸಂ ಕನಸಿನೊಳಪ್ಪೊಡಂ ಕಂಡಱಿಯದ[18]ಮಗಂ[18] ಚೋದ್ಯಂಬಟ್ಟೆಂದಪ್ಪೊಡಂ ತಣಿಯೆಯುಣ[19]ಲ್ವೆಱದ[19] ದೇಸಿಗಂ ನಾನಾಪ್ರಕಾರ ದುಣಿಸಂ ಸುಗಂಧಮಪ್ಪ ದಿವ್ಯಾಹಾರಮ[20]ನಾಕಂಠ[20]ಪ್ರಮಾಣಂಬರೆಗಂ ತಣಿಯುಂಡು ಬಱಿಕ್ಕೆ ಕರ್ಪೂರ ಸಮ್ಮಿಶ್ರಮಪ್ಪ [21]ನೆಲವತ್ತಿ[21]ಯಡಕೆಯ ಪೋಟ್ಟಳುಮಂ [22]ಕೈತೀವಿದೆಲೆಯುಮಂ[22] ಬ್ರಹ್ಮಯ್ಯಂಗೆ ಕೊಟ್ಟು ಭಟಾರ[23]ರ್ ಚರಿಗೆ ಮಾಡಿದ[23] ಬಱಿಕ್ಕರಸನುಮಂ ಮಹಾದೇವಿಯುಮಂ ಕರ್ಮಕ್ಷಯಮುಮಕ್ಷಯದಾನಮುಮಕ್ಕೆಂದು ಪರಸಿ ಪೊಱಮಟ್ಟು ಬಸದಿಗೆ ಪೋಪಾಗಳ್ ಭಟ್ಟಾರರ ಬಱಿವಱಿಯನೆ

1 ಯಂ ಬಱುತ್ತವರಂ ನೋಳ್ಪನೆಂದವರ ಬಳಿವಳಿಯನೆ ಬರ್ಪೊನನ್ನೆಗಮಾ (ಘಚಢ). 2 ಘೋಷಣೆ (ಕಗ). 3 ತಗುಳ್ಚಿ (ಘಚಢ). 4 ದಯೋಗ್ಯಮಪ್ಪ (ಕಖಗ). 5 ಪೊನ್ನ (ಘಚಢ). 6 ಗರ್ಚನೆಯನಿದಿರಂ ಕೊಂಡು (ಘಚಢ). 7 ಲಮೇಲೆ (ಘಚಢ). 8 ರನೆಱೆದೊಡೆ (ಘಚಢ)

೩೮ 9 ಕರ್ಚಿದ (ಘಚಢ) 10 ಕರ್ಚುವ (ಘಢ), ಕರ್ಚುವ (ಚ). 11 (ಘಚಢ) ಗಳಲ್ಲಿಲ್ಲ 12 ಳ್ದಂ ಪಳಿಯ (ಘಚಢ). 13 ತೋರ್ಪ (ಢ). 14 ಶಾಕಂ (ಘಢ). 15 + ಯಶೋವರ್ತಿಯುಂ ಆವಣಿಗೆಯುಂ (ಘಚಢ). 16 ಸೊಂಡಿಗೆ (ಗ), ಪೋಳಿಗೆಯುಂ (ಘಚಢ). 17 ಗಳ್ಳಂ (ಗಘಚಢ). 18 ನಂ (ಘಢ), ವಂ (ಚ). 19 ಲ್ಪಡೆಯದ (ಕಖಗ). 20 ಂಕಂಡೋಪ್ಪ (ಘಚಢ) 21 ಮೆಲುವೆತ್ತ (ಚ). 22 ಕೈಯಂ ತೀವಿ (ಕಖಗ). 23 ರುಂಡಿಂ (ಘಚಢ).

ಪೋದಂ ಭಟ್ಟಾರರ್ ಬಸದಿಯಂ ಬಲಗೊಂಡು ಕಾಲಂ ಕರ್ಚೋೞಗಂ ಪೊಕ್ಕೀರ್ಯಾ[1]ಪತ್ತಿ[1]ಯುಂ ಬಿಡಿಸಿ ಗೋಚಾರನಿಯಮಂಗೆಯ್ವುದಂ ನಂದಿಮಿತ್ರಂ ನೋಡುತ್ತಿರ್ದನಿಂತೆಂದು ಮನದೊಳ್ ಬಗೆದಪ್ಪನಿಂತಪ್ಪ ರೂಪುಮಂ ಕೈಕೊಂಡೊಡೆ ಲೋಕದೊಳ್ ಗೌರವಮುಂ ಪೂಜೆಯುಮಂ ಪೆಱಲಕ್ಕುಮೊಂದುಂ ಕ್ಲೇಶಮಿಲ್ಲದೆ ದಿವ್ಯಾಹಾರಮನೆಲ್ಲಾ ಕಾಲಮುಣಲ್ಪೆಱಲಕ್ಕುಮೆಂದು ಬಗೆದು ಭಟಾರರ್ ನಿಯಮಂಗೆಯ್ದು ಸಮೆದಿರ್ದ ಬೞಿಕ್ಕೆ ಬಂದು ಮುಂದೆ ನಿಂದು ಕೈಗಳಂ ಮುಗಿದಿಂತೆಂದನ್ ಭಟಾರಾ ಎನ್ನಂ ನಿಮ್ಮಂತೆ ಮಾಡಿಮೆಂದೊಡೆ ಭಟಾರರಾತನಂ ನೋಡಿಯಲ್ಪಾಯುಷ್ಯನುಮಾಸನ್ನ ಭವ್ಯನಪ್ಪುದನಱಿದೊಳ್ಳಿತಪ್ಪ ಮುಹೂರ್ತದೊಳ್ ತಪಂಬಡಿಸಿದೊಡಾತನುಂ ತಪಂಬಟ್ಟು ದೀಕ್ಷೋಪವಾಸಂ ಗೆಯ್ದಿರ್ದನ್

ಅನ್ನೆಗಮರಸನುಮರಸಿಯುಂ ಭಟ್ಟಾರರೊಡವಂದ ಬ್ರಹ್ಮಚಾರಿ ತಪಂಬಟ್ಟನೆಂಬುದಂ ಕೇಳ್ದೊಸೆದು ಮುನ್ನೆಮ್ಮ ಮನೆಯೊಳುಂಡು ತಪಂಬಟ್ಟನಿಂ ನಾಳೆ ನಮ್ಮ ಮನೆಯೊಳ್[2] ಪಾ[3]ನಿ[3]ಗಟ್ಟುವಮೆಂದು ಬಗೆದಿರ್ದು ಮಱುದಿವಸಂ ಸಾಮಂತ ಮಹಾಸಾಮಂತರ್ಕಳುಂ ರಾಜ್ಯ ಚಿಹ್ನಂಗಳುಂ ಬೆರಸು ಮಹಾವಿಭೂತಿಯಿಂದರಸಂ ಪೊೞ್ತುಡಿನ ಬೇಗಂ ಬಸದಿಗೆ ವಂದು ವಾಹನದಿಂದಿೞಿದು ಬಲಗೊಂಡು ಒಂದು ಗಂಧ ಪುಷ್ಪ ದೀಪ ಧೂಪಾಕ್ಷತೆಗಳಿಂ ದೇವರನರ್ಚಿಸಿ ಕ್ರಿಯಾ ಪೂರ್ವಕಂ[4] ವಂದಿಸಿ ಭಟ್ಟಾರರ್ಗೆ ಗುರುಭಕ್ತಿಗೆಯ್ದು ಪಂಚಮುಷ್ಟಿಯಿಂ ವಂದಿಸಿ*ಯಂತೆ ಕಿ[5]ತ್ತ[5]ಯ್ಯಂಗಳುಮನಾ ಮಾರ್ಗದಿಂ ವಂದಿಸಿ ಭಟಾರರಲ್ಲಿಗೆ ವಂದು ಕುಳ್ಳಿರ್ದು ಧರ್ಮಮಂ ಕೇಳ್ದು ತದನಂತರಮೆೞ್ದು ಭಟಾರಾ ಬಿನ್ನಪಂ ಕಿತ್ತಯ್ಯಂಗಳನಿಂದೆಮಗೆ ಕಾರುಣ್ಯಂಗೆಯ್ವುದಾವು ನಿಱಿಸಿ ಪಾನಿಗಟ್ಟಿ ಪುಣ್ಯಮಂ ನೆರಪಿಕೊಳ್ವೆಮೆಂದೊಡಂತೆ ಗೆಯ್ಯೆಮೆಂದಾ ನುಡಿಯುಂ ಕಿ[5]ತ್ತ[5]ಯ್ಯಂಗಳ್ ಕೇಳ್ದು ಸಾಮಂತ ಮಹಾಸಾಮಂತರ್ಗೆ ಸ್ವಾಮಿಯಪ್ಪೀ ಪೃಥ್ವೀಶ್ವರಂ ಬಂದೆಮ್ಮನರ್ಚಿಸಿ ಬಂದಿಸಿ ನೀಚವೃತ್ತಿಯಿಂ ಕಿಂಕುರ್ವಾಣಂಗೆಯ್ವಪ್ಪನಹೋ ಆಶ್ಚರ್ಯಮೀ ತಪದ ಧರ್ಮದ ಫಲಮಿಲ್ಲಿಯೆ ಪ್ರತ್ಯಕ್ಷಮಾಯ್ತಿನ್ನುಂ ಮುಂದೆ ಪಿರಿದಾಗದೆ ಮಾಣದೆಂದು ತಮ್ಮೊಳೆ ತಱಿಸಂದು ಮತ್ತಮಾ ದಿವಸಮುಪವಾಸಮುಂ ಕೈಕೊಂಡರ್

ಇತ್ತಲ್ ಜಯವರ್ಮ ಮಹಾರಾಜಂ ಭಟಾರರುಮಂ ಕಿತ್ತಯ್ಯಂಗಳುಮಂ ಬಂದಿಸಿದುದಂ ಭಟಾರರಱಿದೆ ಕಿತ್ತಯ್ಯಂಗಳ್ಗೆ ಏಷಣಾಸಮಿತಿ ಮೊದಲಾಗೊಡೆಯ ವ್ರತಂಗಳಂ ಮತ್ತಂ ಸಂಕ್ಷೇಪದಿಂ ಪೇೞ್ದು ಕಿತ್ತಯ್ಯಂಗಳಿರಾ ನಿಮಗೆ ಶ್ರಮಮಾದಪ್ಪುದು ದೇವರಂ ಬಂದಿಸಿ ಚರಿಗೆಗೆ ಪೋಱಮಡುವುದೆನೆ ಮತ್ತಂ ತಾವು ಕೊಂಡುಪವಾಸಮಂ ಗುರುಗಳ್ಗೆ ಪ್ರಕಟಿಸಿದರದನರಸಂ* ಜಯವರ್ಮ ಮಹಾರಾಜಂ

[1] ಪತಿ (ಕಖಗ), ಪಥ (ಚ), ವತಿ (ಚ). [2] + ದೇವ (ಕಖಗ) [3] ನೆ (ಖ)
[4] + ದೇವರ (ಕಖಗ) [5] ಳ್ತ (ಕಗ), ಎಲ್ಲೆಡೆಯಲ್ಲೂ ಹೀಗೆಯೇ *-*ಭಟಾರಾ ಇಂದೆಮ್ಮ (ರ) ಮನೆಗೆ ಚರಿಗೆ ವರಲ್ವೇಳ್ಕುಂ ಕಿತ್ತಯ್ಯಂ (ಚಿಕ್ಕಯ್ಯಂ) ಗಳನೊಡಗೊಂಡು ಬಂದು ಪಕ್ಕದಿರ್ದು ಪಾನಿಗಟ್ಟಿಸುವುದೆಂದಡೆ ಭಟಾರರೆಂದರಾಮುಂ ತಪಂಬಡಿಸಬಲ್ಲೆವು ಕಿತ್ತಯ್ಯಂಗಳಂ ನೀವೊಡಂಬಡಿಸಿದೊಡೊಡಗೊಂಡು ಬರ್ಪೆಮು (ಪೋಗಿಪೆಂ) ನಾಮುಂ ನೋಂತಿರ್ದುಱವಲ್ಲೆಂದೊಡರಸಂ

ಕೇಳ್ದು ಜನ್ನಸ್ತ್ರೀಪ್ರೋಗಂ [1]ಮಾ[1]ಡಿ ಭಟಾರರುಮಂ ಕಿತ್ತಯ್ಯಂಗಳುಮಂ ಬಂದಿಸಿ ತನ್ನರಮನೆಗೆ ಪೋಗಿ ಮಹಾದೇವಿಗೆಂದನೆಂದೆನಗೆ ರಿಸಿಯ[2]ರಂ ನಿಱಿಸಿ[2] ಪುಣ್ಯಂಗೊಳ್ವ ಭಾಗ್ಯಮಿಲ್ಲೆಂದೊಡೆ ಮಹಾದೇವಿಯಂತಪ್ಪೊಡೆ ನಾಳೆಯಾಂ ನಿಱಿಸಿ ಪುಣ್ಯಮಂ ಕೈಕೊಳ್ವೆನೆಂದೊಡರಸನೆಂದೊಂ ನಿನಗಮೆನಗಂ ಸಮಭಾಗಂ ಪುಣ್ಯಮೆಂದುಸಿರೆ[3] ನೀಮೇಕೆನಗೆಂದು ಸಮಭಾಗಮಾಯದಾ[4]ದಿರೀ[4]ಪುಣ್ಯಮನಾನಿಂದು ನಿಱಿಸಿ [5]ಕೈಕೊಳ್ವೆಂ[5] ನೀಂ ನಾಳೆ ನಿಱಿ[6]ಸೆಂದು[6] ನುಡಿದು ಬಸದಿಗೆ ಪೋಗಿ[7]ರೆ[7]ನ್ನ ಭಾಗ್ಯಮೇಂ ಕಿಡಿಸುಗುಮೆ ನಾಳೆ[8]ಯುಂ[8] ನಿಱಿಸಿ[9]ಯಾವಗಂ[9] ಪುಣ್ಯಮಂ ಕೈಕೊಳ್ವೆನೆಂ[10]ದರಸಂಗೆ[10] ಮಱುಮಾತುಗೊಟ್ಟು ಮಱುದಿವಸಂ ಧಾರಿಣಿ ಮಹಾದೇವಿಯುಯ್ಯಾನ್ವರರಸಿಯರ್ಕಳುಂ ಪೆಂಡವಾಸದಗ್ಗಳದ ಸೂಳೆಯರ್ಕಳುಂ [11]ಬೆರಸು ವೇಸರಿಗಪ್ಪೆಗಳುಂ ಪಿಡಿಗಳುಂ ಸಿಜಿಗೆಗಳುಮನೇಱಿ ಸೀಗುರಿಗಳುಮಂ ಕೊಡೆಗಳುಮಂ[11] [12]ಪಿಡಿಯಿಸಿ[12] ಎಕ್ಕ ಮದ್ದಳೆಯ ಕೊಟಿಲ ಝುಂಕಾರದ ಪಱೆಗಳ್ ಮುಂದೆ ಬಾಜಿಸುತ್ತಂ ಬ[13]ಟಿಯುಂ[13] ಕಾಪಿನವರ್ ಪರೆ ಮುಂದಣ ಮಾನಸರಂ ಪಡಿಯಱರ್ ತೊಲಗಿಸುತ್ತಂ [14]ಬರೆ[14] ವಿದ್ಯಾಧರಿಯರ್ಕಳ್ ಬರ್ಪಂತೆ ಬಂದು ಬಾಗಿಲ್ಮಾಡದ [15]ಪೊ[15]ಱಗಣ ದೆಸೆಯೊಳ್ ತಂತಮ್ಮ ವಾಹನಂಗಳಿಂದಿಳಿದು ಪೊಕ್ಕು ಬಸದಿಯಂ ಬಲಗೊಂಡು ಬಂದೊಳಗಂ ಪೊಕ್ಕು ದರ್ಶನ ವಂದನೆಗಳುಮಂ ಪೇಳ್ದೀಯರ್[16]ಪತ್ತಿ[16]ಯಂ ಬಿಡಿಸಿ †ಗಂಧ ಪುಷ್ಪ ದೀಪ ಧೂಪಾ[17]ಕ್ಷತಂಗಳಿಂ ದೇವರನರ್ಚಿಸಿ[17] ಕ್ರಿಯಾ[18]ಪೂರ್ವಕಂ[18] ದೇವರಂ† ಬಂದಿಸಿ ಶಿವಗುಪ್ತಭಟ್ಟಾರರುಮನರ್ಚಿಸಿ ಗುರುಭಕ್ತಿಗೆಯ್ದು ಬಂದಿಸಿ ಶ್ರಾವಕ ಬ್ರತಂಗಳನೇಱಿಸಿಕೊಂಡು ಬಳಿಕಿಂತೆಂದಳ್ ಭಟ್ಟಾರಾ ಇಂದೆಮ್ಮಲ್ಲಿಗೆ ನೀಮುಂ ಕಿ[19]ತ್ತ[19]ಯ್ಯಂಗಳನೊಡಗೊಂಡು ಬಂದು ಪಕ್ಕದಿರ್ದು

ಕಿತ್ತಯ್ಯಂಗಳಲ್ಲಿಗೆ ಪೋಗಿ ಕಾಲಂ ಪಿಡಿದು ಬಂದಿಸಿ ಇಂತೆಂದಂ ಕಿತ್ತಯ್ಯಾ ನೀಮೆಮ್ಮ ಮನೆಯೊಳ್ ಪಾರಿಸಲ್ವೇಳ್ಕು ನಿನಿತೊಂದನೆಮಗೆ ನೀವು ದಯೆಗೆಯ್ಯಲ್ವೇಳ್ಕುಮೆಂದೊಡೆ ಕಿತ್ತಯ್ಯಂಗಳನರಸಂ ಸಾಮಂತ ಮಹಾ ಸಾಮಂತರ್ಕಳಿಂ ಪರಿವೇಷ್ಟಿತನಾಗಿ ಕಾಲಂ ಪಿಡಿದು ಪೊಡೆವಟ್ಟಿರ್ದೊನಂ ಕಂಡಹೋ ತಪದ ಮಾಹಾತ್ಮ್ಯಮಿಂತುಟಾನೆಲ್ಲಿ ಪುಟ್ಟಿದನೆಲ್ಲಿ ಬಳೆದೆಂ ದೇಸಿಗನೆಂ ಬೈಕಂಗುಳಿ ಎನಿಪಿರಿದು ಸಿರಿಯೆನಗೆಂತಾದುದಿಂತಪ್ಪ ಪರಮೇಶ್ವರಂ ಪೃಥ್ವೀಪತಿಯೆನ್ನ ಕಾಲ್ಗೆಱಗಿ ಪೊಡೆವಟ್ಟುಣಲ್ಬರವೇಳ್ಕುಮೆಂದು ಕಿಂಕುರುವಾಣಂಗೆಯ್ದಪ್ಪನೀ ತಪದ ಫಲಮಿಂತುಟೆಂದು ಮಾಣ್ದೆನಪ್ಪೊಡೆ ಪಿರಿದುಂ ಫಲಮುಂಟೆಂದು ಮನದೊಳೆ ಬಗೆದಿಂತೆಂದರಿಂದೆಮಗುಣಲ್ ಮನಮಿಲ್ಲುಪವಾಸಂಗೆಯ್ದಪ್ಪೆವೆಂದು ಪರಿಚ್ಛೇದಿಸಿ ನುಡಿದೊಡೆ (ಘಚಛ) 'ಕಿತ್ತಯ್ಯ' ಎಂಬದಕ್ಕೆ (ಛ)ದಲ್ಲಿ 'ಚಿಕ್ಕಯ್ಯ' ಎಂದು ಎಲ್ಲೆಡೆಯಲ್ಲೂ ಪಾಠವಿದೆ.

1 ಬಾ (ಘಚಛ) 2 ರಿಗೆ ಮಾಡಿ (ಘಛ), ರಿಗೆ ಊಡಿ (ಚ). 3 ಗ ಮೆಂದೊಡರಸಿ (ಘಚಛ). 4 ವಗಂ (ಕಖಗ) 5 ಪಡೆವೆಂ (ಘಚಛ). 6 ಸಿಮೆಂ (ಘಚಛ). 7 ಮೆ (ಘಚಛ). 8 ಯಾಂ (ಘಚ), ನಾಂ (ಛ). 9 (ಘಚಛ) ಗಳಲ್ಲಿಲ್ಲ. 10 ದುಭೂಪಾಳಂಗೆ (ಘಚಛ). 11 ನಡೆಯ ಕಳ್ತೆಗಳ್ಮನೇಱಿ ಕೊಡೆ ಸೀಗುರಿಗಳ್ಮಂ ಪಿಡಿಯಿಸಿ (ಘ). ನಿಡಿಯ ಕಳ್ತೆಗಳ್ಮನೇಱಿ ಕೊಡೆ ಸೀಗುರಿಗಳ್ಮಂ ಪಿಡಿಯಿಸಿ (ಚ), ನಡೆಗತ್ತೆಗಳ್ಮನೇಱಿ ಕೊಡೆ ಸೀಗುರಿಸಳ್ಮಂ ಪಿಡಿಯಿಸಿ (ಛ). 12 (ಕಖಗ) ಗಳಲ್ಲಿಲ್ಲ. 13 ಳಸಿಯುಂ (ಕಖಗ). 14 (ಕಖಗ) ಗಳಲ್ಲಿಲ್ಲ. 15 ಪೆ (ಕಖಗ). 16 ಪತಿ (ಖ), ಪಥೆ (ಗ), ವತಿ (ಘಛ), ಗತಿ (ಚೆ). †–† ದೇವರ ನಷ್ಟವಿಧಾರ್ಚನೆಯಿಂದರ್ಚಿಸಿ ಕ್ರಿಯಾಸಹಿತಂ (ಚ). 17 ದಿಗಳಿನರ್ಚಿಸಿ (ಘಛ) 18 ಸಹಿತಂ(ಘಛ) 19 ಳ್ತ (ಕಗಛ).

ಪಾ[1]ಸಿಗಟ್ಟಿ ಮಾರ್ಗಮಂ ತೋಱಿ ಮಗುೞೆ ಬಿಜಯಂಗೆಯ್ವುದೆನೆ[1] ಕಿ[2]ತ್ತ್ರ[2]ಯ್ಯಂಗಳುಂ ನೀಮು ಬೆಸಗೊಳ್ಳೆ ಮುನಿವರೊಡಂಬಟ್ಟುಪಾವೊಡಗೊಂಡು ಬರ್ಪೆಮೆಂದೊಡೆ ಧಾರಿಣೀ ಮಹಾದೇವಿ ಕಿತ್ತ್ರಯ್ಯಂಗಳಲ್ಲಿಗೆ ಪೋಗಿ ಕಾಲಂ ಪಿಡಿದು ವಂದಿಸಿ *ಇಂತೆಂದಳ್ ಕಿತ್ತ್ರಯ್ಯಾ ನಿಮಗಿಂದು ನಾ[3]ಮ[3] ಪಾಸಿಗಟ್ಟುವೆಮೆಮ್ಮ ಮನೆಗೆಟ್ಟಿರವೇಟ್ಟುದೆಂದು ಕಾಲಂ ಪಿಡಿದು ಪೊಡೆವಟ್ಟಿರ್ದಾಗಳರಸಿಯ ಮೊಗಮಂ ನೋಡಿ ನೆಱೆಯೆ ತೊಟ್ಟಿಟ್ಟು ವಸದಸಂಗೊಂಡಿರ್ದ ದೇವಗಣಿಕೆಯರನೆ ಪೋಲ್ವಯ್ವರರಸಿಯರ್ಕಳಿಂದಂ ಸೂಳೆಯರ್ಕಳಿಂದಂ ಪರಿವೇಷ್ಟಿತೆಯಾಗಿರ್ದ* ಶಚೀಮಹಾದೇವಿಯನೆ ಪೋಲ್ವ ಧಾರಿಣಿ ಮಹಾದೇವಿಯೆನ್ನ ಕಾಲ್ಗೆಱಗಿ ಪೊಡೆವಟ್ಟಿರ್ದಳಿದೆಲ್ಲಮಾ ತಪದ ಫಲಮಿನ್ನುಂ ಮುಂದೆ ಪಿರಿದುಂಟೆಂದು ಬಗೆದರಸಿಗೆಂದರಬ್ಬಾ ಇಂದೆಮಗುಣಲ್ಕೆ ಬಗೆಯಿಲ್ಲುಪವಾಸಂಗೆಯ್ದಪ್ಪೆಮೆಂದು ಪರಿಚ್ಛೇದಿಸಿ ನುಡಿದೊಡೆ ಬಿನ್ನನೆ ಮೊಗಂ [4]ಮಾ[4]ಡಿ ಭಟಾರರಂ ವಂದಿಸಿ ಪೋಗಿ[5]ಯರಸಂಗೆ[5] ಕಿತ್ತ್ರಯ್ಯಂಗಳಿಂದು†ಪವಾಸಂಗೆಯ್ವರೆಂದು ಪೇ[6]ೞ್ದಾಗಳ್[6] ಮತ್ತಿರುಳಿನ ಕರಣವೇಳೆಯೊಳ್ ವಜ್ರಸೇನನೆಂಬ ಮಂತ್ರಿಯರಸಂಗಿಂತೆಂದು ಬಿನ್ನಪಂ ಗೆಯ್ದಂ ದೇವಾ ನಾಳೆಯಾಂ ನಿಱಿಸಿ ಕಿತ್ತ್ರಯ್ಯಂಗಳ್ಗೆ ಪಾರಣೆಯಂ ಮಾಡುವೆನೆನೆ ಅಂತೆಗೆಯ್ಯೆಂದೊಡೆ ಮಱುದಿವಸಂ ಬಸದಿಗೆ ವಂದು[7] ಭಟ್ಟಾರಾ ಕಿತ್ತ್ರಯ್ಯಂಗಳನೆಮ್ಮಲ್ಲಿಗೊಡಗೊಂಡು [8]ಬಂದು ಚರಿಗೆದೋಱಿ ನೀಮುಂ ಬಿಜಯಂಗೆಯ್ವುದೆನೆ[8] ಕಿತ್ತ್ರಯ್ಯಂಗಳೊಡಂಬಟ್ಟೊಡಗೊಂಡು ಬರ್ಪಮವರನೊಡಂಬಡಿಸಿಮೆಂದೊಡೆ ಕಿತ್ತ್ರಯ್ಯಂಗಳಲ್ಲಿಗೆ ಪೋಗಿ ಕಿತ್ತ್ರಯ್ಯಾ ಇಂದೆಮ್ಮ ಮನೆಯೊಳ್ [9]ಪಾರಿ[9]ಸಲ್ವೇಟ್ಟುಮೆಂದು ಕಾಲಂ ಪಿಡಿದು ಪೊಡೆಮಟ್ಟಿರ್ದೊನಂ ನೋಡಿ 'ರಾಜೋ ವಾ ರಾಜ[10]ಮ[10]ತ್ರ್ಯೋ ವಾ' ಎಂದು ಸಾಮಂತ ಮಹಾಸಾಮಂತರ್ಕಳಿಂ[11] ಪರಿವೇಷ್ಟಿತನಾಗಿರ್ದ ಮಂತ್ರಿಯೆನಗೆ ಪೊಡೆಮಟ್ಟನಿದೆಲ್ಲಂ ತಪದ ಮಾಹಾತ್ಮ್ಯಮಿನ್ನುಂ ಮುಂದೆ ಪಿರಿದುಂಟೆಂದು ಬಗೆದಿಂತೆಂದರಾಮಿಂದುಪವಾಸಂಗೆಯ್ದೆಮೆಂದೊಡಾತನೆನಗೆ ಪುಣ್ಯಮಿಲ್ಲಾಗದೆ ಎಂದು ನುಡಿದು ಭಟ್ಟಾರರಂ ವಂದಿಸಿ ಪೋದಂ ಮತ್ತಮಿರುಳಿನ ಕರಣ ವೇಳೆಯೊಳರ್ಹದ್ದಾಸನೆಂಬೊಂ ರಾಜಶ್ರೇಷ್ಠಿಯರಸಂಗೆ ಬಿನ್ನಪಂಗೆಯ್ದಂ ನಾಳೆಯಾಂ ಕಿತ್ತ್ರಯ್ಯಂಗಳ್ಗೆ ಪಾರಣೆಯಂ ಮಾಡುವೆನೆಂದೊಡರಸನಂತೆ ಗೆಯ್ಯೆಮೆಂದೊಡಾತನುಂ ಬಸದಿಗೆ ಪೋಗಿ ಭಟ್ಟಾರರಂ ವಂದಿಸಿ [12]ಕಿತ್ತ್ರಯ್ಯಂಗಳುಮಂ ವಂದಿಸಿ ಗುರುಗಳನುಮತದಿಂದೆಮ್ಮ ಮನೆಗೆ ಚರಿಗೆವರಲ್ವೇಟ್ಟುಮೆಂದು ನುಡಿದೊಡುಪವಾಸಂಗೆಯ್ದೆನೆಂದೊಡಾತನುಂ[12] ಭಟ್ಟಾರರಂ ವಂದಿಸಿ ಪೋದಂ

---

[1] ನೆಗಟ್ಟುವುದೆಂದೊಡೆ ಭಟಾರರೆಂದರಾಮುಂ ತಪಂಬಡಿಸಿದೆವಿಂ (ಘಚಛ). [2] ಳ್ತ (ಕಗ), ಈ ಪ್ರತಿಗಳಲ್ಲಿ ಎಲ್ಲೆಡೆಯೂ ಹೀಗೆಯೇ. [3] ಮು (ಖಗ). *–* ತನ್ನಭಿಪ್ರಾಯಮನಱಿಪೆ ಕಿತ್ತ್ರಯ್ಯಂಗಳೆಂದರ್ (ಘಚಛ). [4] ಬಾ (ಕಛ). [5] (ಕಖಗ) ಗಳಲ್ಲಿಲ್ಲ. † ಪು. ೭೫–೮೩† (ಖ) ದಲ್ಲಿ ನಷ್ಟವಾಗಿದೆ [6] ಳ್ದಿರ್ದರ್ (ಕಗ). [7] + ದೇವರಂ ಬಂದಿಸಿ ಗುರುಗಳ್ಗೆ ಗುರುಭಕ್ತಿಗೆಯ್ದಿಂತೆಂದಂ (ಘಚಛ). [8] ಚರಿಗೆವರ್ಪುದೆಂದೊಡೆ (ಘಚಛ) [9] ಪರ (ಕಗ). [10] ಮಾ (ಘಚಛ). [11] + ಪರಿವಾರ ಜನಂಗಳಿಂ (ಘಚಛ). [12] ಭಟಾರಾ ಇಂದು ನೀವೆಮ್ಮ ಮನೆಗೆ ಕಿತ್ತ್ರಯ್ಯಂಗಳನೊಡಗೊಂಡು ಬಂದು ಪಾರಣೆಯಂ ಮಾಡಿಸಿಮೆಂದು ಪೇಳ್ದಡೆ ಕಿತ್ತ್ರಯ್ಯಂಗಳಿಂದುಮೆಮಗುಪವಾಸವೆಂದೊಡಾತನುಂ (ಘಚಛ).

ಇತ್ತ ಸಂದಿಮಿತ್ರ ಕಿತ್ತಯ್ಯಂಗಳ್ಗೆ ಶ್ರಮಮಂ ಭಟ್ಟಾರರಱಿದು ಕಿತ್ತಯ್ಯಾ ಪಂಚನಮಸ್ಕಾರಮಂ ಮಾಣದಿರುಳುಂ ಪಗಲುಮೋದುತ್ತಮಿರಿಮೆಂದು ಕಲ್ಪಿಸಿದೊಡವರುಮಿರುಳುಂ ಪಗಲುಮೋದುತ್ತಿರೆ ಮತ್ತಿತ್ತ ಇರುಳಿನೋಲಗದೊಳ್ ನೆರೆದಿರ್ದ ನೆರವಿಯೊಳರಸನುಂ ಮಹಾದೇವಿಯುಂ ಕಿತ್ತಯ್ಯಂಗಳ ತಪಮುಂ ಗುಣಮುಮಂ ಪೊಗೞುತ್ತ ತಪಂಬಟ್ಟದಿವಸದಿಂ ತಗುಳ್ದಿಂದಿಂಗಯ್ದು ದಿವಸಮುಣ್ಬುದಿಲ್ಲ ಕುಡಿವುದಿಲ್ಲುಪವಾಸಂಗೆಯ್ದಿರ್ದರಾಮೆನಿತು ಕೀೞ್ ನುಡಿದೊ[1]ಡಂ ಚರಿಗೆಮಾಡ[1]ಲೊಲ್ಲರಿನ್ನವು ಸಾಹಸಮುಂ ಸತ್ವವುಮಾರ್ಗಮೊಳವೆ ಎಂದರಸನುಮರಸಿಯುಂ ಪೊಗೞ್ವುದಂ ಕೇಳ್ದು [2]ಯುವರಾಜ[2]ನೆರ್ದು ಬಿನ್ನಪಂಗೆಯ್ದು ದೇವಾ ಕಿತ್ತಯ್ಯಂಗಳ್ಗೆ ನಾಳೆಯಾಂ ಪಾರಣೆಯಂ ಮಾಡಿಸುವೆನೆಂದೊಡರಸನಂತೆಗೆಯ್ಯೆಂದೊಡೆ ಮಱುದಿವಸಂ [3]ಯುವರಾಜಂ[3] ಮಹಾವಿಭೂತಿವೆರಸು ಬಸದಿಗೆ ವೋಗಿ ದೇವರಂ ಭಟ್ಟಾರರುಮನರ್ಚಿಸಿ ಬಂದಿಸಿ ಭಟಾರಾ ಕಿತ್ತಯ್ಯಂಗಳಿಂದೆಮ್ಮ ಮನೆಯೊಳ್ [4]ಪಾರಿ[4]ಸುವಂತಿ[5]ರೆ ಬೆಸಸಿಮೆನೆ ಕಿತ್ತಯ್ಯಂಗಳನೊಡಂಬಡಿಸಿ ನಿಱಿಸಿಮೆನೆ[5] ಕಿತ್ತಯ್ಯಂಗಳ ಕಾಲಂ ಪಿಡಿದು ಪೊಡೆಮಟ್ಟು ಕಿತ್ತಯ್ಯಾ ಎಮ್ಮ ಮನೆಯೊಳಿಂದು [6]ನೀಮುಂ[6] [7]ಪಾರಿ[7]ಸಲ್ವೇೞ್ಪುದೆಂದೊಡೆ ಕಿತ್ತಯ್ಯಂಗಳಾತನ ಶ್ರೀಯುಂ ವಿಭೂತಿಯುಂ [8]ತೇಜಮುಮಂ[8] ಕಂಡು ಇಂತಪ್ಪ [9]ಕ್ಷತ್ರಿಯ ಪುತ್ರಾದಿಗ[9]ಳೆಲ್ಲಮೆನಸಗೆಱಗಿ ಪೊಡೆಮಟ್ಟು ಕಿಂಕುರ್ವಾಣಂಗೆಯ್ದಪ್ಪರುಣ್ಬುದರ್ಕೇನೀಗಳ್ ಸಂಕಟಮಾ ತಪದ ಫಲಮಿನ್ನುಂ ಮುಂದೆ ಪಿರಿದುಂಟೆಂದು ಬಗೆದಿಂದುಪವಾಸಂಗೆಯ್ದೆವೆಂದು ಮಱುಮಾತುಗೊಟ್ಟೊಡೆ ವಿರಾಗ[10]ನಾಗಿ ಯುವರಾಜಂ ಭಟಾರರಂ ವಂದಿಸಿ ಪೋದನಿಂತಾಱುದಿವಸಂ ಪೋದ ಬೞಿಕ್ಕೇೞನೆಯ ದಿವಸದಂದು ನೇಸಱ್ ಮೂಡಿದೊಡೆ ಭಟಾರರಲ್ಲಿಗೆ [11]ಸಂದಿಮಿತ್ರಂ[11] ವಂದು ಬಂದಿಸಿ ಇಂತೆಂದಂ ಭಟಾರಾ ಇನಿತು ಕಾಲಮುಂ[12]ಡುದು[12] ಸಾಲ್ಗುಮೆಮಗೆ ಯಾವಜ್ಜೀವಂ ಬಾೞ್ವನ್ನೆಗಮುಪವಾಸ ಪಚ್ಚಕ್ಖಾಣಂಗುಡುವುದೆಂದೊಡೆ ಭಟಾರರೆಂದರ್ ನೀಮುಂ ಮಹಾಪುರುಷ[13]ರಿರ್ ನಿಮ್ಮನ್ನರ್[13] ಧೈರ್ಯವಂತರುಂ ಸತ್ವವಂತರುಮಾರುಮಿಲ್ಲಂ ಇನಿತು ಕಾಲಂ ತಪಂಗೆಯ್ದಪ್ಪೆಮಗಪ್ಪೊಡಮಿನಿತು ಧೈರ್ಯಮುಂ ಸತ್ವಮುಮಿಲ್ಲೆಂದು ಗುರುಗಳ್ ಪೊಗೞ್ದೊಡೆ ಗುರುಗಳ ಪೊಗೞ್ತೆಗೆ ರಾಗಿಸಿ ಸಂತೋಸಂಬಟ್ಟಿರ್ದೊಡೆ ಭಟಾರರೆಂದರ್ ನಿಮಗಿಂದಿನ ದಿವಸದನಿತೆಯಾಯುಷ್ಯಮೆಂದು [14]ಪೇೞ್ದಂ[14] ಜಾವಜ್ಜೀವಂ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ನಿವೃತ್ತಿಗೆ[15]ಯ್ಯೆಂದು ಪಚ್ಚಕ್ಖಾಣಂ ಗೊಟ್ಟು[15] ಬಸದಿಯೊಳೊಂದು ಕೋ[16]ಣೆಯೊಳೇ ಎಡೆಯೊಳ್[16] [17]ನೀವೊಂದು ಕೆಲದೊಳ್ ಮಗುೞದೆ[17] ತೞರದೆ[18]

---

[1] ಡಮುಱ (ಘಚಛ). [2] ಸಾಮಂತ ತಳಾಱನಪ್ಪ ಶ್ರಾವಕಂ (ಘಚಛ). [3] ಸಾಮಂತಂ (ಘಚಛ). [4] ಪರ (ಕಗ). [5] ರೊಡಗೊಂಡು ಬನ್ನಿಮೆಂದೊಡೆ ಕಿತ್ತಯ್ಯಂಗಳನೊಡಂಬಡಿಸಿ ದೊಡೊಡಗೊಂಡು ಬರ್ಪೆವೆಂದೊಡೆ (ಘಚಛ). [6] ನಿಮ್ಮಡಿ (ಘಚಛ). [7] ಪರ (ಕಗ). [8] ಪ್ರಭುತ್ವಮುಮಂ (ಘಚಛ). [9] ಮಹಾಪುರುಷರ್ಕ (ಘಚಛ). [10] + ಚಿತ (ಘಚಛ). [11] (ಕಗ) ಗಳಲ್ಲಿಲ್ಲ. [12] ಡುಣಸು (ಕಗ). [13] ರೀ ನಿಮ್ಮಂತು (ಕಗ). [14] ಳ್ದೊಡೆ (ಕಗ). [15] ಯ್ದು ಪ್ರತ್ಯಾಖ್ಯಾನಂಗೊಂಡು (ಘಚಛ). [16] ಣದೆಸೆಯೊಳ್ (ಘಚಛ). [17] (ಘಚಛ) ಗಳಲ್ಲಿಲ್ಲ. [18] + ಮಸಗದೆ (ಘಚಛ).

ಕ್ಯೆಯುಂ ಕಾಲ್ಗಳುಮನುಡುಗದೆ ನೀಡದೆ ಬಾಳ್ವನ್ನೆಗಂ ಪಟ್ಟಿರ್ದು ಪಂಚನಮಸ್ಕಾರಮಂ ಮನದೊಳೋದುತ್ತಿರಿಮೆಂದು ಕಲ್ಪಿಸಿ [1]ಪಟ್ಟಿರಿಸಿ[1] ಆರಾಧನೆಯನರ್ಚಿಸಿ ಭಟ್ಟಾರರಾರಾಧನೆಯುಂ ವಕ್ಷಾಣಿಸುವುದಂ ಕೇಳುತ್ತಿರ್ದಂ ಮತ್ತಿತ್ತ ಕಿತ್ತಯ್ಯಂಗಳ್ ಸಂನ್ಯಸನಂ ಗೆಯ್ದರೆಂಬಾ ಮಾತನರಸನಾದಿಯಾಗಿ ಪೊಲಲ ಜನಂಗಳೆಲ್ಲಂ ಕೇಳ್ದು ಪಿರಿದುಂ ಸಂಭ್ರಮಮಾಗಿಯರಸನುಂ ಮಹಾದೇವಿಯುಂ ಮಂತ್ರಿಯುಂ ರಾಜಶ್ರೇಷ್ಠಿಯುಂ [2]ಯುವರಾಜಂ[2] ಮೊದಲಾಗಿ ಪೊಲಲ ಜನಮೆಲ್ಲ[3]ಮಿರ್ಪೊತ್ತುಮ[3]ರ್ಚನೆಯಂ ಕೊಂಡುಬಂದರ್ಚಿಸಿ [4]ಕಿಱಿದು ಬೇಗಮಿರ್ದಾರಾಧನೆಯಂ ವಕ್ಷಾಣಿಸುವುದಂ[4] ಕೇಳ್ದು ಮಿಥ್ಯಾದೃಷ್ಟಿಗಳಪ್ಪವರ್ ಶ್ರಾವಕ ಬ್ರತಂಗಳಂ ಕೈಕೊಂಡರ್ ಶ್ರಾವಕರುಂ ದೃಢಸಮ್ಯಗ್‌ದೃಷ್ಟಿಗಳಾಗಿ ಬಂದಿಸಿ ಪೋದರ್

ಇತ್ತ ನೇಸಱ್ ಪಟ್ಟೊಡೆ ಕಿತ್ತಯ್ಯಂಗಳ್ಗಾಸನ್ನಕಾಲಮಾದುದೆಂಬುದಂ ಭಟಾರರಱಿದಿಂತೆಂದರ್ ಕಿತ್ತಯ್ಯಾ ನಿಮಗೀಗಳ್ ಪ್ರಾಣಂ ಪೋಗಲ್ ಬಗೆದಪ್ಪುದು ದೇವರಂ [5]ಚಾನಿಸುವುದು[5] ಪಂಚನಮಸ್ಕಾರ[6]ಮನೋ[6]ದುತ್ತಮುಚ್ಚಾರಿಸುವುದಂ ಕೇಳುತ್ತಮಿ[7]ರಿಮೆಂ[7]ದು ಕಲ್ಪಿಸಿ ಭಟ್ಟಾರರ್ ಪಂಚನಮಸ್ಕಾರಮಂ ಪಿರಿದು ಬೇಗಂ ಪೇಟೆ ಪ್ರಾಯೋಪಗಮನ[8]ದಿನೆಂತಂತೆ[8] ಶುಭಪರಿಣಾಮದಿಂ [9]ಸಮ್ಯಗ್[9]ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಮುಡಿಪಿ ಸೌಧರ್ಮ ಕಲ್ಪದೊಳೆರಡು ಸಾಗರೋಪಮಾಯುಷ್ಯಮನೊಡೆಯೊಂ ಕನಕಧ್ವಜನೆಂಬೊಂ ದೇವನಾಗಿ ಪುಟ್ಟಿಯವಧಿಜ್ಞಾನದಿಂ ತನ್ನ ಭ[10]ವಮನ[10]ಱಿದೀ ಶರೀರದಿಂದಮಿಂತಪ್ಪ ದಿವ್ಯ ಶರೀರಮುಂ ದೇವಲೋಕದೊಳಪ್ಪ ಸುಖಮೈಶ್ವರ್ಯಮುಮಾದುದೆಂದು ಮೂಱುಕೋಟಿ ಪರಿವಾರ ದೇವರ್ಕಳುಂ ಮೂಱು ಲಕ್ಕೆ ದೇವಿ[11]ಯರಪ್ಪ[11]ರಸಿಯರ್ಕಳುಂ ಗಣಿಕೆಯರ್ಕಳುಂ ಬೆರಸು ಸುರತ್ನಮಯಮಪ್ಪ ದಿವ್ಯವಿಮಾನಮುಂ ಘಂಟಾಜಾಳ ಮುಕ್ತಾಜಾಳ ಹೇಮಜಾಳಂಗಳಿಂದೊಪ್ಪುವ ವಿಮಾನಮನೇಱಿ ಮಹಾ ವಿಭೂತಿ[12]ಯಿಂ ತಗುಳ್ದ[12]ಗಾಮರಂ ಬೆರಸು ಪಾಡುತ್ತಂ[13] ಬರ್ಪನ್ನೆಗಮಿತ್ತ ವೈದಿಶಮೆಂಬ ಪೊಲಲೊಳ್ ನಂದಿಮಿತ್ರ ಕಿತ್ತಯ್ಯಂಗಳ್ ಮುಡಿಪಿದರೆಂಬುದಂ ಕೇಳ್ದರಸನುಂ ಮಹಾದೇವಿಯುಂ ಮಂತ್ರಿಯುಂ [14]ಪೆರ್ಗಡೆಯುಂ[14] ಮೊದಲಾಗಿ ಪೊಲಲೊಳಗುಳ್ಳ ಜನಮೆಲ್ಲಮರ್ಚನೆಗಳಂ ಕೊಂಡು ಬಂದರಸಂ ತಾಂ ಪಕ್ಕದಿ[15]ರ್ದು[15] ಕ್ಷಪಣಕನನುಯ್ವ ವಿಮಾನಮುಮಂ ಮತ್ತಂ ಶೋಭೆಗೆಂದು ಪಲವು ವಿಮಾನಂಗಳುಮ[16]ನೊಳ್ಳಿ[16]ದುವಾಗಿ ಮಾಡಿಸಿ ಪಲವುಂ ನೇತ್ರದ ಪಟಿ[17]ವಲ್ಲವಂಗಳ್[17] ಧ್ವಜಪತಾಕೆಗಳುಮ[18]ನೆತ್ತಿ[18]ಸಿ ಚಾತುರ್ವರ್ಣ ಶ್ರವಣ ಸಂಘ ಸಹಿತಂ ಪಟುಪಟಹ ತುಣಾವ ಭಂಭಾ ಮರ್ದಳೆ ಝಲ್ಲರಿ ಮುಕುಂದ ತಾಳ ಕಾಹಳ

---

[1] (ಘಚಥ) ಗಳಲ್ಲಿಲ್ಲ. [2] ತಳಾಱನುಂ (ಘಚಥ). [3] ಂ ಪಗಲಪ್ಪನ್ನೆವರಮಿರ್ದಾರಾಧನೆಯಂ (ಘಚಥ). [4] (ಘಚಥ) ಗಳಲ್ಲಿಲ್ಲ. [5] ಧ್ಯಾನಿಸುತ್ತಂ (ಘಚಥ). [6] ಮಂ ಮನದೊಳೋ (ಘಚಥ). [7] ರ್ಕೆ (ಕಗ). [8] ಮರಣದಿನಂತೆ (ಘಚಥ). [9] ಸಹಜ (ಕಗ). [10] ವಾಂತರಮನ (ಘಚಥ). [11] ಯರ್ಕಳುಮಪ್ಪ (ಘ). [12] ಯಿಂತಗುಳ್ಪಾಗಾ (ಕಗ), ಪೆರಸುತಗುಳ್ದುಗಾ (ಘಚ) [13] + ಆಡುತ್ತಂ (ಘಚಥ). [14] ಶ್ರೇಷ್ಠಿಯುಂ ತಳಾಱನುಂ (ಘಚಥ) [15] ಳ್ದು (ಕಗ). [16] ನೇಳಿ (ಕಗ). [17] ಯ (ಘಚಥ). [18] ನರ್ತಿ (ಕಗ).

ಶಂಖ ವಂಶ ವೀಣಾಸ್ವರಂಗಳೆಸೆಯೆ ಕವಿವರರುಂ ಪೆಂಡವಾಸದೊಳ್ಪೆಂಡಿರ್ಕಳುಂ ವಿಮಾನಂಗಳ ಮುಂಪಾಡುತ್ತಂ ದಮ್ಮಮುಮಂ ಪೊನ್ನುಮಂ ಕೇಳಿ ಮಾಡಿ ಮುಂದೆ ನೂಸುತ್ತು[1]ಮೊ[1]ಯ್ದುದಂ ಕನಕಧ್ವಜನೆಂಬ ದೇವಂ ಕಂಡೆನ್ನ ದೇಹಕ್ಕಿವರೆಲ್ಲಮಿನಿವಿರಿ ದರ್ಚನೆಯುಮಂ ಪೂಜೆಯುಮಂ [2]ವಿಭವಮುಂ ಪ್ರಭಾವನೆಯುಮಂ[2] ಮಾಡಿದಪ್ಪ ರೆಂದೊಡಾನೆನ್ನ ದೇಹಕ್ಕೆ ಮಾಡದಿರ್ಪೆನೆಯೆಂದು ಪಲವು ವಿಮಾನಂಗಳಂ ವಿಗುರ್ವಿಸಿ ಕ್ಷಪಣಕನ ವಿಮಾನದ ಮುಂದೆ ಬಳಸಿಯುಂ ಪೋಪಂತು ಮಾಡಿಯಾಕಾಶವೆಲ್ಲಂ ವಿಮಾನಮಯಮಾಗೆ ವಿಗುರ್ವಿಸಿ ದೇವಲೋಕದ ಪಱೆಗಳಂ ಬಾಜಿಸುತ್ತಂ ನಮೇರು ಮಂದಾರ ಸಂತಾನಕ ಪಾರಿಜಾತಂಗಳೆಂಬ ಪೂಗಳಂ ಸುರಿಯುತ್ತಂ ದೇವರ್ಕಳ [3]ದೇವಿಯರ್ಕಳ್[3]ಸಹಿತಂ ಕ್ಷಪಣಕನ ವಿಮಾನದ ಮುಂ[4]ದೆ ಇಂತೆಂದು ಪೇೞ್ದಾಡಿ[4]ದಂ :

ಗಾಹೆ|| ಪೆಚ್ಛಹ ವೆಚ್ಛಹ ಓದಣ ಮುಂಡಂ
ಅಚ್ಚರ ಮಜ್ಝಗಯಂ ರಮಣಿಜ್ಜಂ ||
ಜಂಜೆಣ ಮಂತೆಣ ಕಾರಣ ಯೇಣ
ಪಚ್ಚ ಇಯವ್ವಂಹೋ ಇಣರೇಣ ||

ಎಂದು [5]ಛಂದ ಛಂ[5]ದದಿಂ ಪೇ[6]ೞ್ದಾಡು[6]ವುದಂ ಕಂಡರಸಂ ಮೊದಲಾಗಿ ಪೊೞಲ ಜನವೆಲ್ಲಂ ಚೋದ್ಯಂಬಟ್ಟು ಬೆಱಗಾಗಿ ನೋಡುತ್ತಿರ್ದರಂತೆಂದರಸಂ ಬೆಸಗೊಂಡಂ ನೀಮಾರ್ಗೇನೆಂಬಿರೆಲ್ಲಿಂ ಬಂದಿರಿಂತೇಕೆ ಪೇೞ್ದಾಡಿದಪ್ಪಿರೆಂದು ಬೆಸಗೊಂಡೊಡಾನಲ್ತೆ ನಂದಿಮಿತ್ರನಪ್ಪ ಕಿತ್ತಯ್ಯನೆನುಣಿಸಿಂಗೆಂದು ತಪಂಬಟ್ಟೇೞುದಿವಸಮುಪವಾಸಂ ಗೆಯ್ದು ಮುಡಿಪಿ ಸಂನ್ಯಸನಂಗೆಯ್ದು ಮುಡಿಪಿ ದೇವಲೋಕದೊಳ್ ಕನಕಧ್ವಜನೆಂಬೊಂ ದೇವನಾಗಿ ಪುಟ್ಟಿ ಎನ್ನ ದೇಹಮಂ ಪೂಜಿಸಲುಂ ನಿಮಗೆನ್ನ ವಿಭವಮುಂ ತೋಱಲ್ ಬಂದೆನೆಂದು ಪೇೞ್ದು ತನ್ನ ಶರೀರಮಂ ದಿವ್ಯಮಪ್ಪ ಗಂಧ ಪುಷ್ಪ ದೀಪ ಧೂಪಾಕ್ಷತೆಗಳಿಂದರ್ಚಿಸಿ ತನ್ನ ಗುರುಗಳಪ್ಪ ಶಿವಗುಪ್ತರೆಂಬಾಚಾರ್ಯರುಮಂ ಪೂಜಿಸಿ ನಿಮ್ಮ ಪ್ರಸಾದದಿಂದೆನಗಿನಿವಿರಿದು ಶ್ರೀಯುಂ ಮಹಾವಿಭೂತಿಯುಮೈಶ್ವರ್ಯಮುಂ ದೇವತ್ವಮುಮಾದುದೆಂದು ಪೇೞ್ದು ಬಂದಿಸಿ ತನ್ನ ದೇವಲೋಕಕ್ಕೆ ಪೋದನ್

ಇತ್ತಲರಸನುಮದೆಲ್ಲಮಂ ಕಂಡು ಸಂಸಾರ ಶರೀರ ಭೋಗ ವೈರಾಗ್ಯ ಪರಾಯಣನಾಗಿ ಶ್ರೀವರ್ಮನೆಂಬ ತನ್ನ ಪಿರಿಯ ಮಗಂಗೆ ರಾಜ್ಯ ಪಟ್ಟಂಗಟ್ಟಿ ಪಲಂಬರರಸುಮಕ್ಕಳುಂ ಮಹಾದೇವಿ ಮೊದಲಾಗಿ ಪಲಂಬರರಸಿಯರ್ಕಳುಂ ಪರಿವಾರದವರುಂ ಪೊೞಲ ಪಲಂಬರ್ ಜನಂಗಳೆಲ್ಲಂ ಬೆರಸು ಶಿವಗುಪ್ತ ಭಟ್ಟಾರರ ಪಕ್ಕದೆ ತಪಂಬಟ್ಟು ಸಮ್ಯಗ್ ಜ್ಞಾನ ಚಾರಿತ್ರಂಗಳೊಳಗೊಳ್ಳಿತಾಗಿ ನೆಗೞ್ದು ಪಶ್ಚಾತ್ಕಾಲದೊಳ್ ಸಂನ್ಯಸನಂಗೆಯ್ದು ಮುಡಿಪಿಯನಿಬರುಂ ದೇವಲೋಕಕ್ಕೆ ಪೋದರ್ ಮತ್ತಂ ಕನಕಧ್ವಜನೆಂಬ ದೇವಂ ಪಲಕಾಲಂ ದೇವಲೋಕದ ಸುಖಮನನುಭವಿಸಿ ಬಂದಿಲ್ಲಿ ನೀಂ ಸಂಪ್ರತಿ ಚಂದ್ರಗುಪ್ತನಾಗಿ ಪುಟ್ಟಿದೆಯೆಂದು ಸಮಾಧಿ

---

[1] ಮು (ಘಚಟಭ). [2] (ಘಚಟಭ) ಗಳಲ್ಲಿಲ್ಲ. [3] (ಘಚಟಭ) ಗಳಲ್ಲಿಲ್ಲ. [4] ದಿರ್ದಿಂತೆಂದು ಪೇೞ್ದೋದಿ (ಘಚಟಭ). [5] ಚಂದ ಚಂ (ಗ), ನಾನಾ ಛಂ (ಘಚಟಭ). [6] ೞ್ದೋದು (ಘಚಟಭ).

ಗುಪ್ತ ಭಟ್ಟಾರರ್ ತನ್ನ ಭವಮಂ ಪೇೞ್ದೊಡಾದಮಾನುಮೊಸೆದು ಸಂತೋಷಂ ಬಟ್ಟು ಭಟ್ಟಾರರಂ ವಂದಿಸಿ ತನ್ನರಮನೆಗೆ ಪೋಗಿ ಇಂತು ಸಂಪ್ರತಿ ಚಂದ್ರಗುಪ್ತ ಮಹಾರಾಜಂ ಪೃಥ್ವಿಯನೇಕಚ್ಛತ್ರಚ್ಛಾಯೆಯಿಂದಮಾಳುತ್ತಮುಜ್ಜೇನಿಯೊಳ್ ಸುಖದಿಂದಿರ್ಪನ್ನೆಗಂ

ಇತ್ತ ದ್ವಾದಶಾಂಗ ಚತುರ್ದಶ ಪೂರ್ವಧಾರಿಗಳಪ್ಪ ಭದ್ರಬಾಹುಭಟ್ಟಾರರ್ ಪಿರಿದು ಋಷಿಸಮುದಾಯಂ ಬೆರಸು ಗ್ರಾಮನಗರಖೇಡಖರ್ವಡಮಡಂಬಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬಪ್ಪೋರುಜ್ಜೇನಿಗೆ ವಂದಾ ಪೊೞಲ ಬಹಿರುದ್ಯಾನ ವನದೊಳಿರ್ದರದನರಸಂ ಕೇಳ್ದು [1]ಪರಿವಾರಸಹಿತಂ[1] ಪೋಗಿ ಭಟಾರರಂ ವಂದಿಸಿ ಸದ್ಧರ್ಮಮಂ ಕೇಳ್ದು ಶ್ರಾವಕ ಬ್ರತಂಗಳನೇಱಿಸಿಕೊಂಡು ವಂದಿಸಿ ತನ್ನರಮನೆಗೆ ಪೋದನಿತ್ತ ಭಟಾರರುಂ ಪಲವು ದಿವಸಮಾ ಪೊೞಲೊಳಿರೆ ಮತ್ತೊಂದು ದಿವಸಂ ಋಷಿಸಮುದಾಯಮೆಲ್ಲಮುಂ ಚರಿಗೆ[2]ವೊ[2]ಗುತ್ತಮೆಲ್ಲರುಮಂ ನಿಱಿಸಿ ತಾವೊರ್ವ[3]ರೆಯೊಂ[3]ದು ಮನೆಯಂ[4] ಪೊಕ್ಕಾಗಳಾ ಮನೆಯೊಳಾ[5]ರುಮಿಲ್ಲೋನರಿಗೆ[5]ಯೊಳ್ ತೊಟ್ಟಿಲೊಳಿರ್ದಸ್ವಕ್ತ ಕಿಱುಗೂಸು ಪೋಗು ಪೋಗು ಭಟ್ಟಾರಾ ಎಂದತ್ತಾಗಳಾ ವಚನಮಂ ಭಟ್ಟಾರರ್ ಕೇಳ್ದು ದಿವ್ಯ ವಾಕ್ಯಮೆಂದಱಿದು ಕಾಲ ಪ್ರಮಾಣಮಂ ಬೆಸಗೊಂಡೊಡೆ ದ್ವಾದಶವರ್ಷಮೆಂದು ಪೇ[6]ೞ್ದತ್ತು[6] ಭಟ್ಟಾರರ್ ಕಾಲದೋಷದಿಂ ಪ್ರಜಾಪೀಡೆಯಾದಪ್ಪುದೆಂದಱಿದು ಕಾರುಣ್ಯಬುದ್ಧಿಯಿಂದಾಹಾರಮಂ ಕೊಳ್ಳದೆ [7]ಅಲಾಭಂ[7] ಮಾಡಿಯಂತೆ ಬಸದಿಗೆ ಪೋಗಿ ಗೋಚಾರ ನಿಯಮಂಗೆಯ್ದು ಬೞಿಕ್ಕೆ ರಿಸಿಯರ್ಕಳೆಲ್ಲಮಂ ಬೞಿಯನಟ್ಟಿ ಬರಿಸಿ ಇಂತೆಂದರೀ ನಾಡೊಳ್ ಪನ್ನೆರಡು ವರುಷಂಬರೆಗಮನಾವೃಷ್ಟಿಯಾಗಿ ದುರ್ಭಿಕ್ಷಮಾದಪ್ಪುದೀ ನಾಡೊಳಗಿರ್ದ ರಿಸಿಯರ್ಕಳೆಲ್ಲಂ ಬೇಗಂ ಬೞಿಯಟ್ಟಿ ಬರಿಸಿಂ ಪೋಪಂ ದಕ್ಷಿಣಾಪಥಕ್ಕೆಂದು ರಿಸಿಯರ್ಕಳೆಲ್ಲಂ ಬೞಿಯನಟ್ಟಿದರಿತ್ತರಸನುಮಾ ದಿವಸದಿರುಳ್ ಪದಿನಾಱುಂ ಪೊಲ್ಲ ಕನಸುಗಳಂ ಕಂಡನವಾವುವೆಂದೊಡೆ: ಆದಿತ್ಯನಸ್ತಮಾನಕ್ಕೆ ಸಲ್ವುದುಮಂ ಕಲ್ಪವೃಕ್ಷದ ಕೋಡು ಮುರಿವುದುಮಂ ನೆಲಕ್ಕೆ ವರುತಿರ್ದ ವಿಮಾನಂ ಬಾರದೆಡೆಯಿಂದೆ ಮೇಗೆ ಮಗುೞ್ವುದುಮಂ ಪನ್ನೆರಡು ತಲೆಯ ಪಾವುಮಂ ಚಂದ್ರನೊಡೆದುದುಮಂ ಕಡು[8]ಗಡಿಯವ[9]ಪ್ಪೆರಡಾನೆಗಳ್ ತಮ್ಮೊಳ್ [10]ಪೋರಲ್[10]ನಾರ್ದು ಪೆಱಪಿಂಗಿ ಪೋದುದುಮಂ ಮಿನಂಬುೞುವುಮಂ ನೀರಿಲ್ಲದ ಕೆಱೆಯ ನಡುವುಮಂ ಪೊಗೆ [11]ಪೆರ್ಚಿ[11] ನೆಗೆದ ಕಾೞ್ಕಿಚ್ಚಿನಮುಂ ಸಿಂಹಾಸನದ ಮೇಗೇಱಿರ್ದ ಕೋಡಗಮುಮಂ ಪೊನ್ನ ತಳಿಗೆಯೊಳ್ ನಾಯ್ ತುಯ್ಯಲುಣ್ಬುದುಮಂ ಕೋಡಗನೇಱಿರ್ದ ನೊರ್ಕಾನೆಯುಮಂ ಕಸಕುಪ್ಪೆಯೊಳ್ ತಾಮರೆ ಮೂಡಿದುದಂ ಸಮುದ್ರಂ ಮೇರೆದಪ್ಪಿದುದುಮಂ ಜೆೞ್ಗತ್ತೆ[12] ಪೂಡಿದ ಪೊನ್ನ ರಥಮಂ ಜೆೞ್ಗತ್ತೆಯನರ

[1] ಸಪರಿವಾರ ಬೆರಸು (ಕಗ). [2] ವ್ರ (ಘಚ) [3] ರುಮೊಂ (ಕಗ). [4] + ಪೋಗಿ (ಕಗ). [5] ರುವಿಲ್ಲಾಸರಿಗೆ (ಚ), ರೂವಿಲ್ಲಶರಿಗೆ (ಛ). [6] ಳಿ (ಘಚಛ). [7] ಮುಟ್ಟುಪಡಂ (ಘಚಛ). [8] ತುದಿಗೊಂಬು (ಘಚಛ). [9] ಗಲಿಗಳ (ಘಚಛ). [10] ಪೆಱ (ಕಗ). [11] ಪೊಣ್ಮಿ (ಘಚಛ). [12] + ಗಳಲು (ಘಚಛ).

[1]ಸರ್ಕ[1]ಳೇಱುವುದುಮಂ—ಇಂತೀ ಪದಿನಾಱುಂ ಕನಸುಗಳಂ ಸಮ್ಯಗ್ದರ್ಶನ ಶುದ್ಧಿ ಮೊದಲಾಗೊಡೆಯ ಗುಣಂಗಳಿಂ ಕೂಡಿದ ಸಂಪ್ರತಿ ಚಂದ್ರಗುಪ್ತಮಹಾರಾಜಂ ಪೊಲ್ಲ ಕನಸುಗಳಂ ಕಂಡೆನೆಂದಂಜಿ ನೇಸಱ್ ಮೂಡಿದಾಗಳ್ ಭದ್ರಬಾಹು ಭಟಾರರಲ್ಲಿಗೆ ಪೋಗಿ ವಂದಿಸಿ ತನ್ನ ಕಂಡ ಕನಸುಗಳಂ ಭಟಾರರ್ಗೆ ಪೇೞ್ದವಱ ಫಲಂಗಳಂ ಬೆಸಗೊಂಡೊಡೆ ಭಟಾರರಿಂತೆಂದು ಪೇೞಲ್ ತೊಡಗಿದರ್

ಆದಿತ್ಯನಸ್ತಮಾನಕ್ಕೆ ಸಲ್ವುದಂ ಕಂಡುದಱಿಂದೀ ಭರತ ಕ್ಷೇತ್ರದೊಳ್ ಚತುರ್ದಶ ಪೂರ್ವಧಾರಿಗಳುಮವಧಿಜ್ಞಾನಿಗಳುಮಿಲ್ಲಿಂದಿತ್ತಲಾಗರ್ ಕಲ್ಪವೃಕ್ಷದ [2]ಕೋಡುಮುಱಿದುದುಮಂ[2] ಕಂಡುದಱಿಂದಿಂದಿನ ದಿವಸಂ ಕೞಿದೊಡೆ ಕುಲಬಲ ವಿಭವದಿಂ ಪಿರಿಯರಪ್ಪ [3]ಮಕುಟಬದ್ಧರ[3]ಪ್ಪರಸುಗಳ್ ತಪಂಬ[4]ಡುವರಲ್ಲ[4]ರ್ ನೆಲಕ್ಕೆ ವರುತ್ತಿರ್ದ ವಿಮಾನಮಡೆಯಿಂದಂ ಮೇಗೆ ಮಗುೞ್ದುದಂ ಕಂಡುದಱಿಂ ದೇವರ್ಕಳುಂ ವಿದ್ಯಾಧರರ್ಕಳುಮಿಲ್ಲಿಂದಿತ್ತೀ ಕ್ಷೇತ್ರಕ್ಕೆ ವಾರರ್ ಪನ್ನೆರಡು ತಲೆಯ ಪಾವಂ ಕಂಡುದಱಿಂದಿಲ್ಲಿಂ ತೊಟ್ಟೀ ನಾಡೊಳ್ ಪನ್ನೆರಡು ವರ್ಷಂಬರಂ ರೌದ್ರವಸವಮಕ್ಕುಂ ಚಂದ್ರನೊಡೆದುದಂ ಕಂಡುದಱಿಂ ಸದ್ಧರ್ಮದ[5]ಮೊದಲ ಪೊರ್ದಿದ ಮಾರ್ಗದಿಂಬೆಳೆಯೊಳ್ ಪುಲ್ಗಳ್[5] ಪಲವಕ್ಕುಂ ಕಡುಗಟಿಯುಮಪ್ಪರಡಾನೆಗಳ್ ತಮ್ಮೊಳ್ [6]ಪೋರಲ್[6] ಸಾರ್ದು ಪೆಱಪಿಂಗುವುದಂ ಕಂಡುದಱಿಂ ಪ್ರಜೆಗಳ ಮೆಚ್ಚಿದಂತೆ ಮೞೆಕೊಳ್ಳವು ಮಂಡಲವರ್ಷಂಗಳಕ್ಕುಂ ಮಿನುಂಬುೞುವಂ ಕಂಡುದಱಿಂ ಮಿನುಂಬುೞುವಿನೋಳೋರನ್ನವು ಶಾಸ್ತ್ರಂಗಳುಮಂ[7]ಗ[7]ಬಾಹ್ಯಮಪ್ಪ ಚತುರ್ದಶ ವಿದ್ಯಾಸ್ಥಾನಂಗಳುಂ ಕುಂದಿಯುಪದೇಶ [8]ತನುಮಾತ್ರಮೆ[8] ನಿಲ್ಕುಂ ನೀರಿಲ್ಲದ ಕೆಱೆಯ ನಡುವಂ ಕಂಡುದಱಿಂ ತೀರ್ಥಂಕರ ಚಕ್ರವರ್ತಿಗಳ ಪುಟ್ಟಿದ ಮಧ್ಯದೇಶದೊಳ್ [9]ಪಿನ್ನ[9] ನೆಗಳ್ತೆಯಾಗದು ಆ ಮಧ್ಯ ದೇಶಕ್ಕೆ ಸಂಬಂಧಿಯೀಗಾಹೆ :

ಪುವ್ವೇಣ ಅಂಗವಿಸಓ ದಕ್ಖಿಣದೋ ಜಾವಹೋ ಇ ಕೋಸಂಬೀ |
ಅವರೇಣ ಜಾವ [10]ದೂಣಾ[10] (?) ಕುಣಾಳ ವಿಸಯೋಯ ಉತ್ತರದೋ ||

ಎಂದು ಮಧ್ಯದೇಶ ಪ್ರಮಾಣಂ ಮತ್ತಂ ಪೊಗೆಯಿಂದಂ ಪೆರ್ಚಿ ನೆಗೆದ ಕಾಳ್ಕಿಚ್ಚಂ ಕಂಡುದಱಿಂ ಧೂರ್ತರಪ್ಪ ಪೊಲ್ಲಲಿಂಗಿಗಳ ಪೆರ್ಚಕ್ಕುಂ ಮತ್ತಂ ದಯೆ ಮೊದಲಾಗೊಡೆಯ ಸದ್ಧರ್ಮಕ್ಕೆ ವಿರುದ್ಧಮಾಗಿ ನೆಗೞ್ದ ಪಿರಿದಪ್ಪ ಹಿಂಸಾದಿಗಳಂ ಗೆಯ್ವ ವೇದಾದಿಶಾಸ್ತ್ರಂಗಳ ಪೆರ್ಚಕ್ಕುಂ ಸಿಂಹಾಸನಮನೇಱಿರ್ದ ಕೋಡಗಮುಂ ಕಂಡುದಱಿಂ ಕುಲಜರಲ್ಲದವರರಸುಗೆಯ್ವರ್ ಪೊನ್ನ ತಳಿಗೆಯೊಳ್ ನಾಯ್ ತುಯ್ಯಲನುಣ್ಬುದಂ ಕಂಡುದಱಿಂ ಪೊಲ್ಲಲಿಂಗಿಗಳರಸರ್ಕಳಿಂದಂ ಪೂಜಿಸೆಪಡುವರ್ ಕೋಡಗಮಾನೆಯನೇಱುವುದಂ ಕಂಡುದಱಿಂದಾದಮಾನುಂ ಶುದ್ಧ ಕುಲದೊಳ್ ಪುಟ್ಟಿದರಸುಮ[11]ಕ್ಕ[11]ಳುತ್ತಮ ಕುಲದೊಳಪ್ಪಭಿಮಾನಮುಂ ತೊಱೆದು ಬಾೞ್ಕಾರಣ

---

[1] ಸಮಕ್ಕ (ಘಚಛ), [2] ತುದಿಗೊಂಬುಡಿದುದಂ (ಘಚಛ). [3] ಮಂಡಲಿಕ ಮಕುಟ ಬದ್ಧಾದಿಗಳ (ಘಚಛ). [4] ಡ. (ಘಚಛ). [5] ಮಾರ್ಗಂ (ಘಚಛ). [6] ಪೆಱ (ಕಗ). [7] ಗಾಂಗ (ಚಛ). [8] ತನ್ಮಾತ್ರಮೆಯಿಂ (ಘಚಛ). [9] ಧರ್ಮದ (ಘಚಛ). [10] ಮಾಣಾ (ಘಚಛ), ದೂಣ (ಕ). [11] ಕ್ಕ್ರ (ಘ).

ಮಾಗಿ ಕುಲಜರಲ್ಲದವರ್ಗಳಾಗಿ ಬಾೞ್ವರ್ ಕಸಕುಪ್ಪೆಯೊಳ್ ತಾಮರೆ [1]ಮೂಡಿ[1]ದುದಂ ಕಂಡುದಱಿಂ ದಯೆಯುಮುಪಶಮಮುಂ ಪರಿಗ್ರಹಪರಿತ್ಯಾಗಮುಂ ಸಮಾಧಿಯುಂ ಸತ್ಯಮುಂ ಶೌಚಮುಂ ಕ್ಷಮೆಯುಮೆಂದಿವು ಮೊದಲಾಗೊಡೆಯವಱೊಳ್ ಕೂಡಿದ ಮಿಕ್ಕ ಸದ್ಧರ್ಮ ಮಾರ್ಗಮಂ ದ್ರವ್ಯಪತಿಗಳುಮರಸುಮಕ್ಕಳುಂ ತಮ್ಮ ದ್ರವ್ಯಾದಿ ಮದದಿಂದಂ ತೊಱೆವರ್ ನೀಚಜಾತಿಗಳುಂ ಬಡವರುಂ ಸದ್ಧರ್ಮಮಂ ಕೈಕೊಂಡು ನೆಗೞ್ವರ್ ಸಮು[2]ದ್ರಂ ಮೇರೆದಪ್ಪುವುದಂ[2] ಕಂಡುದಱಿಂದರಸುಮಕ್ಕಳ್ ತಮ್ಮ ಮರ್ಯಾದೆಯಂ ಮಿಕ್ಕು ದ್ರವ್ಯಂ ಮೊದಲಾಗೊಡೆಯವಱೊಳ್ ಲೋಭಿಷ್ಠರಪ್ಪರ್ ಒಳ್ಳಿತಪ್ಪ ಸತ್ಯ ಶೌ[3]ಚ[3] ಚಾರಿತ್ರಮೆಂದಿವಱಿಂ ಕುಂದಿಯಾದಮಾನಂ ನಿರ್ದಯರ್ಕಳಪ್ಪರ್ ಬೆಳ್ಗ[4]ತ್ತೆ[4]ಪೂಡಿದ ಪೊನ್ನರಥಮಂ ಕಂಡುದಱಿಂದಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಿಂದಂ ಪವಿತ್ರಮಪ್ಪ ನಿರ್ಗ್ರಂಥಲಿಂಗಮಪ್ಪುದನ[+]ಟಿದೊಳ್ಳಿತಪ್ಪ [5]ತಪ[5]ಮುಂ [6]ಕೈ[6]ಕೊಳೆಪಟ್ಟು[7]ಂ[7] ಪಿರಿದಪ್ಪ ಪುರುಷಕಾರಮುಂ ಸತ್ಯಮುಂ ಮನೋಬಲಮುಂ ವೀರ್ಯಮುಮೆಂದಿವಱಿಂದಂ ಕೂಡಿದ[8]ವರ್ಗಳಿಂ[8]ದಮೊಳ್ಳಿದರಪ್ಪ ತೀರ್ಥಕರ ಪರಮ ದೇವರ್ಕಳಿಂದಂ[9] ಚಕ್ರವ[+]ರ್ತಿಗಳಿಂದಂ[10] ಚರಮದೇಹಧಾರಿಗಳಿಂದಂ ನೆಗೞಪಟ್ಟುದನೊಳ್ಳಿತಪ್ಪ ಮೋಕ್ಷಮಾರ್ಗಮಂ ಪೊರ್ದಿಯುಂ ವಿಷಯ ಸುಖಂಗಳೊಳ್ ಮೋಹಿತರ್ಕಳಾಗಿ ಕಿಡುವರ್ ಬೆಳ್ಗತ್ತೆಯನರಸರ್ಕಳೇಱುವುದಂ ಕಂಡುದಱಿಂದುತ್ತಮ ಕುಲ[11]ದವರ್ಗಳ್[11] ಕುಲಜರಲ್ಲದವರೊಡನೆ ಮದುವೆ[12]ಯೊಳ್ ತೊಟ್ಟ ನಣ್ಪು[12]ಗಳಕ್ಕುಮೆಂದಿಂತು ಪದಿನಾಱುಂ ಕಂಡ ಕನಸುಗಳ ಫಲಂಗಳಂ ಸಂಪ್ರತಿ ಚಂದ್ರಗುಪ್ತ ಮಹಾರಾಜಂಗೆ ಭದ್ರಬಾಹು ಭಟ್ಟಾರರ್ ಪೇೞ್ದು ಮತ್ತಮೀ ಕಲಿಯುಗ ಮಹಾರಾಜನ ಸ್ವರೂಪಮನಿಂತೆಂದು ಪೇೞಲ್ ತೊಡಗಿದರ್ :

ಹರಿಣಿ || ಅನೃತವಚನೇ ನಿತ್ಯಾಭ್ಯಾಸಃ ಖಲೇಷು ವಿದಗ್ಧತಾ
ಗುಣವತಿ ಜನೇ ವೈರಾಬುದ್ಧಿಃ ಖಲೇಷ್ವತಿಗೌರವಂ |
ಯತಿಷು ನಿಯತಂ ವಾಕ್ಪಾರುಷ್ಯಂ ವಿಪತ್ತಿಷು ಚ ಕ್ರಿಯಾ
ಕಲಿಯುಗ ಮಹಾರಾಜಸ್ಯೈತಾನಿ ರಾಜವಿಭೂತಯಃ ||

ಕಾಲೇ ಸಂಪ್ರತಿವರ್ತತೇ ಕಲಿಯುಗೇ ಸತ್ಯಾ ನರಾ ದುರ್ಲಭಾ
ನಾನಾ ಚೋರಗಣಾ ಮುಷಂತಿ ಪೃಥಿವೀಮಾರ್ಯೋ ಜನಃ ಕ್ಷೀಯತೇ |
ದೇವಾಶ್ಚ ಪ್ರಲಯಂಗತಾಃ ಕರಭ[13]ವಲ್ಲ್ಯಂ[13]ಗತಾಃ ಪಾರ್ಥಿವಾಃ
ಪುತ್ರಸ್ಯಾಪಿ ನವಿಶ್ವಸಂತಿ ಪಿತರಃ ಕಷ್ಟಂ ಯುಗಂ ವರ್ತತೇ ||

ನಿರ್ವೀರ್ಯಾ ಪೃಥಿವೀ ಗತೌಷಧಿರಸಾ ನೀಚಾ ಮಹತ್ವಂ ಗತಾಃ
ರಾಜಾನೋऽರ್ಥಪರಾಃ ಕುಧರ್ಮ ನಿರತಾ ವಿಪ್ರಾ ವಿಕರ್ಮಸ್ಥಿತಾಃ |

---

1 ಪುಟ್ಟಿ (ಘಚಛ). 2 ದ್ರ ವೇಳೆ ತನ್ನ ಮರ್ಯಾದೆಯಂ ಮಿಕ್ಕುವರಿದುದಂ (ಕಗ). 3 ಚಾ ಚಾರ (ಚಛ). 4 ಳ್ತಿಗಳಿಂ (ಘಚಛ), ತ್ತಿಯ (ಗ), ತ್ತಿ (ಕ). +-+ (ಕ) ದಲ್ಲಿ ನಷ್ಟವಾಗಿದೆ. 5 ಪದ (ಗ). 6 (ಗ) ದಲ್ಲಿ ಇಲ್ಲ. 7 ದಂ (ಗ) 8 ಮಹಾಪುರುಷರ್ಕಳಿ (ಘಚ). 9 + ಸಕಲ (ಘ). 10 + ಬಲದೇವರ್ಕಳಿಂದಂ (ಘಚ). 11 ಜರಿಗೆ (ಕಗ). 12 ವೆಳ್ದೊತ್ತಿಟ್ಟ ನಂಬು (ಕಗ) 13 ವೈಲೋಕ್ಯಂ (ಚ), ವಲ್ಲ್ಯಂ (ಛ), ಈ ಪದ್ಯ (ಕಖಗ) ಗಳಲ್ಲಿಲ್ಲ.

ಭಾರ್ಯಾ ಭರ್ತರಿ ನೈವ ಬದ್ಧಹೃದಯಾ ಪುತ್ರಾಃ ಪಿತೃದ್ವೇಷಿಣಃ
ಇತ್ಯೇವಂ ಸಮುಪಸ್ಥಿತೇ ಕಲಿಯುಗೇ ಧನ್ಯಾ ವನಂ ಪ್ರಸ್ಥಿತಾಃ ||

ಎಂದಿಂತು ಭಟ್ಟಾರರ್ ಪೇಳೆ ಸಂಪ್ರತಿ ಚಂದ್ರಗುಪ್ತಮಹಾರಾಜಂ ಕೇಳ್ದು ಮತ್ತಂದಿನ ದಿವಸಂ ಕೞಿದೊಡೆ ಮಂಡಳಿಕರ್ ಜಿನದೀಕ್ಷೆಯಂ ಕೈಕೊಳ್ಳರೆಂಬುದಂ ಕೇಳ್ದಾದಮಾನುಂ[1] ಭೀತನಾಗಿ ಸಿಂಹಸೇನನೆಂಬ ತನ್ನ ಪಿರಿಯ ಮಗಂಗೆ ರಾಜ್ಯಪಟ್ಟಂಗಟ್ಟಿ ಭದ್ರಬಾಹು ಭಟ್ಟಾರರ ಪಕ್ಕದೆ ಪಲಂಬರರಸುಮಕ್ಕಳ್ವೆರಸಾ ದಿವಸಮೆ ತಪಂಬಟ್ಟಂ

ಮತ್ತಿತ್ತ ಮಧ್ಯದೇಶದೊಳಿರ್ದ ರಿಸಿಯರ್ಕಳ್ಗೆಲ್ಲಂ ಬೞಿಯುಟ್ಟಿ ಬರಿಸಿ ಭಟ್ಟಾರರಿಂತೆಂದರ್ ಪನ್ನೆರಡು ವರ್ಷಂಬರೆಗಮೀ ನಾಡೊಳನಾವೃಷ್ಟಿಯಾಗಿ ಮಹಾರೌದ್ರಪಸವಮಕ್ಕುಂ ಮಧ್ಯಮದೇಶಮೆಲ್ಲಂ ಪಾೞಕ್ಕುಮೀ ನಾಡೊಳಿರ್ದ ರಿಸಿಯರ್ಕಳ್ಗೆ ಬ್ರತಭಂಗಮಪ್ಪುದದಱಿಂ ಪೋಪಂ ದಕ್ಷಿಣಾಪಥಕ್ಕೆಂದಾಚಾರ್ಯರ್ಕಳ್ ಸಹಿತ [2]ಮಿಚ್ಚಾಟ್ರ್[2]ಸಿರ ರಿಸಿಸಮುದಾಯ[3]ಮುಂ ಸಂಪ್ರತಿ ಚಂದ್ರಗುಪ್ತ ಮುನಿಯುಂ ಬೆರಸು ದಕ್ಷಿಣಾಪಥಕ್ಕೆ ಪೋದರಿತ್ತ ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ *[ಸ್ಥೂಲಭದ್ರಾ]* ಚಾರ್ಯರುಮಿಂತೀ ಮೂವರಾಚಾರ್ಯರುಂ ಭಟಾರರೊಡನೆ ಪೋಗಲೊಲ್ಲದೆ ತಂತಮ್ಮ ಋಷಿಸಮುದಾಯಂ ಬೆರಸು[3] ಸಿಂಧು ವಿಷಯಕ್ಕೆ ಪೋದರಿತ್ತ ಭಟ್ಟಾರರುಂ ಪಿರಿದು ಋಷಿ ಸಮುದಾಯಂ ಬೆರಸು ಗ್ರಾಮನಗರಖೇಡಖರ್ವಡಮಡಂಬಪಟ್ಟಣದ್ರೋಣಾಮುಖಂಗಳಂ ಕೞಿದು ಪೋಗಿ ಕ[4]ೞ್ಬ[4]ಪ್ಪು ನಾಡಸೆಯ್ದಿ ಪೋಗುತ್ತಂ ಭದ್ರಬಾಹು ಭಟ್ಟಾರರ್ ತಮ್ಮಾಯುಷ್ಯಪ್ರಮಾಣಮಱಿದಾಮಿಲ್ಲಿ ಸಂನ್ಯಸನಂಗೆಯ್ದಪ್ಪೆವು ನೀಮೆಲ್ಲಂ ಪೋಗಿಮೆಂದು ತಮ್ಮ ಪಿರಿಯ ಶಿಷ್ಯರ್ ದಶಪೂರ್ವಧಾರಿಗಳ್ ವಿಶಾಖಾಚಾರ್ಯರೆಂಬೊರಲ್ಲಿಂ ಬೞಿಯಮಾರ್ಯ ಸುಹಸ್ತಿ[5]ಗಳು[5]ಮರಭದ್ರರುಂ ಸುಭದ್ರಮಿತ್ರರುಂ ಮಹಾ[6]ಗಿರಿ[6]ಯುಂ ಸುಮತಿಯುಂ ಮಹಾಮತಿಯುಂ [7]ವಿಶಾಖನಂದಿಯುಮೆಂದಿವರ್ಗಳೆಲ್ಲರುಮನಾಚಾರ್ಯರ್ ಮಾಡಿ ದ್ರವಿ[8]ೞ[8]ವಿಷಯಕ್ಕೆ ಪೋಗಿಮೆಂದು ವಿಶಾಖಾಚಾರ್ಯರೊಡನೆ ಎಣ್ಟಾಸಿರ್ವರ್ ರಿಸಿಯರನಟ್ಟಿದರ್ ಚಂದ್ರಗುಪ್ತಮುನಿಯುಮನಿವರೊಡನೆ ಪೋಗಿಮೆಂದು ಭಟ್ಟಾರರ್ ಕೀಱಿ ಪೋಗಲ್ವೇೞ್ದೊಡಾಮುಂ ಪೋಗಲೊಲ್ಲೆವು ನಿಮ್ಮಡಿಗಳ್ಗೆ ವಿನಯಂಗೆಯ್ಯುತ್ತಮಿರ್ದಪ್ಪೆವೆಂದು ಪೋಗಲೊಲ್ಲದೆ ಪಕ್ಕದಿರ್ದರುೞಿದರೆಲ್ಲಂ ಪೋದರಿತ್ತ[9] ಭದ್ರಬಾಹುಭಟ್ಟಾರರ್ ಕ[10]ೞ್ಬ[10]ಪ್ಪು ನಾಡಡವಿಯ ಬೆಟ್ಟದ ಮೇಗ[11]ಣ್ಣೇಕಸಱಿ[11]ಯ ಮೇಗಿ[12]ರ್ದು[12] ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಪೂರ್ವಕಂ ಸಂನ್ಯಸನಂಗೆಯ್ದರ್

---

[1] + ಸಂಸಾರಕ್ಕೆ ಪೇಸಿ (ಘಚಛ). [2] ಮೆಣ್ಟಾ (ಘಚಛ). [3] (ಕಖಗ) ಗಳಲ್ಲಿಲ್ಲ. [4] ಬ್ಬ (ಘಛ), (ಚ) ದಲ್ಲಿ ತ್ರುಟಿತವಾಗಿದೆ. [5] ಗಣಾ (ಘಚಛ). [6] ರಿ ರುಷಿ (ಘಚಛ), ರಿಗಿರಿ (ಕಗ). *ವಿಶಾಖಾ (ಘಚ), ಶಾಖಾ (ಚ). [7] + ರಾಮಿಲ್ಲರುಂ ಪ್ರೋಷ್ಠಿಲ್ಲರುಂ (ಕಗ). [8] ಡ (ಕಗ), ಳ (ಘಚಛ). [9] + ಚಂದ್ರಗುಪ್ತಮುನಿಯುಮಷ್ಟೋಪವಾಸಂಗೆಯ್ದಿರ್ದೊರ್ (ಕಗ). [10] ಬ್ಬ (ಘಚ). [11] ಣೆಕಸಱಿ (ಕಗ), ಣೆಕಸಿಲೆ (ಘಛ), ಣೆಕಶಿಲೆ (ಚ). [12] ಳ್ದು (ಕಗ).

ಇತ್ತ ಚಂದ್ರಗುಪ್ತ ಮುನಿಯುಮಷ್ಟೋಪವಾಸಂಗೆಯ್ದಿರ್ದೋರಂ ಭಟ್ಟಾರರೆಂದರಾ[1]ಮುಂ ನೋಂತಿರ್ಪೆವು ನೀಮುಂ ಚ[1]ರಿಗೆವುಗುವುದಲ್ತೆಯೆಂದೊಡೆ ಭಟ್ಟಾರಾ ಊರಿಲ್ಲ ಕೇರಿಯಿಲ್ಲೀಯಡವಿಯೊಳೆಲ್ಲಿಗೆ ಚರಿಗೆ[2]ವುಗುವುದೆಂ[2]ದೊಡೆ ಭಟ್ಟಾರರೆಂದರ್ ಕಾಂತಾರ ಭಿಕ್ಷೆಯೆಂಬುದಾಗಮದೊಳ್ ಪೇೞ್ದುದಾರಾನುಂ ಬಟ್ಟೆವೋಪರ್ ಬೀಡಂ ಬಿಟ್ಟಿರ್ದರ್ ನಿಱಿಸುವರಪ್ಪೊಡಱಿಂದೆ ಚರಿಗೆವುಗುವುದೆಂದೊಡೆ ಅಂತೆಗೆಯ್ವೆನೆಂದು ದೇವರಂ ಬಂದಿಸಿ ಚರಿಗೆವೊಕ್ಕಡವಿಯಂ ತೊೞಲ್ವಲ್ಲಿಯೊಂದು ಮರದ ಪೊಟ್ಟಿಲ್ಲೊಳಿರ್ದ ಮಾಣಿಕದ ಮುತ್ತಿನ ಪಿಂಡುಗಂಕಣಮಂ ತೊಟ್ಟ ಕೈಯಿಂದಂ ಪೊನ್ನ ಸಟ್ಟುಗಮುಂ ತೀವಿ ಭಿಕ್ಷೆಯಂ ಪಿಡಿಯೆಂದು ನೀಡಿದ ಕೈಯನಿತನೆ ಕಂಡು ತೊೞಲ್ದಲಾಭಮಾಗಿ ತಮ್ಮಾವಾಸಕ್ಕೆ ಪೋದೊಡೆ ಭಟ್ಟಾರರ್ ಸಿಲೆವಟ್ಟುದೆಯೆಂದು ಬೆಸಗೊಂಡೊಡವರುಂ ತಮ್ಮ ಕಂಡುದಂ ಪೇೞ್ದೊಡೆ ಬೇಸಱದೆ ದಿವಸಕ್ಕಂ ಚರಿಗೆವೊಗುವುದೆಂದು ಭಟ್ಟಾರರ್ ಕಲ್ಪಿಸಿದೊಡಂತೆಗೆಯ್ವೆನೆಂದು ಮಱುದಿವಸಂ ಚರಿಗೆವೊಕ್ಕಡವಿಯಂ ತೊೞಲ್ವಲ್ಲಿಯೊಂದು ಮರದ ಕೆಳಗೆ ಪೊನ್ನ ಮಡಕೆಯೊಳ್ ಬೋನಮನೊಡ್ಡಿ ನೆಱೆಯೆ ತೊಟ್ಟುಟ್ಟು ಮಂಗಳವಸದನಂಗೊಂಡು ದಿವ್ಯಸ್ತ್ರೀ ಬಂದು ನಿಱಿಸಿದೊಡೆ ಇಂತೆಂದರಬ್ಬಾ ನೀ[3]ನೊರ್ವಳೆಯೆ ಪೆಱರಾ[3]ರುಮಿ[4]ಲ್ಲಿಂತು[4] ರಿಸಿಯರ್ಕಳ್ ನಿಲಲಾಗದೆಂದು ಪೇೞ್ದು ತಮ್ಮಿರ್ದೆಡೆಗೆ ಪೋದೊಡೆ ಭಟ್ಟಾರರಿಂತೆಂದರ್ [5]ಸಿಲೆ[5]ವಟ್ಟುದೆ ಎಂದು ಬೆಸಗೊಂಡೊಡವರಿಂತೆಂದರ್ ಒರ್ವಳ್ ದಿವ್ಯಸ್ತ್ರೀ ಸರ್ವಾಭರಣ ಭೂಷಿತೆಯೊಂದು ಮರದ ಕೆಳಗೆ ಬೋನಮನೊ[6]ಡ್ಡಿ[6]ರ್ದವರಂ ಬಂದು ನಿಱಿಸಿದೊ[7]ಡೊರ್ವಳೆ[7] ಪೆಱರಾರುಮಿಲ್ಲೆಂದೆನೆ ನಿಲ್ಲದೆ [8]ಬಂದೆ[8]ನೆಂದೊಡೊಳ್ಳಿತುಕೆಯ್ದಿರೆಂದೊರಿಂತು ಪತ್ತು[9]ಪವಾಸಂಗೆಯ್ದು ಪನ್ನೊಂದನೆಯ ದಿವಸದಂದು ಚರಿಗೆವೊಕ್ಕಡವಿಯಂ ತೊೞಲ್ವನ್ನೆಗಂ ಪಿರಿದೊಂದು ಪೊೞಲುಂ ಧವಳಾರಂಗಳುಂ ನೆಲೆಯ ಮಾಡಂ[10]ಗಳುಂ[10] ಸೂಳೆಗೇರಿಗಳುಂ ದೇವಾಲಯಂಗಳುಮಾನೆ ಕುದುರೆಗ[11]ಳುಂ[11] ಮಾನಸರ ಬರವುಮಂ ಪೋಗುಮಂ ಕಂಡಿನಿತು ದಿವಸಮೀ ಮರಗಳ ಗಿ[12]ಡು[12]ಗಳ ಪೊದಱುಗಳ ಮಱೆಗಳೊಳೀ ಪೊೞಲಂ ಕಂಡೆನಿಲ್ಲೆಂದು ಮನದೊಳ್ ಬಗೆದು ಪೊೞಲೊಳಗೆ ಚರಿಗೆವೊಕ್ಕಾಗಳೊರ್ವಳ್ ದಿವ್ಯಸ್ತ್ರೀ ಪರಿವಾರಸಹಿತಮಿದಿರಂ ಬಂದು ನಿಱಿಸಿ ತನ್ನ ಮಾಡಕ್ಕೊಡಗೊಂಡು ಪೋಗಿ ಕಾಲಂ ಕರ್ಚಿಯರ್ಚಿಸಿ ಗುರುಭಕ್ತಿಗೆಯ್ದು ವಂದಿಸಿಯಾದಮಾನುಂ ಭಕ್ತಿಯಿಂದಂ ದಿವ್ಯಾಹಾರಮಂ ಮಗುೞೆ ಮಗುೞೆ ಒಡ್ಡಿಸೆ [13]ಚರಿಗೆಮಾಡಿ[13] ಪರಸಿ ತಮ್ಮಾವಾಸಕ್ಕೆ ಪೋದೊಡೆ ಭಟ್ಟಾರರ್ ಸಿಲೆವಟ್ಟುದೆಯೆಂದು ಬೆಸಗೊಂಡೊಡೆ ಸಿಲೆವಟ್ಟುದೆಂದೊಡೆಲ್ಲಿ ನಿಂದಿರೆಂದು ಬೆಸಗೊಂಡೊಡಿಂತೆಂದರ್ ಭಟ್ಟಾರಾ ಇನಿತು ದಿವಸಂ ಮರಂಗಳ ಪೊದಱುಗಳ ಮಱೆಗಳೊಳೀ ಪೊೞಲಂ ಕಂಡೆನಿಲ್ಲಿಂದಿನಿಸಾನುಂ†

1 ರಿಂತು ದಿವಸಕ್ಕಂ ನಾಮುಂನೋನುವಿರ್ಚರಿಗೆ (ಕಗ). 2 ವುಗುವೆಮೆಂ (ಘಚಛ).
3 ಮುಪ್ಪೊರ್ವರೆ ನಾಮುಪ್ಪೊರ್ವರೆ ಪೆಱರಾ (ಗ), ಮೊರ್ವರೆಮಾಮುಪ್ಪೊರ್ವರೆ ಪೆಱಗಾ (ಘಛ), ಮೊರ್ವರೆ ಮಾಮೊರ್ವರೆ ಪೆಱಗಾ (ಚ). 4 ಲ್ಲಮೆ (ಕಗ). 5 ನೆಱೆ (ಘಚ), ನೆಲೆ (ಚ).
6 ಟ್ಟಿ (ಚ). 7 ಡಿರ್ವರೆ (ಚಛ), ಡಿರ್ಮರುಮೆ (ಛ). 8 ಬಂದೆ (ಕ). 9 ದಿವಸಮು (ಘಚಛ).
10 ಳ್ಮಂಗಡಿಗಳಂ (ಘಚಛ). 11 ಳನೇಕ (ಚ). 12 ರಿ (ಘಚಛ). 13 ಯುಂಡು (ಘಚಛ).
† ಪು. ೭೫-೮೩ † (ಖ) ದಲ್ಲಿ ನಷ್ಟವಾಗಿದೆ.

ತಿಣ್ಣಂ ತೊಟಿಲ್ವಲ್ಲಿ ಪಿರಿದೊಂದು ಪೊಟಿಲಂ ಕಂಡು ಚರಿಗೆವೊಕ್ಕೊಡೊರ್ವಳ್ ದಿವ್ಯಸ್ತ್ರೀ ಪರಿವಾರಸಹಿತಮಿದಿರಂ ಬಂದು ನಿಱಿಸಿ ತನ್ನ ಮನೆಗೊಡಗೊಂಡುಪೋಗಿ ಕಾಲಂ ಕರ್ಚಿಯರ್ಚಿಸಿ ಗುರುಭಕ್ತಿಗೆಯ್ದು ವಂದಿಸಿಯಾದಮಾನುಂ ಭಕ್ತಿಯಿಂದಂ ದಿವ್ಯಾಹಾರಂಗಳಂ ಒಟ್ಟಿಸೆ ಕ್ರಮಂ ಪೋಗೆ ಚರಿಗೆಮಾಡಿ ಪರಸಿ ಬಂದೆವೆಂದು ಭಟಾರರ್ಗೆ ಪೇೞ್ದೊಡೊಳ್ಳಿತ್ತಾಯಿತ್ತೆಂದು ಸಂತೋಸಂಬಟ್ಟಿರ್ದರಿಂತು ದಿವಸಕ್ಕಂ ಪೊಟಿಲ್ಗೆ ವೋಗಿ ಚರಿಗೆ[1]ಮಾಡುವರಿತ್ತ[1] ಭದ್ರಬಾಹುಭಟಾರರ್ ಮುನ್ನೆ ತಮ್ಮ ತಪಂಗೆಯ್ವಂದೆಲ್ಲಾ ಕಾಲಮುಮುಪಪ್ರೋದಯರ್ ಚರಿಗೆಮಾಡಿ ಪಸಿವಂ ಸೈರಿಸಿ ತಮ್ಮ ಮೆಯ್ಯಂ ಕ್ಷಯಕ್ಕೆ ತಂದು ಸಂನ್ಯಸನಂಗೆಯ್ದು ಪಲವು ದಿವಸದಿಂದಂ ಪಸಿವುಂ ನೀರಳ್ಕೆಯುಮಂ ಸೈರಿಸಿ ಶುಭಪರಿಣಾಮದಿಂದಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಮುಡಿಪಿ ಬ್ರಹ್ಮಕಲ್ಪದೊಳ್ ಪತ್ತು ಸಾಗರೋಪಮಾಯುಷ್ಯಮನೊಡೆಯೊಂ ಅಮಿತ ಕಾಂ[2]ತಿಯೆಂ[2]ಬೊಂ ದೇವನಾಗಿ ಪುಟ್ಟಿದೊಂ

ಚಂದ್ರಗುಪ್ತಮುನಿಯುಂ ಭಟಾರರ ನಿ[3]ಸಿದಿಗೆ[3]ಯಂ ಬಂದಿಸುತ್ತಮಾದೇವತೆ ಬೆಸಕೆಯ್ಯೆ ಚರಿಗೆಮಾಡಿ ತಪಂಗೆಯ್ಯುತ್ತಂ ಪನ್ನೆರಡು ವರುಷಂಬರೆಗಮಿಂತಿರ್ಪನ್ನೆಗಮಿತ್ತ [4]ತಿಮುಟನಾಡ[4] ವೋದ ಋಷಿಸಮುದಾಯಮೆಲ್ಲಂ ಪನ್ನೆರಡು ವರುಷಂಬರೆಗಂ ಸುಖ[5]ದೊಳಿ[5]ರ್ದು ನಿರುಪಸರ್ಗದಿಂ[6] ದರ್ಶನ ಜ್ಞಾನಚಾರಿತ್ರಂಗಳಂ ಪ್ರತಿಪಾಳಿಸಿ ಬಡಗನಾಡ ಪಸವು ತಿಳಿದುದೆಂಬುದನಾ ನಾಡಿಂದಂ ಬಂದರ್ ಪೇೞೆ ಕೇಳ್ದಱಿದು ಭಟಾರರ ನಿ[7]ಸಿದಿಗೆ[7]ಯಂ ಬಂದಿಸಿ ಪೋಪಮೆಂದು ವಿಶಾಖಾಚಾರ್ಯರ್ ಮೊದಲಾಗೊಡೆಯ ಋಷಿಸಮುದಾಯಮೆಲ್ಲಂ ದಕ್ಷಿಣಾಪಥದಿಂದಂ ಬಂದು ಭಟಾರರ ನಿ[7]ಸಿದಿಗೆ[7]ಯನೆಯ್ದಿದಾಗಳ್ ಚಂದ್ರಗುಪ್ತ ಮುನಿಯುಂ ರಿಸಿಯರ್ಕಳ ಬರವಂ ಕಂಡಿದಿರಂ [8]ಬಂದು[8] ಋಷಿಸಮುದಾಯಮೆಲ್ಲಮಂ ಬಂದಿಸಿದೊಡೆ ರಿಸಿಯರ್ಕಳಿಂತೆಂದು ಬಗೆದರೀಯಡವಿಯೊಳಿನ್ನೆಗಮಿವರ್ ಕಂದಮೂಲಫಲಂಗಳಂ ತಿಂದು ತೊಱೆಯ ಪಳ್ಳದ ನೀರ್ಗಳಂ ಕುಡಿದು ಪನ್ನೆರಡು ವರುಷಂಬರೆಗಮೆಂತು ಬರ್ದೋರೆಂದು ತಮ್ಮೊಳ್ ನುಡಿದು ಮತ್ತಂ ತಲೆಸಮಿರ್ ಬೆಳೆದುದುಮಂ ಕಂಡಾರಪ್ಪೊಡಂ ಪ್ರತಿವಂದನೆಯುಂ ಕೊ[9]ಟ್ಟುದಿ[9]ಲ್ಲ ಮತ್ತಾ ರಿಸಿಯರ್ಕಳನಿಬರುಮಾ ದಿವಸಮುಪವಾಸಂಗೆಯ್ದರ್ಚಿಸಿ ಕ್ರಿಯೆಗೆಯ್ದು ಭಟಾರರ ನಿ[8]ಸಿದಿಗೆ[8]ಯಂ ಬಂದಿಸಿಯಾ ದಿವಸಮಲ್ಲಿ[10]ಯೆ ಕ್ರೆಂದ್ರು[10] ಮಱುದಿವಸಂ ಪೋಪಾಗಳ್ ಚಂದ್ರಗುಪ್ತ [11]ಮುನಿಗಳೆಂ[11]ದರ್ ಭಟಾರಾ ನಿನ್ನೆ [12]ಬಟ್ಟೆವಂದು[12]ಪವಾಸಂಗೆಯ್ದು ಸೇದೆ[13]ವಟ್ಟಿರಿಂ[13]ದಿನ ದಿವಸಮಿಲ್ಲಿರ್ದು ಚರಿಗೆವೊಕ್ಕು ಸೇದೆಯನಾಱಿಸಿ ನಾಳೆ ಪೋ[14]ಕೆಂ[14]ದೊಡೆ ಭಟಾರರೆಂದರೂರಿಲ್ಲ ಕೇರಿಯಿಲ್ಲೆಲ್ಲಿ ಚರಿಗೆವುಗುವಮಂತು ಕೆಮ್ಮನೇಕೆಮ್ಮಂ ತಾಂಗಿದಪಿರೆಂದೊಡೆ[15] ಪಿರಿದೊಂದು

---

1 ಪೋಗಿಯುಣ್ಬರಿತ್ತ (ಘಚಛ). 2 ತನೆಂ (ಚಛ). 3 ಷಿದಿ (ಘಚಛ). 4 ದ್ರವಿಳನಾಳ್ಕೆ (ಘಚ), ದ್ರವಿಳನಾಡಿಂಗೆ (ಛ). 5 ಖಿ (ಘಚಛ). 6 + ಸಮ್ಯಕ್ (ಘಛ). 7 ಷಿದಿ (ಘಚಛ). 8 ಪೋಗಿ (ಘಚಛ). 9 ಟ್ಟರಿ (ಘಚಛ). 10 ರ್ದು (ಘಚಛ). 11 ಮಹಾಮುನಿಯರೆಂ (ಘಚಛ). 12 ನಾಮುಂ ಶ್ರಮಂ ಬಟ್ಟೆರು (ಕಖಗ). 13 ಗೆಟ್ಟಿಂದಿನ (ಕಖಗ) ಗೆಟ್ಟರಿಂ (ಘಚ). 14 ಗಿಮೆಂ (ಘ). 15 + ಭಟಾರಾ (ಘಚಛ).

ಪೊೞಲುಂಟು [1]ನೀಮುಂ[1] ಸಂಕ್ಲೇಶಂ [2]ಬಡದಿರಿಂ[2]ದಿನ ದಿವಸಮಿರ್ಕೆಂದೊಡನಿಬರು ಮೆಂದರಿಂದಿನ ದಿವಸಮುಪವಾಸಂಗೆಯ್ದು ಪೊಡಮುವ[3]ರೆಂಬುದನಿಂಬು[3]ಕೆಯ್ದುಮೆಂದಿ ರ್ದೊಡೆ ಮಧ್ಯಾಹ್ನಮಪ್ಪಾಗಳ್ [4]ದೇವರಂ ಬಂದಿಸವೇೞ್ದೊಡನಿಬರುಂ[4] ಬಂದಿಸಿ ಚಂದ್ರಗುಪ್ತಮುನಿಯ ಬೞಿಯಂ ಋಷಿಸಮುದಾಯಮೆಲ್ಲಂ ತಗುಳ್ದು ಕಿಱಿದಂತ ರಮಂ ಪೋಪನ್ನೆಗಂ ಪಿರಿದೊಂದು ಪೊೞಲಂ ಕಂಡು ಚರಿಗೆವೊಕ್ಕನಿಬರುಮಂ ನಿಱಿಸಿ ಕೆಲ ರಿಸಿಯರುಮಾಚಾರ್ಯ್ಯರ್ಕಳುಂ ಬೆರಸು ತಾಮೊಂದುಮನೆಯೊಳ್ ನಿಂದರಿಂತನಿ ಬರುಂ ದಿವ್ಯಾಹಾರಂಗಳಂ ಕ್ರಮಂ ಪೋಗೆ ಚರಿಗೆಮಾಡಿ ತಮ್ಮಾವಾಸಕ್ಕೆ ಬಂದು ವಿಶಾಖಾಚಾರ್ಯ್ಯರೆಂದರ್ ಬ್ರಹ್ಮಯ್ಯಾ ಕಾಲಂಕರ್ಚಲ್ ಗುಂಡಿಗೆಯಂ ಕೊಂಡು ಬನ್ನಿಮೆಂದೊಡೆ ಬ್ರಹ್ಮಯ್ಯನೆಂದಂ ಗುಂಡಿಗೆಯನುಂಡ ಮನೆಯೊಳ್ ಮಱೆದು ಬಂದೆನೆನೆ ಬೇಗಂ ಪೋಗಿ ಕೊಂಡು ಬಾಯೆನೆ ಬ್ರಹ್ಮಯ್ಯಂ ಪೋಗಿ[5]ಪೊೞಲೆಡೆಯಂ ಕಾಣದಡವಿಯೆಲ್ಲಮಂ ತೊೞಲ್ದು [6]ನೋಡಿ[6] ಗುಂಡಿಗೆಯಂ ಕಾಣದತ್ತಮಿತ್ತಂ ನೋೞ್ಪನ್ನೆಗಮೊಂದು ಮರದ ತುತ್ತತುದಿಯೊಳಿರ್ದ್ದಟಲ್ಪ ಗುಂಡಿಗೆಯಂ ಕಂಡುಬಂದು ಗುರುಗಳ್ಗಿಂತೆಂದಂ ಭಟ್ಟಾರಾ [8]ನಾಮುಂ[8]ಡೆಡೆಯೊಳಾ ಪೊೞಲಿಲ್ಲ ನಮ್ಮುಂಡ ಮನೆ ಯುಮಿಲ್ಲ ಗುಂಡಿಗೆಯುಮೊಂದು ನಿಡಿಯ ಮರದ ತುತ್ತತುದಿಯೊಳಿರ್ದ್ದುದಾರಾನು ಮೇಱಲ್ ಬ[9]ಲ್ಲೊ[9]ರ್ನೆಟ್ಟುಗೆಂದೊಡನಿಬರುಂ ರಿಸಿಯರ್ಕಳೆಲ್ಲಂ ಚೋದ್ಯಂಬಟ್ಟು ನೋಡಲ್ಪೋಗಿ ಪೊೞಲಂ ಕಾಣದಡವಿಯೊಳ್ ನಿಡಿಯ ಮರದ ತುತ್ತತುದಿಯೊಳಿರ್ದ್ದ ಟಲ್ಪ ಗುಂಡಿಗೆಯಂ ಕಂಡು ತೆಗೆಯಿಸಿಕೊಂಡು ಪೋಗಿ ಚಂದ್ರಗುಪ್ತ ಮುನಿ[10]ಯನನಿ ಬರುಂ ರಿಸಿಯರ್ಕಳ್ ನೆ[10]ರದಿಂತೆಂದರಾಮುಂ ನಿಮ್ಮ ನೀಯಡವಿ[11]ಯೊಳ್[11]ಕಂದ ಮೂಲಫಲಂಗಳಂ ತಿಂದು ಪಕ್ಕದ [12]ನೀರಂ[12] ಕುಡಿದು ಇನಿತು ಕಾಲಂ ಬ[13]ರ್ದಿ ರೆಂ[13]ದು ನಿಮ್ಮಂ ಬಗೆದು ಬಂದಿಸಿದೆಮಿಲ್ಲಿದರ್ಕೆ ನೀಮುಂ ಮನದೊಳೇವಂಗೊಳ್ಳದೆ ಕ್ಷಮಿಯಿಸಿಮೆಂದು ನುಡಿದು ವಂದಿಸಿ ಮತ್ತಮಿಂತೆಂದರ್ ನೀಮುಂ ದೇವತಾಧಿಷ್ಠಿತ ರಿರ್ ನಿಮಗೆ ದೇವತೆಗಳ್ ಬೆಸಕೆಯ್ವುವು ದೇವತೆಗಳ್ ಮಾಡಿದಾಹಾರಮಂ ನೀಮಿನ್ನೆ ಗಮುಂಡು ತಪಂಗೆಯ್ದಿರಿನ್ನುಣಲ್ವೇಡ ದೇವತೆಗಳ ಮಾಡಿದಾಹಾರಮಂ ರಿಸಿಯ[14]ರ್ಗೆ ಚರಿಗೆ ಮಾಡಲಾಗ[14]ದೆಂದು ಬಾರಿಸಿಯವರ್ಗೆ ಲೋಚುಗೆಯ್ದು ಬ್ರತಂಗಳನೇಱಿಸಿ ಪಡಿಕಮಣಂಬೇೞ್ದೊಡಗೊಂಡುತ್ತರಾಪಥಕ್ಕೆ ಪಯಣಂಬೋಗಿ ಕತಿಪಯ ದಿವಸಂಗ ಳಿಂದಂ ಮಧ್ಯದೇಶಮನೆಯ್ದಿಯಾ ನಾಡೊಳ್ ಋಷಿಸಮುದಾಯಮೆಲ್ಲಂ ನಿರುಪ ಸರ್ಗಮಿರ್ದತ್ತು

ಮತ್ತಿತ್ತ ರಾಮಿಲಾಚಾರ್ಯ್ಯರುಂ ಸ್ಥೂಲಾಚಾರ್ಯ್ಯರುಂ ಸ್ಥೂಲಭದ್ರಾಚಾರ್ಯ್ಯರು ಮಂತು ಮೂವರುಂ ಸಿಂಧು ವಿಷಯಕ್ಕೆ ತಂತಮ್ಮ ಋಷಿಸಮುದಾಯಂ ಬೆರಸು

---

[1] ನಾಮುಂ (ಕಖ), (ಘಚಛ) ಗಳಲ್ಲಿಲ್ಲ. [2] ಬೇಡಿಂ (ಘಚಛ). [3] ರಿಂಬು (ಖ), (ಗ) ದಲ್ಲಿಲ್ಲ. [4] (ಘಚಛ) ಗಳಲ್ಲಿಲ್ಲ. [5] + ನೋೞ್ಪನ್ನೆಗಂ (ಘಚಛ). [6] (ಘಚಛ) ಗಳಲ್ಲಿಲ್ಲ [7] + ಮಗುೞ್ದು (ಚ). [8] ನಮ್ಮುಂ (ಚಛ). [9] ಲ್ಲಾತ (ಕಖಗ). [10] ಯನನಿತು ರುಷಿ ಸಮುದಾಯಂ ನೆ (ಘಚಛ). [11] ಯ (ಚ). [12] ತೊಱೆಯ ನೀರ್ಗಳಂ (ಘಛ), ಕೊಳ್ಳದ ತೊಱೆಯ ನೀರಂ (ಚ). [13] ದ್ದಿರೆ (ಖ), (ಗ) ದಲ್ಲಿ ನಷ್ಟವಾಗಿದೆ. [14] ರ್ಕಳುಣಲ್ವಾರ (ಘಚಛ).

ಪೋದೊಡಾ ನಾಡೊಳ್ ಮಾಸಸರ್ ಮಾಸಸರಂ ತಿಂಬಂತುಟಪ್ಪ ಮಹಾಘೋ[1]ರಂ[1] ಪಸಪಾದೊಡಲ್ಲಿಯ ಶ್ರಾವಕರೆಲ್ಲಂ ನೆರೆದು ರಿಸಿಯರಲ್ಲಿಗೆ ಪೋಗಿ ಇಂತೆಂದರ್ ಭಟಾ[2]ರಾ ಲ[2]ಪಟುಗಳ ಕೈಯಲ್ ಪಗಲುಣ[3]ಲುಮಡಲುಂ ಪೆಱಲಾಗ[3] ಪೇಲ್ವಾಯ್ದುಪೆದು ಕೊಂಡುಂಬ[4]ರ್[4] ಲೋಗರೆಲ್ಲಮವರ ಭಯಕ್ಕೆ ಪಗಲಡುಗೆಯಂ ಪಸುಟ್ಟಿರುಳಟ್ಟುಣಲ್ ತಗುಳ್ದರದಱಿಂ ನೀಮುಮಿಂದಿತ್ತಿರುಳ್ ಭೈಕ್ಷಭಾಜನಂಗಳಂ ಕೊಂಡು ಪೋಗಿ ಶ್ರಾವಕರ ಮನೆಗಳಂ ತೊಟಲ್ದು ಭೈಕ್ಷಂ ಬೇಡಿ ಕೊಂಡು ಕೊಟುನಿರುಳ್ ತಂದಿಟ್ಟು ಪಗಲುಣ್ಬುದೆಂದೊಡಂತೆ ಗೆಯ್ವಮೆಂದು ಇರುಳ್ ತೊಟಲ್ದು ಭೈಕ್ಷಮಂ ತಂದು ಮಡಗಿಟ್ಟು ಪಗಲುಣ್ಬೊರಾದರಿಂತೀ ಪಾಂಗಿನೊಳ್ ಕಾಲಂ ಸಲೆ ಮತ್ತೊಂದು ದಿವಸಮೊರ್ವ ನಿಗ್ರ್ರಂಥ[5]ಯತಿ[5] ಭೈಕ್ಷಭಾಜನಮಂ ಕೊಂಡು ಶ್ರಾವಕರ ಮನೆಗಳನಿರುಳ್ ಭೈಕ್ಷಂ ಬೇಡಿ ತೊಟಲುತ್ತಂ ಪೋಪರೊಂದು ಮನೆಯಂ ಪೊಕ್ಕು ಭೈಕ್ಷಮಂ ಬೇಡಿದೊಡೊರ್ವಳ್ ಪೊಸ ಶ್ರಾವಕಿ [6]ಬಸಿಪ್ಪೆಗಂಡತಿ[6] [7]ವೇ[7]ಳಾಸ್ವಾಮಿನಿಯೆಂಬೊಳ್ ಕ[8]ರ್ದಂ[8]ಗ[9]ಳಿರುಳೊಳ್[9] ಕಟ್ಟಲೆಯೊಳಾ ನಿಗ್ರ್ರಂಥಮಪ್ಪ[10] ರೂಪಂ[11] ಕಂಡು ಬೆರ್ಚಿದೊಡಾಕೆಗೆ ಬಸಿಱುಟಿದತ್ತದಂ ಕಂಡು ಶ್ರಾವಕರೆಲ್ಲಂ ನೆರೆದು ರಿಸಿಯರಲ್ಲಿಗೆ ಪೋಗಿ ಇಂತೆಂದರ್ ಭಟ್ಟಾರಾ ಕಾಲಮಪ್ಪೊಡೆ ಕೆಟ್ಟತ್ತೊಳ್ಳಿತ್ತಪ್ಪ ಕಾಲಮಾದಂದು ಪ್ರಾಯಶ್ಚಿತ್ತಂಗೊಂಡು ನಿಮ್ಮ ತಪಂಗಳೊಳ್ ನಿಲ್ಲಿ[12]ಮಾಗಳೀ ಪಸವು ಕಟಿವನ್ನೆಗಂ[12] ನೀಮುಮೆಡದ ಕೈಯನೆಟಲಿಕ್ಕಿಯರ್ಧಗಪ್ಪಡಮನೆಡದ ಮುಯ್ಯಿನಮೇ[13]ಗಿಕ್ಕಿ[13] ಒಳಗೆ ನಿಗ್ರ್ರಂಥಮಪ್ಪ ರೂಪಂ ತಾಳ್ದು ಬಲದ ಕೈಯೊಳ್ ಭೈಕ್ಷದ ಭಾಜನಮಂ ಪಿಡಿದು ತೊಟಲ್ದು ಭೈಕ್ಷಮಂ ಬೇಡಿ ಮಡಗಿಟ್ಟು ಪಗ[14]ಲುಣ್ಬೆಮಂ[14]ದೊಡವರ್ಗಳುಮಂತೆ ಗೆಯ್ವಮೆಂದವರ ಪೇಟ್ದ ಪಾಂಗಿನೊಳ್ ನೆಗಟ್ದು ಪಸನಂ ನೀಗಿ ಕಾಲಮೊಳ್ಳಿತ್ತಾದೊಡೆ ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ ಸ್ಥೂಲಭದ್ರಾಚಾರ್ಯರುಮಂತು ಮೂವರುಂ ತಂತಮ್ಮ ಋಷಿಸಮುದಾಯಂ ಬೆರಸು ವಿಹಾರಿಸುತ್ತಂ ಮಧ್ಯದೇಶಕ್ಕೆ ರಿಸಿಯರ್ಕಳಿರ್ದಲ್ಲಿಗೆ ಬಂದೊಡೆ ವಿಶಾಖಾಚಾರ್ಯರ್ ಮೊದಲಾಗೊಡೆಯ ಆಚಾರ್ಯರ್ಕಳವರನಿಂತೆಂದರ್ ನೀಮೆಲ್ಲಮರ್ಧಗಪ್ಪಡಮಂ ಬಿಸುಟ್ಟು ನಿಗ್ರ್ರಂಥರೂಪುಮಂ ಕೈಕೊಂಡು ಬ್ರತಂಗಳನೇಱಿಸಿ ಪ್ರಾಯಶ್ಚಿತ್ತಂಗೊಂಡು ಪಡಿಕಮಣಂಗೇಳ್ದು ತಪದೊಳ್ ನಿಲ್ಲಿಮೆಂದೊಡಂತೆಗೆಯ್ವಮೆಂದು ರಾಮಿಲಾಚಾರ್ಯರುಂ ಸ್ಥೂಲಾಚಾರ್ಯರುಂ[15] ತಂತಮ್ಮ ಋಷಿಸಮುದಾಯುಂ ಬೆರಸು ವಿಶಾಖಾಚಾರ್ಯರ ಪಕ್ಕದೆ ಅರ್ಧಗಪ್ಪಡಮಂ ಬಿಸುಟ್ಟು ಪಡಿಕಮಣಂಗೇಳ್ದು [16]ಪ್ರಾಯಶ್ಚಿತ್ತಂಗೊಂಡು ಯಥೋಕ್ತಮಪ್ಪ ಚಾರಿತ್ರದೊಳ್ ನಿಂದರ್ ಸ್ಥೂಲ

---

[1] ರಮಪ್ಪ (ಘಚಛ). [2] ರಾ ಆ (ಖ), ರಕಾ ರಾಲ (ಛ). [3] ಲ್ವಾರದು (ಘಚಛ). [4] ರುಂ (ಖ) [5] ರುಷಿಯರ್ (ಘಚಛ). [6] (ಘಚಛ) ಗಳಲ್ಲಿಲ್ಲ. [7] ವೇ (ಕಗ). [8] ಳ್ದಂ (ಘಚಛ). [9] ಳೊಳ್ ಇರುಳ್ ಕಡು (ಘಚಛ). [10] + ಯತಿ (ಘಚಛ). [11] + ತೊಟ್ಟನೆ (ಘಚಛ). [12] ಮನ್ನೆಗಂ (ಕಖಗ). [13] ಗೆಳಲಿಕ್ಕಿ (ಘಚಛ). [14] ಲಿರ್ಪುದೆಂ (ಘಛ), ಲುಣ್ಬುದೆಂ (ಚ). [15] + ಸ್ಥೂಲಭದ್ರಾಚಾರ್ಯರುಂ (ಕಖ). [16] + ತಪದೊಳ್ ನಿಂದು (ಕಗಚ).

ಭದ್ರಾಚಾರ್ಯರ್ ಮೊದಲಾಗಿ ಕೆಲಂಬರ್ ಕೋಳ್ಗೊಳ್ಳದವರ್ [1]ಜಿನಕಲ್ಪಂ ಸ್ಥವಿ[ರಕಲ್ಪ][1]ಮೆಂದೆರಡು ಭೇದಂ ಮಾಡಿ ಅರ್ಧಗಪ್ಪಡದ ತೀರ್ಥಮಂ ನೆಗಟ್ಟಿದರ್

ಇಂತರ್ಧಗಪ್ಪಡದ ತೀರ್ಥ ಪಾರಂಪರ್ಯದಿಂದಂ ಸುರಠಮೆಂಬುದು ನಾಡಲ್ಲಿ ವ[2]ಳಭಿ[2]ಯೆಂಬುದು ಪೊೞಲದನಾಳ್ವಂ ವಪ್ರಪಾ[3]ಳ[3]ನೆಂಬೊನರಸನ ರಾಜ್ಯಂ ಬರೆಗಮರ್ಧಗಪ್ಪಡದ ತೀರ್ಥಂ ನೆಗೞ್ದತ್ತು ಮತ್ತಂ ವಪ್ರಪಾಳನೆಂಬರಸಂ ಮಿಥ್ಯಾದೃಷ್ಟಿಯಾತನ ಮಹಾದೇವಿ [4]ಸ್ವಾ[4]ಮಿನಿಯೆಂಬೊಳರ್ಧಗಪ್ಪಡದ ತೀರ್ಥದ ತಪಸ್ವಿಯರ ಶ್ರಾವಕಿಯಾಗಿ ಇಂತು ಕಾಲಂಸಲೆ ಮತ್ತೊಂದು ದಿವಸಂ ನಡುವಗಲರಸನುಂ ಮಹಾದೇವಿಯುಮಿಂತಿರ್ವರುಂ ಪ್ರಾಸಾದದ ಮೇಗಿರ್ದು ಗವಾಕ್ಷ ಜಾಳಾಂತರಂಗಳಿಂದಂ ದಿಶಾವಲೋಕನಂ ಗೆಯ್ಯುತ್ತಿರ್ಪನ್ನೆಗಮರ್ಧಗಪ್ಪಡದ ಸಂಘಂ ಭೈಕ್ಷಂ ಕಾರಣಮಾಗಿಯರಮನೆಯಂ ಪುಗುವುದನರಸಂ ಕಂಡರಸಿಯನಿಂತೆಂದನೆಲೆ ಮಹಾದೇವಿ ಈ ನಿನ್ನ[5]ರ್ಧಗಪ್ಪಡದ ಯತಿಯರ [6]ಧರ್ಮ[6]ಮೊಳ್ಳಿತ[7]ಲ್ತು[7]ವರುಟ್ಟರುಮಲ್ಲ[8]ರ್ ಬತ್ತ[8]ಲೆಗರುಮಲ್ಲರೆಂದು ನುಡಿದು ಮತ್ತೊಂದು ದಿವಸಮರ್ಧಗಪ್ಪಡದ ಸಂಘಮನರಸಂ ಬೞಿಯಟ್ಟಿ ವರಿಸಿ ಇಂತೆಂದಂ ನೀಮರ್ಧಗಪ್ಪಡಮಂ ಬಿಸುಟ್ಟು ನಿರ್ಗ್ರಂಥಮಪ್ಪ ರಿಸಿರೂಪಂ ಕೈಕೊಂಡು [9]ಬೞಿ[9]ಯೆ ತಪಂಗೆಯ್ವುದೆಂದೊಡವರೊಲ್ಲದಿರ್ದೊಡರಸಂ ಮತ್ತಮಿಂತೆಂದಂ ನಿರ್ಗ್ರಂಥಮಪ್ಪ ರೂಪಂ ಕೈಕೊ[10]ಳಲೊಲ್ಲಿ[10]ರಪ್ಪೊಡರ್ಧಗಪ್ಪಡಮಂ ಬಿಸುಟ್ಟು [11]ಪಟಿಯಂ ಸ[11]ಯ್ತುಟ್ಟು ಕೊಂಡಿರಿಮೆಂದೊಡಂತೆ ಗೆಯ್ದಮೆಂದಾ ದಿವಸಂ ತಗುಳ್ದು ಜಡಗನಾಡವರ್ ವಪ್ರಪಾಳನ ರಾಜ್ಯದೊಳರ್ಧಗಪ್ಪಡಮಂ ಬಿಸುಟ್ಟು ಕಚ್ಚೆ ಗಟ್ಟದೆ ನಯ್ತುಡುವರುಂ ಕುಱು[12]ವಡಂ ಪೊ[12]ದೆವರುಮಾದೊರಲ್ಲಿಂದಿತ್ತ ಕಂಬ[13]ಳ[13]ತೀರ್ಥಮೆಂಬುದಾದುದವರುಂ ಶ್ವೇತಪಟರೆಂಬೊರಾದರ್ ದಕ್ಷಿಣಾಪಥದೊಳ್ ಸಾ[14]ಮ[14]ಳಿಪುತ್ರನೆಂಬರಸನ[15]ಪ್ಪನವರಯೆ[15] ಸಂತತಿ[16]ಯ[16] ಶ್ವೇತಭಿಕ್ಷು ಜಾಪುಲಿ ಸಂಘಕ್ಕೆ ಮೊದಲಿಗನಾದಂ

ಮತ್ತಿತ್ತ ಸಂಪ್ರತಿ ಚಂದ್ರಗುಪ್ತಮುನಿಯುಮುಗ್ರೋಗ್ರ ತಪಶ್ಚರಣಂಗೆಯ್ದು [17]ಸಂನ್ಯಾಸನವಿಧಾನದಿಂದಂ ಪರಮಶುದ್ಧ ಸಹಜ ರತ್ನತ್ರಯಮಂ ಸಾಧಿಸಿ[17] ಮುಡಿಪಿ ಬ್ರಹ್ಮಕಲ್ಪದೊಳ್ ಪತ್ತುಸಾಗರೋಪಮಾಯುಷ್ಯಮನೊಡೆಯೊಂ ಶ್ರೀ[18]ಧ[18]ರನೆಂಬೊಂ ದೇವನಾಗಿ ಪುಟ್ಟಿದೊನಿಂತಿದು ಭದ್ರಬಾಹುಭಟಾರರ ಕಥೆ *ಪೇೞ್ದುದು

---

[1] ಜಿನಕಲ್ಪಸ್ಥಂ ಸ್ಥವಿತರಪ್ಪೆ (ಕ), ಜಿನಕಲ್ಪಂ ಸ್ಥವಿತರಪ್ಪ (ಖಗ), ಜಿನಕಲ್ಪ (ಘಛ), ಜಿನಕಲ್ಪದಿಂ (ಚ). [2] ಳಂಬೆ (ಕಖಗ). [3] ಡ (ಘಚಛ), ಮುಂದಕ್ಕೂ ಈ ಪ್ರತಿಗಳಲ್ಲಿ ಹೀಗೆಯೇ. [4] ವಿಶ್ವಾ (ಕಖಗ). [5] +ಯ (ಕಗ). [6] ರ್ಧ (ಖ). [7] ಲ್ಲಿ (ಕಖಗಘ). [8] ರ್ಬ (ಘಛ). [9] ಪಾಳಿ (ಘಚಛ). [10] ಳ್ಳಿ (ಘಚಛ). [11] ಪಳಿಯೆಸ (ಗ), ಪಾಳಿಯೆಸೆ (ಘ), ಪಾಳಿಯಸ (ಛ), (ಚ) ದಲ್ಲಿ ನಷ್ಟವಾಗಿದೆ. [12] ವಡಂಬೊ (ಕಗ), ಕಡಂಬೊ (ಖ), 'ಕುಱುವಡಿಯಂ ಪೊದೆವರು' ಎಂದು ಸರಿಯಾದ ಪಾಠವಿರಬಹುದೆ? [13] ಳಿ (ಕಖಗ), ಲ (ಚ) [14] ವೆ (ಘಚ). [15] ಮಗನಪ್ಪನಾತನ (ಘಚಛ), ಪ್ಪನವರೆಯೆ (ಖಗ). [16] (ಘಚಛ) ಗಳಲ್ಲಿಲ್ಲ. [17] ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾದಿಸಿ ಸಂನ್ಯಸನಂಗೆಯ್ದು ಸಮಾಧಿಮರಣದಿಂ (ಘಚಛ). [18] ವ (ಚ). * ಯಂ ಕೇಳ್ದು ಪೇಳ್ದರು (ಪೆರರ್), ಸಂನ್ಯಸನಂ ಗೆಯ್ದೊರೆಲ್ಲಂ ಭದ್ರಬಾಹು ಭಟಾರರಂ ಮನದೊಳ್ (ಘಚಛ).

ಪೆಱರುಂ ಸಂನ್ಯಸನಂ †ಗೆಯ್ದೋರೆಲ್ಲಂ ಭದ್ರಬಾಹುಭಟಾರಕರ ಮನದೆ* ಬಗೆದವರೆಂತು ಪಸಿವುಂ ನೀರೞ್ಕೆ ಶೀತಮುಷ್ಣದಂಸಮಸಕಾದಿ ಪರೀಷಹಂಗಳಂ ಸೈರಿಸಿ [1]ಪರಮ ಶುದ್ಧ ರತ್ನತ್ರಯಮಂ ಸಾಧಿಸಿದರಂತೆ[1] ಸಂನ್ಯಸನಂ† ಗೆಯ್ದ ಭವ್ಯರ್ಕಳುಂ ಪಸಿವುಂ ನೀರೞ್ಕೆ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಸಮಾಧಿಮರಣದಿಂ[2] ಮುಡಿಪಿ [3]ಪರಮಶುದ್ಧ ಸಹಜ ರತ್ನತ್ರಯಂಗಳಂ ಸಾಧಿಸಿ[3] ಸ್ವರ್ಗಾಪವರ್ಗ ಸುಖಂಗ[4]ಳನೆಯ್ದುಗೆ[4]

* ಯಂ ಕೇಳ್ದು ಪೇಳ್ದರು (ಪೆರರ್), ಸಂನ್ಯಸನಂ ಗೆಯ್ದೋರೆಲ್ಲಂ ಭದ್ರಬಾಹು ಭಟಾರರಂ ಮನದೊಳ್ (ಘಚಛ). †-† (ಕಗ) ಗಳಲ್ಲಿಲ್ಲ. [1] ಸುತ್ತಂ ತಮ್ಮ ಕಾರ್ಯಮಂ ಸಾಧಿಸಿ ಸಂದರಂತೆ (ಘಚಛ). [2] + ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳವಾರಿಧಿಸಿ (ಳಂ ಸಾದಿಸಿ) (ಘಚಛ).
೧೦ [3] (ಘಚಛ) ಗಳಲ್ಲಿಲ್ಲ. [4] ಳನೆಯ್ದುಗೆಂಬುದು (ಕಗ) ಳಂ ನೆಗಳ್ಗೆ (ಛ).

(೭) ಲಲಿತಘಟೆಯ ಕಥೆ

ಲಲಿತಘಟೆಯ ಕಥೆಯಂ ಪೇೞ್ವಂ :

ಗಾಹೆ॥ ಕೋಸಂಬೀ ಲಲಿತಘಟಾ ಓಘಾ ಣದೀಎ ಪೂರೇಣ ತಿವ್ವೇಣ।
ಆರಾಧಣಂ ಪವಣ್ಣಾ ಪಾಓವಗಯಾ ಅಮೂಢಮದೀ ॥

[ಕೋಸಂಬೀ—ಕೌಶಾಂಬಿಯೆಂಬ ಪೊೞಲೊಳ್, ಲಲಿತಘಟಾ—ಲಲಿತಘಟೆ, ಓಘಾ—ಎಡೆಯೆಪಟ್ಟತ್ತು, ಣದೀಎ ಪೂರೇಣ—ತೊಱೆಯ ಪೂರದಿಂದಂ, ತಿವ್ವೇಣ—ಆದಮಾನುಂ ಕಡಿದಪ್ಪುದಱಿಂದಂ, ಆರಾಧಣಂ—[1]ನಿಜಾತ್ಮಾ[1]ರಾಧನೆಯುಂ, ಪವಣ್ಣಾ—ಪೊ[2]ರ್ದಿ[2]ತ್ತು, ಪಾಓವಗಯಾ—ಪ್ರಾಯೋಪಗಮನಕ್ಕೆ ಸಂದುದಾಗಿ, ಅಮೂಢಮದೀ—ಮೋಹಿಸದ ಬುದ್ಧಿಯನೊಡೆಯ[3]ದು[3]]

ಅದೆಂತೆಂದೊಡೆ :

ಈ ಜಂಬೂ ದ್ವೀಪದ ಭರತಕ್ಷೇತ್ರದೊಳ್ ವತ್ಸೆಯೆಂಬುದು ನಾಡಲ್ಲಿ ಕೌಶಂಬಿಯೆಂಬುದು ಪೊೞಲದನಾಳ್ವೊಂ ಹರಿಧ್ವಜನೆಂಬೊನರಸನಾತನ ಮಹಾದೇವಿ [4]ವಾರುಣಿ[4]ಯೆಂಬೊಳಾಯಿರ್ವರ್ಗ್ಗಂ ಮಕ್ಕಳ್ ಶ್ರೀವರ್ಧನಂ ವಿಜಯಂಧರಂ ವೀರಬಾಹು ಮೊದಲಾಗಿ ಮೂವತ್ತಿರ್ವರ್ ಕುಮಾರರುಂ ಸಾಮಂತ ಮಹಾಸಾಮಂತರ ಮಕ್ಕಳುಮಂತೆಲ್ಲಮಯ್ನೂರ್ವರುಂ ರೂಪಿನೊಳಂ ತೇಜದೊಳಂ ಯೌವನದೊಳಂ ಶ್ರೀಯೊಳಂ ತಮ್ಮೊಳೋರನ್ನರಪ್ಪರ[5]ದಱಿಂ[5] ಲಲಿತಘಟೆಯೆಂಬೊರನಿಬರುಂ ಮಿಥ್ಯಾದೃಷ್ಟಿಗಳ್ ಪಂಡಿತ[6]ರುಮೊ[6]ಂದು ದಿವಸಂ ಶ್ರೀಕಾಂತಮೆಂಬ ಪರ್ವತದ[7]ಡವಿಗ[7]ನಿಬರುಂ ಬೇಂಟೆಯಾಡಲ್ ಪೋದಲ್ಲಿ ಇ[8][ರ್ದೊ][8]ರಭಯಘೋಷರೆಂ[9]ಬ ಭಟಾ[9]ರರವರ್ಗ್ಗಭಯಘೋಷರೆಂಬ ಪೆಸರೆಂತಾದುದೆಂದೊಡವರ್ ಗರ್ಭದೊಳಿರ್ದಂ[10]ತೆ ಅ[10]ವರ ತಾಯ್ಗೆ ಜೀವಂಗಳಂ ಕೊಲ್ಲದಂತಪ್ಪ ಬಯಕೆಯಾಗಿ ಅಭಯಘೋಷಣೆಯಂ ಪೊೞಲೊಳಂ ನಾಡೊಳಂ ಪೊಯ್ಸಿ ಜೀವಂಗಳ್ಗಭಯದಾ[11]ನಂಗೊ[11]ಟ್ಟು ಪುಟ್ಟಿದರಪ್ಪುದಱಿಂದವರ್ಗ್ಗಭಯಘೋಷರೆಂಬ ಪೆಸರಾದುದಂತಪ್ಪ ಭಟ್ಟಾರರಡವಿಯೊಳಿರೆ ಅವರ ತಪೋಮಾಹಾತ್ಮ್ಯದಿಂ ಲಲಿತಘಟೆಗೊಂದು ಮಿಗಮಪ್ಪೊಡಂ ಬೇಂಟೆ[12] ಸಮನಿಸದೆ ಪೊೞಲ್ಗೆವೋದೊರಿಂತೇೞು ದಿವಸಮುಂ ಬಿಡದಡವಿಗೆ ಬೇಂಟೆಯಾಡಲ್ ಪೋಗಿ ಒಂದು ಮೃಗಮಪ್ಪೊಡಂ ಸಮನಿಸದೆ ಬೇಸ[13]ತ್ತು[13]ಬಱಲ್ದು ಪೊೞಲ್ಗೆವೋಗಿ ಎಂಟನೆಯ ದಿವಸದಂದು ಶ್ರೀಕಾಂತಮೆಂಬ [14]ಪರ್ವತದ[14]ಡವಿಗೆ ಲಲಿತಘಟೆ ಬೇಂಟೆಯಾಡಲ್

---

[1] ಸಮ್ಯಗ್‌ದರ್ಶನ ಜ್ಞಾನ ಚಾರಿತ್ರಾತ್ಮಕಮಪ್ಪಾ (ಘಚಛ). [2] ೞ್ದಿ (ಕಖಗ). [3] ರ್ (ಚಛ). [4] ವಾರಣಿ (ಚ), ಧಾರುಣಿ (ಛ). [5] ವರ್ಗಳ್ (ಘಚಛ). [6] ರೊಂ (ಘಚಛ). [7] ಮೇಗ (ಘಚಛ). [8] ಲ್ಲಿಯಿಳ್ದೊ (ಕಖಗ), ರಲ್ಲಿರ್ದ (ಘಛ) ಲ್ಲಿರ್ದ (ಚ) [9] ಬಾಚಾರ್ಯ (ಘಚಛ). [10] ದು ಅ (ಘಚಛ) [11] ನಮಂಕೊ (ಘಚಛ). [12] + ಯೊಳ್ (ಕಖಗ). [13] ತ್ರ್ರ (ಕಖಗ). [14] (ಕಖಗ) ಗಳಲ್ಲಿಲ್ಲ.

ಪೋಗಿ ಅಡವಿಯೊಳ್ ಮೃಗಂಗಳನಱಸುತ್ತಂ ತೊೞಲ್ವರನ್ನೆಗಮುಭಯಘೋಷ ಭಟಾರರಾಯತಿಯಿಂ ತೊಟ್ಟ[1]ನೆ[1] ಸರ್ವಾಂಗಮಲಧಾರಿಗಳೊಂದು ಶಿಲಾತಳದ ಮೇಗೆ ಪರ್ಯಂಕಾಸನಮುಮಂ ಪರಿವಿಡಿಗೆಯ್ಯುತ್ತುಮರ್ಥಮಂ ಭಾವಿಸುತ್ತಂ ಸ್ವಾಧ್ಯಾಯ ದೊಳ್ ತಗುಳ್ದೋರ್ವರಂ ಸಂಭಿನ್ನಮಪ್ಪಡವಿಯ ಮಱೆಯೊಳ್ ಗಂಟೆಱುಂದಂ ಲಲಿತಘಟೆ ಕಂಡಪೂರ್ವಮಿದೊಂದು ಕರಿಯ ಮೃಗಮಿರ್ದುದೆಂದು ಬಗೆದು ಶ್ರೀವರ್ಧನಕುಮಾರಂ ಮೊದಲಾಗನಿಬರುಂ ಬಿಲ್ಗಳನೇಱಿಸಿ ತಿರುವಾ[2]ಯೊಳಂಬನಿಟ್ಟು ಸಲೆಂದು ತೆಗೆದಿಸುವನ್ನೆಗಮನಿಬರ ಬಿಲ್ಗಳುಂ ಮುಱಿದುದವರ್ಗಳನಿಬರುಂ ಪೆಱಗಣ್ಗುರುಳ್ದು ಬಿೞ್ದೋಡಿದು ಮಹಾಚೋದ್ಯಂ ಸಾರೆ ಪೋಗಿ ನೋೞ್ಪಮೆಂದು ಪೋಪರನ್ನೆಗಂ ಋಷಿಯರ ರೂಪಂ ಕಂಡಿವರ್ ಋಷಿಯರ್ ಮೃಗಮಲ್ತೆಂದು ಸಾರೆ ಪೋಗಿ ಅವರು ಪಶಮಮುಂ ತಪಮುಮಂ ಕಂಡನಿಬರ್ಗುಪಶಮಮಾಗಿ ಕುಳ್ಳಿರ್ದು ಧರ್ಮಮಂ ಪೇೞಿಂ ಭಟ್ಟಾರಾ ಎಂದು ಬೆಸಗೊಂಡೊಡೆ ಭಟ್ಟಾರರಿಂತೆಂದು ಪೇೞಲ್ ತೊಡಗಿದರ್:

ಗಾಹೆ|| ಸೋ ಧಮ್ಮೋ ಜತ್ಥ ದಯಾ ಸೋ ವಿ ತಓ ವಿಸಯಣಿಗ್ಗಹೋ ಜತ್ಥ |
ದಸಅಟ್ಠದೋಸರಹಿಓ ಸೋ ದೇವೋ ಣತ್ಥಿ ಸಂದೇಹೋ ||

ಎಂದಿಂತು ಜೀವಂಗಳಂ ಕೊಲ್ಲದುದೆ ಧರ್ಮಂ ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದಯ್ದುಮಿಂದ್ರಿಯಂ ಗೆಲ್ದು ಇರ್ಪತ್ತೆರಡು ಪರೀಷಹಂಗಳಂ ಸೈರಿಸಿ ಯಮ ನಿಯಮ ಸ್ವಾಧ್ಯಾಯ ಧ್ಯಾನಾನು[3]ಸ್ಥಾನಪರಾಯಣ[3]ರಾಗಿ ತಪಂಗೆಯ್ವ ರಿಸಿಯರ್ಕಳೆ ತಪಸ್ವಿಯರ್ ಪಸಿವು ನೀರಡ್ಕೆ ಮೊದಲಾಗೊಡೆಯ ಪದಿನೆಂಟು ದೋಷಂಗಳನಿಲ್ಲದೊಂ ಪರಮಾತ್ಮನೆಂದಿಂತು ಪೇೞ್ದು ಮತ್ತಮಿಂತೆಂದರ್ :

ಗಾಹೆ|| ಪಾವೇಣ ಣಿರಯತಿರಿಯಂ ಗಮ್ಮಇ ಧಮ್ಮೇಣ ದೇವಲೋಗಂ ತು |
ಮಿಸ್ಸೇಣ ಮಾಣುಸತ್ತಂ ದೋಣ್ಹಂ ಪಿ ಖಯೇಣ ಣಿವ್ವಾಣಂ ||

ಎಂಬುದುಂ ಪಾಪಂಗೆಯ್ವವರುಂ ಬೇಂಟೆಯಾಡುವರುಂ ಮಧುಮದ್ಯಮಾಂಸಂಗಳಂ ಸೇವಿಸುವರುಂ ಬಾಲವಧೆ ಸ್ತ್ರೀವಧೆ ಗೋವಧೆ ಬ್ರಾಹ್ಮಣವಧೆ ಋಷಿವಧೆಯೆಂ[4]ದೀ ಪಂಚಮಹಾಪಾತಕಂಗಳಂ ಗೆಯ್ದ[4]ವರುಮಗಮ್ಯಾಗಮನಮುಮಪೇಯಾಪೇಯಮುಮ ಭಕ್ಷ್ಯಾಭಕ್ಷ್ಯಂ ಮೊದಲಾಗೊಡೆಯ ಪೊಲ್ಲಮೆಗಳೊಳ್ ನೆಗೞ್ದು ಘೋರಮುಂ ಪಿರಿಯವುಮಪ್ಪ ಪಾಪಂಗಳಂ ಗೆಯ್ದೇೞನೆಯ ನರಕದೊಳ್ ಮೂವತ್ತುಮೂಱು ಸಾಗರೋ*ಪಮಾಯುಷ್ಯಮನೊಡೆಯರ್ ನಾರಕರಾಗಿ ಪುಟ್ಟಿ ಛೇದನ ಭೇದನ [5]ಪೂರಣ ಚೂರಣ ಪೀಡನ ಬಂಧನಂಗಳುಮಂ[5] ಮುಟ್ಟಿಗೆಯೊಳಿಟ್ಟು ತೆಗಪುವುದುಂ ಕೊಂತಂಗಳಿಂದಮಿಟ್ಟಿಗಳಿಂದಂ ಕರು[6]ಳ್ಗಳಂ ಸೋರೆ[6] ಕುತ್ತುವುದುಂ ಚಕ್ರಂಗಳಿಂದಂ [7]ತೆಗಲೆ[7]ಯುಂ ಮೊಕ್ಕನೆಪೋಗಿಡುವುದುಂ ಮರಂಗಳಂ ಪೋೞ್ವಂತೆ ಕರಗಸಂಗಳಿಂದ

[1] ಂತೆ (ಘಚಛ). [2] + ಳಿ (ಘಚಛ). [3] ಷ್ಠ (ಕಖಗ), [4] ದಿವು ಮೊದಲಾಗೊಡೆಯ ಪಲವು ಪಾಪಂಗಳಂ ಮಾಡಿ (ಘಚಛ). * ಪು. ೯೧-೯೩* (ಚ) ದಲ್ಲಿ ನಷ್ಟವಾಗಿದೆ [5] ದಹನ ತಾಪದ ಮರಣ ಪೀಡನ ಬಂಧನಂಗಳುಂ ಪುಟಂಗಳೊಳಿಟ್ಟು (ಘಚಛ). [6] ಳ್ ಸುರಿಯೆ (ಘಚಛ). [7] ತಲೆ (ಕಖಗ).

ಸುದ್ದಂ [1]ಪಿಡಿದು[1] ಪೋೞ್ಪುದುಮೆಂದಿವು ಮೊದಲಾಗೊಡೆಯ [2]ದುಃಖಂಗಳಂ ಕಣ್ಣಿಮೆಯಿಕ್ಕುವನಿತು ಪೊೞ್ತುಪ್ರೊಡಮುಸಿರ್ [3]ಪತ್ತಿ[3]ಲ್ಲದೆ ದುಃಖಂಗಳನನುಭವಿಸುವ[4]ರ್ ಮತ್ತೊಯ್ಯ[4]ನೆ ಪಾಪಂಗಳಂ ಗೆಯ್ದವರಾನೆಯುಂ ಸಿಂಹಮುಂ ಪುಲಿಯುಂ ಕರಡಿಯುಂ ಪುಲ್ಲೆಯುಂ ಮೊಲನುಂ ಪಂದಿಯುಂ ತೋೞನುಂ [5]ಸೀ[5]ನಾಱ್ಯುಂ [6]ಮತ್ತಮೆತ್ತುಕತ್ತೆಯುಂ ಪಶುವುಮೆರ್ಮೆಯುಂ ಕುದುರೆನಾಯೊಟ್ಟೆಯುಮುಡುವುಂ ಪಾವುಮಿಲಿಯುಂ ಬೆರ್ಕುಮೊಂತಿಯುಂ ಕಪ್ಪೆಯುಂ ಮುಂಗುರಿಯುಂ[6] ಮೊದಲಾಗೊಡೆಯ [7]ಸ್ಥಲಚರಂಗಳುಂ[7] ಮೀನುಂ ಮೊಸಳೆಯುಂ ನೆಗಳುಮಾಮೆಯುಂ ಮಕರಮುಂ ತಿಮಿತಿಮಿಂಗಿಳಂ ಮೊದಲಾಗೊಡೆಯ ಜಲಚರಂಗಳುಂ ಕಾಗೆ ಗೂಗೆ ಪರ್ದು ಚಕೋರಂ ಹಂಸೆ [8]ಕು[8]ರ್ಕು ಗಿಳಿ[9] ಪುರುಳಿ [10]ಪಂಗುರು[10] ಕಾರಂಡಮಾಂದೆ ಮೊದಲಾಗೊಡೆಯ ಗಗನಚರಂ [11]ಪಂಚೇಂದ್ರಿಯಂ[11]ಗಳುಮಾಗಿ ಮತ್ತಮೇಕೇಂದ್ರಿಯ ದ್ವೀಂದ್ರಿಯ ತ್ರೀಂದ್ರಿಯ ಚತುರಿಂದ್ರಿಯಂಗಳಾಗಿ ತಿರಿಕಗತಿಯೊಳ್ ಪುಟ್ಟಿ ಜೀವಂಗಳಿಂತು ಮಾಡಿದ ಪಾಪದ ಫಲಂಗಳಿಂದಂ ದುಃಖಂಗಳನೆಯ್ದುಗುಂ ||ವಾಕ್ಯ|| ಮಿಸ್ಸೇಣ ಮಾಣುಸತ್ತಮೆಂಬುದು ಪುಣ್ಯಪಾಪಂಗಳೆರಡುಮಂ ನೆಗೞ್ವರ್ ಮನುಷ್ಯಗತಿಯೊಳ್ ಪುಟ್ಟಿ ಮುಂಗೆಯ್ದ ಪಾಪಕರ್ಮದುದಯದಿಂದಂ ಶಾರೀರ ಮಾನಸಾಗಂತುಕ ಸಹಜಮಪ್ಪ ದುಃಖಂಗ[12]ಳುಮ[12]ನಿಷ್ಟ ಸಂಯೋಗಮಿಷ್ಟವಿಯೋಗಮುಂ [13]ರಾ[13]ಗಶೋಕಂಗಳುಂ ದಾರಿದ್ರ್ಯಮೆಂದಿವು ಮೊದಲಾಗೊಡೆಯ ಪಱಿಂದಮಪ್ಪ ದುಃಖಂಗಳನೆಯ್ದಿ ಮತ್ತಮಾ ಜೀವಂಗಳ್ ಶುಭಕರ್ಮದುದಯದಿಂದಂ ಶ್ರೀಯುಂ ಸಂಪತ್ತುಂ ವಿಭವಮುಂ ಐಶ್ವರ್ಯಮುಮಾರೋಗ್ಯಶರೀರಂಗಳುಮಾಗಿ ಪುತ್ರ ಮಿತ್ರ ಕಳತ್ರ ಸ್ವಜನ ಬಂಧುವರ್ಗದೊಳ್ ಕೂಡಿ ಸುಖಂ ಬಾೞ್ವುದುಮಕ್ಕುಮಿಂತು

ಶ್ಲೋಕಂ|| ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ |
ಚಕ್ರವತ್ ಪರಿವರ್ತಂತೇ ದುಃಖಾನಿ ಚ ಸುಖಾನಿ ಚ ||

ಇಂತು ಮನುಷ್ಯಗತಿಯೊಳ್ ಪುಟ್ಟಿ ಸೂೞ್ಸೂೞೊಳೆ ಸುಖದುಃಖಂಗಳಂ ಜೀವಂಗಳನುಭವಿಸುಗುಮಂತೆ ಗಮ್ಮಇ ಧಮ್ಮೇಣ ದೇವಳೋಯಮ್ಮಿ ಎಂಬುದುಂ ಕೇವಳಮೆ ಧರ್ಮಂಗೆಯ್ದವರ್ ಸೌಧರ್ಮ ಈಶಾನ ಸನತ್ಕುಮಾರ ಮಾಹೇಂದ್ರ ಬ್ರಹ್ಮ ಬ್ರಹ್ಮೋತ್ತರ ಲಾಂತವ ಕಾಪಿಷ್ಠ ಶುಕ್ರ ಮಹಾಶುಕ್ರ ಶತಾರ ಸಹಸ್ರಾರ ಆನತ ಪ್ರಾಣತಾರಣಾಚ್ಯುತಮೆಂಬ ಪದಿನಾಱುಂ ಕಲ್ಪಂಗಳೊಳಮಲ್ಲಿಂ ಮೇಗಣ ಸುದರ್ಶನಾಮೋಘ ಸುಪ್ರಬುದ್ಧ ಯಶೋಧರ ಸುಭದ್ರ ಸುವಿಶಾಳ ಸುಮನಸ ಸೌಮನಸ [14]ಪ್ರೀತಿಂಕರ[14]ಮೆಂಬ ನವಗ್ರೈವೇಯಕಂಗಳೊಳಮಲ್ಲಿಂ ಮೇಗಣ ಲಚ್ಛಿ[15]ಮಹಾಲಚ್ಛಿ[15] ಮಾಳಿನಿ ವೈರೆ ವೈರೋಚನೆ ಸೋಮೆ ಸೋಮರೂಪೆ ಅಂಕೆ

1 ಬರಿಯೆ (ಘಛ). 2 + ಘೋರ (ಘಛ) 3 ಪನಿತಿ (ಘ), ಪತಿ (ಛ). 4 ರೊಯ್ಯ (ಘಛ). 5 ನೀ (ಘಚ). 6 (ಕಗ) ಗಳಲ್ಲಿಲ್ಲ. 7 ಅಡವಿ ಮೃಗಂಗಳುಂ (ಖಘಛ). 8 ಕೂ (ಘಛ). 9 + ಬಕಂ (ಘಛ) 10 ಪಿಂಗುರಿ (ಘಛ) 11 (ಘಛ) ಗಳಲ್ಲಿಲ್ಲ. 12 ಳ್ವ (ಘ). 13 ರೋ (ಗಘಛ). 14 ಸಂಪ್ರತಿಕ (ಘಛ) 15 ಲಚ್ಚಣೆ (ಛ)

[1]ಪಳಿಕೆ[1] ಅಯಿಚ್ಚೆಯೆಂಬ ನವಾನುದ್ದಿಸೆಗಳೊಳಮಲ್ಲಿಂ ಮೇಗಣ ವಿಜಯ ವೈಜಯಂತ ಜಯಂತಾಪರಾಜಿತ ಸರ್ವಾರ್ಥಸಿದ್ಧಿಯೆಂದಿಂತು ಪಂಚಾನುತ್ತರೆಗಳೊಳಮುರಡು ಘಳಿಗೆಯಿಂದೊಳಗೆ ಪಾಸಿನ ಪೊರೆಯೊಳ್ ಪುಟ್ಟಿ ಇಂದ್ರಪ್ರತೀಂದ್ರ ಸಾಮಾನಿಕ ತ್ರಯಸ್ತ್ರಿಂಶ ಪಾರಿಷದಾತ್ಮರಕ್ಷ ಲೋಕಪಾಲಾಹಮಿಂದ್ರತ್ವಮೆಂದೀ ಮಹರ್ಧಿಕ ದೇವರಾಗಿ ಅಣಿಮಾ ಮಹಿಮಾ ಲಘಿಮಾ ಪ್ರಾಪ್ತಿಪ್ರಾ[2]ಗಲ್ಭ್ಯ[2]ಮೀಶಿತ್ವ ವಶಿತ್ವ ಕಾಮರೂಪಿತ್ವಮೆಂದೀ ಅಷ್ಟಗುಣೈಶ್ವರ್ಯಂಗಳೊಳ್ ಕೂಡಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿತ್ವಮುಂ ಸುಗಂಧಮಪ್ಪ ಶ್ವಾಸನಿಶ್ವಾಸಂಗ[3]ಳು[3]ಮನೊಡೆಯರಾಗಿ ಆಯುಷ್ಯಾಂತಂ ಬರೆಗಂ ನವಯೌವನರಾಗಿ ಮುಪ್ಪುಮಪಮೃತ್ಯು ಮೂತ್ರ ಪುರೀಷಂಗಳುಂ [4]ಗಂಡ[4]ಕಕ್ಷಾ ಕುಕ್ಷಿಪ್ರದೇಶಂಗಳ ರೋಮಂಗಳುಂ ರೋಗ ಶೋಕ ದುಃಖಂಗಳುಂ ರಸ ರುಧಿರ ಮಾಂಸ ಮೇದೋಸ್ಥಿ ಮಜ್ಜ ಶುಕ್ಲಮೆಂದಿಂತು ಸಪ್ತಧಾತುಗ[5]ಳುಮೆಂ[5]ದಿವು ಮೊದಲಾಗೊಡೆಯವಿಲ್ಲದೋರ್ ಸಹಜಮಪ್ಪ ಕಟಕ ಕಟಿಸೂತ್ರ ಕುಂಡಲಾಭರಣಂ ಮೊದಲಾಗೊಡೆಯ ಪದಿನಾಱುಮಾಭರಣಂಗಳಂ ತೊಟ್ಟು ದಿವ್ಯ ವಸ್ತ್ರಂಗಳನುಟ್ಟಾದಿತ್ಯನ ತೇಜದಿಂದಗ್ಗಳಮಪ್ಪ ತೇಜದೊರಾಗಿ ಕಣ್ಣೆಮೆಯಿಕ್ಕುವನಿತು ಪೊೞ್ತುಪ್ಪೊಡಂ ದುಃಖಮಿಲ್ಲದೋರೆರಡು ಸಾಗರೋಪಮಂ ಮೊದಲಾಗಿ ಮೂವತ್ತುಮೂಱು ಸಾಗರೋಪಮಂಬರೆಗಮಾಯುಷ್ಯಮನೊಡೆಯರಾಗಿ ಆಟ ಪಾಟ ವಿನೋದಂಗಳಿಂದಂ [6]ದೇವಿಯರ[6]ಪ್ಸರಸಿಯರ್ಕಳೊಡನೆ ಪಲಕಾಲಂ ದಿವ್ಯಸುಖಮನನುಭವಿಸಿ ಆಯುಷ್ಯಾಂತದೊಳಿಂತಿಲ್ಲಿ ಮನುಷ್ಯಗತಿಯೊಳ್ ಕುರುವಂಶ [7]ಭೋಜವಂಶ[7]ಮಿಕ್ಷ್ವಾಕುವಂಶ ನಾಥವಂಶ ಹರಿವಂಶಮುಗ್ರವಂಶಂ ಸೂರ್ಯವಂಶ ಸೋಮವಂಶ[7] ಮಯೂರವಂಶ ನಂದವಂಶ[7]ಮೆಂದಿವು ಮೊದಲಾಗೊಡೆಯ ಉತ್ತಮಕುಲದೊಳ್ ಶ್ರಾವಕರ ಬಸಿಱೊಳ್ ಪುಟ್ಟಿ ಪೂರ್ವಕೋಟಿ ಪರಮಾಯುಷ್ಯಮನೊಡೆಯರಾಗಿ* ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿತ್ವದೊಳ್ ಕೂಡಿ ಏಕಚ್ಛತ್ರಚ್ಛಾಯೆಯಿಂದಂ ಪೃಥ್ವಿಯೆಲ್ಲಮನಾಳ್ದು ಪಶ್ಚಾತ್ಕಾಲದೊಳೇನಾನುಮೊಂದು ವೈರಾಗ್ಯ ಕಾರಣಮಾಗಿ ಮಗಂಗೆ ರಾಜ್ಯಪಟ್ಟಂಗಟ್ಟಿ ಬಾಹ್ಯಾಭ್ಯಂತರ ಪರಿಗ್ರಹಂಗಳೆಲ್ಲಮಂ ತೊಱೆದೆಲ್ಲರೊಳ್ ನಿಶ್ಶಲ್ಯಂಗೆಯ್ದು ತಪಂಬಟ್ಟು ಘೋರವೀರತಪಶ್ಚರಣಂಗೆಯ್ದು ಉತ್ಕೃಷ್ಟದಿಂದಂ ಮೂಱು ಭವಂಗಳೊಳ್ ಮಧ್ಯಮದಿಂದಮಯ್ದು ಭವಂಗಳೊಳ್ ಕನಿಷ್ಠದಿಂದೇೞು ಭವಂಗಳೊಳಗೆ ಅಷ್ಟವಿಧ ಕರ್ಮಂಗಳಂ ಕಿಡಿಸಿ[8] ಮೋಕ್ಷಮನೆಯ್ದುವರ್ ದೊಣ್ಣಂಪಿ ಖಯೇಣ ಣಿವ್ವಾಣಂ ಎಂದು ತಪದಿಂದಂ ಶುಭಾಶುಭ ಕರ್ಮಮೆಂದಿರ್ತೆಱದ ಕರ್ಮದ ಕೇಡಿನಿಂದಂ ಮೋಕ್ಷಮನೆಯ್ದುವರಂತಪ್ಪ ಮೋಕ್ಷಮೆಂತೆಂದೊಡೆ ಜಾತಿಜರಾಮರಣಂಗಳುಂ ಭಯಮುಮನಿಷ್ಟಸಂಯೋಗಮುಮಿಷ್ಟವಿಯೋಗಮುಂ ಶಾರೀರಮಾನಸಾಗಂತುಕ ಸಹಜಮಪ್ಪ

1 ಪಳಿಕೆ (ಕ), ವಳಿಂಕೆ (ಘಛ). 2 ಕಾಮ್ಯ (ಘಛ). 3 ಳ್ರ (ಸ) 4 ಗಡ್ಡಮುಂ (ಕಖಗ), ಗುಂಡ (ಘ) 5 ಳ್ರಂ (ಘಛ). 6 ಗಣಿಕೆಯರ (ಘ), ದೇವಗಣಿಕೆಯರ (ಛ). 7 (ಘಛ) ಗಳಲ್ಲಿಲ್ಲ. * ಪು. ೯೧–೯೩* (ಚ) ದಲ್ಲಿ ನಷ್ಟವಾಗಿದೆ. 8 + ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾಧಿಸಿ (ಘಚಛ).

ದುಃಖಂಗಳುಂ ಆಹಾರ ಭಯ ಮೈಥುನ ಪರಿಗ್ರಹಂಗಳುಂ ವಾತ ಪಿತ್ತ ಶ್ಲೇಷ್ಮ ಕಾಸ ಶ್ವಾಸ ಜ್ವರಾರುಚಿ ಛರ್ದ್ಯತಿಸಾರಾಕ್ಷಿ ಕುಕ್ಷಿವೇದನಾಸ್ಫೋಟಕ ಶೂಲ ಭಗಂದರ ಕುಷ್ಠ ಕ್ಷಯ ಗಂಡ ಶಿರೋವೇದನೆಯುಮೆಂದಿವು ಮೊದಲಾಗೊಡೆಯ ಅಯ್ದು ಕೋಟಿಯುಮಱುವತ್ತೆಂಟು ಲಕ್ಕೆಯುಂ ತೊಂಬತ್ತೊಂಬಯ್ ಸಾಸಿರ[1]ದ ಇನ್ನೂ[1]ಱೆ[2]ಣ್ಬ[2]ತ್ತು ನಾಲ್ಕು ವ್ಯಾಧಿಗಳುಂ ಕ್ರೋಧ ಮಾನ ಮಾಯಾ [3]ಲೋ[3]ಭಂಗಳುಂ ರಾಗ ದ್ವೇಷ ಮೋಹಂಗಳ್ [4]ಮಗುಳ್ದು ಮಗುಳ್ದು[4] ಬರವುಂ ಶೋಕ[5]ಮೆಂದಿವು[5] ಮೊದಲಾಗೊಡೆಯ ದುಃಖಂಗಳಿಲ್ಲದುದನುಪಮಾರಹಿತಮಪ್ಪುದನಳಿವಿಯಿಲ್ಲದುದ ನಾವಕಾಲಮುಂ ಕಿಡದುದಂ ವಾಪದಂ ಪೊರೆಯದುದಂ ಸುಖಮನೊಡೆ[6]ತ[6]ಪ್ಪುದಂ ತಪ್ಪಿಂ [7]ತಾನಾದುದನಂ[7]ತಪ್ಪ ಮೋಕ್ಷಸುಖಮನೆಯ್ದಿ ಅನಂತಜ್ಞಾನ ಅನಂತದರ್ಶನ ಅನಂತವೀರ್ಯ ಅನಂತಸುಖಮೆಂಬ ಅನಂತಚತುಷ್ಟಯದೊಳ್ ಕೂಡಿ ಲೋಕಾಲೋಕಮನೆಲ್ಲಮನೊರ್ಮೊದಲೆ ಕಾಣುತ್ತಮಱಿಯುತ್ತು[8]ಮನಂತಕಾಲಂ ಮೋಕ್ಷದೊಳಿರ್ಪರೆಂಬುದುಮಂ ಅಭಯಘೋಷ ಭಟಾರರ್ ಲಲಿತಘಟೆಗೆ ಧರ್ಮಶ್ರವಣಂಗೆಯ್ದು ಕೇಳ್ದು

ಶ್ರೀವ[9]ರ್ಧನಂ[9] ಮೊದಲಾಗಿ ಅನಿಬರುಂ ಪಶ್ಚಾತ್ತಾಪಮಾಗೆ ಪಂಚಮಹಾಪಾತಕರಮುಂ ಪೊಲ್ಲಕೆಯ್ದುಮುಂ ಭಟ್ಟಾರರಂ [10]ಕೊಂದೆಮುಮ[10]ವರ್ [11]ತಪದ ಮಾಹಾತ್ಮ್ಯದಿಂದಂ ಬರ್ದುಂಕಿದರೆಂದನಿಬರುಂ ಮನದೆ ಬಗೆದೀ ಗೆಯ್ದ ಪಾಪಮಿಂತಲ್ಲದೆ ಪಿಂಗದವರ ಕಾಲಡಿಗಳನೆಮ್ಮ ತಲೆಗಳೆಂಬ ತಾಮರೆಯ ಪೂಗಳಿಂದರ್ಚಿಸಿದೊಡಲ್ಲದೆ ಪಾಪಂ ಪಿಂಗದೆಂದು ಬಗೆದು ಕೈದುಗಳತ್ತ ಕೈಯಂ ನೀಡಲ್ ಬಗೆವನ್ನೆಗಂ ಭಟ್ಟಾರರ್ ಪಾರಿಸದರಂತು ಬಗೆಯಲ್ವೇಡೆಂದೊಡೆ ಶ್ರೀವರ್ಧನ ಕುಮಾರ ನಾಮೇನಂ ಬಗೆದೊಮೆಂದೊಡೆ ನೀಮುಂ ನಿಮ್ಮ ತಲೆಗಳನರಿದೆಮ್ಮ ಕಾಲಡಿಗಳನರ್ಚಿಸು[12]ವಮೆಂ[12]ದು ಬಗೆದಿರೆಂದೊಡಿಂತು ಮನದೆ ಬಗೆದುದನಾರಾನುಮಱಿ[13]ವ[13]ರೊಳರೆ ಎಂದನಿಬರುಂ ಚೋದ್ಯಂಬಟ್ಟು ಭಟ್ಟಾರರ್ಗೆಱಗಿ ಪೊಡೆವ[14]ಟ್ಟು[14] ಶ್ರೀವರ್ಧನ ಕುಮಾರನೆಂದಂ ಭಟ್ಟಾರಾ ನಿಮ್ಮಡಿಯನೆಮ್ಮ ತಲೆಗಳಿಂದರ್ಚಿಸ[15]ದಾಗಳೆಮ್ಮ [16]ಗೆಯ್ದ[16] ಪಾಪಮೆಂತು ಕಿಡುಗು[17]ಮೆಂದೊಡಾ ಪಾಂಗಿನಿಂ ಕಿಡದೆನೆಯಂ[17] ತಪ್ಪೊಡೆ ದೀಕ್ಷೆಯುಂ ದಯೆಗಯ್ಯಿಮೆಂದೊಡೆ ಭಟಾರರೆಂದರೊಳ್ಳಿತ್ತಂ ಬಗೆದಿರ್ ನಿಮಗೆಲ್ಲರ್ಗಂ ಕಿಱಿದೆಯಾಯುಷ್ಯಮೆಂದೊಡೆ

ಶ್ರೀವರ್ಧನ ಕುಮಾರನ ತಮ್ಮಂ ಮೂವತ್ತಿರ್ವರಿಂ ಕಿಱಿಯೊಂ ನಂದಿಮಿತ್ರ[18]ನೆಂಬೊಂ ಭಟಾರರ ಮಾತಂ ಕೇ[19]ಳ್ದು ನಕ್ಕಿಂತೆಂದನಾಮೆಲ್ಲಂ ಕೂಸು

---

[1] ದ್ಯೈನೂ (ಘಚಛ). [2] ಳ್ಸ (ಘಛ), ಪ್ಪ (ಚ). [3] ಲಾ (ಕಖಗ). [4] (ಘಚಛ). ಗಳಲ್ಲಿಲ್ಲ. [5] ಮುಮಾವ ಬಾಧೆಗಳ್ ಇಂತಿವು (ಕಖಗ). [6] ಯ (ಖ) [7] ದಯಾದುದಂ (ಕಖಗ). [8] + ಮನಂತಸುಖಮುಮನಂತವೀರ್ಯಮನೊಡೆಯರಾಗಿ (ಕಖಗ), + ಮಷ್ಟಗುಣೋಪೇತರಾಗಿ (ಘಚಛ). [9] ಧರ್ಮಾನ ಕುವಾರಂ (ಘಛ), ರ್ಮ ಕುಮಾರಂ (ಚ). [10] ಕೊಲ್ಲೂಡರ್ಚಿದೆವಿ (ಘಚಛ). [11] + ತಮ್ಮ (ಘಚಛ) [12] ವೆಪೆಂ (ಕಗ), ವೆನೆಂ (ಖ), ವಮೆಂ (ಘಛ) [13] ದ (ಕಖಗ). [14] ಟ್ಟರಲ್ಲಿಂ (ಕಖಗ) [15] + ಲ್ ಪಿರಿ (ಕಖಗ). [16] ಒಗೆದ (ಘಚಛ) [17] ಮಂ (ಕಖಗ). [18] + ಕುಮಾರ (ಘಚಛ). [19] ಳ್ದಂತಪ್ಪೊಡೆ ಭಟಾರಾ (ಘಚಛ).

ಗ[1]ಳೆಮುಂ[1] ಸಮಯೌಷಸ[2]ರೆಮುಂ[2] ತೇಜದೊಳಂ [3]ಸತ್ವದೊಳಂ[3] ಬಲಪರಾಕ್ರಮ ದೊಳಂ ಕೂಡಿದೆಮೆಮಗೆಲ್ಲೊಗ್ಗಱಂ ಕಿಱಿದೆಯಾಯುಷ್ಯಮೆಂಬುದಸಂತು ಸಂಬಲಕ್ಕು ಮೆಂದೊಡೆ ಭಟಾರರೆಂದರ್ ನೀಮೇಕೆ ಸಕ್ಷಪ್ಪೆಯಮ್ಮಾ ನಿಮಗೆಲ್ಲಗ್ಗಱಮಿಪ್ಪರ್ ತ್ತೊಂದು ದಿವಸಮಾಯುಷ್ಯಂ ನೀರದೆಸೆಯಿಂ[4]ದಂ ನಿಮಗೆ[4] ಸಾವಕ್ಕುಮೆಂದೊಡೆ ಶ್ರೀವರ್ಧನ ಕುಮಾರನೆಂದಂ ಭಟಾರಾ [5]ಎ[5]ಮಗಿಪ್ಪತ್ತೊಂದು ದಿವಸಮಾಯುಷ್ಯ ಮೆಂಬುದರ್ಕೆ ಸಾಭಿಜ್ಞಾನಮೇನೆಂದು ಬೆಸಗೊಂಡೊಡೆ ಭಟಾರರೆಂದರ್ ನೀ[6]ಮಾಗಳ್[6] ಪೊೞಲ್ಗೆ ಪೋ[7]ಪಾಗಳ್[7] ನಿಮ[8]ಗೆರಪ್ಪಾಕ್ಕೆ[8]ಳಿಂಗ ನಾಗಂಗಳ್ ಪೆಡೆಗಳನೆತ್ತಿನಾಲಗೆ ಗಳಂ ಪೊಳೆಯಿಸುತ್ತಂ ಬಂದೊಡೆ ನೀ[9]ಮೊದಱಿಯ[9]ಮಂ ಬಗ್ಗಿಸಿದೊಡದೃಶ್ಯಂಗಳಾಗಿ ಪೋಕುಮಿದೊಂದು ಸಾಭಿಜ್ಞಾನಂ ಮತ್ತಂತೆ ಪೋಪಾಗಳೊಂದು ಕಿಱುಗೂಸು [10]ಕೋ[10]ಲಂ ಪಿಡಿದು ನಿಮ್ಮಂ ಬಡಿಯಲ್ಕೆಂದು ಬಂದೊಡದಱ [11]ಕೆಯ್ತ[11]ಮಂ ಕಂಡು ನೀಮುಂ ನಕ್ಕೊಡೆ ನಿಮ್ಮ ನೋಡನೋಡೆ ಭಯಂಕರಮಪ್ಪ ಪಿರಿದೊಂದು ಬೇತಾಳ ರೂಪಂ ಕೈಕೊಂಡಾಕಾಶಂಬರೆಗಂ ಬಳೆದದೃಶ್ಯಮಕ್ಕುಮಿದೊಂದು ಸಾಭಿಜ್ಞಾನಂ ಮತ್ತಂತೆ ಪೋಪನ್ನಗಂ ತೊಱೆ ತೀವುಗುಮಿದೊಂದು ಸಾಭಿಜ್ಞಾನಂ ಮತ್ತಮಿಂದಿ ನಿರುಳ್ ನಿಮ್ಮ ತಾಯ್ ನಿಮ್ಮ ಮೂವತ್ತಿರ್ವರುಮಂ ರಾಕ್ಷಸಂ ನುಂಗಿ ತಿಂಬುದಂ ಕನಸು[12]ಗಂಡು ಪೇೞ್ವ[12]ಮಿದೊಂದು ಸಾಭಿಜ್ಞಾನಮೆಂದು[13] ಪೇೞ್ದೊಡೆ

ಅನಿಬರುಂ ಭಟಾರರಂ ಬಂದಿಸಿ ತಮ್ಮ ಪೊೞಲ್ಗೆ ಪೋಪಾಗಳ್ ಭಟಾರರ್ ಪೇೞ್ದುದೆಲ್ಲಮಂ ಪೇೞ್ದ ಪಾಂಗಿನೊಳೆ ಬಟ್ಟೆಯೊಳ್ ಪೋಗುತ್ತುಂ ಕಂಡು ಪ್ರತ್ಯಕ್ಷ ಮಾಗಿ ಪತ್ತಿರುಳ್ ತಮ್ಮ ಮೂವತ್ತಿರ್ವರುಮಂ ರಾಕ್ಷಸಂ ನುಂಗಿದುದಂ ತಾಯ್ ಕನಸುಗಂಡುದಂ ತಮಗೆ ನೇಸರ್ಮೂಡೆ ಪೇೞ್ದೊಡೆ ನಂಬುಗೆಯಾಗಿ ಉಬ್ಬೆಗಂ [14]ಬ[14]ಟ್ಟೆಂತಿರ್ಪನ್ನೆಗಂ ವರ್ಧಮಾನ ಭಟ್ಟಾರರ ತೀರ್ಥಂ ವಿಹಾರಿಸುತ್ತಂ ಕೌಶಂಬಿಗೆ ವಂದೊಡೆ ಲಲಿತಘಟೆ ಪಿರಿದರ್ಚನೆಯುಂ ಕೊಂಡುಪೋಗಿ ಭಟಾರರನರ್ಚಿಸಿ ಬಂದಿಸಿ ಧರ್ಮಶ್ರವಣಾನಂತರ[15]ಮಿಂತೆಂದು ವರ್ಧಮಾನ ಭಟ್ಟಾರರಂ ಬೆಸಗೊಂಡಂ ಭಟಾರಾ ಎಮಗಾಯುಷ್ಯಮೆನಿತುಂಟೆಂ[16]ದು ಬೆಸಗೊಂಡೊ[16]ಡೆ ಭಟಾರರೆಂದರ್ ನಿಮಗನಿ ಬರ್ಗಂ ಕಿಱಿದೆ ಆಯುಷ್ಯಮೆಂದು ಪೇೞ್ದೊಡಾ[17]ಮೇನೊ[17] ಭವ್ಯರೆಮೊ ಅಭವ್ಯ ರೆಮೊ [18]ಎಂದು ಬೆಸಗೊಂಡೊಡೆ[18] ನೀಮೆಲ್ಲಂ ಭವ್ಯರಿರ್ ಭವ್ಯರಿರಾದೊಡಂ [19]ಪರಮ ಶುದ್ಧ ಸಹಜ[19] ದರ್ಶನ ಜ್ಞಾನಚಾರಿತ್ರಂಗಳಂ ಕೈಕೊಂಡು ನೆಗೞ್ದಲ್ಲದೆ ಮೋಕ್ಷಮಾಗದೆಂ[20]ತು[20] ಸ್ವರ್ಣಪಾಷಾಣದೊಳ್ ಸುವರ್ಣಮುಂಟಾಗಿಯುಂ ದಹನ

1 ಳೆಂ (ಖಘಚ), ಳುಂ (ಗ). 2 ರೆಂ (ಘಚ), ದೊಳಂ (ಛ). 3 (ಘಚಛ) ಗಳಲ್ಲಿಲ್ಲ. 4 (ಘಚಛ) ಗಳಲ್ಲಿಲ್ಲ. 5 ನ (ಕಖಗ). 6 ಮುಂಮಗುಳ್ದು (ಘಚಛ). 7 ಗುತ್ತಂ (ಖ), ಗುತ್ತಮಿರೆ (ಘಚಛ). 8 ಗಿದಿರನೇೞುಕಾ (ಘಚ), ಗಿದಿರೇೞುಕಾ (ಛ). 9 ಮೆಳಱಿಮ (ಘ), ಮೆಲ್ಲಱಿಯದ (ಛ) 10 ಕಾ (ಸ–ಚ). 11 ಕೆಯ್ಯು (ಕಖಗ) 12 ಗಾಣ್ಬಂ (ಘಚಛ) 13 + ಭಟಾರರ್ ಪೇೞ್ದರ್ (ಕಖಗ). 14 ಪು (ಘಚ). 15 +ಂ ಲಲಿತಘಟೆ ಶ್ರೀವರ್ಧಮಾನ ಭಟ್ಟಾರಕರನಿಂ (ಘಚಛ) 16 ದೊ (ಘಚಛ). 17 ಮುಂ (ಘಚಛ) 18 ಪೇೞಿಮೆನೆ (ಚ). ಎಂದೊಡೆ (ಘಾಕ). 19 ಸಮ್ಯಗ್ (ಚ). 20 ದು (ಕಖಗ).

ತಾಪಸ ಪಿಂಡಿಬದ್ಧನಾದಿ ಕ್ರಿಯೆ[1][ವ]ೞ[1]ದನ್ನೆಗಂ ಪೊನ್ನಾಗದಂತೆ ತಪದಿಂದಲ್ಲದೆ ಮೋಕ್ಷಮಾಗದೆಂ[2]ದು ಪೇೞ್ದೊಡನಿಬರುಂ[2] ವರ್ಧಮಾನ ಭಟ್ಟಾರಗ್ಗೆ ಶಿಷ್ಯರಾಗಿ ತಪಂಬಟ್ಟು ಪಂಚಮಹಾವ್ರತಂಗಳನೇಱಿಸಿಕೊಂಡು ಪ್ರಾಯೋಪಗಮನದ [3]ಮರಣದ[3] ವಿಧಾನಮಂ ಬೆಸಗೊಂಡೊಡೆ ಭಟಾರರಿಂತೆಂದು ಪೇೞ್ದರ್ :

ಶ್ಲೋಕ || ಸ್ಥಿತಸ್ಯ ವಾ ನಿಷಣ್ಣಸ್ಯ ಯಾವತ್ ಸುಪ್ತಸ್ಯ ವಾ ಪುನಃ |
ಸರ್ವಾಭೀಷ್ಟಪರಿತ್ಯಾಗಃ ಪ್ರಾಯೋಪಗಮನಂ ಸ್ಮೃತಂ ||

ಇಂತುಟಾ ಪ್ರಾಯೋಪಗಮನದ ಲಕ್ಷಣಮೆಂದು ಭಟಾರರ್ ವಕ್ಕಾಣಿಸಿ ಪೇೞೆ ಕೇಳ್ದುಱಿದು

ಲಲಿತಘಟೆಯನಿಬರುಂ ಭಟಾರರ ಪಕ್ಕದೆ ಚತುರ್ವಿಧಮಪ್ಪಾಹಾರಮುಂ ಶರೀರಮುಮಂ ಯಾವಜ್ಜೀವಂ[4] ತೊಱೆದು ಭಟಾರರಂ ಬಂದಿಸಿ ಪೋಗಿ [5]ವಿಶಾಳೆಯೆಂಬ ತೊಱೆಯ[5] ತಡಿಯೊಳ್[6]ನಿಬರುಮೇಕಪಾರ್ಶ್ವದೊಳ್[6]ಪಟ್ಟಿರ್ದು ಕೈಯುಂ ಕಾಲುಮನಾ[7]ಡಿ[7]ಸದೊಂದು ಕೆಲದಿಂದೊಂದು ಕೆಲಕ್ಕೆ ಮಗುೞದೆ ಕುಳ್ಳಿರದೆ ನಿಂದಿರದೆ ನುಡಿಯದೆ ಕಣ್ಗಳಂ ನೋಡದಿಂತು ಪ್ರಾಯೋಪಗಮನಂಗೆಯ್ದು ಪದಿನಯ್ದು ದಿವಸಂ ಮೆಯ್ಯಂ ತೊಱೆದಿರ್ದೋರನ್ನೆಗಂ ಮೇಗೆ ಪಿರಿದೊಂದು ಮೞೆ ಕೊಂಡು ಪೂರಂ ಬಂದವರನಡೆದುಕೊಂಡು ಪೋಗಿ ಪಿರಿದೊಂದು ಮಡುವಿನೊಳಿಕ್ಕಿದೊಡೆ ನೀರೊಳಗಿರ್ದು[8] ಮೋಹಿಸದ ಬುದ್ಧಿಯನೊಡೆಯರಾಗಿ ದೇವರಂ ಜಾನಿಸುತ್ತಂ ಪಂಚನಮಸ್ಕಾರಮಂ ಮನದೊಳುಚ್ಚಾರಿಸುತ್ತಂ ಶುಭಧ್ಯಾನದೊಳ್ ಪರಿಣತರಾಗಿ [9]ದರ್ಶನ ಜ್ಞಾನ ಚಾರಿತ್ರಂಗಳನಾರಾಧಿಸಿ[9] ಮುಡಿಪಿ [10]ಅಯ್ನೂ[10]ರ್ವರುಂ ವೈಜಯಂತಮೆಂಬ ಪಂಚಾನುತ್ತರೆಯೊಳುತ್ಕೃಷ್ಟಮಪ್ಪ ಮೂವತ್ತುಮೂಱುಸಾಗರೋಪಮಾಯುಷ್ಯಮನೊಡೆಯರೇಕಹಸ್ತಪ್ರಮಾಣ[11]ಶ್ವೇತ[11] ವರ್ಣದೊಳಹಮಿಂದ್ರ ದೇವರಾಗಿ ಪುಟ್ಟಿದರ್

ಮತ್ತಂ ಪೆಱರುಂ ರತ್ನತ್ರಯಂಗಳನಾರಾಧಿಸುವಾರಾಧಕರ್ಕಳುಂ ಲಲಿತಘಟೆಯಂ ಮನದೊಳ್ ಬಗೆದು ಚತುರ್ವಿಧಮಪ್ಪುಪಸರ್ಗಮುಂ ಪಸಿವುಂ ನೀರಡ್ಕೆ ಮೊದಲಾಗೊಡೆಯವಿಪ್ಪತ್ತೆರಡು ಪರೀಷಹಂಗ[12]ಳಂ[12] ಸೈರಿಸಿ ಶುಭಪರಿಣಾಮದಿಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳ[13]ನಾರಾ[13]ಧಿಸಿ[14] ಸ್ವರ್ಗಾಪವರ್ಗಸುಖಂಗಳನೆಯ್ದುಗೆ

---

[1] ವಿರ (ಕಖಗ), ವಿಱ (ಘ), ವಿಜ (ಚಛ). [2] ಬುದುಂ (ಘಚಛ). [3] (ಘಚಛ) ಗಳಲ್ಲಿಲ್ಲ. [4] + ಬರೆಗಂ (ಘಚಛ) [5] ಜಗ್ಗಿಯ (ಘಚಛ). [6] ಯಾಲ್ವರುಮೊಂದುಕೆಲದೊಳ್ (ಘಚಛ). [7] ಟಿ. (ಛ). [8] +ಂ (ಚಛ) [9] ರತ್ನತ್ರಯಮಂ ಸಾಧಿಸಿ ಸಮಾಧಿ ವಿಧಿಯಿಂ (ಚ). [10] ಮೂವತ್ತಿ (ಘಚಛ) [11] ಸ್ಫೀತ (ಕ). [12] ಳ್ಮಂ (ಘಛ) ಳುಮಾ (ಚ). [13] ಳಂ ಸಾ (ಘಚಛ). [14] + ಮುಡಿಪಿ (ಚ).

(೮) ಧರ್ಮಘೋಷ ಭಟಾರರ ಕಥೆ

ಧರ್ಮಘೋಷ ಭಟಾರರ ಕಥೆಯಂ ಪೇಳ್ವಂ :

ಗಾಹೆ || ಚಂಪಾಏ ಮಾಸಖವಣಂ ಕರಿತ್ತು ಗಂಗಾತಟಮ್ಮಿ ತಣ್ಹಾಏ |
ಘೋರಾಏ ಧಮ್ಮಘೋಸೋ ಪಡಿವಣ್ಣೋ ಉತ್ತಮಂ ಅಟ್ಠಂ ||

[ಚಂಪಾಏ—ಚಂಪೆಯೆಂಬ ಪೊೞಲೊಳ್, ಮಾಸಖವಣಂ ಕರಿತ್ತು—ಮಾಸೋಪವಾಸಂಗೆಯ್ದು, ಗಂಗಾತಟಮ್ಮಿ—ಗಂಗಾಮಹಾನದಿಯ ತಡಿಯೊಳ್, ತಣ್ಹಾಏ—ನೀರಡ್ಕೆಯಿಂದಂ, ಘೋರಾಏ—ಆದಮಾನುಂ ಕಡಿದಪ್ಪುದಱಿಂದಂ, ಧಮ್ಮಘೋಸೋ—ಧರ್ಮಘೋಷನೆಂಬ ಭಟ್ಟಾರಕಂ, ಪಡಿವಣ್ಣೋ—ಪೊರ್ದಿದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ [1]ಕೌಶಂಬ[1]ಯೆಂಬುದು ನಾಡಲ್ಲಿ ವಾರಣಾಸಿಯೆಂಬುದು ಪೊೞಲದನಾಳ್ವೊಂ ಕೀರ್ತಿಧರನೆಂಬೊನರಸನಾತನ[2] ಮಹಾದೇವಿ[3]ಯರ್ಕಳ್ ಅರತಿ ರತಿಯೆಂಬೊರಾ[3] ಇರ್ವರ್ಗಂ ಮ[4]ಕ್ಕ[4]ಳ್ ಧರ್ಮಘೋಷನುಂ ಧರ್ಮಕೀರ್ತಿಯುಮೆಂಬೊರಂತವರ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಂ [5]ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ[5] ವಿಹಾರಿಸುತ್ತಂ ಬರ್ಪೊರಾ ವಾರಣಾಸಿಗೆ ವಂದು ಬಹಿರುದ್ಯಾನ ವನದೊಳ್ ಸ್ಫಟಿಕಶಿಲಾತಲದ ಮೇಗೆ ಪಂಥಾತಿಚಾರ ನಿಯಮಂಗೆ[6]ಯ್ದಿರ್ದ[6] [7]ಗುಣೋತ್ತಮರೆಂಬ ಭಟಾರರಂ[7] ವನಕ್ರೀಡೆಗೆವೋದ ಧರ್ಮಘೋಷನುಂ ಧರ್ಮಕೀರ್ತಿ ಕುಮಾರನುಂ ಕಂಡು ಬಂದಿಸಿ ಭಟಾರಾ ಎಮಗೆ ಧರ್ಮಮಂ ಪೇೞಿಮೆಂದೊಡೆ ಭಟಾರರಿಂತೆಂದು ಧರ್ಮಮಂ ಪೇೞ್ದರ್ :

ವೃ || ಕೋ ಧರ್ಮ ಪ್ರವರೋ ದಯಾತ್ಮಸುಭಗಃ ಕಃ ಸ್ಯಾನ್ನರಃ ಪಂಡಿತಃ |
ಕಾ ಯೋಷಿದ್ವಶಗಾ ಕಲಿಷ್ಯಯತಿ (?) ಚೇತ್ ಕ್ರೋಧೋಽಶುಭಸ್ಯೋದಯಃ ||
ಕ್ವಾಲಕ್ಷ್ಮೀರವಿಚಾರ ಕಾರ್ಯಘಟನಾ ಕಿಂ ಮಿತ್ರಮಾತ್ಮಾತ್ಮನಃ |
ಕಿಂ ಸೌಖ್ಯಂ ಭುವಿ ಶಾಸ್ತ್ರವಾಚನಮತಿಃ ಕಾವಾ ಗತಿರ್ನಿರ್ವೃತಿಃ ||

ಸಮ್ಯಕ್ತ್ವೋತ್ತಮಹಸ್ತಿಮಸ್ತಕಗತಃ ಸುಜ್ಞಾನಕೇತುವ್ರಜೋ |
ನಾನಾಶೀಲಗುಣವ್ರತೋರುಪೃತನಃ ಸ್ವಾಧ್ಯಾಯಶಂಖಧ್ವನಿಃ ||
ಭಾಸ್ವತ್ಸಂವರ ಭೂರಿಚಾರುಕವಚೋ ನಾತೀವ ತೀಕ್ಷ್ಣಾಯುಧಃ |
ಸೇವ್ಯೋ ಧರ್ಮಮಹಾನೃಪೋ ಬುಧಭಟೈಃ ಸ್ವರ್ಮೋಕ್ಷವೃತ್ತಿಪ್ರದಃ ||

[1] ಕಾಶಿ (ಫಚಟಭ). [2] + ರಸಿ (ಫಚಟಭ). [3] ಯೆಂಬೊಳಾ (ಫಚಟಭ). [4] ಕ್ಕರ್ (ಫ). [5] ಗುಣೋತ್ತಮ ಭಟಾರರೆಂಬ ದಿವ್ಯಜ್ಞಾನಿಗಳು ನಾನಾ ದೇಶಂಗಳಂ (ಚ). [6] ಯಿದುಇಳ್ದು (ಕ), ಗೆಯಿದಿರ್ದ್ದ (ಖ) [7] (ಚ) ದಲ್ಲಿ ಇಲ್ಲ.

ಶ್ಲೋಕ || ಧರ್ಮಾರ್ಥಕಾಮಮೋಕ್ಷಾಣಾಂ ಯಸ್ಯೈಕೋಪಿ ನ ವಿದ್ಯತೇ |
ಅಜಾಗಲಸ್ತನಸ್ಯೈವ ತಸ್ಯ ಜನ್ಮ ನಿರರ್ಥಕಂ ||

ವೃ || ಯೇಷಾಂ ನ ವಿದ್ಯಾ ನ ತಪೋ ನ ದಾನಂ |
ನಾಪ್ಯೇವಶೀಲಂ ನ ಗುಣೋ ನ ಧರ್ಮಃ ||
ತೇ ಮರ್ತ್ಯಲೋಕೇ ಭುವಿ ಭಾರಭೂತಾ |
ಮನುಷ್ಯರೂಪೇಣ ಮೃಗಾಶ್ಚರಂತಿ ||

ಶ್ಲೋಕ || ಕ್ರಿಮಯಃ ಕಿಂ ನ ಜೀವಂತಿ ಭಕ್ಷಯಿತ್ವಾ ಪರಸ್ಪರಂ |
ಪರಲೋಕಾವಿರುದ್ಧೇನ ಯೋ ಜೀವತಿ ಸ ಜೀವತಿ ||
ಅಪವಾದೋ ಭವೇದ್ಯೇನ ಯೇನ ಚಾಪ್ರತ್ಯಯೋ ಭವೇತ್ |
ನರಕೋ ಗಮ್ಯತೇ ಯೇನ ತತ್ಕರ್ಮ ನ ಸಮಾಚರೇತ್ ||

ಇಂತು ಸಂಕ್ಷೇಪದಿಂ ಭಟಾರರ್ ಧರ್ಮಮಂ ಪೇೞೆ ಕೇಳ್ದಿರ್ವ್ವರ್ಗ್ಗಂ ವೈರಾಗ್ಯಮಾಗಿ ತಾಯುಮಂ ತಂದೆಯುಮಂ ಸ್ವಜನ[1] ಬಂಧುವರ್ಗಮುಮಂ ಬಿಡಿಸಿ ನಿಶ್ಶಲ್ಯಂಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂಗಳಂ ತೊಱೆದು ಗುಣೋತ್ತಮ ಭಟಾರರ ಪಕ್ಕದೆ ತಪಂಬಟ್ಟು ಪನ್ನೆರಡು ವರ್ಷಂಬರೆಗಂ ಗುರುಗಳೊಡನಿರ್ದು ಪ್ರಥಮಾನುಯೋಗ ಚರಣಾನುಯೋಗ ಕರಣಾನುಯೋಗ ದ್ರವ್ಯಾನುಯೋಗಂಗಳಂ ಕಲ್ತು ಶಾಸ್ತ್ರಪಾರ[2]ಗರಾಗಿ ಭಟಾರರಂ ಬೆಸಗೊಂಡವರನುಮತದಿಂದಿರ್ವರುಂ ಬೇಱೆವೇಱೆ ವಿಹಾರಿಸಲ್ ತಗುಳ್ದು ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಚಂಪಾನಗರಕ್ಕೆ ಪೋಗಿ ತಾಮುರೆಗೊಳದ ತಡಿಯ ಮಱ[3]ದೊಳಿರ್ವರುಂ ಮಾಸೋಪವಾಸಂಗೆಯ್ದು ಪಾರಣೆಯ ದಿವಸದಂದು ಚಂಪಾನಗರದ ಶ್ರಾವಕರ್ಕಳೆಲ್ಲಂ ನಮ್ಮ ನೋಂತುದನಱಿಯರದು ಕಾರಣದಿಂ ನಮಗೆ ಪಾರಣೆಯಂ [4]ಮಾಡ್ವಾಗಳಯಥಾಕರ್ಮದ[4] ದೋಷಂ ಸಾರ್ತರ್ಕುಮದಱಿಂ ನಾಮಿಲ್ಲಿ ಚರಿಗೆವುಗದೆ ಗಂಗೆಯ ತಡಿಯೊಳಿರ್ದ ತುಱುಪಟ್ಟಿಗೆ ಪೋಪಮೆಂದಿರ್ವರುಂ ಪೋಪರ್

ಅನ್ನೆಗಮಾ ತುಱುಪಟ್ಟಿಯುಮಲ್ಲಿಂದೆರ್ದು[5] ನಾಡೆ ಗೆಂಟು ಪೋದತ್ತು ಪೋದೊಡೆ ಧರ್ಮಕೀರ್ತಿ ಭಟಾರರ್ ಪೆಱತೊಂದು ತುಱುಪಟ್ಟಿಗೆ ಪೋದರ್ ಧರ್ಮಘೋಷ ಭಟಾರರ್ ಪೋಗಲಾಱದೆ ಗಂಗೆಯ ತಡಿ[6]ಯ[6] ಮರದ ಕೆೞಗೆ ಪಸಿವು ನೀರಳ್ಕೆಯಿಂ ಸೇದೆಗೆಟ್ಟು ಬಸಮೞಿದಿರ್ದೊರಂ ಗಂಗಾದೇವತೆ ಕಂಡನುಕಂಪೆಯುಂ ಭಕ್ತಿಯುಂ ಕಾರಣಮಾಗಿ ಸರ್ವಾಭರಣಭೂಷಿತೆಯಾಗಿ ದಿವ್ಯಮಪ್ಪ ಶ್ವೇತವಸ್ತ್ರಮನುಟ್ಟು ಸುವರ್ಣಮಯಮಪ್ಪ ಪಿರಿಯ ಕರಗಮಂ ತೆಕ್ಕನೆ ತೀವಿ ತಣ್ಣಿದುವಂ ಸುಗಂಧ[7]ಮ[7]ಪ್ಪ ನೀರ್ಗಳಂ ತಂದು ಧರ್ಮಘೋಷ ಭಟಾರರಸಿಂತೆಂದಳ್ ಭಟಾರಾ ಪ್ರಾಸುಕಮಪ್ಪ ನೀರಂ ಪೊ[8]ಟ್ಟಿದೊ[8]ಳ್ ಬಂದುದಂ ಕುಡಿದು ನಿಮ್ಮ ಸೇದೆಯ [9]ನಾಱಿಸಿಂ ನಿಮಗರಮನೆಗೆ ಪೋಗಿ ಕೂೞಂ ತಂದಪೆನನ್ನೆವರಂ[9] ನೀರಂ ಕುಡಿದು

1 + ಪರಿಜನ (ಘಚಛ). 2 ರಾವಾರ (ಘಚಛ). 3 ಸೆ (ಘಚಛ). 4 ಮಾಡುವಲ್ಲಿ ಯಾದ (ಘಚಛ) 5 + ಪೆಱತೊಂದೆಡೆಗೆ (ಘಚಛ). 6 ಯಾಲದ (ಘಚಛ). 7 ಮುಮ (ಖಘ). 8 ಳ್ತಱೊ (ಘಚಛ). 9 ನನ್ನೆಗಮಾಱಿಸಿ ಮನೆಗಪ್ಪೋಗಿ ಕೂಳುಮಂ ನಿಮಗೆ ತಂದಪ್ಪೆನನ್ನೆಗಂ (ಕಖಗ).

ತೃಷೆಯಂ ಪಿಂಗಿಸುವುದೆಂದೊಡೆ ಭಟಾರರಾಮೊಲ್ಲೆವಬ್ಬಾ ಕುಡಿಯಲ್ಕಾಗದೆಂದೊಡೆ ಗಂಗಾದೇವತೆ ಪೂರ್ವವಿದೇಹಕ್ಕೆ ಪೋಗಿ ಸೀಮಂಧರ ತೀರ್ಥಂಕರ ಪರಮ ದೇವರಂ ಕಂಡು ಬಂದಿಸಿ ಇಂತೆಂದು ಬೆಸಗೊಂಡಳ್

ಭಟಾರಾ ಒರ್ವರ್ ಋಷಿಯರ್ ನೀರಡ್ಕೆಯಿಂದಂ ಕರಂ ಸೇದೆಗೆಟ್ಟು ಬಸಮೞಿದಿರ್ದೋರಂ ಕಂಡು ಪಿರಿದೊಂದು ಪೊನ್ನ ಕರಗಮಂ ತೆಕ್ಕನೆ ತೀವಿಯಾಡಮಾಸುಂ ತಣ್ಣಿದುವುಂ ಕಮ್ಮಿದುವುಮಪ್ಪ ನೀರ್ಗಳಂ ಪೊ[1]ೞ್ತ್ರದೊ[1]ಳ್ ಕೊಂಡು ಪೋಗಿ ಕುಡಿಯಲೆಱ[2]ಯೆ ಕೊಳ್ಡ[2]ಲ್ಲೆಂದೊಡೆ ಭಟಾರರೆಂದರ್ ಪ್ರಾಸುಕಮಾದೊಡಂ ಪೊ[3]ೞ್ತ್ರದೊ[3]ಳ್ ತಂದೊಡಂ ದೇವರ್ಕಳ ದೇವಿಯರ್ಕಳ ಕೈಯೊಳ್ ಋಷಿಯರ್ಕ್ಕಳ್ಗುಣಲುಂ ಕುಡಿಯಲುಂ ತಗದು ನಿಮಗೆ ಸಮ್ಯಕ್ತ್ವಮುಂ ಪೂಜೆಯುಂ ಋಷಿಯರ್ಕಳ್ಗೆ ಪ್ರಾತಿಹಾರ್ಯಮಂಗೆಯ್ವುದುಂ ನಿಮ್ಮ [4]ಭಿಪ್ರಾಯ[4]ಮುನಿತೆಯೆಂದು ಪೇೞ್ದೊಡೆ ತೀರ್ಥಂಕರ ಪರಮ ದೇವರ ಮಾತಂ ಕೇಳ್ದು ಬೇಗಂ[5] ಗಂಗಾದೇವತೆ ಧರ್ಮಘೋಷ ಭಟಾರರ್ಗ್ಗೆ ತಣ್ಣಿತಪ್ಪ ಗಾಳಿಯುಂ ಸುಗಂಧ ಜಲವರ್ಷಮುಮಂ ಮಾಡಿದೊಡಾಪ್ಯಾಯನಮಾಗಿ ಶುಕ್ಲಧ್ಯಾನಮಂ ಧ್ಯಾನಿಸಿ[6] ಘಾತಿಕರ್ಮಂಗಳಂ ಕಿಡಿಸಿ[7] ಕೇವಲ ಜ್ಞಾನಿಯಾದೊಡೆ ಚತುರ್ವಿಧಮಪ್ಪ ದೇವನಿಕಾಯಂ ಬಂದರ್ಚಿಸಿ ಪೂಜಿಸಿ ಪೋದೊಡವರುಂ ಬೞಿಕ್ಕ ಘಾತಿಕರ್ಮಂಗಳಂ ಕಿಡಿಸಿ[7] ಮೋಕ್ಷಕ್ಕೆ ಪೋದರ್

ಮತ್ತಮವರಿಂ ಕಿಱಿಯರ್ ಧರ್ಮಕೀರ್ತಿ ಭಟಾರರ್ [8]ಪೆಱತೊಂದು ತುಱುಪಟ್ಟಿಗೆ ಪೋದೊಡಾ[8] ತುಱುಪಟ್ಟಿಯುಮಲ್ಲಿಂದೆರ್ದು ಪೆಱತೊಂದು ದೆಸೆಗೆ ನಾಡೆ ಗಂಟುಪೋದೊಡೆ ನಿರಾಶೆಯಾಗಿ ಪಸಿವುಂ ನೀರಡ್ಕೆಯಿಂದಂ ಬಾ[9]ಧಿ[9]ಸೆ ಪಟ್ಟೊರಾಗಿ [10]ಸೇದೆಗೆಟ್ಟು[10] ಬಸಮೞಿದು ಶುಭಪರಿಣಾಮಕ್ಕೆ ಸಂದೋರಂ ಮುನ್ನಿನ ದೇವತೆ ಕಂಡಱಿದು ಪ್ರತಿಬೋಧಿಸಲ್ ತಗುಳ್ದವರಂ ತಿಳಿಪಲಾಱದೆ ಮತ್ತೆ ಪೂರ್ವವಿದೇಹಕ್ಕೆ ಪೋಗಿ ಸೀಮಂಧರ ತೀರ್ಥಕರ ಪರಮಸ್ವಾಮಿಯಂ ಕಂಡು ಪೊಡೆವಟ್ಟು ಅವರ ಸಮಾವಸ್ಥೆಯೆಲ್ಲಮಂ ಭಟಾರರ್ಗ್ಗೆ ಪೇೞ್ದು ಸಮಾಧಿಸಂಧಾನೋಪಾಯಮಂ ಬೆಸಗೊಂಡೊಡೆ ಸರ್ವಜ್ಞರಿಂತೆಂದು ಪೇೞ್ದರಾಸನ್ನಭವ್ಯರ್ ಮೂಱನೆಯ ಭವದೊಳ್ ಮೋಕ್ಷಕ್ಕೆವೋಪರೆಂದು ಸೀಮಂಧರ ತೀರ್ಥಕರ ಪರಮದೇವರ್ ಪೇೞ್ದರಂಬುಮಂ ಕೇಳ್ದಾಗಳೆ ಅಶುಭಪರಿಣಾಮಮುಮಂ ತೊಱೆದು ನೀಗಿ ಶುಭಪರಿಣಾಮದೊಳ್ ಕೂಡಿ ಸಮಾಧಿಯನೊಡೆಯರಪ್ಪರ್ ನೀಂ ಬೇಗಂ ಪೋಗಿ ಪ್ರತಿಬೋಧಿಸೆಂದು [11]ಪೇೞ್ದೊಡೆ ಗಂಗಾದೇವತೆಯಂತೆಗೆಯ್ವೆನೆಂದು ಪೊಡೆವಟ್ಟು ಪೋಗಿ ಆ ಋಷಿಯ[12]ರನೆಯ್ದಿ ಇಂ[12]ತೆಂದಳ್ ಭಟಾರಾ ನೀಮೀ ಭವದಿಂ ತೊಟ್ಟು ಮೂಱನೆಯ ಭವದೊಳ್

---

1 ೞ್ತಱೊ (ಘಚಛ) 2 ಯಲ್ ಪೋದೊಡೊಲ್ಡ (ಘಛ), ಯಲ್ ಪೋದೊಡೆ ಕುಡಿದ (ಚ), ಯೆಕೊಲ್ಡ (ಖ). 3 ೞ್ತಱೊ (ಘಚಛ) 4 ಗೆಯ್ವಧರ್ಮ (ಘಚಛ) 5 + ಬಂದು (ಘಚಛ). 6 + ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ (ಘಚಛ) 7 (ಘಚಛ) ಗಳಲ್ಲಿಲ್ಲ. 8 ಪೇೞ್ದಂತೆಯೊಂದು (ಘ) ಪೇೞ್ದಂತೊಂದು (ಚ), ಪೇೞ್ದಂತೆ ಬಂದು (ಛ) 9 ರಿ (ಚ), ಡಿ (ಛ). 10 ದೆಸೆಗೆಡೆ (ಛ) 11 + ಗಣಧರ ದೇವರ್ (ಘಚಛ). 12 ಗ್ಗೆಂ (ಘಚಛ).

ಕರ್ಮಕ್ಷಯಂಗೆಯ್ದು ಕೇವಳ ಜ್ಞಾನಿಯಾಗಿ ಮೋಕ್ಷಕ್ಕೆ ಪೋದಪರೆಂದು ಸೀಮಂಧರ ತೀರ್ಥಕರ ಪರಮದೇವರ್ ಪೇೞ್ದರೆಂದೊಡಾ ಮಾತಂ ಧರ್ಮಕೀರ್ತಿ [1]ಭಟಾರರ್[1] ಕೇಳ್ದು ಉನ್ಮಾರ್ಗ[2]ದಿಂದಂ[2] ಮನಮುಸುಡುಗಿ ಸನ್ಮಾರ್ಗದೊಳ್ ನಿಱಿಸಿ :

ಗಾಹೆ॥ ಹಾ ದುಟ್ಠು ಕಯಂ ಹಾ ದುಟ್ಠು ಕಾರಿಯಂ ಹಾ ದುಟ್ಠು ಅಣುಮೋದಿಯಂ ।
ಜೀವೋ ಅಂತೋ ಅಂತೋ ದಜ್ಝಇ ಪಚ್ಛತ್ತಾವೇಣ ವೇವಂತೋ ॥

ಎಂದು ಪೊಲ್ಲದಂ ಬಗೆದೆನೆಂದು ತನ್ನಂ ತಾಂ ಪೞಿಯುತ್ತಂ ಸೀಮಂಧರ ಸ್ವಾಮಿಗಳ ನಾಮಗ್ರಹಣಂ[3]ಗೊಂಡಾಗಳ್ ಶುಭಪರಿಣಾಮದಿಂ ಪಿಂಗಿ ಶುಭಶುದ್ಧ ಪರಿಣಾಮದೊಳ್ ಕೂಡಿ ಮಿಕ್ಕ ರತ್ನತ್ರಯಂಗಳನಾರಾಧಿಸಿ ಪದಿನಾಱನೆಯ ಕಲ್ಪದೊಳ್ ಉತ್ಕೃಷ್ಟಮಪ್ಪ ಇಪ್ಪತ್ತೆರಡು ಸಾಗರೋಪಮಾಯುಷ್ಯಮನೊಡೆಯೊನಚ್ಯುತೇಂದ್ರನಾಗಿ ಪುಟ್ಟಿದಂ

ಮತ್ತಂ ಪೆಱರುಮಾರಾಧಕರಪ್ಪವರ್ಗಳ್ ಧರ್ಮಘೋಷ ಭಟಾರರಂ ಮನದೊಳ್ ಬಗೆದು ಪಸಿವುಂ ನೀರಡ್ಕೆ ಮೊದಲಾಗೊಡೆಯ ಪರೀಷಹಂಗಳಂ ಸೈರಿಸಿ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

[1] ರಿಸಿಯರ್ (ಕಙಗ). [2] ಕ್ಕೆ ಸಂದ (ಘಚಛ). [3] ಗೊಳಲೊಡನ (ಘಚಛ)

(೯) ಸಿರಿದಿಣ್ಣನೆಂಬ ಭಟ್ಟಾರರ ಕಥೆ

ಸಿರಿದಿಣ್ಣ[1]ಭಟಾರರ[1] ಕಥೆಯಂ ಪೇೞ್ವೆಂ :

ಗಾಹೆ || ಸೀದೇಣ ಪುವ್ವವೇರಿಯ ದೇವೇಣ ವಿಗುವ್ವಿದೇಣ ಘೋರೇಣ |
ಸಂಸಿತ್ತೋ ಸಿರಿದಿಣ್ಣೋ ಪಡಿವಣ್ಣೋ ಉತ್ತಮಂ ಅಟ್ಠಂ ||

[ಸೀದೇಣ—ಅಯ್ಕುಳಿಂದಂ, ಪುವ್ವವೇರಿಯ ದೇವೇಣ—ಮುನ್ನಿನ ಭವದ ಪಗೆವನಪ್ಪ ದೇವನಿಂದಂ, ವಿಗುವ್ವಿದೇಣ—ವಿಗುರ್ವಿಸೆಪಟ್ಟುದಱಿಂದಂ, ಘೋರೇಣ—ಆದಮಾನುಂ ಕಡಿದಪ್ಪುದಱಿಂದಂ, ಸಂಸಿತ್ತೋ—ತಳಿಯಪಟ್ಟೊನಾಗಿ, ಸಿರಿದಿಣ್ಣೋ—ಸಿರಿದಿಣ್ಣನೆಂಬ ಭಟಾರಕಂ, ಪಡಿವಣ್ಣೋ—ಪೊ[2]ರ್ದ[2]ದೊಂ, ಉತ್ತಮಂ ಅಟ್ಠಂ—ಮುಕ್ತದರ್ಶನಜ್ಞಾನಚಾರಿತ್ರಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂ ದ್ವೀಪದ ಭರತಕ್ಷೇತ್ರದೊ[3]ಳಂಗಮೆಂ[3]ಬುದು ನಾಡಲ್ಲಿ [4]ಚಂಪಾ[4] ನಗರಮೆಂಬುದು ಪೊೞಲದನಾಳ್ವೊನಧಿಗತ ಸಮ್ಯಗ್ದೃಷ್ಟಿಶ್ರಾವಕಂ ಸಿಂಹರಥನೆಂಬೊನರಸಂ ಮತ್ತಮತ್ತ ಮಗಧಯೆಂಬುದು ನಾಡಲ್ಲಿ ಸಾಕೇತ[5]ಮೆಂಬುದ[5]ದನಾಳ್ವಂ [6]ಶ್ರಾವಕಂ ಸು[7]ಮಂತ[7]ನೆಂಬೊನರಸಂ ಮತ್ತಮತ್ತ ಮಂಗಳಾವತಿಯೆಂಬುದು ನಾಡಲ್ಲಿ [8]ಇ[8]ಳಾಪಟ್ಟಣಮೆಂಬುದು ಪೊೞಲದನಾಳ್ವೊನಧಿಗತ ಸಮ್ಯಗ್ದೃಷ್ಟಿ ಶ್ರಾವಕಂ ಜಿತಶತ್ರುವೆಂಬೊನರಸನಾತನರಸಿ ಇಳಾಮಹಾದೇವಿಯೆಂಬೊಳಾ [9]ಅರಸನ ದಾದಿ[9] ವಿನಯಮತಿಯೆಂಬೊಳಂತವರ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ[10] ಫಾಲ್ಗುಣ[11] ನಂದೀಶ್ವರಂ ಬಂದೊಡೆ ಮೂವರುಂ ಮಂಡಲಿಕರುಂ ತಂತಮ್ಮ ಪೊೞಲ್ಗಳೊಳೆಂಟು ದಿವಸಮರ್ಹ[12]ದ್ಭಟ್ಟಾರಕರ್ಗೆ[12] ಮಹಾಮಹಿಮೆಗಳಂ ಮಾಡಲ್ ತೊಡಗಿದರತ್ತ ಜಿತಶತ್ರುವುಂ ತನ್ನ ಪೊೞಲೊ[13]ಳೆಂಟು ದಿವಸಂ ಜಿನ[13]ಮಹಾಮಹಿಮೆಯಂ ಮಾಡಲ್ ತೊಡಗಿದನಾತನ ದಾದಿ ವಿನಯಮತಿಯೆಂಬೊಳ್ ಗುಜ್ಜಿ ವಿರಳದಂತೆ ಆದಮಾನುಂ ವಿರೂಪೆ ಪೇ[14]ನೆವ[14]ಡುವಳ್ ನೋಡಿದ ಜನಕ್ಕೆ [15]ಭಯಮಂ[15] ಪಡೆವೊಳ್ ನಾ[16]ಣಿಸೆ[16]ಪಡುವೊಳಂತಪ್ಪಾಕೆ ಅರಸನೊಡನೆ ಜಿನಮಹಾಮಹಿಮೆಯಂ ನೋಡಲ್ ಪೋಪಾಗಳರಸನೆಂದೊನವ್ವಾ ನೀ[17]ನುಂ[17] ಮಹಿಮೆಗೆ ಬರಲ್ವೇಡ ನಿಮ್ಮಂ ಕಂಡು ಮಹಿಮೆಗೆ ವಂದ ನೆರವಿಯುಂ

---

1 ನೆಂಬ ರುಷಿಯರ (ಫಚಭ). 2 ರ್ದ್ದಿ (ಕಖಗ). 3 ಳ್ ಗಂಗೆಯೆಂ (ಕಖಗ) 4 ಪಂಚಾ (ಭ). 5 ಪುರಮ (ಫಚ). 6 + ನಧಿಗಮಸಮ್ಯಗ್ ದೃಷ್ಟಿ (ಫಚ) 7 ಮನ (ಫಚಭ). 8 ಏ (ಫಚ), ಯೇ (ಭ). 9 ಇರ್ವರ್ಗಂ ಮಗಳ್ (ಕಖಗ). 10 + ಮತ್ತೊಂದು ದಿವಸಂ (ಫಚಭ) 11 + ಮಾಸದ (ಫಚಭ). 12 ಪರಮೇಶ್ವರಂಗೆ (ಚ). 13 ಆಷ್ಟಾಹ್ನಿಕ (ಫಚಭ) 14 ಸರ್ಪ (ಕ) 15 ನಗೆಯಂ (ಫಚಭ). 16 ಣ್ಣಿ (ಖಗ), ಣ್ಣೆ (ಫಚಭ) 17 ವು (ಕಖಗ).

ಜುಗುಂ ಪೇಸುಗುಮಮಂಗಳಮೆಂಗುಮದಱಿಂ ನೀಮುಂ ಮನೆಯೊಳಿರಿಮೆಂದಿರಿಸಿ ತಾನುಂ ಸಹಸ್ರಕೂಟಮೆಂಬ ಚೈತ್ಯಾಲಯಕ್ಕೆ ಮಹಾಮಹಿಮೆಯಂ ಮಾಡಲ್ ಪೋದನ್

ಇತ್ತ ದಾದಿಯುಂ ಮಗನ ಮಾಡುವ ಮಹಾಮಹಿಮೆಯಂ ನೋಡಲ್ ಪೆತ್ತ್ರೆ ನಿಲ್ಲೆಂದುಬ್ಬೆಗಂಬಟ್ಟು ತನ್ನಂ ತಾಂ ಪೞಿದು ನಂದೀಶ್ವರದೆಂಟು ದಿವಸ[1]ಮಭಿಷೇಕಮುಮರ್ಚನೆಯುಮಷ್ಟೋಪವಾಸಮುಮಂ[1] ಮಾಡಿ ದೇವರಂ ಬಂದಿಸುತ್ತಂ ಪೂಜಿಸುತ್ತಿರ್ದಳಿತ್ತಲರಸನುಮೆಂಟು ದಿವಸಂ ಮಹಾಮಹಿಮೆಯಭಿಷೇಕಮುಮಂ ಮಾಡಿ ಸಮೆಯಿಸಿದ ಬೞಿಕ್ಕೆ ದಾದಿಗೆ ಬೞಿಯಟ್ಟಿ ಬರಿಸಿ ಇಂತೆಂದನಬ್ಬಾ ನೀಮಿಂತೇಕೆ ಕರಂ ಒಡಪಟ್ಟಿರ್ದಿರೆಂದೊಡೆ ದಾದಿಯಿಂತೆಂದಳ್ ಮಗನೆ ಎಂಟು ದಿವಸಮುಪವಾಸಂಗೆಯ್ದು ಮನೆಯೊಳ್ ದೇವರ್ಗ್ಗಭಿಷೇಕಮುಂ ಪೂಜೆಯುಮಂ ಮಾಡಿ[2]ಸುತ್ತಿರ್ದೆನೆಂದೊಡೆ[2] ಅದಂ ಕೇಳ್ದು ದಮನಾನುಮರಸನೊಸೆದು ಬಡವಾದುದುಮಂ ಕಂಡು ಕರುಣಿಸಿ ಅಬ್ಬಾ ನಿಮಗೊಸೆದೆಂ ವರಮಂ ಬೇಡಿಕೊಳ್ಳಿಮೆಂದೊಡಾಕೆಯಿಂತೆಂದಳ್ ಮಗನೆ ನೀನೆನಗೊಸೆದೆಯಪ್ಪೊಡೆನಗೆಂದು ಮತ್ತಮೆಂಟು ದಿವಸಂ ದೇವರ್ಗ್ಗೆ ಮಹಾಮಹಿಮೆಯಂ ಮಾಡೆಂದು ಬೇಡಿಕೊಂಡಂತೆಗೆಯ್ವೆನೆಂದರಸಂ ದಾದಿಕಾರಣಮಾಗಿ ಮತ್ತಮೆಂಟುದಿವಸಂ ಮಹಾಮಹಿಮೆಯಂ ಮಾಡಲ್ ತೊಡಂಗಿದೊಡನ್ನ ಮಹಾಮಹಿಮೆಯೊಳಂತೞ್ಕೆನೆಂದು ಪಾರಿಸದೆ ಮತ್ತಮಷ್ಟೋಪವಾಸಂಗೆಯ್ದು ಪಾರಣೆಯ ದಿವಸದಂದಾಕೆಯ ಶ್ರಮಮುಂ ಸೇದೆಯುಮುಂ ಹಿಮವಂತಪರ್ವತದ[3] ಪದ್ಮೆಯೆಂಬ ಕೊಳದೊಳ್ ವಸಿಯಿಸಿರ್ಪ ಶ್ರೀಯಾದೇವತೆ ಕಂಡಱಿದು ತನ್ನ ಪರಿವಾರ ಸಹಿತಂ ವಿಮಾನಂಗಳನೇಱಿ ಮಹಾವಿಭೂತಿಯಿಂ ಒಂದು ಸ್ವರ್ಣಪೀಠದೊಳ್ ದಾದಿಯನಿರಿಸಿ ಸುಗಂಧೋದಕಂಗಳಿಂ ತೀವಿದ ಸುವರ್ಣಕಲಶಂಗಳಿಂದಮಭಿಷೇಕಂಗೆಯ್ದು ನಮೇರು ಮಂದಾರ ಸಂತಾನಕ ಪಾರಿ[4]ಯಾತ್ರಕಮೆಂ[4]ಬ ಪೂಗಳಂ ಸುರಿದು ಕಮ್ಮಿತ್ತ ತನ್ನ ತಂಬೆಲರಾ ಪೀಸಿ ದೇವದುಂದುಭಿಗಳಂ ಬಾಜಿಸಿ[5] ಶ್ರೀಯಾದೇವತೆ ತನ್ನಾವಾಸಕ್ಕೆ ಪೋದಳ್

ಇತ್ತ ದಾದಿಯುಂ ಶ್ರೀಯಾದೇವತೆಯ ವಿಭೂತಿಯಂ ಕಂಡು ನಿದಾನಂಗೆಯ್ದು ಕೆಲವುದಿವಸದಿಂ ಕಾಲಂಗೆಯ್ದು ಜಂಬೂದ್ವೀಪದ ಹಿಮವಂತ ಪರ್ವತದ ಪದ್ಮೆಯೆಂಬ ಕೊಳದೊಳ್ ಶ್ರೀಯಾದೇವತೆಯಾಗಿ ಪುಟ್ಟಿ [6]ಇ[6]ಳಾಪಟ್ಟಣಕ್ಕೆ ಒಂದಾ ಪೊೞಲ ಜನಂಗಳ್ಗೆಲ್ಲಮಿರುಳ್ ಕನಸಿನೊಳಾಂ ಶ್ರೀಯಾದೇವತೆಯೆಂ ನಿಮ್ಮ ಪೊೞಲ್ಗೆ ವಂದೆನೆನಗೆ [7]ಶ್ರೀವಿಹಾರಮಂ[7] ಮಾಡಿ ಎನ್ನ ಪ್ರತಿಮೆಯನ್ನಿಟ್ಟು ಪೂಜಿಸುತ್ತುಮೋಲಗಿಸುತ್ತುಮಿರಿಮಾನುಂ ನಿಮಗೆ ಬೇಡಿದ ವರಮನೀವೆನೆಂದು ಕನಸಿನೊಳ್ ತೋಱಿದೊಡೆ ಪೊೞಲ ಜನಮೆಲ್ಲಂ ನೆರೆದು [8]ಶ್ರೀವಿಹಾರಮಂ[8] ಮಾಡಿ ಶ್ರೀಯಾದೇವತೆಯ ಪ್ರತಿಮೆಯಂ ಸ್ಥಾಪಿಸಿ ಮಹಿಮೆಯಂ ಮಾಡುತ್ತಂ ಪೂಜಿಸುತ್ತಮೋಲಗಿಸುತ್ತ

[1] + ಬಂದಿಸಿರ್ದವೆಂದುದಂ (ಘಛ), + ಬಂದಿಸುತ್ತಿರ್ದೆನೆಂದು ಪೇೞೆ (ಛ). [2] ವೊಂದು (ಕಖಗ). [3] + ಮೇಗೆ (ಘಛ). [4] ಜಾತಂಗಳಿಂ (ಘಚಛ). [5] + ಪೂಜಿಸಿ (ಘಛ) [6] ಏ (ಘಛ). [7] ಸಿರಿಪುರಮಂ (ಘಚಛ). [8] ಮಷ್ಟೋಪವಾಸಂ ಗೆಯ್ದು ಮನೆಯೊಳೆಂಟು ದಿವಸ ಮುನ್ನ ಹಣಮುಮನರ್ಚನೆಯುಮಂ (ಕಖಗ)

ಮುಪ್ಪುಱದಂ ಕಂಡಿಳಾಮಹಾದೇವಿ ಅಪುತ್ರಿಕೆ ಮಕ್ಕಳಂ ಬೇಡಿ ಪನ್ನೆರಡು ವರುಷಂ ಬ[1]ರಗಂ ಸಿಜ್ಜಲುಂ ಶ್ರೀವಿಹಾರಕ್ಕೆ[1] ಪೋಗಿ ಶ್ರೀಯಾದೇವತೆಯನರ್ಚಿಸುತ್ತಂ ಪೂಜಿಸುತ್ತಂ ಮಹಾಮಹಿಮೆಯುಂ ಮಾಡುತ್ತಂ ಆಡುತ್ತಂ ಪಾಡುತ್ತಮೋಲಗಿಸುತ್ತಮಿರೆಯುದಂ ಕಂಡಱಿದು ಶ್ರೀಯಾದೇವತೆ ಪೂರ್ವವಿದೇಹಕ್ಕೆ ಪೋಗಿ ಸ್ವಯಂಪ್ರಭರೆಂಬ ತೀರ್ಥಕರ ಪರಮದೇವರಂ ಕಂಡೆಱಗಿ ಪೊಡಮಟ್ಟಿಂತೆಂದು ಬೆಸಗೊಂಡಳ್ ಭಟಾರಾ ಎನ್ನ ಪೊೞಲೊಳಿರ್ಪ ಇಳಾಮಹಾದೇವಿಗೆ ಮಕ್ಕ[2]ಳೇನಕ್ಕುಮೊ[2] ಎಂದು ಬೆಸಗೊಂಡೊಡೆ ಭಟಾರರಿಂತೆಂದರ್ ಸ್ವರ್ಗದಿಂ ಬಟ್ಟಿ ಬಂದಿಲ್ಲಿ ಒರ್ವ ದೇವಂ ಇಳಾಮಹಾದೇವಿಗೆ ಮಗನಾಗಿ ಪುಟ್ಟುಗುಮೆಂದೊಡದಂ ಕೇಳ್ದು ಭಟಾರರ್ಗ್ಗೆಱಗಿ ಪೊಡಮಟ್ಟು ಇಳಾಪಟ್ಟಣಕ್ಕೆ ಪೋಗಿ [3]ಇ[3]ಳಾಮಹಾದೇವಿಗೆ ಕನಸಿನೊಳಿಂತೆಂದು ಪೇೞ್ದಳ್ ಇಳಾಮಹಾದೇವಿ ನಿನಗೆನ್ನ ಪ್ರಸಾದದೆ ಸೌಧರ್ಮಕಲ್ಪದೊಳ್ ಮೇಘಮಾಲಮೆಂಬ ವಿಮಾನದಿಂ ಬಟ್ಟಿ ವರ್ಧಮಾನನೆಂಬ ದೇವಂ ಬಂದು ನಿನಗೆ ಮಗನಾಗಿ ಪುಟ್ಟುಗುಮೆಂದು ಶ್ರೀಯಾದೇವತೆ ಪೇೞ್ದೊಡಿಳಾ ಮಹಾದೇವಿಯಾದಮಾನುಂ ಸಂತಸಂಬಟ್ಟಿರ್ದ್ದ ಕೆಲವು ದಿವಸದಿಂ ಗರ್ಭವಾಗಿ ನವಮಾಸಂ ನೆಱೆದು ಮಗನಂ ಪೆತ್ತೊಡೆ ಶ್ರೀಯಾದೇವತೆ ಮಗನಂ ಕೊಟ್ಟಳೆಂದಾ ಕೂಸಿಂಗೆ ತಾಯುಂ ತಂದೆಯುಂ ನಂಟರುಮೆಲ್ಲಂ ನೆರೆದು ಸಿರಿದಿಣ್ಣನೆಂದು ಪೆಸರನಿಟ್ಟರ್

ಆತನುಂ ಶುಕ್ಲಪಕ್ಷದ ಚಂದ್ರನಂತೆ ಕ್ರಮಕ್ರಮದಿಂ [4]ಬ[4]ಳೆದು ನವಯೌವನನುಂ ಸರ್ವಕಳಾಕುಶಲನುಮಾಗಿರ್ಪನ್ನೆಗಮಿತ್ತ ಸಾಕೇತಪುರಾಧಿಪತಿಯ[5]ಪ್ಪ[5] ಸು[6]ಮಂತನೆಂ[6]ಬರಸನ ಮಗಳ್ ಸುಮತಿಯೆಂಬೊಳಾಕೆಯ ಸ್ವಯಂವರಕ್ಕರಸುಮಕ್ಕಳೆಲ್ಲಂ ನೆರೆದಿರ್ದಲ್ಲಿಗೆ ಸಿರಿದಿಣ್ಣಂಗಂ ಬೞಿಯಟ್ಟಿ ಬರಿಸಿದೊಡೆ ಸ್ವಯಂಬರದೊಳ್ ಸುಮತಿ[7]ಯೆಲ್ಲರಂ[7] ನೋಡಿಯಾರುಮಂ ಮೆಚ್ಚದೆ ಸಿರಿದಿಣ್ಣಂಗೆ ಮಾಲೆಸೂಡಿದೊಡೆ ಮದುವೆಯಾಗಿ ಕೆಲವು ದಿವಸಮಲ್ಲಿರ್ದ್ದ ಮಾವನವರಂ ಬೆಸಗೊಂಡಿಳಾಪಟ್ಟಣಕ್ಕೆ [8]ಪೋಪೆಮೆಂದೊಡಾತಂ ತನ್ನ ಮಗಳಪ್ಪ ಸುಮತಿಗೆ[8] ಬೞಿವೞಿಗೊಟ್ಟು ಮಗಳೊಡನೆ ವಾಚಾಳನಪ್ಪ ಗಿಳಿಯುಮನಟ್ಟಿದೊಡವರ್ಗಳುಂ ಕತಿಪಯ ದಿವಸಂಗಳಿಂದಿಳಾಪಟ್ಟಣ[9]ಕ್ಕೆ ಪೋಗಿ[9] ಸುಖದಿಂದಿರೆ

ಮತ್ತೊಂದು ದಿವಸಂ ಗಿಳಿಯುಂ ಸಾಕ್ಷಿಮಾಡಿ ಇರ್ವರುಂ ಚದುರಂಗಮಾಡುತ್ತಿರೆ [10]ಅರಸಿಯರಸನಂ ಗೆಲ್ದೊಡೆ ಗಿಳಿ ನೆಲದೊಳೆರಡು ಬರೆಯಂ ಬರೆಗುಮರಸನರಸಿಯಂ ಗೆಲ್ದೊಡೆ ಒಂದೆ ಬರೆಯಂ[10]ಬರೆಗುಮಿಂತು ಪಿರಿದುಂ ಬೇಗಮಾಡಿ ಅರಸನರಸಿಯಂ ಗೆಲ್ದೊಡೆರಡು ಬರೆಯಂ [11]ತೆಗೆದು[11]ದನರಸಂ ಕಂಡು ಕಡುಮುಳಿ

---

[1] ರಂ ಸಿಚ್ಚ ಸಿಚ್ಚಂ ಸಿರಿಪುರಕ್ಕೆ (ಫಭ). [2] ಳಕ್ಕುಮೊ ಆಗದೂ (ಫಚಭ). [3] ಇರುಳ್ (ಫಚಭ). [4] ಪೆ (ಕಖಗ). [5] ಪ್ಪಾತಂ (ಕಖಗ). [6] ಮತಿಯೆಂ (ಫಚಭ) [7] + ಸಮಸ್ತ ರಾಜಪುತ್ರರಂ (ಭ) [8] ಪೋಪೆವೆಂದೊಡಂ ಸುಮಂತಂ ಮಗಳ್ಗೆ (ಕಖಗ). [9] ಮನೆಯ್ದಿ (ಫಚಭ). [10] ಯರಸಿಯರಸನಂ ಗೆಲ್ದಡೆ ನೆಲದೊಳೊಂದು ಬರೆಯಂ ಬರೆಗುಮರಸನನರಸಿ ಗೆಲ್ದೊಡೆರಡು ಬರೆಯಂ (ಫ), ಯರಸಿಯನರಸಂ ಗೆಲ್ದೊಡೆ ನೆಲದೊಳೊಂದು ಬರೆಯಂ ಬರೆಗುವರಸನನರಸಿ ಗೆಲ್ದೊಡೆರಡು ಬರೆಯಂ (ಚಭ), ಬರೆಯಂ ಎಂಬುದಕ್ಕೆ (ಖಗ) ಗಳಲ್ಲಿ ಗರೆಯಂ ಎಂದು ಪಾಠ. [11] ತೇವು (ಫಭ)

ಪಡೆ[1]ಗೊಂಡಂ ಮುಳಿದೊಡಾ[1] ಗಳಿಯುಂ ಸತ್ತು ಪೊಱಲ ಬಹಿರುದ್ಯಾನವನದೊಳ್ ವ್ಯಂತರದೇವನಾಗಿ ಪುಟ್ಟಿ[2]ತಿಂ[2]ತಿರ್ಪರುಂ ಪಲಕಾಲಮಿಷ್ಟವಿಷಯಕಾಮಭೋಗಂಗಳನನುಭವಿಸುತ್ತಿರ್ಪನ್ನೆಗಂ ಮತ್ತೊಂದು ದಿವಸಂ ಸಪ್ತತಳಪ್ರಾಸಾದದ ಮೇಗಿರ್ಪರುಂ ದಿಶಾವಲೋಕನಂ ಗೆಯ್ಯುತ್ತಿರ್ಪನ್ನೆಗಂ ಸಹಸ್ರಕೂಟಾಕಾರಮಪ್ಪುದೊಂದು ಮುಗಿಲಂ ಕಂಡಿಂತುಟೊಂದು ಚೈತ್ಯಾಲಯಮಂ ಮಾಡಿಸುವೆನೆಂದು ಪಲಗೆಯೊಳ್ ರೇಖೆ[3]ಗೊಂಡು[3] ಮತ್ತೆ ನೋೞ್ಪನ್ನೆಗಂ ಕರಗಿದುದಂ ಕಂಡದುವೆ ನಿರ್ವೇಗಕ್ಕೆ ಕಾರಣಮಾಗಿ ತಾಯುಮಂ ತಂದೆಯುಮಂ ನಂಟರುಮಂ ಬಿಡಿಸಿ ನಿಶ್ಶಲ್ಯಂ ಗೆಯ್ದು ಬಾಹ್ಯಾಭ್ಯಂತರ ಪರಿಗ್ರಹಂ[4]ಗಳಂ[4] ತೊಱೆದು ವರಧರ್ಮಭಟ್ಟಾರರ ಪಕ್ಕದೆ ತಪಂಬಟ್ಟು ಪನ್ನೆರಡು ವರುಷಂಬರೆಗಂ ಗುರುಗಳನಗಲದಿರ್ದು ದ್ವಾದಶಾಂಗ ಚತುರ್ದಶಪೂರ್ವಮಪ್ಪಾಗಮಮೆಲ್ಲಮಂ ಕಲ್ತು ಬೞಿಕ್ಕೆ ಗುರುಗಳಂ ಬೆಸಗೊಂಡವರನುಮತದಿಂದೇಕವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವತ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಮಾಘಮಾಸದಂದುಳಾ ಪಟ್ಟಣಕ್ಕೆ ವಂದಾ ಪೊಱಲ ಬಹಿರುದ್ಯಾನವನದೊಳಿರ್ದು ರಾತ್ರಿ ಪ್ರತಿಮಾಯೋಗದೊಳ್ ನಿಂದರ್

ಅನ್ನೆಗಂ ಮುನ್ನವರ ಕೈಯೊಳ್ ಸತ್ತ ಗಳಿ ವ್ಯಂತರ ದೇವನಾಗಿ ಅಲ್ಲಿ ಪುಟ್ಟಿರ್ದ[5][ದು][5] ಕಂಡೀನುಂ ಕಾರಣಮಿ[6]ಲ್ಲೆ[6]ನ್ನಂ ಕೊಂದನೆಂದು ಮುಳಿದಾದಮಾಸುಂ ಘೋರಮಪ್ಪ ವಾತಮುಮಂ ಶೀತಮುಮಂ ವಿಗುರ್ವಿಸಿ ನೀರ್ಗಳಂ ಮೇಗೆ ಸುರಿದು ಬೀಸುತ್ತ[7]ಮಿಂ[7]ತು ನಾಲ್ಕು ಜಾವಮುಂ ಘೋರತರಾಕಾರಮಾಗಿಯುಪಸರ್ಗಮಂ ಮಾಡೆ ಭಟಾರರುಂ ದೇವೋಪಸರ್ಗಮೆಂಬುದನಱಿದು

ಗಾಹೆ || ಖಮ್ಮಾಮಿ ಸವ್ವಜೀವಾಣಂ ಸವ್ವೇ ಜೀವಾ ಖಮಂತು ಮೇ |
ಮೆತ್ತೀ ಮೇ ಸವ್ವಭೂದೇಸು ವೇರಂ ಮಜ್ಝ ಣ ಕೇಣ ಚಿ ||

ಶ್ಲೋಕ || [*]ಅಚ್ಛೇದ್ಯೋಽನಂತ ಸೌಖ್ಯೋಽಹಂ ವೇತ್ತಾ ಪೂರ್ಣೋ ನಿರಂಜನಃ |
ಸರ್ವದುಃಖಾಕರಂ ದೇಹಂ ತ್ಯಜಾಮ್ಯೇತತ್ ಪರಿಸ್ಫುಟಂ ||

ಎಂದಿಂತು ಸಮತ್ವೀಭಾವನೆಯಂ ಭಾವಿಸಿ[8] ಶುಕ್ಲಧ್ಯಾನಮಂ ಜಾಸಿಸಿ ಎಂಟು[9] ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ವೋದರ್

ಮತ್ತಂ ಪೆಱರುಂ ರತ್ನತ್ರಯಂಗಳನಾರಾಧಿಸುವ ಭವ್ಯರ್ಕಳ್ ಸಿರಿದಿಣ್ಣಭಟ್ಟಾರರಂ ಮನದೊಳ್ ಬಗೆದು ದೇವೋಪಸರ್ಗ ಮನುಷ್ಯೋಪಸರ್ಗ ತಿರ್ಯಕೋಪಸರ್ಗಮಚೇತನೋಪಸರ್ಗಮೆಂದಿಂತು ಚತುರ್ವಿಧಮಪ್ಪುಪಸರ್ಗಮುಮಂ ಪಸಿವು ನೀರಡ್ಕೆ ಮೊದಲಾಗೊಡೆಯುವಿಪ್ಪತ್ತೆರಡು ಪರೀಷಹಂಗಳಂ ಸೈರಿಸಿ ವ್ಯಾಧಿಗಳಿಂದಪ್ಪ ವೇದನೆಯಂ ಸೈರಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

[1] ಗೊಂಕೆಯಂ ನುಲಿದು ಕೊಂದನಾ (ಘಚಛ) [2] ದೊಂ ಇಂ (ಕಗ), ಟ್ರಂತಿ (ಬ) [3] ಯಂತಗೆದು (ಛ). [4] ಹಮಲ್ಲಮಂ (ಘಚಛ). [5] ದಂ (ಘಛ), ದುಂ (ಚ), (ಕಖಗ) ಗಳಲ್ಲಿಲ್ಲ [6] ಲ್ಲದೆ (ಘಚಛ) [7] ವಿರುಳಿಂ (ಘಚ). [*] ಇದು (ಘಚಛ) ಗಳಲ್ಲಿಲ್ಲ. [8] + ಸಮ್ಯಗ್ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ (ಘಚಛ). [9] ದಿಂದಷ್ಟವಿಧ (ಘಚಛ)

(೧೦) ವೃಷಭಸೇನ ಭಟಾರರ ಕಥೆ

ವೃಷಭಸೇನ ಭಟಾರರ ಕಥೆಯಂ ಪೇೞ್ವೆಂ :

ಗಾಹೆ॥ ಉಣ್ಹಂ ವಾದಂ ಉಣ್ಹಂ ಸಿಳಾತಳಂ ಆದವಂ ಚ ಅತಿ ಉಣ್ಹಂ।
ಸಹಿಊಣ ಉಸಹಸೇಣೋ ಪಡಿವಣ್ಣೋ ಉತ್ತಮಂ ಅಟ್ಠಂ॥

[ಉಣ್ಹಂ ವಾದಂ—ಬಿಸಿದಪ್ಪ ಗಾಳಿಯುಮಂ, ಉಣ್ಹಂ—ಬಿಸಿದಪ್ಪುದಂ, ಸಿಳಾತಳಂ—[1]ಯೋಗಪೀಠದ[1] ಸಿಲೆಯ ಮೇಗುಮಂ, ಆದವಂ ಚ—ಬಿಸಿಲುಮಂ, ಅತಿ ಉಣ್ಹಂ—ಆದಂ ಬಿಸಿದಪ್ಪುದಂ, ಸಹಿಊಣ—ಲೇಸಾಗಿ ಸೈರಿಸಿ, ಉಸಹಸೇಣೋ—ವೃಷಭಸೇನರೆಂಬ ಮುನಿ, ಪಡಿವಣ್ಣೋ—ಪೊ[2]ರ್ದಿ[2]ದೊಂ, ಉತ್ತಮಂ ಅಟ್ಠಂ—ಮಿಕ್ಕದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯುಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳವಂತಿಯೆಂಬುದು ನಾಡಲ್ಲಿ ಉಜ್ಜೇನಿಯೆಂಬುದು ಪೊೞಲದನಾಳ್ವಂ ಪ್ರದ್ಯೋತನೆಂಬರಸನಾತನ ಮಹಾದೇವಿ ಜ್ಯೋತಿರ್ಮಾಲೆಯೆಂಬೊಳಂತವರ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತಿರೆ ಕಾಲಂ ಸಲೆ ಮತ್ತೊಂದು ದಿವಸಮರಸಂ ಕಾಡಾನೆಯಂ ಪಿಡಿಯಲ್ವೇಡಿ[3]ಯಾ[3]ನೆಯನೇಱಿ ಅಡವಿಗೆವೋದೊಡದು ಮದವಿಹ್ವಳಿತನಾಗಿ ಮೆಯ್ಯಱಿಯದೆ ದಿಶಾಪಟ್ಟಂಗೊಂ[4]ಡೊಂ[4]ದೆಸೆಗೆ ಕೊಂಡೋಡಿ [5]ದಂಡಕಾ[5]ರಣ್ಯ[6]ಮಪ್ಪ[6]ಡವಿಯ ನಡುವೆ[7] ತನ್ನ ವೇಗದಿಂ[7] ಪರಿಯೆ ನಾಡೆಯಂತರಂಬೋದೊಡೊಂದು ಮರದಡ್ಡ[8]ಬಿ[8]ರ್ದ ಕೊಂಬಂ ಕಂಡರಸಂ ಪಿಡಿದು [9]ನೇ[9]ಲ್ದು ದೊರ್ದಾನೆಯುಂ ಪೆಱತೊಂದು ದೆಸೆಗೆ ಪೋ[10]ಯ್ತಂತ[10]ರಸನುಂ ಮರದಿಂದಿೞಿದು ನಾಡ ಬಟ್ಟೆಯೊಳ್ ತಗುಳ್ದು ಅಡವಿಯಂ ಪೊಱಮಟ್ಟು ಬಂದೊಂದು ಖೇಡಮೆಂಬೂರನೆಯ್ದುಯದಱ ಸಾರೆಯೊಂದು ಕೆಯ್ಯುಂ[11]ಟದಱ ಸಾರೆಯೊಳ್ ಬಾವಿಯುಂ[11]ಟದಱ ತಡಿಯೊಳ್ ಬಂದು ಕುಳ್ಳಿರ್ದು ಪಸಿವಿನಿಂದಂ ತೃಷೆಯಿಂದಂ [12]ಪಥ[12]ಶ್ರಮದಿಂ ಪಾದಮಾನುಂ ಸೇದೆಗೆಟ್ಟು ಬಂಬಳಂ ಬಾಡಿರ್ಪನ್ನೆಗಮ್

ಆವೂರ ಗಾವುಂಡಂ ಜಿನಪಾಲಿತನೆಂಬೊನಾತನ ಗಾವುಂಡಿ ಜಿನಮತಿಯೆಂಬೊಳಾಯಿರ್ವರ್ಗಂ ಮಗಳ್ ಜಿನದತ್ತೆಯೆಂಬೊಳತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿ[13]ಯು[13]ಮೊಂದಿವನೊಡೆಯೊಳ್ ನೀರಂ ತರಲ್ಕೆಂದು ಬಾವಿಗೆ

---

[1] (ಘಚಛ) ಗಳಲ್ಲಿಲ್ಲ. [2] ಳ್ದಿ (ಕಖಗ). [3] ಸೊರ್ಕಾ (ಘಚಛ). [4] ಡೊಂದು (ಕಖಗ) [5] ಮೊಪದು ಅ (ಖ) [6] ಮೆಂಬ (ಘಚಛ) [7] (ಘಚಛ) ಗಳಲ್ಲಿಲ್ಲ. [8] ಪಿ (ಘಚ), ವಿ (ಛ). [9] ನಿ (ಖಚ), [10] ದಡಂ ಅ (ಕಗ), ದಡಂತ (ಖ) [11] ಬಾವಿಯುಮುಂ (ಘಚ), ಬಾವಿಯುಮೆಂಬುದುಂ (ಛ) [12] ಬಟ್ಟೆಯ (ಘಚ), (ಛ) ದಲ್ಲಿಲ್ಲ. [13] ಯೌವನ (ಘಚಛ).

ಪೋ[1]ದಾ[1]ಕೆಯ[2]ಂ ಕಂಡರಸನಲೆ[2] ಕೂಸೆ ನೀ[3]ರಂ ಕು[3]ಡಿ[4]ಯಲೆಱೆಯಾ ಎಂದೊಡಂಕೆಗೆಯ್ಯೆ ಸಂದಾತನ ರೂಪುಂ ಗಾಡಿಯುಂ ತೇಜಮುಂ ಲಾವಣ್ಯಮುಮಂ ಕಂಡಾಟಿಸಿ ನೀರಂ ಸೇದಿಕೊಂಡು ಬಂದು[4] ಕುಡಿಯಲೆಱೆಯೆ ಕುಡಿಯೆ [5]ಕು[5]ಡಿಯೆ ಕರಗದ ದಾರೆಯುಮ[6]ಗಿದುಕೊಂಡೊಡ[6]ರಸನಾಕೆಯ ಮೊಗಮಂ ನೋಡಿ ನಕ್ಕೇಕೆ ಕಾಡುವಾ ಕೂಸೆ ಕಾಡದೆ ಕುಡಿಯಲೆಱೆಯಾ ಎಂದೊಡಾಕೆಯುಂ ಕುಡಿಯಲ್ಕೆಱೆದು ತನ್ನ ಮನೆಗೆವೋಗಿ ತನ್ನ ತಂದೆಗಿಂತೆಂದಳಪ್ಪಾ ಊರ ಪೊಱಗಣ ಬಾವಿಯೊಳೊರ್ವಂ ಮಹಾಪುರುಷಂ ಬಂದಿ[7]ರ್ದೊ[7]ನಾತನಂ ನೀಮೊಡಗೊಂಡು ಮನೆಗೆ ಬನ್ನಿಮೆಂದೊಡಂಕೆಗೆಯ್ಯೆ ಸಂದಾತನುಂ ಪೋಗಿಯೊಡಗೊಂಡು ಬಂದಾತನ ಶ್ರಮಂ ಪೋಗೆ ದಿವ್ಯಮಪ್ಪಾಹಾರಮನೂಡಿ[8]ರ್ದ[8]ನ್

ಅನ್ನೆಗಮರಸನ[9]ಡಿವಜ್ಜೆಯುಂ ನೋಡುತ್ತಂ ಪೆಱಗಣಿಂದಂ ತಂತ್ರಮೆಲ್ಲಂ ಬಂದರಸನಿಲ್ಲಿಗೆ ವಂದೊನೆಯೆಂದೂರೊಳಗೆಲ್ಲಮಱಸಿ ಬೆಸಗೊಂಡವರರಸನಂ ಕಂಡೆಱಗಿ ಪೊಡೆವಡುವುದುಮಂ ಜೀಯ ಮಹಾಪ್ರಸಾದಮೆಂಬುದುಮಂ ಗಾವುಂಡಂ ಕಂಡೀಲೆ ಈತನರಸನೆಂದಱಿದಗ್ಗಳಂ ಪ್ರತಿಪತ್ತಿಯುಂ ಗೌರವಮುಮಂ ಮಾಡಿದೊಡರಸಂ ತನ್ನ ಪೆರ್ಗಡೆಗಳಿಂದಂ ಕೂಸಂ ಬೇಡಿ ಪೆತ್ತು ಮದುವೆನಿಂದಾಕೆಗೆ ಮಹಾದೇವಿಪಟ್ಟಂಗಟ್ಟಿ ತನ್ನ ಪೊೞಲ್ಗೆ ಪೋಗಿ ಕರುಮಾಡಮಂ ಬಳಸಿಯು ಎರ್ದಂತಃಪುರದೊಳಗೊಂಡೊಳ್ಳಿತ್ತನ್ನ ಮಾಡಮಂ ಕೊಟ್ಟಿರಿಸಿ ಎಲ್ಲಾ ಅರಸಿಯ ಕರ್ಪುಮನುೞಿದು ಜಿನದತ್ತೆಗಾಸಕ್ತನಾಗಿ ಪಲಕಾಲಮಾಕೆಯೊಳಿಷ್ಟವಿಷಯಕಾಮ ಭೋಗಂಗಳನನುಭವಿಸುತ್ತಿರ್ಪನ್ನೆಗಮೊಂದು ದಿವಸಮಪರಸಿಯ ಸೋರ್ಕಿದಾನೆ [10]ಗಣಿಯಾನೆ[10]ಗಳ್ದಿರಸು ಬಂದು [11]ಬಾವಿ[11]ಯುಂ ಪೊಕ್ಕೊಡೆ ಪಿರಿದುಂ ಕಳಕಳಮಾಗಿ ಅರಸಂಗಱಿಪಿದೊಡರಸನುಂ ಕೇಳ್ದು ತುರಿಪದಿಂ ಪೊಱಮಟ್ಟು ಕಾದಾನೆಯುಂ ಕಟ್ಟಿಸಲೆಂದು [11]ಬಾವಿ[11]ಗೆ ವೋದೊನಾ ಪ್ರಸ್ತಾವದೊಳ್ ಜಿನದತ್ತೆ ಪಸದನಂ [12]ಗೊಂಡಿ[12]ರ್ದಾಕೆ ಎನ್ನಂ ಬಿಸುಟ್ಟರಸಂ ಪೋದೊನೆಂದು ಮುಳಿದು ನುಡಿವುದು ಮರಸನಾಕೆಯುನೊಡಗೊಂಡು ಪೋಗದುದಂ ಕಂಡರಸಿಯರ್ಕಳೆಲ್ಲಂ ಸಂತೋಷಮಾಗಿ ಇನ್ನೆಮಗಮರಸಂ [13]ಸೂೞುಂ ಪಾೞಿಯು[13]ಮನೀಗುಮೆಂದು ರಾಗಿಸಿ ನುಡಿವ ಮಾತುಗಳಂ ಜಿನದತ್ತೆ ಕೇಳ್ದು ಕಿಸಿಸಿ [14]ಇನ್ನಾತ[14]ನೆನಗೆ ಬಾಪ್ಪೆಯು[15]ಲ್ಲನಂ[15]ದು ತನ್ನ ಮಾಡದಿಂ ಪೊಱಮಟ್ಟು ಪೆಱತೊಂದು ಪ್ರಾಸಾದದೊಳ್ ಪೋಗಿ[16]ರ್ದೊ[16]ಳ್

ಅನ್ನೆಗಮತ್ತಲರಸನಾನೆಯುಂ ಕಟ್ಟಿಸಿ ಜಿನದತ್ತೆಯ ಮಾಡಕ್ಕೆ ವೋಗಿ ಅರಸಿಯಂ ಕಾಣದೆಲ್ಲಿರ್ದಳೆಂದು ಬೆಸಗೊಂಡೊಡೊರ್ವನಿಂತೆಂದಂ ನೀಮೊಡಗೊಂಡು ಪೋದಿ

---

1 ದದಾ (ಕಗ), ದೊಡಾ (ಖ). 2 ನರನಂ ಕಂಡೀಂ (ಘಚಛ). 3 ಗುರ್ (ಘಚಛ). 4 (ಕಖಗ) ಗಳಲ್ಲಿಲ್ಲ. 5 ಗು (ಘಚಛ) 6 ದುಗಿದಾಗಳ (ಘಚಛ). 7 ರ್ದ್ದಾ (ಖ). 8 ಯಿರ್ದ್ದ (ಖ). 9 + ಪೋದ (ಘಚಛ) 10 ಗಳು ಕರಿಣಿ (ಘಚಛ) 11 'ಬಾರಿ' ಎಂದಿರಬಹುದೆ? 12 ಗೊಳುತ್ತ (ಘಚಛ). 13 ಸೂಳುಂಪಾಳಯು (ಕಗ), ಸೂಳುಂ ಪಾಳಿಯು (ಖ), ಸೂಳುಪಾಳಿಯ (ಘಚಛ). 14 ತಾ (ಘಚಛ). 15 ಲ್ಲೆಂ (ಘಚಛ). 16 ರ್ದ್ದೊ (ಖ).

ರಲ್ಲೆಂದರಸಿ ಮುಳಿದು ಪುರುಷ ವ್ರತಮಂ [1]ಕೊಂಡು ತಪಸ್ವಿನಿಯಾಗಿ ಪೞತೊಂದು ಮಾಡದೊಳಿರ್ದೊಳೆಂದು ಪೇೞ್ದೊಡಾ ಮಾತನರಸಂ ಕೇಳ್ದಾದಮಾನುಂ ಮುಳಿದಿಂತಪ್ಪ ವ್ರತಮುಂ ತಪಮುಮೆನ್ನಲ್ಲಿ ಕೂಡದೆಂದು ನುಡಿದಾಕೆಯುಂ ಬೆಳ್ಕಾಡೊಳ್ ಮಸಣದೊಳ್ ಕೊಂಡುಪೋಗಿಕ್ಕುವುಂದಾಳ್ಗಳ್ಗೆ ಬೆಸನಂ ಪೇೞ್ದೊಡವರುಮಂತೆ ಗೆಯ್ವೆಮೆಂದರಸಿಯನೊಡಗೊಂಡುಪೋಗಿ ಮಸಣದೊಳೊಂಬತ್ತು ತಿಂಗಳ ಗರ್ಭಿಣಿಯಂ ಪೊ[2]ತ್ತು[2] ಪೋಗಿಯಾಕೆಯನಲ್ಲಿಕ್ಕಿ ಇಂತೆಂದರಬ್ಬಾ ಎಮಗೇನುಂ ದೋಷ[3]ಮುಂ ಪಾಪಮು[3]ಮಿಲ್ಲ ಕ್ಷಮಿಯಿಸಿಮರಸನ ಬೆಸದೊಳ್ ತಂದಿಕ್ಕಿದೆವೆಂದು ನುಡಿದು ಪೋದರನ್ನೆಗಮಾ ಇರುಳೊಳರಸಿ ಬೆಸಲೆಯಾಗಿ ಮಗನಂ ಪೆತ್ತಳ್

ಇತ್ತಲರಸನುಮಾ ಇರುಳೊಳ್ ಶ್ವೇತವೃಷಭನಂ ಕನಸಿನೊಳ್ ಕಂಡು ಪೊೞ್ತು[4]ಱ[4]ನೋಲಗ[5]ದೊಳ್ ಆಸ್ಥಾನದ[5] ನಡುವೆ ಸಿಂಹಾಸನಮಸ್ತಕಸ್ಥಿತನಾಗಿ ತನ್ನ ಕಂಡ ಕನಸಂ ಮಂತ್ರಿಗೆ ಪೇೞ್ದೊಡೆ ಮಂತ್ರಿಯುಮಿಂತೆಂದು ಕನಸಿನ ಫಲಮನರಸಂಗೆ ಪೇೞ್ದಂ ದೇವಾ ನಿಮಗಿಂದು ಪುತ್ರಲಾಭಮಾದುದೆಂದು ಪೇೞ್ದೊಡದಂ ಕೇಳ್ದರಸಿಯರ್ಕಳೊ[6]ಳಗಾರ್ವ್ವ[6]ಸಲೆಯಾಗಿ ಮಗನಂ ಪೆತ್ತ[7]ಳೆಂದಾ[7]ರಯ್ದು ಬನ್ನಿಮೆಂದು ಪಡಿಯಱರ್ಗೆ ಬೆಸವೇೞ್ದೊಡವರ್ ರಾಣಿ[8]ವಾಸಕ್ಕೆ ಪೋಗಿ ಅರಸಿಯರ್ಕಳೆಲ್ಲರುಮಂ ಬೇಱೆವೇಱೆ ನಿಮ[9]ಗಂ[9] ಪುಟ್ಟಿದನೆ ಎಂದು ಬೆಸಗೊಂಡೊಡವರ್ಗಳನಿಒರುಮಿಂತೆಂದರೆಮಗೆ ಸೌಭಾಗ್ಯಮಿಲ್ಲದವರ್ಗೆ ಭರ್ತಾರನ ದೆಸೆಯಿಂದಪ್ಪ ಸೂೞುಂ ಪಾೞಿಯುಮಿಲ್ಲದೋರ್ಗೆ ಬಸಿಱುಂ ಮಗನುಮೆಂತಕ್ಕುಂ ನೀಮಾರಾನುಂ ಸೌಭಾಗ್ಯಮುಳ್ಳೊರಲ್ಲಿ ಬಸಿಱುಂ ಮಗನುಮನಾರಯ್ಯಿಮೆಮ್ಮಲ್ಲಿ ಏನನಾರಯ್ವಿರೆಂದು ನುಡಿದೊಡವರ್ಗಳುಂ ಶ್ಮಶಾನಕ್ಕೆ ಪೋಗಿ ಜಿನದತ್ತೆ ಬೆಸಲೆಯಾಗಿ ಮಗನಂ ಪೆತ್ತಿರ್ದೋಳಂ ಕಂಡರಸಂಗೆ ಪೋಗಿ ಇಂತೆಂದರ್ ದೇವಾ ಶ್ಮಶಾನದೊಳ್ ಜಿನದ[10]ತ್ತೆಯರಸಿ[10] ಬೆಸಲೆಯಾಗಿ ಮಗನಂ ಪೆತ್ತಿರ್ದ[11]ಳಂ[11]ದು ಪೇೞ್ದೊಡದಂ ಕೇಳ್ದರಸಂ ಕೂಸುಮನರಸಿಯುಮನೊಡಗೊಂಡು ಬನ್ನಿಮೆಂದು ತರಿಸಿ ಮುನ್ನಿ[12]ನಂದ[12]ದೊಳಿರಿಸಿ ಕನಸಿನೊಳ್ ವೃಷಭನಂ ಕಂಡುದಱಿಂದಾ ಕೂಸಿಂಗೆ ವೃಷಭಸೇನನೆಂದು ಪೆಸರನಿಟ್ಟರಸಿಯುಂ ದಾನಸನ್ಮಾನಾದಿಗಳಿಂ ಪೂಜಿಸಿಯಾಕೆಯೊಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಮಿರೆ

ವೃಷಭಸೇನ ಕುಮಾರನುಮೆಂಟು ವರುಷದ ಪ್ರಾಯದಾತನಾಗಿರ್ಪನ್ನೆಗ[13]ಮೊಂದು ದಿವಸ[13]ಮರಸಂ ತಪಂಬಡುವ ಬಗೆಯಿಂದಂ ವೃಷಭಸೇನ ಕುಮಾರಂ[14]ಗಿಂ[14]ತೆಂದಂ ಮಗನೆ ನಿನಗೆ ಪಟ್ಟಂಗಟ್ಟಲ್ ಬಗೆದ[15]ಪ್ಪೆ[15]ನೆಂದೊಡಾತನಿಂತೆಂ[16]ದನಯ್ಯಾ[16]

---

1 + ಕೈ (ಘಚಛ). 2 ೞ್ತು (ಛ). 3 (ಘಚಛ) ಗಳಲ್ಲಿಲ್ಲ. 4 ದಿ (ಘ). 5 ದೋಲಾನಸಭೆಯ (ಘಚ), ಸಾಲೆಯ (ಛ) 6 ಳಾರ್ವ್ವ (ಘ), ಳಾರ್ಬೆ (ಛ), ಳೆಲ್ಲರುಮಂ ನೋಡಿಯಾರ್ಬೆ (ಚ) 7 ರೆಂಬುದನಾ (ಘಚಛ). 8 + ಯ (ಘ). + ಯಾ (ಛ) 9 ಗೆ (ಘ), ಗೆಮಗಂ (ಚಛ) 10 ತ್ತರಸಿಯರ್ (ಘಚಛ) 11 ರೆಂ (ಘಚಛ) 12 ನ ಮಾಡ (ಘಛ). 13 (ಘಚಛ) ಗಳಲ್ಲಿಲ್ಲ. 14 ರನಂ ಕರೆದಿಂ (ಘಚಛ). 15 ಪೆ (ಘಚಛ) 16 ದಂ ದೇವಾ (ಘಚಛ).

ಎನಗೆ ನೀ[1]ಮುಂ[1] [2]ರಾಜ್ಯಪಟ್ಟಂಗಟ್ಟಿದ[3]ಪಿ[3]ರೊ ಮೋಕ್ಷಪಟ್ಟಂಗಟ್ಟಿದ[3]ಪಿ[3]ರೊ ಎಂ[4]ದು ತಂದೆಯುಂ ಬೆಸಗೊಂಡೊ[4]ಡೆ ಮಗನೆ ನಿನಗೆ ಮನುಷ್ಯರಾಜ್ಯಪಟ್ಟಂಗಟ್ಟಿದಪ್ಪೆ [5]ನೆಂಬುದುಂ[5] ದೇವಾ ರಾಜ್ಯಪಟ್ಟ[6]ಬಂಧನ[6]ಮುಂ ಮೋಕ್ಷ[7]ಸುಖ[7] ರಾಜ್ಯಪಟ್ಟ [8]ಬಂಧನ[8]ಮುಮೆಂತೆನೆ [9]ಮೋಕ್ಷಸುಖರಾಜ್ಯಪಟ್ಟಮಂ[9] ತಪಂಗೆಯ್ವೊಂಗೆ ಕಟ್ಟುವ ದೆಂದೊಡಂತಪ್ಪೊಡೆ ಮನುಷ್ಯರಾಜ್ಯಪಟ್ಟಮನೊಲ್ಲೆನೆನಗೆ ಮೋಕ್ಷರಾಜ್ಯಪಟ್ಟಂಗಟ್ಟೆ ಮೆಂದು ನುಡಿದೊಡರಸನೆಂದಂ ಮಗನೆ ನೀನಿನ್ನುಂ ಕೂಸ[10]ನ್ನೈ ಬಾಲವದ್ದೆ[10]ಯನ್ನೆಗಂ ಬಳೆದರಸುಗೆಯ್ದಿಷ್ಟ ವಿಷಯ ಕಾಮ ಭೋಗಂಗಳನನುಭವಿಸು[11]ತ್ತಂ[11] ಬಳಿಕ್ಕೆ ಪಶ್ಚಾತ್ಕಾಲದೊಳ್ ತಪಂಬಡುವುದೆಂದೊಡೆ ಕುಮಾರನಿಂತೆಂದನನ್ನೆಗಂ ಸಾವರೊ ಬಾಳ್ವರೊ ಎಂತಱಿಯಲಕ್ಕುಂ ಮನುಷ್ಯರ ಬಾ[12]ಟುಂ[12]

ಕಂದ|| ಪನಿಪುಲ್ಲ ಮುಗಿಲ ಸಂಜೆಯ
ಕನಸಿನ ಸುರ[13]ಧನುವ ನೆಗೆದ ನೊರಗಳ ತೆಱನಂ
ತನಿಸುಂ[13] ನಿಲ್ಲವು [14]ಬಗೆವೊಡೆ[14]
ಮನು[15]ಜ[15]ರ [16]ಯೌವನಮುಮರ್ಥಮುಂ[16]ಬಾಡ್ಗೆಗಳುಂ ||

ಶ್ಲೋಕ|| ಭೋಗಸ್ತೃಷ್ಣಾಗ್ನಿ ಸಂವೃದ್ಧ್ಯೈದೀಪಸೀಯೋ ವನೋಪಮಃ |
ಏಭಿಃ ಸ್ತ್ರೀವೃದ್ಧತೃಷ್ಣಾಗ್ನಿ ಶಾಂತ್ಯೈಚಿಂತ್ಯವಿಹಾಪರಂ ||

ಗಾಹೆ|| ಣಹಂ ವಾ ಬದರಂ ತಂ ಮಜ್ಝಂ ವಿಮುತ್ತಾಣ ಮುತ್ತಿಪಹಂ |
ಅ[17]ವಿಸಾ[17]ಮಂ (?) ಭೋಗಸುಹಲೋಹವಿರದೋ ಮೊಕ್ಖೇಮದಿಂ ಕುಜ್ಜಾ ||

ಆರ್ಯೆ|| ಯದ್ಯಪಿ ನಿಷೇವ್ಯಮಾಣಾ ಮನಸಸ್ಸಂತುಷ್ಟಿಕಾರಕಾ ವಿಷಯಾಃ |
ಕಿಂಪಾಕಫಲಾಶನವದ್ಭವಂತಿ ಪಶ್ಚಾದತಿದುರಂತಾಃ ||

ಎಂಬುದಱಿಂ ಭೋಗಂಗ[18]ಳುಂ ಕಿಂಪಾಕಫಳದೊಳೋರನ್ನ[18]ವದು ಕಾರಣದಿಂ ರಾಜ್ಯದೊಳಪ್ಪ ಭೋಗಸುಖಂಗಳನೊಲ್ಲೆಂ ಜಾತಿಜರಾಮರಣಗಳಿಂದ[19]ಪ್ಪ ಬಾಧೆ ಯಿ[19]ಸಗಲ್ವ ಶಾಶ್ವತಮಪ್ಪ ಮೋಕ್ಷಸುಖಮನೆ ಬೇಡ್ವೆನೆಂದು ತಱಿಸಂದು ನುಡಿ ದೊಡರಸಂ ಜ್ಯೋತಿಮಾಲೆಯೆಂಬರಸಿಯ ಮಗಂ ವಸುಪಾಳನಂ[20]ಬೊಂಗೆ[20] ರಾಜ್ಯಪಟ್ಟಂಗಟ್ಟಿ ತಂದೆಮಕ್ಕಳಿರ್ವರುಮೆಲ್ಲರೊಳಂ ನಿಶ್ಶಲ್ಯಂಗೆಯ್ದು ಬಾಹ್ಯಾ ಭ್ಯಂತರ ಪರಿಗ್ರಹ ಪರಿತ್ಯಾಗಂಗೆಯ್ದು ಗುಣಧರರೆಂಬಾಚಾರ್ಯರ ಪಕ್ಕದೆ[21]ದೀಕ್ಷೆಯಂ ಕೈಕೊಂಡು[21]ಪನ್ನಿರಡು ವರುಷಂಬರೆಗಂ ಗುರುಗಳನಗಲದಿದಾಗಮಂಗಳೆಲ್ಲಮಂ

[1] ವು (ಘಚಝ). [2] + ಮನುಷ್ಯ (ಘಚಝ). [3] ಪ (ಕಗ) [4] ದೊ (ಘಚಝ). [5] (ಘಚಝ) ಗಳಲ್ಲಿಲ್ಲ. [6] ಬೇಡ (ಕಖಗ). [7] (ಘಚಝ) ಗಳಲ್ಲಿಲ್ಲ [8] (ಕಖಗ) ಗಳಲ್ಲಿಲ್ಲ. [9] (ಕಖಗ) ಗಳಲ್ಲಿಲ್ಲ. [10] ನ್ನೆ ಬಾಳವದ್ದೆ (ಖ), ನ್ನೆ ಬಾಲಕನೆ (ಘಚ), ನೆಯುಬ್ಬಾಳಕನೆ (ಝ). [11] ವಿಂ (ಘಚಝ). [12] ಳಂ (ಘಚಝ). [13] ಚಾಪದ ವನದಿ ಲಹರಿಕಾ ನಿಕರದಪೊಲೆನಸುಂ (ಘಚ), ಚಾಪದ ವನದಿ ಲಹರಿಕಾನಿಲದಪೊಲೆನಸುಂ (ಝ) [14] (ಕಖಗ) ಗಳಲ್ಲಿಲ್ಲ. [15] ಷ, (ಖ). [16] ಧನಮುಂ ಯೌವನಮುವಿದ್ಯೆಯುಂ (ಕಗ), ಯೌವನಮು ಅರ್ಥಮುಂ (ಖ), ಜೌವನಮುಮರ್ಥಮುಂ (ಘಚಝ). [17] ವಿಸ್ಸಾ (ಕಖಗ). [18] ಳ್ಗಳ್ಕಿ ಕಿಡುಗುಂ ಮೋಕ್ಷ ಫಲದೊಳೋರನ್ನವಲ್ಲ (ಘಚಝ). [19] (ಘಚಝ) ಗಳಲ್ಲಿಲ್ಲ. [20] ಬ ಕುಮಾರಂಗೆ (ಕಖಗ). [21] ತಪಂಬಟ್ಟು (ಘಚಝ).

ಕಲ್ತು ಭಟಾರರಂ ಬೆಸಗೊಂಡವರನುಮತದಿಂ ವೃಷಭಸೇನಮುನಿಯುಂ ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬರ್ಪೋರ್ ವತ್ಸೆಯೆಂಬುದು ನಾಡೊಳ್ ಕೌಶಂಬಿಯೆಂಬ ಪೊೞಲ್ಗೆ ವಂದದಱ ಸಾರೆ [1]ಉ[1]ದಯಾವತ [2]ಪರ್ವತ[2]ಮೆಂಬ ಪರ್ವತಮುಂಟದಱ ಮೇಗೆ ವೃಷಭಸೇನ ಭಟಾರ[3]ರ್ ನಾಲ್ಕು ತಿಂಗಳುಮಾತಪಸ್ಥಿತ[3]ಯೋಗಮಂ ಕೈಕೊಂಡು ದಿವಸಕ್ಕಂ ಕಲ್ಮಿಲೆನಿಲೆ ಪೊೞಲವರ್ಗಳ್ ಕಂಡನಿಬರುಂ [4]ಶ್ರಾವಕಭಕ್ತರುಂ[4] ಬೆಸಕೆಯ್ವರು[5] ಮಾದರ್

ಮತ್ತಾ ಪೊೞಲೊಳ್ ಬುದ್ಧ[6]ಜ[6]ನೆಂಬೊನುಪಾಸಕನಾತಂ ಋಷಿಯರೊಳಪ್ಪ ಮಾತ್ಸರ್ಯಂ ಕಾರಣಮಾಗಿ ಭಟಾರರ್ ಚರಿಗೆವೋದರನ್ನೆಗಂ ಪಿಂದೆ ಪಾಪಕರ್ಮಂ ಯೋಗಶಿಲೆಯ ಮೇಗುಮಂ ಕೆೞಗುಮಂ ಬಳಸಿಯುಂ ಪಲವುಂ ಪಿರಿಯವುಮಪ್ಪ ತೞಯ ಪುಳ್ಳಿಗಳಂ ಕಡಿದೊಟ್ಟಿ ಕಿಚ್ಚನಿಕ್ಕಿ ಸುಟ್ಟು ಕಿಚ್ಚಿನ ಬಣ್ಣದಂತಾಗಿ ಸಿಲೆಯಂ ಮಾಡಿ ಕೆಂಡಂಗಳನೊಂದು ಕೆಲಂ ಸಾರ್ಚಿ ಪೋದನನ್ನೆಗಂ ಭಟಾರರ್ ಚರಿಗೆ ವೋಗಿ ಬರ್ಪೋರ್ ಧಗದ್ಧಗಿಸುತ್ತಿರ್ದ ಕಿಚ್ಚಿನ ಬಣ್ಣದಂತಪ್ಪ ಕೆಚ್ಚನಾಗಿ[7]ರ್ದ[7] ಸಿಲೆಯಂ ಕಂಡೆಮಗಿನಿತೆಯಾಯುಷ್ಯಮೆಂದಱದು ಕ್ರಿಯೆಗೆಯ್ದು ಚತುರ್ವಿಧಮಪ್ಪಾಹಾರಮುಂ ಶರೀರಮುಮಂ ಜಾವಜ್ಜೀವಂ ತೊಱೆದು ಕಾಯ್ದಿರ್ದ ಯೋಗವೀರಮನೇಱ[8] ಕಾಯೋತ್ಸರ್ಗಂಗೆಯ್ದು ಜ್ಯೇಷ್ಠ ಮಾಸದ ಬಿಸಿಲುಂ ಝಳಮುಂ ಬೆಂಕೆಯುಂ ಕಿಚ್ಚುಮಂ ಸೈರಿಸಿ ನೀರೊಳಗಿರ್ಪಂತಿರ್ದು ಶುಕ್ಲಧ್ಯಾನಮಂ ಧ್ಯಾನಿಸಿ ಎಂಟು ಕರ್ಮಂಗಳಂ ಕಿಡಿಸಿ ಮೋಕ್ಷಕ್ಕೆ ವೋದರ್ [9]ಮತ್ತೆ ಪ್ರದ್ಯೋತನೆಂಬ ಋಷಿ ಸಮ್ಯಗ್ದರ್ಶನ ಜ್ಞಾನಚಾರಿತ್ರಂಗಳಂ ಸಾಧಿಸಿ ಸ್ವರ್ಗದೊಳ್ ಪುಟ್ಟಿದಂ[9]

ಮತ್ತಂ ಪೆಱರುಮಾರಾನುಂ ಸಹಜರತ್ನತ್ರಯಮನಾರಾಧಿಸುತ್ತಿರ್ದ ಭವ್ಯರ್ಕಳ್ ವೃಷಭಸೇನ ಭಟಾರರಂ ಮನದೊಳ್ ಬಗೆದು ಝಳಮುಂ ಬೆಂಕೆಯುಮಂ ದಾಹಮುಷ್ಣಮುಂ ಶೀತಮುಂ ವಾತಮುಂ [10]ಬೇ[10]ನೆಯುಂ ಪಸಿವುಂ ನೀರಡ್ಕೆ ಮೊದಲಾಗೊಡೆಯವಿಪ್ಪತ್ತೆರಡು ಪರೀಷಹಂಗಳಂ ಸೈರಿಸಿ ಶುಭಪರಿಣಾಮದಿಂ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗಸುಖಂಗಳನೆಯ್ದುಗೆ

1, 2 (ಘಚಛ) ಗಳಲ್ಲಿಲ್ಲ. 3 ರ್ ನಾಲ್ಕು ತಿಂಗಳುಮಾತಾಪನಸ್ಥಿತ (ಕಖಗ), ರಾತಪಸ್ಥಿರ (ಘಛ). 4 (ಘಚಛ) ಗಳಲ್ಲಿಲ್ಲ. 5 +ಂ ಶ್ರಾವಕರು (ಘಚಛ). 6 ಜನ (ಘಚಛ). 7 ಳ್ದ (ಖ). 8 +ಸಮ್ಯಗ್ದರ್ಶನಜ್ಞಾನಚಾರಿತ್ರಂಗಳಂ ಸಾಧಿಸಿ (ಘಚಛ). 9 (ಕಖಗ) ಗಳಲ್ಲಿಲ್ಲ. 10 ವೇದ (ಘಚಛ).

(೧೧) ಕಾರ್ತಿಕ ಋಷಿಯ ಕಥೆ

ಅಗ್ನಿರಾಜನ ಮಗನಪ್ಪ ಸ್ವಾಮಿ ಕಾರ್ತಿಕ ಋಷಿಯ ಕಥೆಯಂ ಪೇಳ್ವೆಂ :

ಗಾಹೆ ॥ [1]ರೋಹೇದಯಮ್ಮಿ[1] ಸತ್ತೀಏ ಹದೋ ಕೋಂಚೇಣ ಅಗ್ಗಿದಯಿದೋ ವಿ |
ತವ್ವೇದಣಮಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ||

[[1]ರೋಹೇದಯಮ್ಮಿ[1]—[1]ರೋಹೇ[1]ದಕಮೆಂಬ ಪೊೞಲೊಳ್, ಸತ್ತೀಏಹದೋ—ಶಕ್ತಿಯೆಂಬಾಯುಧದಿಂದಱಿಯೆ ಪಟ್ಟನಾಗಿ, ಕೋಂಚೇಣ—ಕ್ರೌಂಚನೆಂಬರಸಿನಿಂದಂ, ಅಗ್ಗಿದಯಿದೋ ವಿ—ಅಗ್ನಿರಾ[2]ಜನ ಕಾದಲಸ[2]ಪಡುವ ಮಗಂ, ತವ್ವೇದಣಂ—ಆ ವೇದನೆಯಂ, ಅಧಿಯಾಸಿಯ—ಲೇಸಾಗಿ ಸೈರಿಸಿ, ಪಡಿವಣ್ಣೋ—ಪೊರ್ದಿ[3]ದೋಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಲಾಳವಿಷಯದೊಳ್ ಕೃತ್ತಿಕಾಪುರಮೆಂಬುದು ಪೊೞಲದನಾಳ್ವನಗ್ನಿರಾಜನೆಂಬರಸನಾತನ ಮಹಾದೇವಿ ವೀರಮತಿಯೆಂಬೊಳಾಯಿರ್ವರ್ಗ್ಗಂ ಮಕ್ಕಳ್ ಬಂಧುಮತಿ, ಶಿವಸೇನೆ ಶ್ರೀಮತಿ ಸ್ವಯಂಪ್ರಭೆ ಲಕ್ಷ್ಮೀಮತಿ ಕೃತ್ತಿಕೆಯೆಂದಿಂತಱುವರ್ ಪೆಣ್ಗೂಸುಗಳಿಂತವರ್ಗ್ಗಳಿಷ್ಟ ವಿಷಯ ಕಾಮಭೋಗಂಗಳನನುಭವಿಸುತ್ತಂ ಕಾಲಂ ಸಲೆ ಮತ್ತೊಂದು ದಿವಸಂ ಫಾಲ್ಗುಣ ಮಾಸದ ನಂದೀಶ್ವರದಂದಱುವರುಂ ಕೂಸುಗೂಸುಗಳುಪವಾಸಂಗೆಯ್ದು ಬಸದಿಗರ್ಚನೆಯಂ ಕೊಂಡುಪೋಗಿ ದೇವರನರ್ಚಿಸಿ ನಂದೀಶ್ವರಂಗೆಯ್ದು ಬಂದು ರಸಿಯರ್ಕಳುಮಂ ಗುರುಪರಿವಿಡಿಯಿಂ ವಂದಿಸಿ ವ್ರತಂಗಳನೇಱಿಸಿಕೊಂಡು ಸಿದ್ಧಶೇಷೆಯಂ ಕೊಂಡುಬಂದು ತಾಯ್ಗಂ ತಂದೆಗಂ ಕೊಟ್ಟು ಪೋಪಾಗಳರಸಂ ಕಿಱಿಯ ಮಗಳಪ್ಪ ಕೃತ್ತಿಕೆಯ ರೂಪುಂ ತೇಜಮುಮಂ ಗಾಡಿಯುಮಂ ಕಂಡಾ[4]ಕೆಗಾಟಿಸಿ[4] ಸಾಮಂತ ಮಹಾಸಾಮಂತರ್ಕ್ಕಳ್ಗಂ ಪರಿವಾರಕ್ಕಂ ಮಂತ್ರಿವರ್ಗಕ್ಕಂ ವೀರಮತಿ ಮಹಾದೇವಿಗಮೆಲ್ಲ ಸಮ[5]ಯಿ[5]ಗಳ್ಗಂ ಒಟ್ಟಿಯಟ್ಟಿ ಬರಿಸಿಯರಸನಿಂತೆಂದನೆನ್ನಾ ಮಂಡಳಂಗಳೊಳ್ ಪುಟ್ಟಿ[6]ದ ಲೇಸ[6]ಪ್ಪ ವಸ್ತುವಾರ್ಗಕ್ಕುಮೆಂದು ಬೇಱುವೇ[7]ಱ ಯರಸನನಿಬರುಮಂ ಬೆಸಗೊಂಡೊಡವರ್ಗ್ಗಳೆಲ್ಲಮಿಂತೆಂದರೊಳ್ಳಿತಪ್ಪಾನೆಯುಂ ಕುದುರೆಯುಂ ಮುತ್ತುಂ ಮಾಣಿಕಮುಂ ಸ್ತ್ರೀರತ್ನಮುಂ ಮೊದಲಾಗೊಳ್ಳಿತಪ್ಪಗ್ಗಳ

---

[1] ಮಹೋದಕಂ ಹಿ (ಕಖಗ). [1] ಮಹೋ (ಕಗ), ಮಾಹೋ (ಖ). [2] ಜನ ಕಾಲದಲ್ಲಿಸೆ (ಕಗ), ಜನಕಾಲದಲ್ಲಿರಿಸೆ (ಖ), ಜಂ ಕಾದಲಿಸೆ (ಘಚಛ). [3] ಡ್ದಿ (ಕಖಗ) **[4] ಕೂಸಿಗೆ (ಖ). [5] ಯಂ (ಖ). [6] ದೊಳ್ಳಿತ (ಘಚಛ). [7] ಱ (ಘಚಛ).**

ವಸ್ತುವೆಲ್ಲಂ ಪೃಥ್ವಿಯನಾಳ್ವಂಗಕ್ಕುಮೆಂದು ಪೇೞ್ದೊಡರಸಂ ಋಷಿಯರುಮಂ ಬೆಸಗೊಂಡೊಡೆ ಋಷಿಯರೆಂದ[1]ರಾ[1]ವ ವಸ್ತು [2]ಪೇೞಿಂ[2] ಪೇೞ್ದೊಡೆ ತಕ್ಕು[3]ದು ತಗ[3]ದುದುಮನಱಿಯಲಕ್ಕುಮೆಂದೊಡರಸನಿಂತೆಂದನಿವರೆಲ್ಲ[4]ರ[4] ಪೇ[5]ೞ್ವಂತು ಪೇೞ್ವರಲ್ಲರೊ[6]ಡಂಬ[6]ಡುವರಲ್ಲ[6]ರ್ ಬಹು ಪ್ರಳಾಪಿಗಳಿವರಂ ಪೊಱಲಿಂದ[7]ಟ್ಟಿ ಕಳೆಯಿಮೆಂದಟ್ಟಿ ಕಳೆದುೞಿದರೆಲ್ಲರುಮಂ ಬೆಸಗೊಂಡೊಡನಿಬರುಮೊಡಂಬಟ್ಟೊಳ್ಳಿತ್ತಪ್ಪ ವಸ್ತು ನಿನಗಕ್ಕುಮೆಂದೊಡೆ ಅರಸನೆನಗಕ್ಕುಂ ಬಲಮೆಂದು ಮೂಱು ಸೂೞ್ವರಂ ನಾಱು ನುಡಿದೊಡಂಬಡಿಸಿ ವೀರಮತಿ ಮಹಾದೇವಿಯುಂ ಬೇಡೆ ಕೃತ್ತಿಕೆಯಪ್ಪ ಕಿಱಿಯ ಮಗಳಂ ಮದುವೆನಿಂದೊನಾ ದಿವಸಮೆ ವೀರಮತಿ ಮಹಾದೇವಿಯುಂ ಬ್ರಹ್ಮಚರ್ಯ ವ್ರತಮಂ ಕೈಕೊಂಡು ನೆಗೞ್ದಳ್

ಮತ್ತೆ ಕೃತ್ತಿಕೆಗೆ ನವಮಾಸಂ ಗರ್ಭ[8]ಮಾ[8]ದಂದು [9]ಸರವಣ[9]ಮೆಂಬುದ್ಯಾನ ವನದೊಳಗಣ [10]ಸರವಣ[10]ಮೆಂಬ ಬಾವಿಯೊಳ್ ಜಲಕ್ರೀಡೆಯಾಡಲ್ ಬಯಕೆಯಾದುದೆಂದರಸಂಗಱಿಪಿದೊಡರಸನನುಮತದಿಂ ಜಲಕ್ರೀಡೆಯಾಡೆ ಮಗನಂ ಪೆತ್ತೊಡಾತಂಗೆ ಸ್ವಾಮಿ ಕಾರ್ತ್ತಿಕನೆಂದು ಪೆಸರನಿಟ್ಟರ್ ಮತ್ತಾತನಿಂ ಒೞಿಯಂ ಪೆಣ್ಗೂಸುಮಂ [11]ಪೆತ್ತೊಡೆ[11] ಆಕೆಗೆ ವೀರ[12]ಶ್ರೀ[12]ಯೆಂದು ಪೆಸರನಿಟ್ಟು ಬಳೆದೊಡಾಕೆಯುಂ [13]ಕೊಂಗ[13]ಳಿಯನಾಳ್ವ ಕ್ರೌಂಚನೆಂಬರಸಂಗೆ ಕೊಟ್ಟರಿಂತು ಕಾಲಂ ಸಲೆ [14]ಮತ್ತಿತ್ತ ನವು[14] ಮೊದಲಾಗೊಡೆಯ ತಮ್ಮಂದಿರಪ್ಪ ಕುಮಾರರೊಡನೆ ಸ್ವಾಮಿ ಕಾರ್ತ್ತಿಕಂ ಬಳೆದು ಪದಿನಾಱು ವರುಷದ ಪ್ರಾಯಮಾದಂದು ಮತ್ತೊಂದು ದಿವಸಮನಿಬರುಂ ಕುಮಾರರ್ಕಳುದ್ಯಾನವನಕ್ಕೆ ವನಕ್ರೀಡೆಯಾಡಲ್ ಪೋಗಿಯಾಡುತ್ತಿರ್ಪನ್ನೆಗಮೆಲ್ಲಾ ಕುಮಾರರ್ಕಳ್ಗಂ ತಾಯ್ತಂದೆಯಜ್ಜರ್ಕಳ್ ಮನೆಯಿಂದಂ ಪೂಸಲುಮುಡಲುಂ ತುಡಲುಂ ಪೂವುಂ ತಂಬುಲಮುಂ ತಿಂ[15]ಬ[15]ಡಂಗಳುಂ ಬಂದುವು ಸ್ವಾಮಿ ಕಾರ್ತ್ತಿಕಂಗಾರುಮಟ್ಟದಿರ್ದೊಡೆ ಮನದೊಳ್ ಬೞಲ್ದೊನಾಗಿ ವನಕ್ರೀಡೆಯನಾಡಿ ಮನೆಗೆ ವಂದು ತಾಯನಿಂತೆಂದನಬ್ಬಾ ನಿಮ್ಮ ತಂದೆಯಪ್ಪಮ್ಮಜ್ಜನೊಳನೊ ಇಲ್ಲಯೊ ಎಂದು ಬೆಸಗೊಂಡೊಡೆ ತಾಯ್ ಮನದೊಳ್ ಬೞಲ್ದೊಳಾಗಿ ಏನಂ ಪೇೞ್ವೆಂ ಮಗನೆ ನಿನಗೆ ತಂದೆಯಪ್ಪಾತನೆನಗಂ ತಂದೆಯೆಂದು ಪೇೞ್ದೊಡದಂ ಕೇಳ್ದು [16]ಅದುವೆ[16] ವೈರಾಗ್ಯ ಕಾರಣಮಾಗಿ ಶ್ರೀ[17]ವ[17]ರರೆಂಬಾಚಾರ್ಯರ ಪಕ್ಕದೆ ತಪಂಬಟ್ಟಾಗಮಂಗಳೆಲ್ಲಮಂ ಕಲ್ತು ಗುರುಗಳಂ ಬೆಸಗೊಂಡವರನುಮತದಿಂ[18]ದೇಕ ವಿಹಾರಿಯಾಗಿ[18] ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಮುಖಂಗಳಂ ವಿಹಾರಿಸುತ್ತಂ ತೆಂಕನಾಡ ಕಿಷ್ಕಿಂಧ

1 ರದಾ (ಫಚಥ). 2 ಕೇಳಿಂ (ಖ). 3 ತಾ (ಖ). 4 ರ್ (ಫಚಥ). 5 ಳ್ವಂತೆ ಪೇಳ್ದರಿಲ್ಲೊ (ಫಚಥ) 6 ಡ (ಖಫಚಥ). 7 + ಮೇಳ್ವ (ಫಥ). 8 ರ್ಭಂ ನೆಱೆ (ಫಥ) 9 ಸರವ್ರಣ (ಕ), ಸರವನ (ಫಥ), ಸುರವನ (ಚ). 10 ಶರವೇಣು (ಫಚಥ). 11 ಪೆತ್ತೊಡೆ (ಕಗ), ಪೊತ್ತೊಳ್ (ಥ). 12 ಸ್ತ್ರೀ (ಕಖಗ). 13 ಕೊಗು (ಫಚಥ). 14 ಮತ್ತಿನವರ್ (ಕಖಗ) 15 ಬಿ (ಖ), ಬಂ (ಚ). 16 ಸಂಸಾರಕ್ಕೆ ಪೇಸಿ (ಫಚಥ) 17 ಧ (ಫಚ). 18 (ಫಚಥ) ಗಳಲ್ಲಿಲ್ಲ.

ಮೆಂಬ [1]ಪರ್ವತ[1]ಮನೆಯ್ದು ಯಡವಿ ಪೋಗೆ ರಾತ್ರಿ ಪ್ರತಿಮಾಯೋಗಂ [2]ಗೆಯ್ದಿರಾ[2] ಇರುಳ್ ಪಿರಿದೊಂದು ಪುಲಿ ಕೊಂಡು ಮೆಯ್ಯ ಮಾಸಮೆಲ್ಲಮಂ ಕರ್ಚಿ ಕಳೆದು ಪಾಷಾಣಮೆಂಬ ಮಡುವಂ ನೀರ್ ಪೊಕ್ಕಾಗಳಾ ಮಡುವಿನ ನೀರ್ ಸರ್ವೌಷಧಿಯಾದೊಡಂತಲ್ಲಿಯ ನೀರಂ ಮಿಂದವರ್ಗೆಲ್ಲಾ ವ್ಯಾಧಿಯುಂ ಕಿಡುವುದಾದುದಲ್ಲಿಂ ತೊಡಗಿ ದಕ್ಷಿಣಾಪಥದೊಳದು ತೀರ್ಥಮಾಯ್ತು

ಮತ್ತೆ ಸ್ವಾಮಿ ಕಾರ್ತ್ತಿಕ [3]ಋಷಿ[3]ಯುಂ ವಿಹಾರಿಸುತ್ತಂ ಬಂದು ಕೊಗಳಿಯ ನೆಯ್ದಿಯಲ್ಲಿಯ ಬಸದಿಯೊಳ್ ಪಂಥಾತಿಚಾರ ನಿಯಮಂಗೆಯ್ದು ದೇವರಂ ಬಂದಿಸಿ ಮಧ್ಯಾಹ್ನದಾಗಳ್ ಚರಿಗೆವೊಕ್ಕು ಚಾತುರ್ವರ್ಣ್ಯದ ಮನೆಗಳುಮಂ[4] ತೊಲಲುತ್ತಂ ಬಂದರಮನೆಯಂ ಪೊಕ್ಕಾಗಳಾ ಪ್ರಸ್ತಾವದೊಳ್ ಕರುಮಾಡದ ಮೇಗಣ ನೆಲೆಯೊಳಿರ್ದು ವೀರವ್ರತಿ ಮಹಾದೇವಿಯರಸನ ತಲೆಯಂ ತನ್ನ ತೊಡೆಯ ಮೇಲಿಟ್ಟುಗುಱಿಸುತಿರ್ದಾಕೆ ಭಟಾರರ ಬರವಂ ಕಂಡೆೞ್ದು ನಿಮ್ಮಣ್ಣಂಗಳಪ್ಪ ಭಟಾರರ್ ಚರಿಗೆವಂದಪ್ಪರೆಂದು ಮ[5]ಱಲುಂದಿದ[5]ರಸನ ತಲೆಯಂ ಕೆಳಗೊಂದಾಧಾರಮನಿಟ್ಟು ನಿೞಿಸಲೆಂದು ಕರುಮಾಡದಿಂದಿೞಿದು ಪಱತರ್ಪನ್ನೆಗಂ ಭಟಾರರ್ ಪಂದರಮನೆಯಂಗಣಮಂ ಪೊಕ್ಕು ಮಗುೞ್ದು ಪೋಗೆ ಬಾಗಿಲ್ಮಾ[6]ಡಮನೆಯ್ದಿದಾ[6]ಗಳರಸಿ ಪೞಿಗಣಿಂ ನಂತಂದು ಬಂದು ಮುಂದೆ ನಿಂದು ಕೈಗಳಂ ಮುಗಿದೆೞಗಿ ನಿಲ್ಕೆ ಭಟಾರಾ ಬಂದು ನಿೞಿಸಿದೊಡೆ ಭಟಾರರೆಂದರಬ್ಬಾ ಮನೆಯಂ ಪೊಕ್ಕು ಬಂದೊಡಿನ್ನವಗೆ ನಿಲಲಾಗದೆಂದೊಡರಸಿಯಿಂತೆಂದಳ್ ಭಟಾರಾ ನೀಮೆನಗೆ ದಯೆಗೆಯ್ದು ಮೋಘಂ ನಿಲ್ವೇೞ್ಕುಮೆಂದು ಪೋಗಲೀಯದೆ ಕಾಲಂ ಪಿಡಿದು ತಾಂಗುತ್ತಿರ್ಪನ್ನೆಗಮ

ಇತ್ತರಸನೆೞ್ಚತ್ತು ದೆಸೆಗಳಂ ನೋಡಿಯರಸಿಯಂ ಕಾಣದ[7]ೞ[7]ಸಿಯಲ್ಲಿದೊಳೆಂದು ಕೆಲದವರಂ ಬೆಸಗೊಂಡೊಡವರೆಂದರರಸಿಯೊರ್ವ [8]ಸ[8]ವಣಂ ಬಂದೊಡಾತನಂ ಕಂಡು ಕರುಮಾಡದಿಂದಿೞಿದು ಪರಿದು ಬಟಿಯಂ ತಗುಳ್ದು ಬಾಗಿಲ್ಮಾಡದಲ್ಲಿ ಸವಣನೊಡನಾ ಪೋರುತ್ತಿರ್ಪ್ಪಳ್ ನೋಡಿಮೆಂದರಸಂಗೆ ತೋಱಿದೊಡರಸಂ ಕಂಡೆನ್ನನಗಲ್ದು [9]ನಿಚ್ಚಲೀ[9] ಸವಣನಲ್ಲಿಗೆ ಪರ[10]ವ[10]ಳೆಂದು ಕಿನಿಸಿ ಕರುಮಾಡದಿಂದಿೞಿದು ರಿಸಿಯರಿರ್ದಲ್ಲಿಗೆವೋಗಿ ಶಕ್ತಿಯೆಂಬಾಯುಧದಿಂದುರಮನುರ್ಚೆಪೋಗೆಟ್ಟರಸಿಯುಮಂ ತಲೆನವಿರಂ ಪಿಡಿ[11]ದು ದಱದಱನೆ[11]ೞೆದುಕೊಂಡು ಬಂದಂ

ಸ್ವಾಮಿ ಕಾರ್ತ್ತಿಕಋಷಿಯುಂ ಕ್ಷಮೆಯಂ ಭಾವಿಸಿ ನೆತ್ತರೊಕ್ಕು ಒಸವುಟಿದು ಬೇಸಗೆಯ ಕಡುವಿಸಿಲಿಂದಂ ಝಳದಿಂದಂ ಬೆಂಕೆಯಿಂದಂ ನೀರಡ್ಕೆಯಧಿಕಮಾಗಿ ತಣ್ಣ[12]ನೊಳೊ[12]ಳ್ಳಿತ್ತು ಸಮಾಧಿಯಕ್ಕುಮೆಂದು ಮನದೊಳ್ ಬಗೆದಿರ್ಪನ್ನೆಗಂ ತಮ್ಮಜ್ಜಿಯಪ್ಪ ವೀರಮತಿ ಮಹಾದೇವಿ ಬ್ರಹ್ಮಚರ್ಯವ್ರತಮಂ ಕೊಂಡು

1 ಪುರ (ಛ). 2 ನಿಂದೊಡಾ (ಘಚಛ). 3 ಮುನಿ (ಘಚಛ). 4 + ತೊೞಲ್ದು (ಕಗ).
5 ಱಿದು ನಿದ್ರೆಗೈದ (ಘಚಛ). 6 ಡದ ಮನೆಯನೆಯ್ದಿದರಾ (ಘಚಛ). 7 ರ (ಘಚಛ).
8 ಶ್ರ (ಕಖಗ) 9 ನಿಚ್ಚಲೆ(ಘ), ನಿಚ್ಚಲ (ಛ), (ಚ) ದಲ್ಲಿಲ್ಲ. 10 ದ (ಘಚಛ).
11 ದೆ (ಘಚಛ). 12 ಣ್ಣಿದೊದೊ (ಘಚಛ).

ಕಾಲಂ ಗೆಯ್ದು ವ್ಯಂತರದೇವತೆಯಾಗಿ ಪುಟ್ಟಿ[1]ದಾ[1]ಕೆಗಾಸಕಸಂಪಮಾಗಿಯಱಿದು ಬಂದು ಭಟಾರಾ ಜಿನಸೇನಿವರೆಲ್ಲರುಮಂ ಕೊಂದ[2]ಪ್ಪೆನಂ[2]ದೊಡೆ ಭಟಾರರೆಂದ ರಂತೇ[3]ನುಂ ಬೇ[3]ಡ ನೀನೆಮ್ಮಂ ತಣ್ಪೆಸೆಡೆಗೆ ಕೊಂಡುಪೋಗೆಂದೊಡೆ ದೇವತೆ ಸಿಪಿಲ ರೂಪಿನಿಂದೆತ್ತಿಕೊಂಡು ಬೆಸ್ನೊಳಿಟ್ಟು ಕೊಗಳಿಯ ಮೂಡಣ ದೆಸೆಯ ಪರ್ವತದ ಕೊಳದ ತಡಿಯೊಳ್ ಲತಾಮಂಟಪದೊಳಿರಿಸಿ ಪೋದೊಡೆ ಬೆಟ್ಟದ ಮೇಗಣಿಂ [4]ಪಾಯ್ತ್[4]ರ್ಪ ನಿರ್ಝರಶೀ[5]ಕ[5]ರಂಗಳಿಂ ಮೆಯ್ಯಾಪ್ಯಾಯನಮಾಗಿ ಸಂನ್ಯಸನಂಗೆಯ್ದು ಶುಭಪರಿಣಾಮದಿಂ ಮುಡಿಪಿ[6] ಸರ್ವಾರ್ಥಸಿದ್ಧಿಯೊಳ್ ಮೂವತ್ತುಮೂಱು ಸಾಗರೋಪಮಾಯುಷ್ಯಮನೊಡೆಯೊನಹಮಿಂದ್ರನಾಗಿ ಪುಟ್ಟಿದೊಂ

ಮತ್ತಿತ್ತ ಭಟಾರರ ತಂಗೆಯಪ್ಪ ವೀರಶ್ರೀಯುಂ ಹಾ ಭಟಾರಾ ಎಂದಿರುಳುಂ ಪಗಲುಂ ಪಲವು ದಿವಸಮೊಂದೆ ಪಾಂಗಿನೊಳ್ ಪ್ರಳಾಪಿಸಿ ದುಃಖಂಗಯ್ಯೆ ಅರಸನು ಮಾಕೆಗೆ ಕಡು[7]ನಲ್ಲನಪ್ಪುದಱಿಂದಾದಮಾನುಮುಬ್ಬೆಗಂ ಬಟ್ಟೆ[8]ದ್ದ[8]ತೆಂದನಾರೊಬ್ಬರರಸಿಯದುಃಖಮುಂ ಮಱೆಸಿ ದುಃಖಮಮಂ ಮಱೆಯಿಸುವೊರವ[9]ಗ್ಗೊ[9]ಸಗೆಯುಂ ಮಾಡುವೆನೆಂದು ಪೊಱಲೊಳಗೆ ಗೋಸಣೆಯುಂ ತೊಱಲ್ಚಿದೊಡದಂ ಕೇಳ್ದು [10]ಲೋ[10]ಗರ್ ಪಗರಣಿಗರಾಗಿ ಎನಿತಾನುಂ ತೆಱದ ರೂಪುಗಳಂ ಕೈಕೊಂಡು ಮುರ ಮೊಗಂಗಳನಿಟ್ಟು ಬಂದು ಮುಂದೆ ಆಡಿಯುಂ ಪಾಡಿಯುಂ ನಗಿಸಿಯುಮೆಂತು ಮಕ್ಕೆ [11]ಮಟ್ಟಿ[11]ದಿರ್ದೊರ್ವರ್ಂ ಕರಿಯ ಕಚ್ಚುಟಮನುಟ್ಟು ಮೆಯ್ಯೆಲ್ಲಂ ಮಸಿಯುಂ ಪೂಸಿ ಬೋಟದಲೆವೆರಸು ಬಾಯೊಳ್ ಕವಡಿಕೆಗಳಂ ಪಲ್ಗಳಂತೆಮಾಡಿ ಕುಂಚಮುಂ ಗುಂಡಿಗೆಯುಮಂ ಪಿಡಿದು ಬರ್ಪೊನನರಸಂ ಕಂಡಿಂತೆಂದನಲೆಯರಸಿ ನಿನ್ನ ಸಹೋದರಂಗಳಪ್ಪ ಭಟಾರರಾ ಬರ್ಪೊರೆಯೆಂದು ಪೇಳ್ದಾಗಳಲ್ಲಿರ್ದರೆಂದೆಱ್ದು ನೋಡಿ ಕಾಣದಾ ರೂಪಂ ಕಂಡು ನಕ್ಕು ದುಃಖಮುಂ ಮಱೆದೊಳಾಗಳಾ ನಗಿಸಿದ ಪಗರಣಿಗಂಗೆ ಪಿರಿದು ಕಸವರಮನಿತ್ತೊನಂದಿಂದಿತ್ತ ಬಾದು[12]ಬ್ಬಿ[12]ಯ ಪರ್ವಮುಂ ಪಗರಣದಾಟಪಾಟಮುಮಾದುವು ಮತ್ತೆ ಸ್ವಾಮಿ ಕಾರ್ತ್ತಿಕ ಋಷಿಗಳ್ ಮುಡಿಪಿದಲ್ಲಿಯವರ ತಂಗೆಯಪ್ಪ ವೀರಶ್ರೀ ಬಸದಿಯುಂ ಮಾಡಿ[13]ದೊಡಂದಿಂದಿತ್ತ[13] ಸ್ವಾಮಿಯೆಂಬ ತೀರ್ಥಮಾಯ್ತು ಮತ್ತಿತ್ತ ಕೃತ್ತಿಕಯೆಂಬ ಪೊಱಲನಾಳ್ವಗ್ನಿರಾಜನೆಂಬರಸಂ ತನ್ನ ಮಗಳಂ ತಾನೆ ಕೊಂಡು ನೋಱೆಯುಡಿದನಪ್ಪುದಱಿಂದಲ್ಲಿಯ ಜನಮುಂ

ಶ್ಲೋಕ|| ರಾಜ್ಞಿ ಧರ್ಮಿಣಿ ಧರ್ಮಿಷ್ಠಾಃ ಪಾಪೇ ಪಾಪಸಮಾಶ್ರಿತಾಃ |
ರಾಜಾನಮನುವರ್ತಂತೇ ಯಥಾ ರಾಜಾ ತಥಾ ಪ್ರಜಾಃ ||

---

1 ಳ್ದುಮಾ (ಕಖಗ). 2 ಪೆಂಬೆನಸಿಮೆಂ (ಘಚಛ). 3 ನುಮುಂ ಬಗೆಯಲ್ವೇ (ಘಚಛ). 4 ಪರಿತ (ಛ) 5ವ (ಘಛ) 6 + ಸಮ್ಯಗ್ದರ್ಶನಜ್ಞಾನ ಚಾರಿತ್ರಂಗಳಂ ಸಾದಿಸಿ (ಘಚಛ). 7 + ಗೂರ್ಪ (ಘಚಛ). 8 ಳ್ದಿಂ (ಖ). 9 ಗ್ಗಾಸೆ (ಘಚಛ) 10 ರೋ (ಘಛ) 11 ಮಾಣ (ಕಖಗ). 12 ಂಬೆ (ಕಖಗ). 13 + ಸಿಪ್ರತಿಮೆಯುಂ ಸ್ವಾಮಿ ಕಾರ್ತ್ತಿಕ ರುಷಿಯ ರೂಪಂ ಮಾಡಿಸಿ ದೆವಸ ದೆವಸಕ್ಕಮರ್ಚಿಸುತ್ತಿರ್ಪಮುಂದಿಂದಿತ್ತ (ಘಚಛ)

ಎಂದರಸನಂ ಕಂಡು ಪೋಱೆಯುಟಿದು ನೆಗ[1]ೞಲ್[1] ತಗುಳ್ದೊಡಾ ಪೊೞಲ್ಗೆ [2]ಜೋಗಂ[2]ಕಾರೋಹಣಮೆಂದು ಪೆಸರಿಟ್ಟರಿದು[3] ಸ್ವಾಮಿ ಕಾರ್ತ್ತಿಕ ಋಷಿಯ ಕಥೆ ಪತ್ತೆ ಪೇೞಿರಂ ಪರಮ ಸಹಜ ರತ್ನತ್ರಯಂಗಳನಾರಾಧಿಸುವವರ್ಗ್ಗೆಳ್ ಸ್ವಾಮಿ ಕಾರ್ತ್ತಿಕ ಋಷಿಯರಂ ಮನದೊಳ್ ಬಗೆದೊಡಂ ಪುಣ್ಯಂ ವ್ಯಾಧಿಯುಂ ಪಸಿವು ನೀರಡ್ಕೆ ಶೀತವಾತೋಷ್ಣಂಗ[4]ಳುಮಂ[4] ಸೈರಿಸಿ[5] ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

1 ಳ್ತೆ (ಘಚಛ). 2 ಲೋಕ (ಘಚಛ). 3 ಟ್ಟುನಿಟ್ಟು (ಕಖಗ). 4 ಳ್ತಂ (ಘ).
5 + ಸಮ್ಯಗ್ದರ್ಶನಜ್ಞಾನಚಾರಿತ್ರಂಗಳಂ ಸಾದಿಸಿ (ಘಛ), + ಮುಡಿಪಿ (ಚ).

(೧೨) ಅಭಯಘೋಷರೆಂಬ ಮುನಿಯ ಕಥೆ

ಅಭಯಘೋಷರೆಂಬ ಮುನಿಯ ಕಥೆಯಂ ಪೇೞ್ವೆಂ :

ಗಾಹೆ॥ ಕಾಕಂದಿ ಅಭಯಘೋಸೋ ವಿ ಚಂಡವೇಗೇಣ ಛಿಣ್ಣಸವ್ವಂಗೋ |
ತವ್ವೇದಣ ಮಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ

[ಕಾಕಂದಿ—ಕಾಕಂದಿಯೆಂಬ ಪೊೞಲೊಳ್, ಅಭಯಘೋಸೋ ವಿ—ಅಭಯಘೋಷರೆಂಬ ರಿಸಿಯುಂ, ಚಂಡವೇಗೇಣ—ಚಂಡವೇಗನೆಂಬೊನರಸಿನಿಂದಂ, ಛಿಣ್ಣಸವ್ವಂಗೋ—ಕೊಱೆಯೆಪಟ್ಟೆಲ್ಲಾ ಮೆಯ್ಯನೊಡೆಯನಾಗಿ, ತವ್ವೇದಣಂ—ಆ ವೇದನೆಯಂ, ಅಧಿಯಾಸಿಯ—ಲೇಸಾಗಿ ಸೈರಿಸಿ, ಪಡಿವಣ್ಣೋ—ಪೊ[1]ರ್ದ[1]ದೊಂ, ಉತ್ತಮಂ ಅಟ್ಠಂ—ಮುಕ್ತ ದರ್ಶನ ಜ್ಞಾನ ಚಾರಿತ್ರಂಗಳಾರಾಧನೆಯುಂ]

ಅದೆಂತೆಂದೊಡೆ .

ಈ ಜಂಬೂದ್ವೀಪದ ಭರತ ಕ್ಷೇತ್ರದೊಳ್ ಮಗಧೆಯೆಂಬುದು ನಾಡಲ್ಲಿ ಕಾಕಂ[2]ದಿ[2]ಯೆಂಬುದು ಪೊೞಲದನಾಳ್ವೊನಭಯಘೋಷನೆಂಬೊನರಸನಾತನ [3]ಮಹಾದೇವಿ[3] ಅಭಯಮತಿಯೆಂಬೊಳಂತವರ್ಗ್ಗಳಿಷ್ಟ ವಿಷಯ ಕಾಮ ಭೋಗಂಗಳನನುಭವಿಸುತ್ತುಂ ಕಾಲಂ ಸಲೆ ಮತ್ತೊಂದುದಿವಸಮರಸಂ [4]ಪೊೞಮಟ್ಟು[4] ಪೊೞವೊೞಲ ಶೋಭೆಯಂ ತೊೞಲ್ದು ನೋಡುತ್ತಿರ್ಪನ್ನೆಗಮೊರ್ವ ಮೀಂಗುಲಿ[5]ಗ[5]ನೊಂದಾಮೆಯಂ ಜಾಡೆವಾಡೆ[6] ನಾಲ್ಕು ಕಾಲಂಕಟ್ಟಿ [7]ಬಳ್ಳಿಯಂ ಕೊರಲೊ[7]ಳ್ ತಗುಳ್ಚಿ ಯೆೞಲೆ ಪಿಡಿದುಕೊಂಡು ಪೊೞಲ್ಗಿದಿರಂ ಬರ್ಪೊನನರಸಂ ಕಂಡು ತನ್ನ ಬಿನ್ನಣಮಂ [8]ನೆರೆದ ನೆರವಿಗೆ[8] ಮೆಱೆಯಲ್ವೇಡಿ ಗೆಂಟೞಿಂ ಚಕ್ರದಿಂ ನಾಲ್ಕು ಕಾಲುಮನೊರ್ಮೊದಲೆ ಪಱಿಯಿಟ್ಟೊಡೆ ಮೀಂಗುಲಿಗಂ ಪ್ರಾಣಮುತ್ಕ್ರಾಂತಿರಾಮೆಯಂ ತನ್ನ ಮನೆಗೆ ಕೊಂಡು ಪೋದೊಡಾ ಇರುಳೊಳಾಮೆ ಪಿರಿದು ವೇದನೆಯಿಂದಂ ನಮೆದು ಸತ್ತಾ ಪೊೞಲೊಳಭಯಘೋಷ ನೃಪತಿಗಭಯಮತಿ ಮಹಾದೇವಿಗಂ ಚಂಡವೇಗನೆಂಬ ಮಗನಾಗಿ ಪುಟ್ಟಿದನಂತವರ್ಗ್ಗಳಿಷ್ಟ ವಿಷಯ ಕಾಮ ಭೋಗ ಸುಖಂಗಳನನುಭವಿಸು[9]ತ್ತಿರ್ಪನ್ನೆಗಮ್[6]

ಮತ್ತೊಂದು ದಿವಸಮರಸನುಮರಸಿಯುಂ ಕರುಮಾಡದ ಮೇಗಣ ನೆಲೆಯೊಳ್ ಭೋಗೋಪಭೋಗ ಸುಖಂಗಳನನುಭವಿಸುತ್ತುಂ ವಿನೋದದಿಂದಿರ್ಪನ್ನೆಗಂ ಚಂದ್ರಗ್ರಹಣಮಾದುದನರಸಂ ಕಂಡನಿತ್ಯಮಂ ಭಾವಿಸಿಯದುವೆ ವೈರಾಗ್ಯಕ್ಕೆ ಕಾರಣಮಾಗಿ ಚಂಡವೇಗನೆಂಬ ಮಗಂಗೆ ರಾಜ್ಯ[10]ಪಟ್ಟಂಗಟ್ಟಿ[10] ಬಾಹ್ಯಾಭ್ಯಂತರ ಪರಿಗ್ರಹ

[1] ಳ್ದಿ (ಕಖಗ). [2] ಬಿ (ಖ). [3] ಭಾರ್ಯೆ (ಕಗ). [4] (ಘಚಛ) ಗಳಲ್ಲಿಲ್ಲ. [5] ಕ (ಖಘಚಛ). [6] + ಪಿಡಿದು (ಘಚಛ). [7] ಯೊಂದು ಕೈಯೊ (ಕಖಗ). [8] (ಕಖಗ) ಗಳಲ್ಲಿಲ್ಲ. [9] ತ್ತಂ ಪಲಕಾಲಂ ಸಲೆ (ಘಚಛ). [10] ಮಂ ಕೊಟ್ಟು (ಘಚಛ).

[1]ಪರಿತ್ಯಾಗಂಗೆಯ್ದು[1] ಸಂದಸರಂಬಾಚಾರ್ಯರ ಪಕ್ಕದೆ ತಪಂಬಟ್ಟು ಪನ್ನೆರಡು ವರುಷಮುವರೊಡನಿರ್ದ್ದರಲ್ಲಾ ಪೋದುಗ[2]ಳುಮಂ[2] ಕಲ್ತು ಗುರುಗಳಂ ಬೆಸಗೊಂಡಪರಸುಮತದಿಂದೇಕ ವಿಹಾರಿಯಾಗಿ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಬಪ್ಪೋರ್ ತಮ್ಮ ಮುನ್ನಿನ ಕಾಕಂದಿಯೆಂಬ ಪೊೞಲ್ಗೆ ವಂದುದ್ಯಾನವನದೊಳ್ ವೀರಾಸನ[3]ಮು[ದೊರ್][3]ರನ್ನೆಗಂ ಮುನ್ನಾ ಪೆಯಪ್ಪ ಜೀವನವರ ಮಗನಪ್ಪ ಚಂಡವೇಗಂ ಕರುಮಾಡದ ಮೇಗಣ ನೆಲೆಯೊಳಿರ್ದು [4]ಸೋಂಟೆಕ್ಕೆ ಗೆಂಟು ಪೋಗೆ[4] ಚಕ್ರಮನಿಟ್ಟೊಡಾ ಚಕ್ರಂ ಬಂದು ಮುಪಿಯರೆರಡು ಕೆಯ್ಯುಂ ಕಾಲ್ಗಳುಮಂ ಮೊಕ್ಕನೆ ಪೋಗೆ ಕೊಂಡೊಡೆ ಚತುರ್ವಿಧಮಪ್ಪಾಹಾರಕ್ಕಂ ಶರೀರಕ್ಕಂ ಜಾವಜ್ಜೀವಂ ನಿವೃತ್ತಿಗೆಯ್ದು ವೇದನೆಯುಮಂ ಸೈರಿಸಿ ಶುಭಪರಿಣಾಮದಿಂ [5]ರತ್ನತ್ರಯಮಂ[5] ಸಾಧಿಸಿ ಪದಿನಾಲ್ಕನೆಯ ಪ್ರಾಣತಮೆಂಬ ಕಲ್ಪದೊಳಿರ್ಪ[6]ತ್ತು[6] ಸಾಗರೋಪಮಾಯುಷ್ಯಮನೊಡೆಯನಿಂದ್ರನಾಗಿ ಪುಟ್ಟಿದಂ

ಮತ್ತಂ ಪೆಱರು[7]ಮಾರಾಧಕರುಂ ರತ್ನತ್ರಯಮನಾರಾಧಿಸುತ್ತಿರ್ದ್ದರ್[7] ಭವ್ಯರ್ಕಳಭಯಘೋಷ ಭಟಾರರಂ ಮನದೆ ಬಗೆದು ಪಸಿವುಂ ತೃಷೆಯುಮೇೞುಂ ವ್ಯಾಧಿಯುಂ ಶೀತವಾತೋಷ್ಣಂಗಳುಮೆಂದಿವು ಮೊದಲಾಗೊಡೆಯ ದುಃಖಂಗಳಂ ಸೈರಿಸಿ [8]ಪರಮಶುದ್ಧ ಸಹಜ ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ ಸ್ವರ್ಗಾಪವರ್ಗ ಸುಖಂಗಳನೆಯ್ದುಗೆ

---

1 ಂಗಳಂ ತೊಱದು (ಛ). 2 ಳ್ತುಂ (ಕಗ), ಳಂ (ಘ). 3 ಮಿರ್ದ್ದು (ಕಖಗ) ದಿಸಿರ್ದ (ಘಚ), ದೊಳಿರ್ದ (ಛ) 4 ವಿನೋದದಿಂ ಗೆಂಟುಱೂಳು (ಘಚ), (ಛ) ದಲ್ಲಿ ನಷ್ಟ. 5 ಮುಡಿಪಿ ಸಮ್ಯಗ್ದರ್ಶನ ಜ್ಞಾನ ಚಾರಿತ್ರಂಗಳಂ ಸಾಧಿಸಿ (ಘಚಛ) 6 ತೆರಡು (ಛ). 7 ಂ ರತ್ನತ್ರಯಂಗಳಂ ಸಾಧಿಸುತ್ತಿರ್ಪ (ಘಚಛ). 8 ಸಮಾಧಿ ಮರಣದಿಂ ಮುಡಿಪಿ (ಘಚಛ).

(೧೩) ವಿದ್ಯುಚ್ಚೋರನೆಂಬ ರಿಸಿಯ ಕಥೆ

ವಿದ್ಯುಚ್ಚೋರನೆಂಬ ರಿಸಿಯ ಕಥೆಯಂ ಪೇೞ್ವೆಂ :

ಗಾಹೆ॥ ದಂಸೇಹಿಯ ಮಸಕೇಹಿ ಯ ಖಜ್ಜಂತೋ ವೇದಣಂ ಪರಮಘೋರಂ |
ವಿಜ್ಜು ಚ್ಚೋರೋ ಅಧಿಯಾಸಿಯ ಪಡಿವಣ್ಣೋ ಉತ್ತಮಂ ಅಟ್ಠಂ ||

[ದಂಸೇಹಿಯ—ಚಿಕ್ಕುಟುಗಳಿಂದಂ, ಮಸಕೇಹಿ ಯ—ಗುಂಗುಱುಗಳಿಂದಂ, ಖಜ್ಜಂತೋ—ತಿನೆಪಡುತಿರ್ದೊನಾಗಿ, ವೇದಣಂ—ವೇದನೆಯುಂ, ಪರಮಘೋರಂ—ಆದಮಾನುಂ ಕಡಿದಪ್ಪುದಂ, ವಿಜ್ಜುಚ್ಚೋರೋ—ವಿದ್ಯುಚ್ಚೋರನೆಂಬ ರಿಸಿ, ಅಧಿಯಾಸಿಯ—ಲೇಸಾಗಿ ಸೈರಿಸಿ, ಪಡಿವಣ್ಣೋ—ಪೊ[1]ರ್ದಿ[1]ದೊಂ, ಉತ್ತಮಂ ಅಟ್ಠಂ—ಮಿಕ್ಕ ದರ್ಶನ ಜ್ಞಾನಚಾರಿತ್ರಂಗಳಾರಾಧನೆಯಂ]

ಅದೆಂತೆಂದೊಡೆ :

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ವಿದೇಹಮೆಂಬುದು ನಾಡಲ್ಲಿ ಮಿಥಿಳೆಯೆಂಬುದು ಪೊೞಲದನಾಳ್ವೊಂ ಪದ್ಮ[2]ರಥ[2]ನೆಂಬೊನರಸ[3]ನ ಸಂತತಿಯಿಂ ಬಂದ ವಾಮರಥನೆಂಬೊನರಸನಾತನ ಮಹಾದೇವಿ ಬಂಧುಮತಿಯೆಂಬೊಳಂತವರ್ಗಳಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ ಸುತ್ತಾ ಪೊೞ[4]ಲೊಳ್ ಯಮ[4]ದಂಡನೆಂಬೊಂ ತಳಾಱಂ ಮತ್ತಲ್ಲಿ ಇರ್ಪೊಂ ವಿದ್ಯುಚ್ಚೋರನೆಂಬೊಂ ಕಳ್ಳನಾತಂ ಜೃಂಭಿಸಿ ಸ್ತಂಭಿಸಿ ಮೋಹಿನಿ ಸ[5]ರ್ಷಪಿ[5] ತಾಳೋದ್ಘಾಟಿನಿ ವಿದ್ಯಾಮಂತ್ರ[6] ಚೂರ್ಣ ಯೋಗ ಘುಟಿಕಾಂಜನಮೆಂದಿವು ಮೊದಲಾಗೊಡೆಯ ತಸ್ಕರಶಾಸ್ತ್ರಂಗಳೊಳಾದಮಾನುಂ ಕುಶಲನಂತಪ್ಪ ಕಳ್ಳಂ ಪೊೞಲ ಕನವರಂಗಳ ನಿರುಳ್ ಕ[7]ಳ್ದು[7] ಪೊೞಲ್ಗೆ ನಾಡೆಯಂತರದೊಳೊಂದು ಪರ್ವತಮುಂಟಲ್ಲಿ ಪಿರಿದೊಂದು ಗುಹೆಯುಂಟದಱೊಳಗೆ [8]ಕಳ್ದ[8] ಕನವರಂಗಳೆಲ್ಲಮಂ ಪೊಡ್ಡಿಟ್ಟು ಗುಹೆಯ ಬಾಗಿಲಂ ಪಿರಿದೊಂದು ಸಿಲೆಯಂ ತಂದಿಟ್ಟು ಮುಚ್ಚಿ ಬಂದು ಪಗಲೆಲ್ಲಂ ಪಾೞ್ದೇಗುಲದೊಳಂಜನಮನೆೞ್ಚಿ ತಾಂ ತೊನ್ನನಾಗಿ ಮುರುಂಟಿದ ಕೈಯುಂ ಕಾಲುಂ ಪೆರ[9]ಸು ಮೂಗೊಳಗರ್ದು[9] ರಸಿಗೆ ಸುರಿಯೆ ನೊಣವುಗಳ್ ಮುಸುಱು[10]ಕೊಂಡು[10] ತಿನೆ[11] ಪೇಸಿದ[11]ನಾಗಿ ಲೋಗರ ಮನೆಗಳೊಳ್ ಭೈಕ್ಷಮಂ ಬೇಡಿ ಮನೆಮನೆಯಂ ತೊೞಲ್ದು ತನ್ನ [12]ತೊನ್ನು ಗೊಂಡಿರ್ಪುದನಱಿಪುತ್ತುಮಿಂತು ಪಗಲೆಲ್ಲಮಿರ್ದಿರುಳಪ್ಪಾಗಳ್ ದಿವ್ಯಮಪ್ಪ ತನ್ನ ಸ್ವಾಭಾವಿಕಮಪ್ಪ ಮುನ್ನಿನ ರೂಪಂ ಕೈಕೊಂಡು

1 ಳ್ದಿ (ಕಖಗ). 2 ದರ (ಛ). 3 + ನಾತ (ಘಚ). 4 ಲ ಕಾಪೊಂ ಜವ (ಘಚಛ)
5 ರ್ಷಪ (ಖ), ರಿಷಪ (ಘಚ), ರಿಷ ವಾ (ಛ). 6 + ಯಂತ್ರ (ಘಚಛ). 7 ರ್ದು (ಚ).
8 ಕಳ್ದು ತಂದು (ಘಚ), ಕಳ್ದು ಕಳ್ದು ತಂದ (ಚ). 9 ಸೂರೊಳಗಿರ್ದು (ಕಖಗ).
10 ಕಡಿಯೆ (ಕಖಗ) 11 ದೇಸಿಗ (ಘಚಛ) 12 ಮಱಿಯಿಸುತ್ತುಂ (ಕಗ), ಮಱಿಯುತ್ತಂ (ಖ)

ಪುಟ್ಟಿಗೆಯನುಟ್ಟು ಮೆಯ್ಯಂ ಪೂಸಿ ಪೂವಂ ಮುಡಿದು ಕರ್ಪೂರ ಸಂಮಿಶ್ರಿತಮಪ್ಪ ತಂಬುಲಂದಿನುತ್ತುಂ ಸೂಳೆಗೇರಿಗಳಂ ತೊೞಲ್ದು ತನ್ನಂ ಮೆಱೆಯುತ್ತುಂ[12] ಮನಕ್ಕೆ [1]ವಂದಗ್ಗಳದೊ[1]ಳ್ ವಂದಿರೊಳೊತ್ತೆಯನಿಟ್ಟು ಭೋಗೋಪಭೋಗಂಗಳ್ಗೆ ಕಸವರಮುಂ ಕೊಟ್ಟು ಸುಖಮಿಸುತ್ತಮಾರುಮಱಿಯದಂತಿ[2]ರ್ದು[2] ಬಚ್ಚರ ದೂಸಿಗರ [3]ನಿಯೋಗಿಗಳ ಅಗ್ಗಳಮಪ್ಪ[3] ಸೂಳೆಯರ ಸಾಮಂತರ ಕಸವರಂಗಳೆಲ್ಲಮಂ ಕಳ್ದು ಮತ್ತೊಂದು ದಿವಸಂ[4] ಪದ್ಮರಥಂಗೊಸೆದಚ್ಯುತೇಂದ್ರನಿಟ್ಟ ದಿವ್ಯಮಪ್ಪ ಸರ್ವರುಜಾಪಹಾರಮೆಂಬ ಹಾರಂ ಸಂತತಿಯಿಂ ವಾಸುರಥಂಗೆ ಬಂದುದಂ ವಾಸುರಥಂ ಕರುಮಾಡದೇೞನೆಯ ನೆಲೆಯೊಳ್ ತನ್ನ [5]ಉಂದುವೋವರಿಗೆಯ[5] ಪುಡಿಕೆಯೊಳಿಟ್ಟೆಲ್ಲಾ ಕಾಲಮುಂ ಗಂಧ ಪುಷ್ಪ ದೀಪ ಧೂಪಾಕ್ಷತಂಗಳಿಂದರ್ಚಿಸುತ್ತಂ ಪೂಜಿಸುತ್ತಮಿರ್ಕ್ಕುಮಿಂತಪ್ಪ ಹಾರಮಂ ವಿದ್ಯುಚ್ಚೋರನೆಂಬನುಂ ಕಣ್ಗೊಳಿಚ್ಚಿ ಯಾರುಂ ತನ್ನಂ ಕಾಣದಂ[6]ತಾಗಿರೆ ಅರಮನೆಯಂ[6] ಪೊಕ್ಕರಸನ [7]ಮಱಲುಂದುವೋ[7]ವರಿಯಂ ಪೊಕ್ಕು ತಲೆದೆಸೆಯೊಳರ್ಚಿಸಿರ್ದ ಪುಡಿಕೆಯಂ ತೆಱೆದು ಹಾರಮಂ ಕೊಂಡರಮನೆಯಿಂ ಪೊಱಮಟ್ಟು ಪೋಗಿ ಪೊಱವೊೞಲ ಗುಹೆಯೊಳ್ ಪೊಟ್ಟಿಟ್ಟು ಪೊೞಲ್ಗೆ ವಂದು ಮುನ್ನಿನಂತೆ ತನ್ನ ರೂಪಂ ಕೈಕೊಂಡಿ[8]ರ್ದಂ[8]

ಮತ್ತಿತ್ತರಸಂ ನೇಸರ್ಮೂ[9]ಡೆ[9] ಹಾರಮಂ ಕಾಣದೆ ಆಸ್ಥಾನಮಂಟಪದೊಳ್ ಸಿಂಹಾಸನಮಸ್ತಕಸ್ಥಿತನಾಗಿ[10]ರ್ದು[10] ತಳಾಱನಪ್ಪ [11]ಯಮ[11]ದಂಡಂಗೆ ಬೞಿಯಟ್ಟಿ ವರಿಸಿ ಇಂತೆಂದನೆಲವೊ ಯಮದಂಡಾ ಪೊೞಲ ಪಾರ್ವರ [12]ಪರದರ[12] ಸೂಳೆಯರ [13]ಒಕ್ಕಲ ಮಕ್ಕಳ[13] ಕಸವರಮೆಲ್ಲಮಂ ಕಳ್ದೊಡಮಾರಯ್ಯದೆ ಕೆಮ್ಮಗಿರ್ಪೆಯಲ್ಲದೆಯುಮೆಮ್ಮ ಸೆಜ್ಜೆಯೋವರಿಯಂ ಕಳ್ಳಂ ಪೊಕ್ಕು ಪುಡಿಕೆಯಂ ತೆಱೆದಚ್ಯುತೇಂದ್ರನಿತ್ತ ಕುಲಧನಮಪ್ಪ ಹಾರಮಂ ಕೊಂಡುಪೋದಂ ಬೇಗಂ ಕಳ್ಳನನಾರಯ್ದು ಹಾರಮಂ ಕೊಂಡು ಬಾ ಅಲ್ಲದಾಗಳ್ ಕಳ್ಳಂಗೆ ತಕ್ಕ ನಿಗ್ರಹಮಂ ನಿನಗೆ ಮಾಡುವೆನೆಂದೊಡೆ ತಳಾಱನೆಂದಂ ದೇವಾ ಏೞು ದಿವಸಮೆನಗೆಡೆಯನೀವುದೇೞು ದಿವಸದಿಂದೊಳಗೆ ಕಳ್ಳನನಾರಯ್ಯಲಾಱದಾಗಳ್ ದೇವರೆನ್ನಂ ಮೆಚ್ಚುಕೆಯ್ವುದೆಂದೊಡರಸನಂತೆಗೆಯ್ಯೆಂದೊಡರಮನೆಯಿಂದಂ ಪೊಱಮಟ್ಟು ಪೊೞಲೊಳಗೆ ಸೂಳೆಗೇರಿಗಳೊಳಮಂಗಡಿಗಳೊಳಂ [14]ಬಸದಿಗಳೊಳಂ ವಿಹಾರಂಗಳೊಳಂ ಕೇರಿಗಳೊಳಮಾರವೆಗಳೊಳಂ ದೇವಾಲಯಂಗಳೊಳಂ[14] ಪೊಱವೊೞಲೊಳಂ ಕೆಲದ ಪೊೞಲ್ಗಳೊಳಮಾಱುಂ ದಿವಸಂ[15] ನಿರಂತರಮಾರಯ್ದಲ್ಲಿಯುಂ ಕಾಣದೇೞನೆಯ ದಿವಸದಂದು ಪಾೞ್ದೇಗುಲದೊಳಿರ್ದ ತನ್ನಂ ಪೋಪಾಗ[16]ಳ್ ನಿಂದೊಂದು ಕಿಱು[16]ವಕ್ಕನುಂ

1 ಮೆಚ್ಚಿದಾಗಳೊ (ಕಖಗ). 2 ಳ್ದು (ಕಖಗ). 3 ನಿಳೊಂಗಿಗಳಗ್ಗಯಿಂವ (ಲೆ) ಯಮಪ್ಪ (ಘಚಛ). 4 + ಪೂರ್ವದೊಳ್ (ಘಚಛ) 5 ಪವಡಿಪೋವರಿಯೊಳ್ (ಘಚಛ). 6 ತದ್ಯಸ್ಯರೂಪದಿಂ (ಘಚಛ). 7 ಪವಡಿಪೋ (ಘಚಛ). 8 ಳ್ದಂ (ಕಗ). 9 ಡಿದಿಂ ಬಳಿಕ್ಕೆ (ಘಚಛ). 10 ಳ್ದು (ಕಗ) 11 ಜವ (ಘಚಛ), ಮುಂದೆಯೂ ಈ ಪ್ರತಿಗಳ ಪಾಠ ಹೀಗೆ. 12 (ಕಖಗ) ಗಳಲ್ಲಿಲ್ಲ. 13 ಏರಣಿಗರ (ಘಛ), (ಚ) ದಲ್ಲಿ ತ್ರುಟಿತ. 14 ದಿಂಟೆಗಳೊಳಂ ದೇಗುಲಂಗಳೊಳಂ ವಿಹಾರಂಗಳೊಳಂ ಕೆಱೆ ತೊಱೆಗಳೊಳಂ (ಘಚಛ). 15 + ಕಳ್ಳನಂ (ಘಚಛ). 16 ಳಱುಱು (ಘಚಛ).

[1]ಕಂಡದಂ ವಿದ್ಯಾಧರ[1]ಕರಣದಿಂ ಲಂಘಿಸಿ ಪೋಪುದಂ ಯಮದಂಡಂ ಗಂಟೆ
ಯ್ಯೊಳಿರ್ದು ಕಂಡವನೆ ಕಳ್ಳನೆಂದು ನಿಶ್ಚಯಿಸಿ ಪಿಡಿದರಮನೆಗೆ ಪುಯ್ಯಲಿಡೆಯಿಡೆ
ಕೊಂಡುಪೋ[2]ಗಿಯು[2]ರಸಂಗೆ ಕಳ್ಳನಂ ತಂದೆನೆಂದು[3] ತೋಱಿ ಈತಂ ಕಳ್ಳನೆಂದರಸಂಗೆ
ಪೇೞ್ದೊಡೆ ತೊನ್ನ ನಿಂತೆಂದಂ

ದೇವಾ ನಾಂ ಕಳ್ಳನಲ್ಲದುದರ್ಕ್ಕೆ ಪೊೞಲೆಲ್ಲಮಱಿಗುಂ ಕಳ್ಳನನಾರಯ್ಯ
ಲಾಱದೆನ್ನಂ ತನ್ನ ಸಾವಿಂಗಂಜಿ ಬಡವನಂ ದೇಸಿಗನಂ ಪೊೞಲೊಳ್ ಪ್ಪೈಕಂದಿರ
ದುಂಡು ಬಾೞ್ವನಂ ಪಿಡಿದುಕೊಂಡು ಬಂದು ಕೊಲಿ[4]ಸಿ[4]ದಪ್ಪನೆಂದೊಡೆ ತಳಾಱಂ
ಕಳ್ಳರನಾರಯ್ವ ಶಾಸ್ತ್ರಂಗಳೊಳಾದಮಾನುಂ ಕುಶಲನಪ್ಪುದಱಿಂದರಸಂಗಿಂತೆಂದ
ನೀತಂ ತನ್ನ ರೂಪುಗರದಿರುಳ್ ಪೊೞಲೆಲ್ಲಮಂ ಕಳ್ದು ದಿವಸಕ್ಕೀ ಪಾಂಗಿನೊಳ್
ತೊನ್ನನಾಗಿರ್ಪ್ಪಂ ನೀಮುಂ ನಂಬದಾಗಳ್ ಪ್ರತ್ಯ[5]ಯಮಂ[5] ಮಾಡಿ ತೋರ್ಪೆ
ನೆಂದಾಗಳ್ ಪ್ರತಿಘುಟಿಕಾಂಜನಂಗಳಂ ತೊನ್ನನ ಕಣ್ಣಿನೊಳೆಚ್ಚಿದೊಡೆ ದಿವ್ಯಮಪ್ಪ
ತನ್ನ ಮುನ್ನಿನ ರೂಪಾ[6]ಗಿ[ರ್ಪ]ಂತೆಂದನೀ[6]ತಂ ಘುಟಿಕಾಂಜನ ಕುಹಕಂ ಇಂದ್ರ
ಜಾಲಂಗಳಂ ಬಲ್ಲನಪ್ಪುದಱಿಂದೆಲ್ಲಾ ರೂಪುಗಳಂ ಮಾಡಲ್ ಬಲ್ಲನೆಂದೊಡೆ
ತಳಾಱನೆಂದಂ ಪೆಱಗ್ಗೆ ಮಾಡೀ ಪ್ರತ್ಯಯಮಂ ತೋರ್ಪೆನೆಂದರಸನನುಮತ
ದಿಂದರಸಿಯರ ಸೂಳೆಯರ ಕಣ್ಗಳೊಳ್ ಘುಟಿಕಾಂಜನಂಗಳನೆಚ್ಚಿದೊಡನಿಬರುಂ
ತೊನ್ನೆಯರಾಗಿರ್ಪ್ಪನ್ನೆಗಂ

ಮತ್ತಂ ಬಳಿಕ್ಕೆ ಪ್ರತಿಘುಟಿಕಾಂಜನಂಗಳನೆಚ್ಚಿದೊಡೆ ಸ್ವಾಭಾವಿಕಮಪ್ಪ ತಮ್ಮ
ಮುನ್ನಿನ ರೂಪುಗಳಂ ಕೈಕೊಂಡಿರ್ದರಾಗಳರಸಂಗೆ ನಂಬುಗೆಯಾಗಿ ನೆಟ್ಟನಿವಂ
ಕಳ್ಳನಪ್ಪನೀತನಂ ದಂಡಿಸೆಂದು ಯಮದಂಡಂಗೆ ಬೆಸವೇೞ್ದೊಡಾತನಂತೆ ಗೆಯ್ವೆ
ನೆಂದಾತನಂ ತನ್ನ ಮನೆಗೊಡಗೊಂಡು ಪೋಗಿ ಮಾಘಮಾಸದಿರುಳ್ ಕಡುಸೀತ
ದೊಳ್ ಘೋರಮಪ್ಪ[7] ಮೂವತ್ತೆರಡು ದಂಡಣೆಗಳಿಂ ಸ್ಲೀಡುಂ ದಂಡಿಸೆಯುನಿತುಮಂ
ಬಾೞೆವಾೞೆ ಅವಯವದೆ ಸೈರಿಸಿ[8]ಯುಂ[8] ಕಳ್ಳನಲ್ಲೆನಯ್ಯೋ ಬಲ್ಲಾತ್ಕನಟುಂದೆನ್ನಂ
[9]ತಳಾಱಂ[9] ಕೊಂದಪ್ಪನೆಂದೊಳಱಿ ಪುಯ್ಯಲಿಡೆ ತಳಾಱಂಗೆ ಕಳ್ಳನೀತನಲ್ಲೆಂಬು
ದೊಂದು ನಂಬುಗೆಯಾಗೆ ನೇಸಱ್ ಮೂ[10]ಡೆಯ[10]ರಮನೆಗೆ ಪೋಗಿ ಅರಸಂಗಿಂತೆಂದು
ಬಿನ್ನಪಂಗೆಯ್ವಂ

ದೇವಾ ಮೂವತ್ತೆರಡು ಘೋರಮಪ್ಪ ದಂಡಣೆಗಳಿಂದಂ ಕಳ್ಳನಂ ದಂಡಿಸಿ
ನೋಡಿದೆನಾತನಮೋಘಂ ಕಳ್ಳನಲ್ಲೆನ್ನಂ ದೇವರ್ ಮೆಚ್ಚು ಕೆಯ್ವೆಂದೊಡರಸಂ
ಶ್ಮಶಾನದ ಸೂಲದೊಳ್ ಯಮದಂಡನನಿಕ್ಕಿಮೆಂದಾ[11]ಳ್ಗೆ[11] ಬೆಸವೇೞ್ದೊಡವರು
ಮಾತನಂ ಶ್ಮಶಾನಕ್ಕೆಳೆದುಕೊಂಡು ಪೋಗಿ ದರ್ಕ್ಕಂ ಬಸಿದು ಸೂಲದೊಳಿಕ್ಕು
ವಾಗಳವರೊಡವೋಗಿ ತೊನ್ನಂ ರೂಪಪರಾವರ್ತನಂಗೆಯ್ದು ತನ್ನ ಸ್ವಾಭಾವಿಕಮಪ್ಪ

---

1 ವಿದು ಚ್ಚೋರಂ ವಿದ್ಯುತ್ (ಕಖಗ). 2 ಪರನ್ನೆಗಮ (ಕಖಗ). 3 + ತೋರ್ಪ್ಪನಂ (ಘ), ತೊನ್ನನಂ (ಚ) 4 ಸಲ್ ಬಗೆ (ಘಚಛ). 5 ಕ್ಷಂ (ಘಚಛ). 6 ಳ್ದಿಂತೆಂದನೀ (ಕಖಗ), ದುರ್ದಂ ಕಂಡಿರೆಯಿಽ (ಘಚಛ). 7 + ಕಳ್ಳನಂ (ಕಖಗ). 8 ಯಾಂ (ಘಚಛ) 9 (ಘಚಛ) ಗಳಲ್ಲಿಲ್ಲ. 10 ಮುಪ್ರುದುಮ (ಘಚಛ) 11 ಗಳ್ (ಕಖಗ).

